ATHMASHAKTI QUARTERLY

ಏಪ್ರಿಲ್–ಜೂನ್ 2019 ರೂ 10/–

# ಆತ್ಮಶಕ್ತಿ

ಭವಿಷ್ಯಕ್ಕೊಂದು ಬೆಳಕು

ತ್ರೈಮಾಸಿಕ ಕನ್ನಡ ಪತ್ರಿಕೆ

ಒಂದೇ ಜಾತಿ, ಒಂದೇ ಮತ, ಒಂದೇ ದೇವರು

## ವಿವಿಧ ಕೋರ್ಸ್‌ಗಳ ಆಯ್ಕೆ
## ವಿದ್ಯಾರ್ಥಿಗಳಿಗೆ ಮಾರ್ಗದರ್ಶನ

## ಶಿಕ್ಷಣ ಸಂಚಿಕೆ






## ವಿದ್ಯಾರ್ಥಿವೇತನ ಮಾಹಿತಿ



## ಬಲಂ ವಿದ್ಯಾ ಚ ಸರ್ವಾಣಾಂ








Om Shri Manjunathaya Namaha

# SDM

*Putting Value Into Education*

## SHREE DHARMASTHALA MANJUNATHESHWARA EDUCATIONAL SOCIETY / TRUST (R)

**UJIRE, D.K. - 574 240, KARNATAKA**

President - Dr. D. Veerendra Heggade

## INSTITUTIONS - COURSES OFFERED

**IMD Mysore**
PG. Diploma in Management

**Ayurveda College, Hassan**
BAMS,
MD / MS (Ayurveda)

**Ayurveda College, Udupi**
BAMS,
MD / MS (Ayurveda)

**Ayurveda College, Bengaluru**
BAMS

**Naturopathy College, Ujire**
BNYS, MD (Naturopathy)

**Engineering College, Ujire**
BE

**Engineering College, Dharwad**
BE, M.Tech., MBA

**MBA College, Mangaluru**
MBA

**Post Graduation Centre, Ujire**
MA / M.Sc. / M.Com./
MSW / MCJ

**Law College, Mangaluru**
LL.B. / B.A. LL.B.

## INSTITUTIONS COMING UNDER SDM UNIVERSITY, DHARWAD

**Medical College, Dharwad**
MBBS, MS / MD

**Dental College, Dharwad**
BDS, MDS

**Physiotherapy College, Dharwad**
BPT, MPT

**Nursing College, Dharwad**
DGNM, B.Sc. (N), PB.B.Sc (N), M.Sc.(N)

**55 INSTITUTIONS**

***Excellent Infrastructure and Faculty***

For further details, contact :

www.sdmes.net

The Secretary, SDM Educational Society ®, Ujire
E-mail : sdmesho@gmail.com
Ph. : 08256-236488, 236225 Fax : 08256-236220

Dharwad Office :
E-mail : sdmesro@gmail.com
Ph. : 0836-2464799 / 2464699 Fax : 0836-2462410

# Shree Devi Education Trust ®

M. G. Road, Ballalbagh, Mangaluru - 575 003, Karnataka
Ph. : 0824 - 2456501, 2456511, 2457937
Fax : 0824-2451108 Cell : 098440 45622
www.sdc.ac.in




## Shree Devi Institute of Technology

**• B.E.**
- Mechanical Engineering
- Civil Engineering
- Aeronautical Engineering
- Computer Science & Engineering
- Information Science & Engineering
- Electronics & Communication Engineering

**• M.TECH**
- Computer Science & Engineering
- Computer Network Engineering
- Construction Technology

CET Code E-146 / E-505

**• M.C.A.**

**• M.B.A.**

Above Courses are affiliated to Visvesvaraya Technological University, Belagavi & Recognized by AICTE, New Delhi

Shree Devi Institute of Technology Mangaluru was conferred with the award for
**Excellent Engineering College in Karnataka**
at the 2nd National Karnataka Education Summit & Awards 2016 organised by VTU, Belagavi, in association with CMAI Association of India.

**100+ Companies** — **500+ Placements**
in Engineering, MBA, MCA

### Shree Devi College of PHARMACY
- B.Pharm
- M.Pharm
- Pharm D.

### Shree Devi College of NURSING
- B.Sc. Nursing
- M.Sc. Nursing

### Shree Devi College of PHYSIOTHERAPHY
- B.P.T.
- M.P.T.

Above Courses are affiliated to RGUHS, Bangalore & Recognized by AICTE & PCI / KNC & INC / IAP

### Shree Devi College of Hotel Management
- B.H.S.
  Aviation & Hospitality Management

### Shree Devi College of Information Science
- B.C.A.

### Shree Devi College
- B.B.A. • B.Com.
  - Aviation & Hospitality Management
  - Supply Chain & Logistics Management

### Shree Devi College of Interior Design
- B.Sc. ID & D

### Shree Devi College of Fashion Design
- B.Sc. FD

### Shree Devi Institute of Social Work
- M.S.W.

Above Courses are affiliated to Mangalore University

Hostel Facility on Campus

www.sdc.ac.in

# SHREE GOKARNANATHESHWARA COLLEGE

GANDHI NAGAR, MANGALORE - 575 003, PH. : (0824) 2457226

Managed by : Shree Venkatesha Shiva Bhakthi Yoga Sangha (R.)

**COURSES**
**PUC**
**Arts, Commerce, Science**
**DEGREE**
**B.A., B.Com.**
**B.Ed**
**M.Com.**

## Admission

***Application are invited from the successful S.S.L.C., II PUC And DEGREE candidates for the following courses for the Academic Year 2019- 20***

### Shree Gokarnanatheshwara Pre - University College ....

ARTS : History, Economics, Political Science & Sociology

COMMERCE : History/ Statistics / Economics, Business Studies & Accountancy

SCIENCE : Physics, Chemistry, Mathematics & Biology
Physics, Chemistry, Mathematics & Computer Science

### Shree Gokarnanatheshwara Degree College ....


B.A. : History, Economics, Political Science

B.COM. : Compulsory Subjects & Special Subjects, Costing & Income

### Shree Gokarnanatheshwara College of Education : B.Ed - 2 Years Course

### Shree Gokarnanatheshwara College of PG Courses : M.Com.

Prospectus and Application form can be obtained personally from the College Office during working hours. - PRINCIPAL







# ಆತ್ಮಶಕ್ತಿ ATHMASHAKTHI QUARTERLY

## ಭವಿಷ್ಯಕ್ಕೊಂದು ಬೆಳಕು

ಸಂಪುಟ- 15, ಸಂಚಿಕೆ - 02 ಏಪ್ರಿಲ್ – ಜೂನ್ – 2019
Vol. 15, Issue No. 02 APRIL-JUNE - 2019

ರೂ.10/-



**ಪ್ರಧಾನ ಸಂಪಾದಕರು**
ಶ್ರೀ ಕೆ. ವಾಮನ್

**ಉಪ ಸಂಪಾದಕರು**
ಶ್ರೀ ಮುದ್ದು ಮೂಡುಬೆಳ್ಳೆ

**ಸಹಾಯಕ ಸಂಪಾದಕರು**
ಶ್ರೀ ವಿಶ್ವನಾಥ ಪೂಜಾರಿ ರೆಂಜಾಳ

**ಕಾರ್ಯನಿರ್ವಹಣೆ**
ಶ್ರೀ ಬಿ. ಎಸ್. ಕರ್ಕೇರ
ಶ್ರೀ ಸದಾನಂದ ಸುವರ್ಣ

**ಸಹಕಾರ**
ಡಾ. ಸತೀಶ್ ಬಂಗೇರ

**ಮುಖಪುಟ ಹಾಗೂ ಅಕ್ಷರ ವಿನ್ಯಾಸ**
ಶ್ರೀಮತಿ ಮಮತ ರಾಘವೇಂದ್ರ, ಮಂಗಳೂರು

**ಛಾಯಾಚಿತ್ರಗಳು**
ಪತ್ರಿಕೆಯ ಸಂಗ್ರಹದಿಂದ

**ಆಡಳಿತ ಮಂಡಳಿ ಪದಾಧಿಕಾರಿಗಳು...**

| | |
|---|---|
| ಗೌರವ ಅಧ್ಯಕ್ಷರು | ಶ್ರೀ ದಾಮೋದರ್ ಸಿ. ಕುಂದರ್ |
| ಅಧ್ಯಕ್ಷರು | ಶ್ರೀ ಸದಾನಂದ ಡಿ. ಎಸ್. |
| ಉಪಾಧ್ಯಕ್ಷರು | ಶ್ರೀ ಎಸ್.ಕೆ. ಕೋಟ್ಯಾನ್, ಮುಂಬೈ |
| ಕಾರ್ಯದರ್ಶಿ | ಶ್ರೀ ಎಂ. ಗೋಪಾಲ್ |
| ಕೋಶಾಧಿಕಾರಿ | ಶ್ರೀ ಚಂದ್ರಹಾಸ, ಮರೋಳಿ |
| ಟ್ರಸ್ಟಿಗಳು | ಶ್ರೀ ಕೆ. ವಾಮನ್ |
| | ಶ್ರೀ ಬಿ.ಎಸ್.ಕರ್ಕೇರ |
| | ಶ್ರೀಮತಿ ವೇದಾ ಬಿ.ಕರ್ಕೇರ |
| | ಶ್ರೀಮತಿ ಸುಜಾತ ಗೋಪಾಲ್ |
| | ಶ್ರೀ ವಿಶ್ವನಾಥ ಐ. |
| | ಶ್ರೀ ಮುದ್ದು ಮೂಡುಬೆಳ್ಳೆ |
| | ಶ್ರೀ ಸದಾನಂದ ಸುವರ್ಣ |


## ಒಳ ಪುಟಗಳಲ್ಲಿ


ಸ್ಥಿರ ಶೀರ್ಷಿಕೆಗಳು

ಸಂಪಾದಕೀಯ: .................... 4

ಯೋಗ : ಸರಳ ಯೋಗ ಮುದ್ರೆಗಳು .................... 65

ಲೇಖನಗಳು

ವಿವಿಧ ಕೋರ್ಸ್‌ಗಳ ಆಯ್ಕೆ .................... 8

ಪದವಿ ನಂತರ ಮುಂದೇನು? .................... 16

ತಾಂತ್ರಿಕ ಶಿಕ್ಷಣ .................... 20

ಸಂದರ್ಶನ : ಜನಾನುರಾಗಿ ವಿದ್ಯಾರ್ಥಿ ಸ್ನೇಹಿ ಗುರುಗಳು .................... 26

ಬ್ಯಾಂಕುಗಳ ಶಿಕ್ಷಣ ಸಾಲ .................... 36

ಮಾಧ್ಯಮ ಬ್ರಹ್ಮಾಂಡಕ್ಕೆ .................... 44

ವಿದ್ಯಾರ್ಥಿ ವೇತನ ಮಾಹಿತಿ ....................56



**ಪ್ರಕಾಶಕರು**
ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಪ್ರಕಾಶನ ಮತ್ತು ಚಾರಿಟೆಬಲ್ ಟ್ರಸ್ಟ್ (ರಿ),
ಶ್ರೀ ಆರ್ಕೇಡ್, ಎರಡನೇ ಮಹಡಿ, ಬೆಂದೂರ್‌ವೆಲ್,
ಮಂಗಳೂರು – 575 002

**Cell : 9880051038, 9448260458, 4251038**
**Email : narayanagurutrust@gmail.com**


ಸಂಪಾದಕೀಯ ಬರಹಗಳ ಹೊರತು ಇದರಲ್ಲಿ ಪ್ರಕಟಿಸಲ್ಪಟ್ಟ ಬರಹಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ಪ್ರಕಾಶಕರು, ಸಂಪಾದಕರು ಹೊಣೆಗಾರರಲ್ಲ.

# ಯಶಸ್ಸು ಪಡೆಯಲು ಮೌಲ್ಯಗಳನ್ನು ಅರಿತು ಬದ್ಧರಾಗಿ ಮುನ್ನಡೆಯಬೇಕು.

## ಸಂಪಾದಕೀಯ



ಉತ್ತಮ ಗುಣಮಟ್ಟದ ಶಿಸ್ತಿಗೆ ಪ್ರಾಧಾನ್ಯತೆ ಉಳ್ಳ, ವಿಶಾಲವಾದ ಮನೋಭಾವನೆ ಉಳ್ಳ ನಿರ್ಣಾಯಕ ಹಾದಿಯತ್ತ ಸಾಗಲು ಹಾಗೂ ಭವಿಷ್ಯದ ಉನ್ನತಿಗೆ ಸಹಕಾರಿಯಾಗಲು ಪ್ರೇರೇಪಿಸುವ ಶಿಕ್ಷಣ ಇಂದಿನ ದಿನಕ್ಕೆ ಅಗತ್ಯವಾಗಿದೆ.

ಪ್ರಿಯ ಓದುಗರೇ,

ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಪ್ರಕಾಶನ ಮತ್ತು ಚಾರಿಟೆಬಲ್ ಟ್ರಸ್ಟಿನ ವತಿಯಿಂದ ಕಳೆದ 15 ವರ್ಷಗಳಿಂದ ಸಾಮಾಜಿಕ ಚಟುವಟಿಕೆಗಳ ಜೊತೆಗೆ ಶಿಕ್ಷಣದ ಬಗ್ಗೆ ವಿದ್ಯಾರ್ಥಿಗಳಿಗೆ ಆತ್ಮಶಕ್ತಿ ತ್ರೈಮಾಸಿಕ ಪತ್ರಿಕೆಯ ಶಿಕ್ಷಣ ಸಂಚಿಕೆಯ ಮೂಲಕ ಜಾಗೃತಿ ಮೂಡಿಸುವ ಕೆಲಸವನ್ನು ಮಾಡಿಕೊಂಡು ಬಂದಿದ್ದೇವೆ. ವಿದ್ಯಾರ್ಥಿಗಳಿಗೆ, ಅವರ ಹೆತ್ತವರಿಗೆ ಹಾಗೂ ಪೋಷಕರಿಗೆ ವಿವಿಧ ಕೋರ್ಸ್‌ಗಳ ವಿವರ ಹಾಗೂ ಅವು ಲಭ್ಯವಿರುವ ವಿವಿಧ ಶಿಕ್ಷಣ ಸಂಸ್ಥೆಗಳ ಪರಿಚಯವನ್ನು ಈ ವಿಶೇಷ ಸಂಚಿಕೆಯ ಮೂಲಕ ಒದಗಿಸಿದ್ದೇವೆ. ಜೊತೆಗೆ ಈ ಸಂಚಿಕೆಯಲ್ಲಿ ವಿದ್ಯಾರ್ಥಿಗಳಿಗೆ ಅವಶ್ಯವಿರುವ ವಿವಿಧ ಶಿಕ್ಷಣ ಸಾಲ ಹಾಗೂ ದೇಶದಾದ್ಯಂತ ಲಭ್ಯವಿರುವ ವಿದ್ಯಾರ್ಥಿವೇತನದ ಬಗ್ಗೆ ಮಾಹಿತಿಗಳು ಈ ಸಂಚಿಕೆಯಲ್ಲಿ ಒಳಗೊಂಡಿವೆ. ಈ ಮಾಹಿತಿಯ ಸದುಪಯೋಗವನ್ನು ವಿದ್ಯಾರ್ಥಿಗಳು ಹಾಗೂ ಅವರ ಹೆತ್ತವರು ಪಡೆದುಕೊಂಡು ವಿದ್ಯಾರ್ಥಿಗಳ ಭವಿಷ್ಯವನ್ನು ಉಜ್ವಲಗೊಳಿಸಲು ಬಿನ್ನವಿಸಿಕೊಳ್ಳುತ್ತೇವೆ. ನಾವು ಸಂಬಂಧಿಕರ, ಸ್ನೇಹಿತರ ಮಕ್ಕಳನ್ನು ನೀನು ಯಾವ ಕ್ಲಾಸ್ ಮುಂದಿನ ಶಿಕ್ಷಣದ ಬಗ್ಗೆ ನಿರ್ಧರಿಸಿದ್ದೀಯಾ? ಎಂದಾಗ ಸಾಮಾನ್ಯವಾಗಿ ಡಾಕ್ಟರ್ ಇಂಜಿನಿಯರ್ ಆಗಬೇಕೆಂದು ಎದೆ ಉಬ್ಬಿಸಿ ಹೇಳುವ ಮಕ್ಕಳೇ ಜಾಸ್ತಿ. ತಪ್ಪಿಯೂ ನಾನು ಸೈನಿಕನಾಗಬೇಕು ಎಂಬ ಮಾತನ್ನು ಹೇಳಲಾರರು. ಬರೇ ಡಾಕ್ಟರ್ ಇಂಜಿನಿಯರ್ ಅಷ್ಟೇ ಅಲ್ಲ ನೂರಾರು ಕೋರ್ಸ್‌ಗಳು ನಮ್ಮ ಮುಂದಿವೆ. ತಮ್ಮ ಉಜ್ವಲ ಭವಿಷ್ಯವನ್ನು ರೂಪಿಸುವ ಹಲವು ಕೋರ್ಸ್‌ಗಳಿವೆ. ಆದರೂ ಅದರ ಬಗ್ಗೆ ತಲೆ ಕೆಡಿಸಲಿಕ್ಕೆ ವಿದ್ಯಾರ್ಥಿಗಳು ಹೋಗುವುದಿಲ್ಲ. ಇತ್ತೀಚೆಗೆ ಎಸ್.ಎಸ್.ಎಲ್.ಸಿ ಪಿಯುಸಿ ಫಲಿತಾಂಶ ಬಂತು ಅದರಲ್ಲಿ ಉನ್ನತ ಶ್ರೇಣಿಯಲ್ಲಿ ಹಾಗೂ ರ್‍ಯಾಂಕನ್ನು ಪಡೆದವರಲ್ಲಿ ಅತಿ ಬಡವರೇ ಹೆಚ್ಚು. ಲಕ್ಷಗಟ್ಟಲೆ ಹಣ ನೀಡಿ ಟ್ಯೂಶನ್ ಪಡೆಯುವ ಮಕ್ಕಳಿಗಿಂತ ಕಷ್ಟ ಪಟ್ಟು ಓದಿ ಟ್ಯೂಶನ್ ಪಡೆಯದೆ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಬೇಷ್ ಎನ್ನಲೇ ಬೇಕು. ಕೂಲಿ ನಾಲಿ ಮಾಡುವ ಅರ್ಧ ಹೊಟ್ಟೆಯಲ್ಲಿರುವ ತಂದೆ ತಾಯಿಗಳ ಮಕ್ಕಳು ಹೆಚ್ಚಿನ ಅಂಕದಲ್ಲಿ ಉತ್ತೀರ್ಣರಾಗಿರುವುದು ಗಮನಾರ್ಹ.

ವಿದ್ಯಾರ್ಥಿಗಳು ಕೆಲವೊಮ್ಮೆ ಪರೀಕ್ಷೆಯನ್ನು ಎದುರಿಸುವ ಭಯದಿಂದ ಪರೀಕ್ಷೆಗೆ ಚಕ್ಕರ್ ಹಾಕುವುದು ಸಾಮಾನ್ಯ. ಅಪ್ಪ ಅಮ್ಮನ ಹೆಚ್ಚು ಅಂಕ ತೆಗೆಯುವ ನಿರೀಕ್ಷೆಗೆ ಹೆದರಿ ಪರೀಕ್ಷೆಗೆ ಹೋಗಿ ಕಡಿಮೆ ಅಂಕ ಪಡೆದರೆ ತನ್ನನ್ನು ದಡ್ಡನೆಂತಲೂ ಸೋಮಾರಿ, ನೀನು ಯಾವುದಕ್ಕೂ ಲಾಯಕಿಲ್ಲ ಎಂದು ಮೂದಲಿಸುವ ಮಾತುಗಳನ್ನು ಕೇಳುವುದನ್ನು ತಪ್ಪಿಸಲು ಪರೀಕ್ಷೆಗೆ ಹಾಜರಾಗದೆ ಇರುವ ಮಕ್ಕಳು ಇರುತ್ತಾರೆ. ಪರೀಕ್ಷೆಗೆ ಹಾಜರಾಗಿ ಉನ್ನತ ಶ್ರೇಣಿ ಸಿಗದಿದ್ದರೇನು ಜೀವನ ಅಷ್ಟರಲ್ಲೇ ಮುಗಿದುಹೋಯ್ತು ಎಂಬ ಭ್ರಮೆ ಸಲ್ಲದು. ರ್‍ಯಾಂಕ್ ಫಸ್ಟ್‌ಕ್ಲಾಸ್ ಬಾರದಿದ್ದರೇನು ತಮ್ಮ ಬದುಕನ್ನು ನಾನಾ ರೀತಿಯಲ್ಲಿ ಕಟ್ಟಿಕೊಳ್ಳುವ ಸಾಮರ್ಥ್ಯ ನಮ್ಮಲ್ಲಿದೆ ಎಂಬುದನ್ನು ಅರಿಯಬೇಕು. ತಮ್ಮ ಇಷ್ಟದ ತಮಗೆ ಅನುಕೂಲವಾಗುವ ಕೋರ್ಸ್‌ಗಳನ್ನು ಆರಿಸಿಕೊಂಡು ತಮ್ಮ ಓದು ಮುಂದುವರಿಸಿ ಯಶಸ್ವಿಯಾಗೋದು ಜಾಣತನ.

ಪತ್ರಿಕೆಯಲ್ಲಿ ಓದಿದ್ದು ನೆನಪು ಇಂಜನಿಯರಿಂಗ್ ಓದುತ್ತಿದ್ದ ವಿದ್ಯಾರ್ಥಿನಿಯೋರ್ವಳು ಪರೀಕ್ಷೆಯ ದಿನದಂದೇ ಅಪಹೃತಳಾಗಿದ್ದಳು. ತಂದೆಗೆ 5 ಲಕ್ಷ ರೂಪಾಯಿ ಕೊಡುವಂತೆ ಬೆದರಿಕೆ ಕರೆ ಬಂದಿತ್ತು. ಆದರೆ ಆ ಹುಡುಗಿ ತನ್ನ ಸ್ನೇಹಿತೆಯ ಮನೆಯಲ್ಲಿ ಸುರಕ್ಷಿತವಾಗಿದ್ದಳು. ಪರೀಕ್ಷೆಗೆ ಸರಿಯಾಗಿ ಓದಿಲ್ಲ ಕಡಿಮೆ ಅಂಕ ತೆಗೆದು ತಂದೆ ತಾಯಿಯ ಎದುರು ನಿಲ್ಲಲಿಕ್ಕಾಗದೆ ಈ ನಾಟಕ ಆಡಿದ್ದಳು. ಈ ಘಟನೆ ಕೇಳಿದಾಗ ಪರೀಕ್ಷೆಯ ಬಗ್ಗೆ ಮಕ್ಕಳ ಮಾನಸಿಕ ತುಮುಲ ಎಷ್ಟರ ಮಟ್ಟಿಗೆ ಇದೆ ಎಂಬ ಬಗ್ಗೆ ಆತಂಕ ಮೂಡುತ್ತದೆ.

ಸದಾ ಟ್ಯೂಶನ್ ಕೋಚಿಂಗ್‌ಗಳನ್ನು ನೀಡಿ ಹಣ ಗಳಿಸುವ ಹಲವು ಶಿಕ್ಷಣ ಸಂಸ್ಥೆಗಳು ತಮ್ಮ ಸಂಸ್ಥೆಗೆ 80 ಶೇಕಡಾಕ್ಕಿಂತಲೂ ಹೆಚ್ಚಿನ ಅಂಕ ಪಡೆವ ವಿದ್ಯಾರ್ಥಿಗಳನ್ನು ಮಾತ್ರ ಸೇರಿಸಿಕೊಂಡು 90 ರಿಂದ 99 ಅಂಕಗಳಿಸುವಂತೆ ಮಾಡುವುದು ಸುಲಭ. ಆದರೆ ಸಾಮಾನ್ಯ ದರ್ಜೆಯಲ್ಲಿ ಉತ್ತೀರ್ಣಕೊಂಡು 80 ಶೇಕಡಾ ಪಡೆಯುವಂತೆ ತಯಾರಿಗೊಳಿಸುತ್ತಾ ಕಡಿಮೆ ಫೀಸು ಪಡಕೊಳ್ಳುವ ಸಂಸ್ಥೆಗಳು ಇಂದಿನ ದಿನಗಳಲ್ಲಿ ಯಾರಿಗೂ ಬೇಡ. ಶಿಕ್ಷಣ ಸಂಸ್ಥೆಗಳು ಎಂದಾಕ್ಷಣ

→→→

➔➔➔

ಡೊನೇಶನ್ ನಮ್ಮ ಕಿವಿಗೆ ಅಪ್ಪಳಿಸುತ್ತದೆ. ಬಡ ಜನರು ಲಕ್ಷಾಂತರ ಹಣ ನೀಡಿ ತಮ್ಮ ಮಕ್ಕಳನ್ನು ಕಲಿಸುವುದೆಂತು. ಆದರೆ ಇಂದು ವಿದ್ಯಾರ್ಥಿಗಳು ಹಾಗೂ ಅವರ ಹೆತ್ತವರು ತಲೆ ಕೆಡಿಸಬೇಕಾಗಿಲ್ಲ ವಿವಿಧ ಬ್ಯಾಂಕುಗಳು ವಿದ್ಯಾರ್ಥಿಗಳಿಗೆ ಶಿಕ್ಷಣ ಸಾಲ ನೀಡುತ್ತಿದ್ದು ಅದರ ಸದುಪಯೋಗ ಬಡ ಕುಟುಂಬಗಳು ಪಡೆಯುವುದು ಉತ್ತಮ. ಒಂದು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ವಿದ್ಯಾರ್ಥಿಗಳ ಹೆತ್ತವರಿಗೆ ಕಿವಿ ಮಾತು ಹೇಳುವ ಸಭೆಗೆ ನಾನು ಹೋಗಿದ್ದೆ ಅವರು ಒಂದು ಮಾತನ್ನು ಹೇಳಿದ್ದು ನನ್ನ ಮನಸ್ಸಿನಾಳಕ್ಕೆ ತಾಗಿತ್ತು. ನಾವು ಎಷ್ಟೇ ಶ್ರೀಮಂತರಾಗಿದ್ದರೂ ಉನ್ನತ ಶಿಕ್ಷಣಕ್ಕೆ ನಮ್ಮ ಮಕ್ಕಳನ್ನು ಸೇರಿಸುವಾಗ ಶಿಕ್ಷಣ ಸಾಲ ಪಡೆಯುವುದು ಉತ್ತಮ. ಯಾಕೆಂದರೆ ಸಾಮಾನ್ಯವಾಗಿ ಶ್ರೀಮಂತ ವಿದ್ಯಾರ್ಥಿಗಳಿಗೆ ಹೆತ್ತವರ ಹಣದ ಬಗ್ಗೆ ತಾತ್ಸಾರ ವಿರುತ್ತದೆ. ಆದರೆ ತಮ್ಮ ಹೆಸರಿನಲ್ಲಿ ಸಾಲ ಪಡೆದು ಮುಂದೆ ತಾವೇ ಸಾಲ ತೀರಿಸಬೇಕೆಂಬ ಭಯದಿಂದ ಆ ವಿದ್ಯಾರ್ಥಿಗಳು ಕಷ್ಟಪಟ್ಟು ಓದಿ ಉತ್ತಮ ಶ್ರೇಣಿಯಲ್ಲಿ ಪಾಸಾಗುವುದು ಖಂಡಿತ ಎಂಬ ಅವರ ಮಾತು ಎಲ್ಲಾ ಹೆತ್ತವರಿಗೂ ಒಂದು ಉತ್ತಮ ಸಲಹೆ.

ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನವನ್ನು ಹೆತ್ತವರು ಹಾಗೂ ಶಿಕ್ಷಕರು ನೀಡಬೇಕು. ಭಾರತದ ಯುವಶಕ್ತಿ ಜಗತ್ತಿಗೆ ಮಾದರಿ. ಆ ಯುವಶಕ್ತಿಗೆ ಸಮರ್ಪಕವಾದ ಮಾರ್ಗದರ್ಶನ ಸಕಾಲದಲ್ಲಿ ಸಿಗದಿದ್ದರೆ ಅವರು ದಾರಿ ತಪ್ಪುವುದು ಖಂಡಿತ

ಹೆಚ್ಚಿನ ಮಕ್ಕಳ ತಂದೆ ತಾಯಿಗಳಿಗೆ ತಮ್ಮ ಮಕ್ಕಳು ಡಿ.ಸಿ, ಎ.ಸಿ, ಪೋಲೀಸ್ ಅಧಿಕಾರಿಗಳು ಆಗಬೇಕೆಂಬ ಮಹದಾಸೆ ಇರುತ್ತದೆ. ಆ ಆಸೆ ಇರುವ ಹೆತ್ತವರು ತಮ್ಮ ಮಕ್ಕಳು ಪ್ರಾಥಮಿಕ, ಪ್ರೌಢಶಾಲೆಯಲ್ಲಿರುವಾಗಲೇ ಸೂಕ್ತ ಮಾರ್ಗದರ್ಶನ ನೀಡಿ ಅವರು KAS IAS ಪರೀಕ್ಷಾ ತರಬೇತಿ ಕೇಂದ್ರಗಳಿಗೆ ತಮ್ಮ ಮಕ್ಕಳನ್ನು ಬಿಡುವಿನ ವೇಳೆ ಸೇರಿಸಿ ಪ್ರಾಥಮಿಕ ಹಂತದಿಂದಲೇ ಆ ತರಬೇತಿಯನ್ನು ಪಡೆಯುವುದು ಒಳ್ಳೆಯದು. ಕೇಂದ್ರ ಲೋಕ ಸೇವಾ ಆಯೋಗವು ದೇಶದ ಪ್ರಮುಖ ಹುದ್ದೆಗಳ ಆಯ್ಕೆಗೆ ಪ್ರತಿ ವರ್ಷ ನಾಗರಿಕ ಸೇವಾ ಪರೀಕ್ಷೆಗಳನ್ನು ನಡೆಸುತ್ತಿದೆ. ಆಸಕ್ತ ವಿದ್ಯಾರ್ಥಿಗಳು ಇದರ ಬಗ್ಗೆ ವಿವರ ಪಡೆದು ಲಾಭ ಪಡೆದುಕೊಳ್ಳಬಹುದು.

ಕಡೆಯದಾಗಿ ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳು ದೃತಿಗೆಡದೆ ಮುಂದಿನ ಪೂರಕ ಪರೀಕ್ಷೆಗಳಿಗೆ ಹಾಜರಾಗಿ ಇನ್ನೂ ಹೆಚ್ಚಿನ ಅಂಕ ಪಡೆಯಲು ಪ್ರಯತ್ನಿಸಬೇಕು ಅದು ಬಿಟ್ಟು ಹೇಡಿಗಳಂತೆ ಆತ್ಮಹತ್ಯೆಗೆ ಶರಣಾಗುವುದು ತಪ್ಪು. ಬದುಕು ಎಂದರೆ ಪರೀಕ್ಷೆಯ ಪಾಸು ಇಲ್ಲವೇ ಫೈಲ್ ಅಲ್ಲ. ಬದುಕಿನಲ್ಲಿ ನಮಗೆ ಹಲವು ರೀತಿಯ ಪರೀಕ್ಷೆಗಳು ಬರುತ್ತಿರುತ್ತವೆ ಅದನ್ನು ಎದುರಿಸಿ ಗೆಲ್ಲುವುದೇ ಜಾಣತನ. ಈಗ ವಿವಿಧ ಕಂಪೆನಿಗಳು ಶಿಕ್ಷಣ ಸಂಸ್ಥೆಗಳಿಗೆ ಭೇಟಿನೀಡಿ ಕ್ಯಾಂಪಸ್ ಸೆಲೆಕ್ಷನ್ ಮೂಲಕ ವಿದ್ಯಾರ್ಥಿಗಳನ್ನು ತಮ್ಮ ಸಂಸ್ಥೆಗಳಿಗೆ ಸೇರಿಸಿಕೊಳ್ಳುತ್ತಿರುವುದನ್ನು ಗಮನಿಸಬೇಕು.

ಲೋಕ ಸಭೆಯ ಚುನಾವಣೆ ನಡೆಯುತ್ತಿದೆ ಚುನಾವಣಾ ಫಲಿತಾಂಶದತ್ತ ಬಕ ಪಕ್ಷಿಗಳಂತೆ ರಾಜಕಾರಣಿಗಳು ಕಾಯುತ್ತಿದ್ದಾರೆ. ಅಧಿಕಾರದ ಗದ್ದುಗೆ ಏರಲು ಹಲವು ರಾಜಕೀಯ ಪುಢಾರಿಗಳು ಏನೇನೋ ತಿಪ್ಪರಲಾಗ ಹಾಕುತ್ತಿದ್ದಾರೆ. ಸುಳ್ಳಿನ ಸರಮಾಲೆ, ಪರ ವಿರೋದ ಪಕ್ಷದವರನ್ನು ಹೀಯಾಳಿಸುವುದು ನಡೆಯುತ್ತಿದೆ. ಅಪಪ್ರಚಾರ ಮಾಡಿಯಾದರೂ ವಿರೋಧಿಗಳನ್ನು ಸೋಲಿಸುವ ಯೋಚನೆ ಅವರದ್ದು. ಜನರ ಸಮಸ್ಯೆಗಳನ್ನು ಅರಿತು ಅದಕ್ಕೆ ಪರಿಹಾರ ಕಂಡುಕೊಳ್ಳುವ ಗೋಜಿಗೆ ಅವರು ಹೋಗುತ್ತಿಲ್ಲ. ತಾವು ಅಧಿಕಾರದಲ್ಲಿವಾಗ ಏನು ಮಾಡಿದ್ದೇವೆಂದು ಹೇಳುವ ಗೋಜಿಗೆ ಹೋಗದೆ ಕೆಸರೆರಚಾಟ ಮಾಡುತ್ತಿರುವುದನ್ನು ನಾವು ದಿನಾ ಕಾಣುತ್ತಿದ್ದೇವೆ. ಇದಕ್ಕೆ ಅಂತ್ಯ ಎಂದೋ ದೇವರೇ ಬಲ್ಲ. ಚುನಾವಣಾ ಫಲಿತಾಂಶ ಬಂದ ಮೇಲೆ ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಅಧಿಕಾರ ದಾಹದಿಂದ ಕೋತಿಗಳಂತೆ ಹಾರುವ ಪ್ರಸಂಗ ಮುಂದೆ ನಾವು ಕಾಣುತ್ತೇವೆ. ದೇವರು ಇವರಿಗೆಲ್ಲಾ ಒಳ್ಳೆಯ ಬುದ್ದಿ ನೀಡಲಿ ಪ್ರಜೆಗಳ ಸಮಸ್ಯೆ ಪರಿಹರಿಸುವ ಕೆಲಸ ಇವರು ಮಾಡಲಿ. ಕನಿಷ್ಠ ಜನರ ಮೂಲಭೂತ ಸೌಕರ್ಯದ ಕೆಲಸ ಅಗ್ರವಾಗಿ ಕೈಗೆತ್ತಿಕೊಳ್ಳಲಿ. ಭಾರತ ದೇಶ ಭೂಮಂಡಲದಲ್ಲಿ ರಾರಾಜಿಸುವಂತಾಗಲಿ.

ಕೆ. ವಾಮನ್
ಪ್ರಧಾನ ಸಂಪಾದಕರು


**STATEMENT ABOUT THE OWNERSHIP**
**Athmashakti (Kannada) Magazine**
**(FORM IV)**

| | | |
|---|---|---|
| 1. | Place of Publication | : Shree Arcade Building, 2nd Floor, Bendoorwell Mangalore - 575 002 |
| 2. | Periodicity of Publication | : Quarterly |
| 3. | Printer's Name | : K. Vaman |
| | Nationity | : Indian |
| | Address | : Shree Arcade Building, 2nd Floor, Bendoorwell Mangalore - 575 002 |
| 4. | Publisher's Name | : K. Vaman |
| | Nationity | : Indian |
| | Address | : Shree Arcade Building, 2nd Floor, Bendoorwell Mangalore - 575 002 |
| 5. | Editor | : K. Vaman |
| | Nationity | : Indian |
| | Address | : Shree Arcade Building, 2nd Floor, Bendoorwell Mangalore - 575 002 |
| 6. | Printed at | : Digantha Mudrana Press, Yeyyadi, Mangalore - 575 008 |
| 7. | Name & Address of individual who own the paper | : Brahmashree Narayana Guru Swamy Prakashana & Charitable Trust (R.), Shree Arcade Building, 2nd Floor, Bendoorwell, Mangalore - 575 002 |

I, K. Vaman hereby declare that the particulars given above are true to the best of my knowledge and belief.

Sd/-
K. Vaman
Editor & Publisher

Mangalore

# ಆತ್ಮಶಕ್ತಿ ಪೋಷಕ ಮಂಡಳಿ

## ಮಹಾ ಪೋಷಕರು

**ಶ್ರೀ ಬಿ. ಜನಾರ್ದನ ಪೂಜಾರಿ**
ಮಾಜಿ ಕೇಂದ್ರ ಸಚಿವರು

**ಶ್ರೀ ದಾಮೋದರ್ ಸಿ. ಕುಂದರ್**
ಮಾಲಕರು, ಸ್ಟೆರ್ಲಿಂಗ್ ಟ್ರಾವೆಲ್ಸ್ ಸರ್ವಿಸ್, ಮುಂಬಯಿ

**ಶ್ರೀ ಮೋಹನ್ ಕೆ. ಅಮೀನ್**
ಬೋರಿವಿಲಿ, ಮುಂಬಯಿ

**ಶ್ರೀ ಬಿ. ಆರ್. ಬೋಂಟ್ರಾ**
ಗೌರವ ಅಧ್ಯಕ್ಷರು ಗುಜರಾತ್ ಬಿಲ್ಲವರ ಸಂಘ,
ಕೈಗಾರಿಕೋದ್ಯಮಿ

**ಶ್ರೀ ಶೇಖರ ಪೂಜಾರಿ**
ಹೈಲ್ಯಾಂಡ್, ಮಂಗಳೂರು

**ಶ್ರೀ ಜಯಂತ್ ಎಂ. ಸಾಲ್ಯಾನ್**
ಉದ್ಯಮಿ, ಬೆಂಗಳೂರು

**ಶ್ರೀ ಗೋಪಾಲ್ ಎ. ಜತನ್**
ನಿವೃತ್ತ ಬ್ಯಾಂಕ್ ಅಧಿಕಾರಿ, ಮುಂಬಯಿ

**ಶ್ರೀ ಭೋಜರಾಜ್, ಉದ್ಯಮಿ**
ಬಿ. ಪಿ. ದೇಶಪಾಂಡೆ ರಸ್ತೆ, ಥಾಣೆ ಘಂಟಾಳಿ

**ಶ್ರೀ ವಿಜಯಕುಮಾರ್ ಗೋವಿಂದ ಪೂಜಾರಿ,**
ಮಲ್ತಾರ್, ಬ್ರಹ್ಮಾವರ

**ಶ್ರೀ ಜಯ ಸಿ. ಸುವರ್ಣ ಮುಂಬೈ**
ಗೌರವ ಅಧ್ಯಕ್ಷರು, ಮುಂಬೈ ಬಿಲ್ಲವರ ಅಸೋಸಿಯೇಶನ್
ಅಧ್ಯಕ್ಷರು, ರಾಷ್ಟ್ರೀಯ ಬಿಲ್ಲವರ ಮಹಾಮಂಡಲ (ರಿ)

**ಶ್ರೀ ವಾಮನ್ ಪೂಜಾರಿ**
ಉದ್ಯಮಿ, ಲೋವರ್ ಪರೆಲ್, ಮುಂಬಯಿ

**ಶ್ರೀ ಮೋಹನ್ ಸಿ. ಪೂಜಾರಿ**
ಸ್ಥಾಪಕರು, ಗುಜರಾತ್ ಬಿಲ್ಲವರ ಸಂಘ
ಕೈಗಾರಿಕೋದ್ಯಮಿ

**ಶ್ರೀ ಪಿ. ವಿ. ಭಾಸ್ಕರ**
ಉದ್ಯಮಿ, ಮುಂಬಯಿ

**ಶ್ರೀ ಚಂದಯ್ಯ ಬಿ. ಕರ್ಕೇರ**
ಉದ್ಯಮಿ, ಮುಂಬಯಿ

**ಶ್ರೀ ಹರೀಶ್ ಕುಮಾರ್,** ಬೆಳ್ತಂಗಡಿ

**ಶ್ರೀ ಎನ್. ಎಮ್. ಸನಿಲ್**
ನಿವೃತ್ತ ಬ್ಯಾಂಕ್ ಅಧಿಕಾರಿ, ನಿವೃತ್ತ ನಿರ್ದೇಶಕ ಭಾರತ್
ಬ್ಯಾಂಕ್ ಮುಂಬಯಿ

**ಶ್ರೀಮತಿ ರೇಖಾ ಮೋಹನ್**
ಮಂಗಳೂರು

**ಶ್ರೀ ಪ್ರಶಾಂತ್ ಸನಿಲ್**
ನಿಧಿಲ್ಯಾಂಡ್, ಬಿಜೈ, ಕಾಪಿಕಾಡ್, ಮಂಗಳೂರು

**ಶ್ರೀ ರಮೇಶ್ ಕುಮಾರ್**
ಉದ್ಯಮಿ, ಜನತಾ ಕನ್‌ಸ್ಟ್ರಕ್ಷನ್, ಮಂಗಳೂರು

**ಶ್ರೀ ವಾಮನ್ ಡಿ. ಪೂಜಾರಿ,**
ಕಲೀನ, ಮುಂಬೈ

**ಶ್ರೀ ಗಣೇಶ್ ಬಂಗೇರ**
ಜಿ. ಬಿ. ಗ್ರೂಫ್ಸ್, ಮಂಗಳೂರು

**ಶ್ರೀ ಪುರುಷೋತ್ತಮ ಬಂಗೇರ**
ಜಿ. ಬಿ. ಗ್ರೂಫ್ಸ್, ಮಂಗಳೂರು

**ಶ್ರೀ ಸೂರ್ಯಪ್ರಕಾಶ್**
ಉದ್ಯಮಿ, ಉಡುಪಿ

**ಶ್ರೀ ಡಿ.ಎಮ್ ಕರ್ಕೇರ**
ನಿವೃತ್ತ ಬ್ಯಾಂಕ್ ಅಧಿಕಾರಿ, ಕುಳಾಯಿ, ಮಂಗಳೂರು

**ಶ್ರೀಮತಿ ಜಯಂತಿ.ಎಸ್.ಕೊಟ್ಯಾನ್**
ಕುಂಜತ್‌ಬೈಲ್ ಮಂಗಳೂರು.

**ಶ್ರೀ ಹೆರಾಜೆ ರಾಜೇಶ್ ಅಂಚನ್**
ಉದ್ಯಮಿ, ಕದ್ರಿ ಕೈಬಟ್ಟಲ್, ಮಂಗಳೂರು.

**ಶ್ರೀ ಯಾದವ ಕೋಟ್ಯಾನ್**
ಕಾಂಟ್ರ್ಯಾಕ್ಟರ್, ಪೆರ್ಮುದೆ

**ಶ್ರೀ ಕೆ. ಪಿ. ಸುರೇಶ್**
ಬಿಲ್ಡರ್, ಮಾಡೂರು

**ಶ್ರೀ ಜಯಚಂದ್ರ ಕಜೆಕಾರ್**
ಬಿಜೈ, ಆನೆಗುಂಡಿ, ಮಂಗಳೂರು

**Rtn. ರೋಹಿನಾಥ್**
LCR ಶಿಕ್ಷಣ ಸಂಸ್ಥೆ ಸಂಸ್ಥಾಪಕ ಬಂಟ್ವಾಳ

## ಪೋಷಕರು

- ಶ್ರೀ ಗಂಗಾಧರ್ ಮಿತ್ತಮಾರ್, ಬೆಳ್ತಂಗಡಿ
- ಶ್ರೀ ವಿಜಯ್ ಕುಮಾರ್ ಸೊರಕೆ, ಪುತ್ತೂರು
- ಶ್ರೀ ಹರಿಕೃಷ್ಣ ಬಂಟ್ವಾಳ್, ಬಂಟ್ವಾಳ
- ಶ್ರೀ ದಯಾನಂದ ಬೋಂಟ್ರಾ, ಉದ್ದಿಮೆದಾರರು, ಗುಜರಾತ್
- ಶ್ರೀ ಬಿ. ದೇವದಾಸ್, ಕಂಟ್ರಾಕ್ಟರರು, ಮಂಗಳೂರು
- ಶ್ರೀ ಪದ್ಮಾಕರ್ ಕೋಟ್ಯಾನ್, ಕ್ರಿಯೇಟಿವ್ ಬುಕ್ಸ್ & ಪೀರಿಯಾಡಿಕಲ್ಸ್ ಪೋರ್ಟ್, ಮುಂಬೈ
- ಶ್ರೀ ಎನ್. ಎಂ. ಸನಿಲ್, ಕಲೀನ, ಸಾಂತಕ್ರೂಜ್, ಮುಂಬೈ
- ಶ್ರೀ ಎಂ. ಶೇಖರ್ ಕೋಟ್ಯಾನ್, ಕರಾವಳಿ ಹೋಟೇಲ್ & ಶ್ರೀ ಎಜುಕೇಶನ್ ಟ್ರಸ್ಟ್, ಉಡುಪಿ
- ಶ್ರೀ ಮೋಹನ್ ಅಮೀನ್, ವಿಜಯವಾಹಿನಿ, ಕದ್ರಿ ಮಲ್ಲಿಕಟ್ಟೆ
- ಶ್ರೀ ಸುಧೀರ್ ಕುಮಾರ್ ಎಸ್. ಬೆಳಗಾವಿ
- ಶ್ರೀ ವಿಶ್ವನಾಥ್ ಇಡ್ಯಾ, ಇಡ್ಯಾ ಬಿಲ್ಲವ ಸಮಾಜ ಸೇವ ಸಂಘದ ಸಕ್ರಿಯ ಸದಸ್ಯರು, ಸುರತ್ಕಲ್
- ಶ್ರೀ ರಂಗಪಾಲನ್, ಚೆಂಬೂರು, ಮುಂಬೈ
- ಶ್ರೀಮತಿ ಅನಸೂಯ ಅತ್ತಾವರ, ನಿವೃತ್ತ ಪೊಲೀಸ್ ಇನ್ಸ್‌ಪೆಕ್ಟರ್, ಮಂಗಳೂರು
- ಶ್ರೀ ಸುಧಾಕರ್ ಎಸ್. ಕೋಟ್ಯಾನ್, ಮಾರ್ಕ್ಸ್‌ವೆಲ್ ಕನ್ಸಲ್ಟೆಂಟ್, ಬೊರಿವಿಲಿ, ಮುಂಬೈ
- ಶ್ರೀ ಬಾಬು ಶಿವಪೂಜಾರಿ, 'ಶ್ರೀ ಸಾಗರ' ಬೊರಿವಿಲಿ, ಮುಂಬೈ
- ಶ್ರೀ ವಸಂತ ಬಂಗೇರ, ಶಾಸಕರು, ಬೆಳ್ತಂಗಡಿ
- ಶ್ರೀ ವೈ. ಸುಕುಮಾರ್, ಪಡುಬಿದ್ರೆ
- ಶ್ರೀ ಯೋಗೀಶ್ ಪೂಜಾರಿ, ಕಡ್ತಿಲ, ಮೊಗ್ರು
- ಶ್ರೀ ಕೆ. ಚಿತ್ತರಂಜನ್, ಅಧ್ಯಕ್ಷರು, ಬ್ರಹ್ಮಬೈದರ್ಕಳ ಗರಡಿ, ಕಂಕನಾಡಿ
- ಶ್ರೀ ಕೆ. ಟಿ. ಸುವರ್ಣ ಉಳ್ಳಾಲ, ತೊಕ್ಕೊಟ್ಟು
- ಶ್ರೀ ಜಯ ಕೆ. ಪೂಜಾರಿ, ಪೋವೈ, ಮುಂಬೈ
- ಶ್ರೀ ಬಿ. ಪುರುಷೋತ್ತಮ್, ಕಂಟ್ರಾಕ್ಟರ್, ಶಾಂತಿನಿಕೇತನ್, ಬಿಜೈ
- ಶ್ರೀ ಬಿ. ಬಾಲಕೃಷ್ಣ ಸುವರ್ಣ ಕರಂಗಲ್‌ಪಾಡಿ, ಮಂಗಳೂರು
- ಶ್ರೀ ಶ್ರೀನಿವಾಸ ಪೂಜಾರಿ, ಕೊಡಂಕೂರು, ಉಡುಪಿ
- ಶ್ರೀ ಕರುಣಾಕರ್ ಶೆಟ್ಟಿ, ಸೀವೇ ಮೆರೈನ್ಸ್, ಕೂಳೂರು
- ಶ್ರೀ ಕೃಷ್ಣ ಎಸ್. ಸಾಲಿಯಾನ್, ಶ್ರೀ ಕೃಷ್ಣ ನಿಲಯ, ಬೆಳ್ಮಣ್ಣು
- ಶ್ರೀ ಲೋಹಿದಾಸ್ ಆರ್., ನ್ಯಾಯವಾದಿ ಹಾಗೂ ಲೆಕ್ಕ ಪರಿಶೋಧಕರು, ಮಂಗಳೂರು
- ಶ್ರೀ ಚಂದ್ರಹಾಸ್ ಉಳ್ಳಾಲ್, ಉದ್ಯಮಿ, ತೊಕ್ಕೊಟ್ಟು
- ಶ್ರೀ ಯು. ಭೋಜರಾಜ್, ಉದ್ಯಮಿ, ತೊಕ್ಕೊಟ್ಟು
- ಶ್ರೀ ಭಾಸ್ಕರ ಕೋಟ್ಯಾನ್, ಇರ್ವತ್ತೂರು
- ಶ್ರೀ ಸುದರ್ಶನ್, ಉದ್ಯಮಿ, ಉಡುಪಿ
- ಶ್ರೀ ಸದಾಶಿವದಾಸ್, ದಾಸ್ ಪ್ರಕಾಶ್, ಮಂಗಳೂರು
- ಶ್ರೀ ಪರಮೇಶ್ವರ ಪೂಜಾರಿ, ನಿವೃತ್ತ ಅಧಿಕಾರಿ, ಬಿ.ಸಿ.ಎಂ., ಮಂಗಳೂರು
- ಶ್ರೀ ನೇಮಿರಾಜ್, ಉದ್ಯಮಿ, ಮಂಗಳೂರು
- ಶ್ರೀ ಎನ್. ಕೆ. ಬಿಲ್ಲವ, ಉದ್ಯಮಿ, ಮುಂಬಯಿ
- ಶ್ರೀ ಭಾಸ್ಕರ ಸಾಲಿಯಾನ್, ಅಶೋಕನಗರ, ಮಂಗಳೂರು
- ಶ್ರೀ ಸಿಎ ದೇವ್ ಆನಂದ್, ಲೆಕ್ಕಪರಿಶೋಧಕರು ಉಡುಪಿ
- ಶ್ರೀ ಜಯಂತ್ ನಡುಬೈಲ್, ಅಕ್ಷಯ ಫಾರ್ಮ್ಸ್ ಪುತ್ತೂರು
- ಶ್ರೀ ಬಿ. ಎನ್. ಶಂಕರ್ ಪೂಜಾರಿ, ಬ್ರಹ್ಮಾವರ
- ಶ್ರೀ ರಜನಿ ಕುಮಾರ್ ಪಿ. ಸುವರ್ಣ, ಕೈಗಾರಿಕೋದ್ಯಮಿ, ಮುಂಬಯಿ
- ಶ್ರೀ ರಘು ಶೆಟ್ಟಿ, ಅಂಧೇರಿ, ಮುಂಬಯಿ
- ಶ್ರೀ ಸದಾನಂದ ಸುವರ್ಣ, ಕೊಟ್ಟಾರ, ಮಂಗಳೂರು
- ಶ್ರೀ ರಮೇಶ್ ಸುವರ್ಣ, ಮಾರ್ನಮಿಕಟ್ಟೆ, ಮಂಗಳೂರು
- ಶ್ರೀ ಪೀತಾಂಬರ ಹೆರಾಜೆ, ನಿವೃತ್ತ ಪೋಲಿಸ್ ಅಧೀಕ್ಷಕರು, ಬೆಳ್ತಂಗಡಿ
- ಪಂಡಿತ್ ನವೀನ್‌ಚಂದ್ರ ಸನಿಲ್, ಮುಂಬಯಿ
- ಶ್ರೀ ಚೆನ್ನಯ ಇ. ಗೌಡ, ಸೃಷ್ಟಿರಾಜ್, ಚೆಂಬೂರು, ಮುಂಬಯಿ
- ಶ್ರೀ ಶಂಭು ಕೆ. ಸನಿಲ್, ಮುಂಬಯಿ
- ಶ್ರೀ ಅರುಣ ಪ್ರಭ ಉಡುಪಿ
- ಶ್ರೀ ವಸಂತ ಎ. ಪೂಜಾರಿ, ಗಣೇಶ್ ಎಂಟರ್‌ಪ್ರೈಸಸ್, ಪಂಪ್‌ವೆಲ್, ಮಂಗಳೂರು
- ಶ್ರೀ ಕೇಶವ ಸಾಲ್ಯಾನ್, ಕದ್ರಿ, ಮಂಗಳೂರು
- ಶ್ರೀ ಜಗದೀಪ್ ಡಿ. ಸುವರ್ಣ, ಸುವರ್ಣ ನಿಲಯ, ಗೋರಿಗುಡ್ಡ, ಮಂಗಳೂರು
- ಶ್ರೀ ನವೀನ್‌ಚಂದ್ರ, ಮುಂಬಯಿ
- ಶ್ರೀ ಜೆ.ಎಸ್.ಶೆಟ್ಟಿ, ಗೊರೆಗಾಂವ್, ಮುಂಬಯಿ
- ಶ್ರೀ ಎಲ್.ಎಸ್. ಶೆಟ್ಟಿ, ಹಿರಿಯ ವಕೀಲರು, ಮುಂಬಯಿ
- ಶ್ರೀ ದಿನೇಶ್ ಅಂಚನ್, ಕದ್ರಿ, ಮಂಗಳೂರು
- ಶ್ರೀ ಯೋಗೀಶ್ ಕೋಟ್ಯಾನ್, ಮುಲ್ಕಿ
- ಶ್ರೀ ರಮಾನಂದ ಸಾಲ್ಯಾನ್,ಬೆಳ್ತಂಗಡಿ
- ಶ್ರೀ ಶೇಖರ ಪೂಜಾರಿ ಪಟ್ಲ ಹೌಸ್, ಪುತ್ತೂರು

→→→

## ಬ್ರಹ್ಮಶ್ರೀ ನಾರಾಯಣಗುರು ಸ್ವಾಮಿ ಪ್ರಕಾಶನ ಮತ್ತು ಚಾರಿಟೆಬಲ್ ಟ್ರಸ್ಟ್ (ರಿ.) ಮಂಗಳೂರು

### ಪೋಷಕರು

- ಶ್ರೀಮತಿ ಸರೋಜಿನಿ ನಾರಾಯಣ, ಮಂಗಳೂರು
- ಶ್ರೀಮತಿ ಉಷಾ ತಾರಾನಾಥ್, ಮಾರಿಗುಡಿ ಬಳಿ, ಮಂಗಳೂರು
- ಶ್ರೀ ರವಿ ಪೂಜಾರಿ, ಬೆಳ್ಮಣ್ಣು
- ಶ್ರೀ ಕಿಶೋರ್ ಕುಮಾರ್ ದಂಡೆಕೇರಿ, ಯೆಯ್ಯಾಡಿ
- ಶ್ರೀ ದಿಲೀಫ್ ಕುಮಾರ್, ವಿನ್‌ಸ್ಪೋರ್ಟ್ಸ್, ಕಂಕನಾಡಿ
- ಶ್ರೀ ಸುರೇಶ್ ಪಿ. ಎನ್, ಮುಂಬಯಿ
- ಶ್ರೀ ನಾರಾಯಣ ಕೋಟ್ಯಾನ್, ಹಿರಿಯಡ್ಕ, ಉಡುಪಿ
- ಶ್ರೀ ಕೇಶವ ಎಸ್. ಕರ್ಕೇರ, ಬೋರಿವಿಲಿ, ಮುಂಬೈ
- ಶ್ರೀ ಅರುಣ್ ಕುಮಾರ್, ಬೋರಿವಿಲಿ, ಮುಂಬೈ
- ಶ್ರೀ ಎಲ್. ವಿ. ಅಮೀನ್, ಮುಂಬೈ
- ಶ್ರೀ ಬಿ.ಟಿ. ಸಾಲ್ಯಾನ್ ಮತ್ತು ಶ್ರೀಮತಿ ಡಾ। ಅನಸೂಯ ಸಾಲ್ಯಾನ್, ಮಂಗಳೂರು
- ಶ್ರೀ ಶ್ಯಾಮ ಪೂಜಾರಿ, ಉದ್ಯಮಿ, ಉಡುಪಿ
- ಶ್ರೀ ಭಾಸ್ಕರ ಕೆ. ಜತನ್, ಉಡುಪಿ
- ಶ್ರೀ ಸುಕುಮಾರ್ ಸಾಲ್ಯಾನ್, ಸ್ವಾಮಿಲಪದವು, ಬಜ್ಪೆ
- ಶ್ರೀಮತಿ ತಾರಾ ಹೇಮಚಂದ್ರ, ಮಾರಿಗುಡಿ ಬಳಿ ಬೋಳಾರ ಮಂಗಳೂರು.
- ಶ್ರೀಮತಿ ಸರೋಜಿನಿ ನಂಬಿಯಾರ್, ಬೋಳಾರ, ಮಂಗಳೂರು
- ಶ್ರೀ ಗೋಪಾಲ ಪೂಜಾರಿ, ದೇರೆಬೈಲ್, ಅಶೋಕನಗರ, ಮಂಗಳೂರು
- ಶ್ರೀ ಟಿ. ಶಂಕರ ಸುವರ್ಣ, ಸುವರ್ಣದೀಪ, ತುಂಬೆ
- ಶ್ರೀ ರಮಾನಾಥ್ ಸನಿಲ್, ಗೌತಮ್ ಹೊಸಬೆಟ್ಟು
- ಪ್ರೊ ರಾಕೇಶ್ ಕುಮಾರ್, ಸಂತ ಅಲೋಶಿಯಸ್ ಕಾಲೇಜು, ಮಂಗಳೂರು
- ಶ್ರೀ ದಿವಾಕರ್ ಪಿ. ಅಂಬಲಪಾಡಿ, ಉಡುಪಿ
- ಶ್ರೀ ಜಯಕುಮಾರ್ ಪೂಜಾರಿ, ಇಳಂತಿಲ ಗ್ರಾಮ, ಬೆಳ್ತಂಗಡಿ
- ಶ್ರೀ ಕೆ. ಹರಿಶ್ಚಂದ್ರ, ಅಧ್ಯಕ್ಷರು, ಕಾವೂರು ವ್ಯವಸಾಯ ಸಂಘ, ಕಾವೂರು, ಮಂಗಳೂರು
- ಶ್ರೀ ಪ್ರದೀಪ್ ಕುಮಾರ್ ಸುವರ್ಣ, ಹುಣ್ಸೆಕಟ್ಟೆ, ಬಜ್ಪೆ
- ಶ್ರೀ ಗಣೇಶ್ ಸನಿಲ್, ಯಶಸ್ವಿ, ಗಾಂಧಿನಗರ, ಮಂಗಳೂರು
- ಶ್ರೀ ಶೈಲೇಂದ್ರ ಸುವರ್ಣ, ಎಸ್.ಆರ್.ಆರ್.ಕಂಕನಾಡಿ, ಮಂಗಳೂರು
- ಶ್ರೀ ಗೋಪಾಲ ಪೂಜಾರಿ, ಪವನ್ ಬೀಡಿ, ಬಜಾಲ್, ಮಂಗಳೂರು
- ಶ್ರೀ ದೇರಣ್ಣ ಬಿ, ಬಿಜೈ, ಆನೆಗುಂಡಿ, ಮಂಗಳೂರು
- ಶ್ರೀ ಮೋಹಿತ್ ಸುವರ್ಣ, ಪ್ರಾಧ್ಯಾಪಕರು, ಶಿವಭಾಗ್, ಕದ್ರಿ ಮಂಗಳೂರು
- ಶ್ರೀ ಪ್ರವೀಣ್ ಕುಮಾರ್, ನ್ಯಾಯವಾದಿ ಮತ್ತು ಸಹಾಯಕ ಸರ್ಕಾರಿ ವಕೀಲರು, ಪುತ್ತೂರು
- ಶ್ರೀ ಚಂದ್ರಶೇಖರ ಕುಮಾರ್, ಅಧ್ಯಕ್ಷರು ಕಾವೂರು ಬಿಲ್ಲವ ಸಮಾಜ ಸಂಘ ಕಾವೂರು
- ಶ್ರೀ ಗೋಪಾಲಕೃಷ್ಣ ಕುಂದರ್, ಸಂಪರ್ಕಾಧಿಕಾರಿ ಪೋಲಿಸ್ ಇಲಾಖೆ, ಮಂಗಳೂರು ವಿಮಾನ್ ನಿಲ್ದಾಣ
- ಶ್ರೀ ಉಮೇಶ್ ಕಾರಂತ್ ಉಪನ್ಯಾಸಕರು, ಸಂತ ಏನ್ಸ್ ಕಾಲೇಜು, ಮಂಗಳೂರು
- ಚಂದ್ರಶೇಖರ ಕುಮಾರ್, ಅಧ್ಯಕ್ಷರು ಕಾವೂರು ಬಿಲ್ಲವ ಸಂಘ, ಕಾವೂರು, ಮಂಗಳೂರು

ಕಳೆದ ಸಂಚಿಕೆಯಿಂದ ಮುಂದುವರಿದಿದೆ...

### ಆಜೀವ ಚಂದಾದಾರರು

* ಶ್ರೀ ಯು ಕೃಷ್ಣೋಜಿ, ದೇವಿ ಕೃಪಾ, ಅಬ್ಬಕ್ಕ ಸರ್ಕಲ್, ಉಳ್ಳಾಲ
* ಶ್ರೀಮತಿ ದೇವಕಿ ಆರ್ ಉಳ್ಳಾಲ, ಬಂಡಿಕೊಟ್ಯ, ಉಳ್ಳಾಲ

### ಈ ಸಂಚಿಕೆಗೆ ಚಂದಾ/ಜಾಹಿರಾತು/ ದೇಣಿಗೆ ಸಂಗ್ರಹಿಸಿಕೊಟ್ಟ ಮಹನೀಯರು

* ಶ್ರೀ ರಾಜೇಶ್ ಅಂಚನ್, ಕದ್ರಿ ಕೈಬಟ್ಟಲ್, ಮಂಗಳೂರು
* ಚಂದ್ರಹಾಸ್ ಮರೋಳಿ, ಶಿವಭಾಗ್, ಕದ್ರಿ, ಮಂಗಳೂರು
* ಶ್ರೀ ನೇಮಿರಾಜ್, ಕಂಪ್ಯೂಟ್ರಾಕ್ಸ್, ಮಂಗಳೂರು
* ಶ್ರೀ ಎಂ ಗೋಪಾಲ್, ಶ್ರೀ ಗೋಕರ್ಣನಾಥೇಶ್ವರ ಕಾಲೇಜ್, ಮಂಗಳೂರು
* ಶ್ರೀ ಎಸ್.ಕೆ.ಕೋಟ್ಯಾನ್, ಕುಂಜತ್‌ಬೈಲ್, ಮಂಗಳೂರು
* ಶ್ರೀ ಆನಂದ ಎಸ್. ಕೊಂಡಾಣ, ನಿರ್ದೇಶಕರು, ಆತ್ಮಶಕ್ತಿ ವಿವಿದೋದ್ದೇಶ ಸಹಕಾರಿ ಸಂಘ, ಮಂಗಳೂರು

## ಆತ್ಮಶಕ್ತಿ ಪತ್ರಿಕಾ ನಿಧಿಗೆ ಸಹಕಾರಕ್ಕೆ ಮನವಿ.

ಆತ್ಮೀಯರೇ,

ಕಳೆದ 15 ವರ್ಷಗಳಿಂದ "ಆತ್ಮಶಕ್ತಿ" ತ್ರೈಮಾಸಿಕ ಪತ್ರಿಕೆಯನ್ನು ತಮ್ಮೆಲ್ಲರ ಸಹಾಯ ಸಹಕಾರದಿಂದ ಯಶಸ್ವಿಯಾಗಿ ಮುನ್ನಡೆಸಿಕೊಂಡು ಬರುತ್ತಿದ್ದೇವೆ. ಮುಂದೆಯೂ ಅದೇ ರೀತಿ ಮುಂದುವರಿಸುವುದು ಬಹಳ ಕಷ್ಟದ ಕೆಲಸ. ಈ ಪತ್ರಿಕೆಯನ್ನು ನಿರಂತರ ನಡೆಸಿಕೊಂಡು ಬರಲು ಅದಕ್ಕೊಂದು ಶಾಶ್ವತ ನಿಧಿ ಸ್ಥಾಪಿಸುವ ಯೋಜನೆ ನಮ್ಮ ಮುಂದಿದೆ. ಶಾಶ್ವತ ನಿಧಿಯ ಬಡ್ಡಿಯಿಂದ ಹಾಗೂ ಜಾಹೀರಾತುದಾರರ ಸಹಕಾರದಿಂದ ಮುಂದಿನ ದಿನಗಳಲ್ಲೂ ನಿರಂತರವಾಗಿ ಪತ್ರಿಕೆಯನ್ನು ಪ್ರಕಟಿಸುವ ಹಾಗೂ ಮುಂದುವರಿಸುವ ಯೋಜನೆ ನಮ್ಮದು, ಇದಕ್ಕೆ ತಮ್ಮೆಲ್ಲರ ಸಹಕಾರ ನಮಗೆ ಅತೀ ಅಗತ್ಯ. ಸಹೃದಯಿ ಬಾಂಧವರು, ಹಿತೈಷಿಗಳು ನಮ್ಮ ಪತ್ರಿಕಾ ಬಳಗ ತಮ್ಮಲ್ಲಿಗೆ ಬಂದಾಗ "ಆತ್ಮಶಕ್ತಿ ಪತ್ರಿಕಾ ನಿಧಿಗೆ" ಆರ್ಥಿಕ ಶಕ್ತಿ ತುಂಬಿ ಸಹಕರಿಸಬೇಕಾಗಿ ನಮ್ಮ ವಿನಮ್ರ ವಿನಂತಿ. ಅದೇ ರೀತಿ ಸಹೃದಯಿ ಉದ್ಯಮಿಗಳು ಇದಕ್ಕೆ ನಿರಂತರ ಜಾಹೀರಾತು ಸಹಕಾರ ನೀಡಿ ಪತ್ರಿಕೆಯನ್ನು ಮುನ್ನಡೆಸಬೇಕೆಂದು ಈ ಮೂಲಕ ಮನವಿ ಮಾಡುತ್ತಿದ್ದೇವೆ.

**ಆತ್ಮಶಕ್ತಿ ಬಳಗ**

ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಪ್ರಕಾಶನ ಮತ್ತು ಚಾರಿಟೆಬಲ್ ಟ್ರಸ್ಟ್ (ರಿ.)
ಶ್ರೀ ಆರ್ಕೇಡ್ ಕಟ್ಟಡ, 2ನೇ ಮಹಡಿ, ಬೆಂದೂರ್‌ವೆಲ್, ಮಂಗಳೂರು

# ವಿವಿಧ ಕೋರ್ಸುಗಳ ಆಯ್ಕೆಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ

## ಶಿಕ್ಷಣ ದಿಕ್ಸೂಚಿ



✍ – ವಿಶ್ವನಾಥ ಪೂಜಾರಿ ರೆಂಜಾಳ,
ಗ್ರಂಥಪಾಲಕರು : ಶ್ರೀ ನಿರಂಜನ ಸ್ವಾಮಿ ಪ್ರಥಮ ದರ್ಜೆ ಕಾಲೇಜು, ಸುಂಕದಕಟ್ಟೆ

### ಪ್ರಸ್ತಾವನೆ

ಸ್ವಾಮಿ ವಿವೇಕಾನಂದರು ಒಂದು ಮಾತು ಹೇಳುತ್ತಾರೆ. 'ನಮ್ಮೊಳಗಿರುವ ಜ್ಞಾನ, ಸಾಮರ್ಥ್ಯ,' 'ಪ್ರತಿಭೆಗಳನ್ನು ಪ್ರಾವೀಣ್ಯತೆಯನ್ನು ಶಿಕ್ಷಣ ಪರಿಪೂರ್ಣಗೊಳಿಸುತ್ತದೆ' ಹೌದು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಒಂದೊಂದು ವಿಶೇಷತೆ ಆಸಕ್ತಿದಾಯಕ ವಿಚಾರಗಳು ಇದ್ದೇ ಇರುತ್ತದೆ. ಇದಕ್ಕೆ ಹೊಳಪು ನೀಡುವ ಕಾರ್ಯ ಶಿಕ್ಷಣದಿಂದ ನಡೆಯುತ್ತದೆ. ವಿದ್ಯೆಯೆನ್ನುವುದು ಆಧುನಿಕವಾದ ಈ ಕಾಲಘಟ್ಟದಲ್ಲಿ ಅನಿವಾರ್ಯವೆನಿಸಿದೆ. ನಮ್ಮ ದೈನಂದಿನ ಆಹಾರ ಕ್ರಮಣಿಕೆಯಲ್ಲಿ ನಮ್ಮ ಮನಸ್ಸಿಗೆ ಒಪ್ಪುವ ದೇಹ ಸ್ವೀಕರಿಸುವ ಆಹಾರವನ್ನಷ್ಟೆ ನಾವು ತೆಗೆದುಕೊಳ್ಳ ಬಯಸುತ್ತೇವೆ. ಇದರಿಂದ ಮನಸ್ಸಿಗೂ ಹಿತವಾಗುತ್ತದೆ, ಆರೋಗ್ಯಕ್ಕೂ ಪುಷ್ಟಿದಾಯಕವಾಗಿ ಜೀವನ ಸಂತೃಪ್ತಿಯಿಂದ ಕೂಡಿರಲು ಸಹಾಯಕವಾಗುತ್ತದೆ. ನೇರ ದಾರಿಯಲ್ಲಿ ಸಾಗುವಾಗ ಒಮ್ಮೆಲೆ ಕವಲು ದಾರಿಯೆದುರಾದಾಗ ಗುರಿ ಮುಟ್ಟುವ ಹಾದಿ ಯಾವುದು ಯಾವ ದಾರಿ ಸರಿಯಾದುದು, ಯಾವುದು ಗಮ್ಯಕ್ಕೆ ತಲುಪಬಹುದೆಂದು ಯೋಚಿಸುವಾಗ, ಮಾರ್ಗದರ್ಶಕರ ನೆನಪು ಕಾಡುತ್ತದೆ. ಎದುರಾದ ಮಂದಿಯಲ್ಲಿ ಸರಿಯಾದ ಮಾರ್ಗವನ್ನು ಕೇಳಿ ವಿವೇಚನೆಯಿಂದ ಮುಂದೆ ನಡೆದು ಸೇರಬೇಕಾದ ಸ್ಥಳವನ್ನು ತಲುಪುತ್ತೇವೆ. ಪ್ರಿಯ ವಿದ್ಯಾರ್ಥಿಗಳೇ ನಿಮ್ಮ ಮುಂದಿನ ಶೈಕ್ಷಣಿಕ ವಿಭಾಗದ ಆಯ್ಕೆಯೂ ಹೀಗೆಯೇ ಸೂಕ್ತವಾಗಿರಲಿ ಅದಕ್ಕಾಗಿ ಕವಲು ದಾರಿಯಲ್ಲಿ ನೀವು ನಿಂತಿದ್ದರೆ ಮಾರ್ಗದರ್ಶಕವಾಗಿ ನಮ್ಮದೊಂದು ಚಿಕ್ಕ ಪ್ರಯತ್ನವೇ ಈ ಮುಂದೇನು? ಪ್ರತಿಸಲದಂತೆ ಈ ಬಾರಿಯೂ ಪುನರಪಿ ಒಂದಷ್ಟು ಹೊಸ ಕೋರ್ಸುಗಳನ್ನು ಸೇರಿಸಿ ತಮ್ಮ ಮುಂದಿಡುತ್ತಿದ್ದೇವೆ.

### ಎಸ್ಎಸ್.ಎಲ್.ಸಿ. ಬಳಿಕ....

ಪ್ರೀತಿಯ ವಿದ್ಯಾರ್ಥಿಗಳೇ ಎಸ್.ಎಸ್.ಎಲ್.ಸಿ. ಬಳಿಕ, ಪಿ.ಯುಸಿ ನಂತರ, ಪದವಿಯ ಅನಂತರ ಯಾವ ಎಲ್ಲಾ ಕೋರ್ಸುಗಳು ಇವೆ ಎಂಬುದನ್ನು ಪರಿಚಯಾತ್ಮಕಗೊಳಿಸುವ ತಮ್ಮ ಮುಂದೆ ಅನಾವರಣಗೊಳಿಸುವ ಸಣ್ಣ ಪ್ರಯತ್ನ ನಮ್ಮದು.

ಎಸ್.ಎಸ್.ಎಲ್.ಸಿ. ಇಂದು ಬದುಕಿನ ಅಗತ್ಯ ಶಿಕ್ಷಣ ಘಟ್ಟವೆನಿಸಿದೆ. ಆದರೆ ತನ್ನ ಶಿಕ್ಷಣವನ್ನು ಇಲ್ಲಿಗೆ ಸ್ಥಾಯಿಗೊಳಿಸಿಕೊಳ್ಳುವುದು ಬೌದ್ಧಿಕ, ಔದ್ಯೋಗಿಕ ನೆಲೆಗಟ್ಟಿಗೆ ಎಂದೂ ಸಹಾಯಕವೆನಿಸುವುದಿಲ್ಲ. ಹತ್ತನೆ ತರಗತಿ ಬಳಿಕ ವಿದ್ಯಾಭ್ಯಾಸ ಆಯ್ಕೆಗೆ ಅನಂತ ಅವಕಾಶಗಳು ತೆರೆದುಕೊಂಡಿದೆ. ಈ ಅವಕಾಶಗಳಾವುವು ಎಂಬುದನ್ನು ತಮ್ಮ ಮುಂದೆ ತೆರೆದಿಡಬೇಕಾಗುತ್ತದೆ. ಮುಖ್ಯವಾಗಿ

- ಡಿಪ್ಲೋಮ ಇನ್ ಗಾರ್ಮೆಂಟ್ ಟೆಕ್ನಾಲಜಿ
- ಡಿಪ್ಲೋಮ ಇನ್ ಇನ್ಫರ್ಮೇಷನ್ ಟೆಕ್ನಾಲಜಿ
- ಡಿಪ್ಲೋಮ ಇನ್ ಇನ್ಸ್ಟ್ರುಮೆಂಟಲ್ ಟೆಕ್ನಾಲಜಿ
- ಡಿಪ್ಲೋಮ ಇನ್ ಲೆದರ್ ಟೆಕ್ನಾಲಜಿ & ಫೂಟ್‌ವೇರ್
- ಡಿಪ್ಲೋಮ ಇನ್ ಪ್ಲಾಸ್ಟಿಕ್ ಟೆಕ್ನಾಲಜಿ
- ಡಿಪ್ಲೋಮ ಇನ್ ಪ್ರೊಡಕ್ಷನ್ & ಇಂಡಸ್ಟ್ರಿಯಲ್ ಇಂಜಿನಿಯರಿಂಗ್
- ಡಿಪ್ಲೋಮ ಇನ್ ಟೆಕ್ಸ್‌ಟೈಲ್ ಪ್ರೊಸೆಸಿಂಗ್/ಡಿಸೈನ್/ಸ್ಪಿನ್ನಿಂಗ್/ ವೀವಿಂಗ್ ನಿಟ್ಟಿಂಗ್ ಟೆಕ್ನಾಲಜಿ
- ಎರಡು ವರುಷಗಳ ವೃತ್ತಿ ಆಧಾರಿತ ಶಿಕ್ಷಣ (JOC)
- ಎರಡು ವರುಷಗಳ ಕೈಗಾರಿಕಾ ತರಬೇತಿ ಶಿಕ್ಷಣ (ITI)
- ಡಿಪ್ಲೋಮಾ ಇನ್ ಇಂಜಿನಿಯರಿಂಗ್ (ಪಾಲಿಟೆಕ್ನಿಕ್) ಮೂರು ವರುಷಗಳು
- ಡಿಪ್ಲೋಮಾ ಇನ್ ಡಿಸೈನ್, ಫ್ಯಾಶನ್ ಡಿಸೈನ್ ಮತ್ತು ಗಾರ್ಮೆಂಟ್ ಡಿಸೈನ್ – ಮೂರು ವರುಷಗಳು
- ಡಿಪ್ಲೋಮಾ ಇನ್ ಹಾಸ್ಪಿಟಲ್ ಎಡ್ಮಿನಿಸ್ಟ್ರೇಷನ್ (D.H.A.)
- ಡಿಪ್ಲೋಮಾ ಇನ್ ಲೇಬರ್ ವೆಲ್ಫೇರ್ (D.C.W.)
- ಡಿಪ್ಲೋಮಾ ಇನ್ ಪಬ್ಲಿಕ್ ಎಡ್ಮಿನಿಸ್ಟ್ರೇಷನ್ (D.P.A.)
- ಡಿಪ್ಲೋಮಾ ಇನ್ ವೆಬ್ & ಮಲ್ಟಿಮೀಡಿಯಾ ಟೆಕ್ನಾಲಜಿ (D.M.M.T.)
- ಡಿಪ್ಲೋಮಾ ಇನ್ ನ್ಯೂಟ್ರಿಷಿಯನ್ & ಹೆಲ್ತ್ ಎಜುಕೇಶನ್ (D.N.H.E.)
- ಪೋಸ್ಟ್ ಗ್ರಾಜ್ಯುವೆಟ್ ಡಿಪ್ಲೋಮಾ ಇನ್ ಇನ್ಸುರೆನ್ಸ್ ಮ್ಯಾನೇಜ್‌ಮೆಂಟ್ (P.G.D.I.M.)
- ಒಂಭತ್ತು ತಿಂಗಳ ಬೇಸಿಕ್ ಇಲೆಕ್ಟ್ರಾನಿಕ್ಸ್, ಪಿ.ಸಿ.ಹಾರ್ಡ್‌ವೇರ್, ನೆಟ್‌ವರ್ಕಿಂಗ್ (P.D.H.N.A.)
- ಮೂರು ವರುಷಗಳ ಟೂಲ್ & ಡೈ ಮೇಕರ್ (ಜಿಗ್ಸ್ & ಫಿಕ್ಸ್‌ಚರ್ಸ್) (T.D.M.)
- ಡಿಪ್ಲೋಮಾ ಇನ್ ಏವಿಯೇಷನ್ ಮೆಡಿಸಿನ್ (A.M.D)

### ಐ.ಟಿ.ಐ ಕೋರ್ಸ್

- ಆರ್ಕಿಟೆಕ್ಚರ್ ಅಸಿಸ್ಟೆಂಟ್
- ಬೇಕರ್ & ಕನ್ಪೆಕ್ಷನರ್
- ಬ್ಲೀಚಿಂಗ್ ಡೈಯಿಂಗ್ & ಕ್ಯಾಲಿಕೋ ಪ್ರಿಂಟಿಂಗ್
- ಡಾಟಾ ಎಂಟರ್ ಅಪರೇಟರ್
- ಡ್ರೆಸ್ ಮೇಕಿಂಗ್
- ಇಂಡಸ್ಟ್ರೀಯಲ್ ಪೈಂಟರ್

→→→

→→→

- ಮ್ಯಾನುಫೆಕ್ಚರ್ ಆಫ್ ಫೂಟ್‌ವೇರ್
- ಮೆರಿನ್ ಇಂಜಿನ್ ಫಿಟ್ಟರ್
- ಪ್ಲಾಸ್ಟಿಕ್ ಪ್ರೊಸೆಸಿಂಗ್ ಆಪರೇಟರ್
- ಸರ್ವೇಯರ್

ಅಪರೇಟರ್ (ಕೆಮಿಕಲ್ ಪ್ಲಾಂಟ್), ಲ್ಯಾಬೋರೇಟರಿ ಅಸಿಸ್ಟೆಂಟ್ (ಕೆಮಿಕಲ್ ಪ್ಲಾಂಟ್), ಮೆಕ್ಯಾನಿಕ್ ಮೆಂಟೆನೆನ್ಸ್ (ಕೆಮಿಕಲ್ ಪ್ಲಾಂಟ್), ಕಟ್ಟಿಂಗ್ & ಶೂಯಿಂಗ್ (1 ವರುಷ), ಡ್ರೆಸ್ ಮೇಕಿಂಗ್ (1 ವರುಷ), ಮೆಕ್ಯಾನಿಕ್ (ಡೀಸೆಲ್), ಒಂದು ವರುಷ, ಮೆಕ್ಯಾನಿಕ್ ಟ್ರ್ಯಾಕ್ಟರ್ ಒಂದು ವರುಷ, ಪ್ಲಾಸ್ಟಿಕ್ ಪ್ರೋಸೆಸಿಂಗ್ ಅಪರೇಟರ್ (ಒಂದು ವರುಷ) ಮೆಕ್ಯಾನಿಕಲ್ ರಿಪೇರಿ & ಮೆಂಟೇನೆನ್ಸ್ ಆಫ್ ಲೈಟ್ ವೆಹಿಕಲ್ (ಒಂದು ವರುಷ) ಸಿ.ಓ.ಇ. ಅಡಿಯಲ್ಲಿ ಬರುವ ವೃತ್ತಿಗಳು (Centro of Excellence) ಪ್ರೊಡಕ್ಷನ್ & ಮ್ಯಾನುಫ್ಯಾಕ್ಚರಿಂಗ್, ಅಟೋಮೊಬೈಲ್, ಎಲೆಕ್ಟ್ರಿಕಲ್.

ಇನ್ನು ಪಾಲಿಟೆಕ್ನಿಕ್‌ನಲ್ಲಿ ಈ ಕೆಳಗೆ ಹೆಸರಿಸಲಾಗಿರುವ ಕೋರ್ಸುಗಳು ಹೆಚ್ಚು ಪ್ರಚಲಿತದಲ್ಲಿದ್ದು ವಿದ್ಯಾರ್ಥಿಗಳು ಆಯ್ಕೆ ವಿಚಾರದಲ್ಲಿ ತಮ್ಮ ಆಸಕ್ತಿಯ ಕ್ಷೇತ್ರಗಳಿಗೆ ಮನ ಮಾಡಬಹುದಾಗಿದೆ ಇದರಲ್ಲಿ ಮುಖ್ಯವಾದುವೆಂದರೆ ಎಲೆಕ್ಟ್ರಾನಿಕ್ಸ್ ಆಂಡ್ ಕಮ್ಯುನಿಕೇಶನ್ ಇಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್, ಮೆಕ್ಯನಿಕಲ್ ಇಂಜಿನಿಯರಿಂಗ್, ಸಿನೆಮಾಟೋಗ್ರಫಿ ಎಲೆಕ್ಟ್ರಿಕಲ್‌ಶಿಪ್, ಇನ್‌ಸ್ಟ್ರುಮೆಂಟೇಷನ್ & ಕಂಟ್ರೋಲ್, ಆರ್ಕಿಟೆಕ್ಚರ್, ಲೆದರ್ ಟೆಕ್ನಾಲೊಜಿ ಅಟೋಮೊಬೈಲ್ ಇಂಜಿನಿಯರಿಂಗ್, ಕೆಮಿಕಲ್ ಇಂಜಿನಿಯರಿಂಗ್, ಮೆಕಾಟ್ರೆನಿಕ್ಸ್, ಟೆಕ್ಸ್‌ಟೈಲ್ ಟೆಕ್ನಾಲಜಿ, ಇನ್‌ಟೀರಿಯರ್ ಡೆಕೋರೇಷನ್, ಇನ್‌ಫಾರ್ಮೇಷನ್ ಸೈನ್ಸ್ ಮೈನಿಂಗ್, ಸೆರಾಮಿಕ್ ಟೆಕ್ನಾಲಜಿ, ಸೌಂಡ್ ರೆಕಾರ್ಡಿಂಗ್ & ಇಂಜಿನಿಯರಿಂಗ್ (ಹೀಟ್ ಪವರ್‌ಟೆಕ್) (ಇದೇ ವಿಭಾಗದಲ್ಲಿ ಇನ್ಸ್ಟ್ರುಮೆಂಟೇಶನ್ ವೆಲ್ಡಿಂಗ್ & ಶೀಟ್ ಮೆಟಲ್‌ಟೆಕ್) ಪಾಲಿಮರ್ ಟೆಕ್ನಾಲಜಿ, ಪ್ರಿಂಟಿಂಗ್, ಸಿವಿಲ್ ಎನ್ವಾರ್‌ಮೆಂಟಲ್, ಇವೆಲ್ಲವೂ ಮೂರು ವರುಷಗಳ ಅವಧಿಯ ಕೋರ್ಸುಗಳಾದರೆ ಇನ್ನು ಆಹಾರ ಸಂಸ್ಕರಣೆ ತರಬೇತಿ, ಗೃಹ ನಿರ್ವಹಣೆ, ಅರಣ್ಯ ಸರ್ವೆಯರ್, ಫಾರೆಸ್ಟ್ ರೇಂಜರ್ ತರಬೇತಿ, ಕೋರ್ಸುಗಳಿವೆ.

ವೃತ್ತಿಪರ ಶಿಕ್ಷಣದ ಹೊರತಾಗಿ ಸಾಂಪ್ರದಾಯಿಕ ಶಿಕ್ಷಣವೆನಿಸಿದ ಎರಡು ವರುಷಗಳ ಅವಧಿಯ, ಕಲೆ, ವಾಣಿಜ್ಯ ಹಾಗೂ ವಿಜ್ಞಾನ ವಿಭಾಗಗಳ ಆಯ್ಕೆಗಳಿದ್ದು ಅವರವರ ಆಸಕ್ತಿಗನುಗುಣವಾಗಿ ಸೇರ್ಪಡೆ ಬಯಸಬಹುದಾಗಿದೆ. ಈ ಪ್ರತಿಯೊಂದು ವಿಭಾಗಗಳಲ್ಲಿ ಹಲವಾರು ಐಚ್ಛಿಕಗಳು ಲಭ್ಯವಿದೆ. ಇಲ್ಲಿ ಯಾವುದಾದರು ನಾಲ್ಕು ಐಚ್ಛಿಕಗಳೊಂದಿಗೆ ಕಡ್ಡಾಯವಾಗಿ ಆಂಗ್ಲಭಾಷೆ ಹಾಗೂ ದೇಶೀಯ ಯಾ ಸ್ಥಳೀಯ (ರಾಜ್ಯ) ಭಾಷೆ ಇವುಗಳಲ್ಲೊಂದನ್ನು ಆರಿಸಿಕೊಳ್ಳಬೇಕಾಗುತ್ತದೆ ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ಐಚ್ಛಿಕ ವಿಷಯಗಳಲ್ಲಿ ಬಹು ಆಯ್ಕೆಗಳಿಲ್ಲದೆ ಸೀಮಿತತೆ ಇದ್ದು ಅವಶ್ಯಕತೆ, ಅನಿವಾರ್ಯತೆಗಳನ್ನು ಸಮನ್ವಯಗೊಳಿಸಿಕೊಂಡು ಮುಂದಡಿಯಿಡಬೇಕಾಗುತ್ತದೆ.

**ಪಿ.ಯು.ಸಿ. ಬಳಿಕ**

ಪಿ.ಯು.ಸಿ. ಬಳಿಕದ ಶಿಕ್ಷಣ ಅದು ಬದುಕಿನ ದಿಕ್ಸೂಚಿ ಪಥ, ಶಿಖರದೆತ್ತರಕ್ಕೆ ಹರಿಸಬೇಕಾದರೆ ರಥ, ಅಸೀಮ ಅವಕಾಶಗಳು ಮುಕ್ತ ಮುಕ್ತವಾಗಿರುವ ಇಂದಿನ ದಿನಗಳಲ್ಲಿ ಯುಕ್ತವಾದುದರ ಆಯ್ಕೆ ತಮ್ಮದಾಗಬೇಕಾಗಿದೆ. ಅವುಗಳಲ್ಲಿ ಮುಖ್ಯವಾಗಿ

**ಇಂಜಿನಿಯರಿಂಗ್**

a)C.S - ಕ್ಲಡ್ ಟೆಕ್ನಾಲಜಿ ಇನ್ಫಾರ್ಮೇಶನ್ ಸೆಕ್ಯರಿಟಿ

b)D.S - ಡಾಟಾ ಸ್ಯಾನ್ಸ್

**I ಅಲೈಡ್ ಹೆಲ್ತ್ ಸ್ಯಾನ್ಸ್**

1)ಬಿ.ಎಸ್ಸಿ $3^1/_2$ ವರುಷಗಳು

a)ಕಾರ್ಡಿಯೋ ವಾಸ್ಕುಲರ್ ಟೆಕ್ನಾಲಜಿ

b)ಏರ್ಪುಷನ್ ಟೆಕ್ನಾಲಜಿ

c)ಆಪೋಮೆಟ್ರಿ

d)ಇಮೇಜಿಂಗ್ ಟೆಕ್ನಾಲಜಿ

e) ರೆಸ್ಪಿರೇಟರಿ ಕೇರ್ ಟೆಕ್ನಾಲಜಿ

- ಡಿಪ್ಲೋಮೋ ಇನ್ ಸೋಷಿಯಲ್ ಸ್ಟಡೀಸ್ & ಕೌನ್ಸೆಲಿಂಗ್ ಸ್ಕಿಲ್ಸ್ – 1 ವರ್ಷ
- ಎಡ್ವಾನ್ಸ್‌ಡ್ ಡಿಪ್ಲೋಮೊ ಇನ್ ಡ್ರೆಡ್ಜಿಂಗ್ ಟೆಕ್ನಾಲಜಿ
- ಡಿಪ್ಲೋಮೋ ಇನ್ ಹೆಲ್ತ್ ಇನ್ಸ್‌ಪೆಕ್ಟರ್
- ಡಿಪ್ಲೋಮೋ ಇನ್ ಮೆಡಿಕಲ್ ರೆಕಾರ್ಡ್ ಟೆಕ್ನಾಲಜಿ
- ಡಿಪ್ಲೋಮೋ ಇನ್ ಆಪರೇಷನ್ ಥಿಯೇಟರ್ ಟೆಕ್ನಾಲಜಿ
- ಡಿಪ್ಲೋಮೋ ಇನ್ ಅಪ್ತಾಲಿಕ್ ಟೆಕ್ನಾಲಜಿ
- ಡಿಪ್ಲೊಮೋ ಇನ್ ಡೆಂಟಲ್ ಮೆಕ್ಯಾನಿಕ್ಸ್
- ಡಿಪ್ಲೊಮೋ ಇನ್ ಡೆಂಟಲ್ ಹೈಜೀನ್
- ಬಿ.ಎ. ಇನ್ ಫಿನಾನ್ಶಿಯಲ್ ಅನಾಲಿಸಿಸ್
- ಬ್ಯಾಚುಲರ್ ಆಫ್ ಬ್ಯಾಂಕ್ ಮೆನೇಜ್‌ಮೆಂಟ್
- ಬ್ಯಾಚುಲರ್ ಆಫ್ ಇಂಟರ್‌ನ್ಯಾಷನಲ್ ಬಿಸಿನೆಸ್ & ಫೈನಾನ್ಸ್.
- ಎರಡರಿಂದ ಮೂರು ವರುಷಗಳ ಅವಧಿಯ ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (DMCT)
- ಡಿಪ್ಲೋಮಾ ಇನ್ ಎಕ್ಸರೇ ಟೆಕ್ನಾಲಜಿ ಎರಡು ವರುಷಗಳು
- ಡಿಪ್ಲೋಮಾ ಇನ್ ಸ್ಯಾನಿಟರಿ ಹೆಲ್ತ್ ಇನ್ಸ್‌ಪೆಕ್ಟರ್ (DSHI)
- ಡಿಪ್ಲೋಮಾ ಇನ್ ಆಯುರ್ವೇದ ಮೆಡಿಸಿನ್ (D.A.M.)
- ಡಿಪ್ಲೋಮಾ ಇನ್ ಕಮ್ಯುನಿಟಿ ಮೆಡಿಸಿನ್ (D.C.M.)
- ಡಿಪ್ಲೋಮಾ ಇನ್ ಡಯಗ್ನಿಸ್ಟಿಕ್ ರೇಡಿಯಾಲಜಿ (D.D.R.)
- ಡಿಪ್ಲೋಮಾ ಇನ್ ಹೆಲ್ತ್ ಎಜ್ಯುಕೇಶನ್ (D.H.E.)
- ಡಿಪ್ಲೋಮಾ ಇನ್ ಚೆಸ್ಟ್ ಡಿಸೀಸಸ್ (D.C.D)
- ಡಿಪ್ಲೋಮಾ ಇನ್ ಚೈಲ್ಡ್ ಹೆಲ್ತ್ (D.C.H)
- ಡಿಪ್ಲೋಮಾ ಇನ್ ಕ್ಲಿನಿಕಲ್ ಪೆಥಾಲಜಿ/ಕ್ಲಿನಿಕಲ್ ಸೈಕಾಲಜಿ/ ಕ್ಲಿನಿಕಲ್ ಫಾರ್ಮಕಾಲಜಿ (D.C.P)
- ಡಿಪ್ಲೋಮಾ ಇನ್ ಡೆರ್ಮಟಾಲಜಿ (D.D)
- ಡಿಪ್ಲೋಮಾ ಇನ್ ಡೆರ್ಮಟಾಲಜಿಕಲ್ ಮೆಡಿಸಿನ್ (D.D.M)
- ಡಿಪ್ಲೋಮಾ ಇನ್ ಡೆರ್ಮಟಾಲಜಿ ಆ್ಯಂಡ್ ವೆನೆರಿಯಲ್ ಡಿಸೀಸಸ್ (D.D.V.D)
- ಡಿಪ್ಲೋಮಾ ಇನ್ ಡೆರ್ಮಟಾಲಜಿ & ಸೆಕ್ಸುವಲಿ ಟ್ರಾನ್ಸ್ ಮಿಟೆಡ್ ಡಿಸೀಸಸ್ (D.D.& S.T.D)
- ಡಿಪ್ಲೋಮಾ ಇನ್ ಎಂಬ್ರಾಯೋಲಜಿ (D.E)
- ಬಿ.ಎಂ.ಎಂ. : ಬ್ಯಾಚುರಲ್ ಡಿಗ್ರಿ ಇನ್ ಮ್ಯಾಸ್ ಮೀಡಿಯ

→→→

→→→

- ಸಿ. ಸಿ. ಎ. (C.C.A) : ಕಾಸ್ಮಿಕ್ ಸರ್ಟಿಫೈಡ್ ಅಕೌಂಟೆಂಟ್
- ಸಿ. ಡಬ್ಲ್ಯು. ಎ. (C.W.A) : ಕಾಸ್ಟ್ ಆ್ಯಂಡ್ ವರ್ಕ್ ಎಕೌಂಟೆಂಟ್
- ಬ್ಯಾಚುರಲ್ ಆಫ್ ಎನ್ವಿರಾನ್‌ಮೆಂಟಲ್ ಮ್ಯಾನೇಜ್‌ಮೆಂಟ್ (B.E.M.)
- ಬಿ.ಎಫ್.ಟಿ.ಎಂ. : (BFTM) ಬ್ಯಾಚುರಲ್ ಆಫ್ ಫಾರಿನ್ ಟ್ರೇಡ್ ಮ್ಯಾನೇಜ್‌ಮೆಂಟ್
- ಬಿ.ಎಂ. ಎಸ್. (B.M.S.) ಬ್ಯಾಚುರಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್
- ಬ್ಯಾಚುರಲ್ ಆಫ್ ಎಕ್ಸೆಸ್ಸರಿ ಡಿಸೈನ್, ಫ್ಯಾಶನ್ ಡಿಸೈನ್, ಟೆಕ್ಸ್‌ಟೈಲ್ ಡಿಸೈನ್
- ಬಿ. ಎಸ್ಸಿ (B.Sc.) ಇನ್ ಎಲೆಕ್ಟ್ರೋನಿಕ್ಸ್ ಮೀಡಿಯಾ, ಡಿಜಿಟಲ್ ಆರ್ಟ್ & ಟೆಕ್ನಾಲಜಿ, ಹಾಸ್ಪಿಟಾಲಿಟಿ ಸ್ಟಡೀಸ್, ಮಲ್ಟಿ ಮೀಡಿಯಾ ಮ್ಯಾಸ್ ಕಮ್ಯುನಿಕೇಶನ್, ಎಡ್ವರ್‌ಟೈಸ್‌ಮೆಂಟ್ & ಜರ್ನಾಲಿಸಂ, ಮಲ್ಟಿ ಮೀಡಿಯ, ಡಿಜಿಟಲ್ ಆರ್ಟ್ & ಟೆಕ್ನಾಲಜಿ
- ಎಡ್ವಾನ್ಸ್‌ಡ್ ಹೇರ್ ಡಿಪ್ಲೊಮಾ ಹೋಲ್ಡರ್, ಎಡ್ವನ್ಸ್‌ಡ್ ಡಿಪ್ಲೊಮಾ ಇನ್ 3ಡಿ ಅನಿಮೇಶನ್, ಅಡ್ವಾನ್ಸ್‌ಡ್ ಎಡಿಟಿಂಗ್, ಎಡ್ವಾನ್ಸ್‌ಡ್ ಡಿಪ್ಲೊಮಾ ಇನ್ ಡಿಜಿಟಲ್ ಅನಿಮೇಶನ್(Diploma in VFX & Animation) ಅನಿಮೇಶನ್ ಫಿಲ್ಮ್ ಮೇಕಿಂಗ್.
- ಗ್ರಾಜ್ಯುವೇಟ್ ಡಿಪ್ಲೋಮ ಇನ್ ಪ್ರಿಂಟ್ ಆಂಡ್ ವೆಬ್
- ಗ್ರಾಜ್ಯುವೇಟ್ ಡಿಪ್ಲೋಮ ಇನ್ ಬ್ರಾಡ್‌ಕಾಸ್ಟ್ / ಮಲ್ಟಿಮೀಡಿಯಾ/ ಜರ್ನಾಲಿಸಂ
- 3ಡಿ ಅನಿಮೇಶನ್ / ಡಿಜಿಟಲ್ ಅನಿಮೇಶನ್
- ಎಡ್ವಾನ್ಸ್‌ಡ್ ಡಿಪ್ಲೋಮ ಇನ್ 3ಡಿ ಎನಿಮೇಶನ್
- ಡಿಪ್ಲೊಮಾ ಇನ್ ಹೇರ್ ಡಿಪ್ಲೋಮ ಹೋಲ್ಡರ್
- ಎಡ್ವಾನ್ಸ್‌ಡ್ ಡಿಪ್ಲೋಮ ಇನ್ ಮಲ್ಟಿ ಮೀಡಿಯಾ
- ಎಡ್ವಾನ್ಸ್‌ಡ್ ಎಡಿಟಿಂಗ್
- ಎಡ್ವಾನ್ಸ್‌ಡ್ ಆ್ಯಂಕರಿಂಗ್
- ಎಡ್ವಾನ್ಸ್‌ಡ್ ಫಿಲ್ಮ್ ಮೇಕಿಂಗ್
- ಬಿ.ಎಸ್ಸಿ ಇನ್ ಫುಡ್ ಟೆಕ್ನಾಲಜಿ ಪ್ರೊಸೆಸಿಂಗ್ ಇಂಡಸ್ಟ್ರಿ : ಪಿ.ಯು.ನಲ್ಲಿ ವಿಜ್ಞಾನ ಪಿ.ಸಿ.ಎಂ.ಬಿ. ಅಧ್ಯಯನ ಮಾಡಿರಬೇಕು.
- **ರೇಡಿಯೋ ಥೆರಪಿ :** ಕ್ಯಾನ್ಸರ್ ರೋಗಿಗಳಿಗೆ ನೀಡುವ ಈ ಚಿಕಿತ್ಸಾ ಶಿಕ್ಷಣವು ನಾಲ್ಕೂವರೆ ವರ್ಷಗಳ ಅವಧಿಯದ್ದಾಗಿರುತ್ತದೆ. ಪಿ.ಯು.ಸಿ.ಯಲ್ಲಿ ವಿಜ್ಞಾನ ಅಧ್ಯಯನ ಅವಶ್ಯಕ.
- **ರೇಡಿಯೋಗ್ರಫಿ :** ಮೂಳೆ ಮುರಿತ, ಜಠರ ಶ್ವಾಸಕೋಶ ಮುಂತಾದ ಶರೀರ ಸಂಬಂಧಿ ಸಮಸ್ಯೆಗಳನ್ನು ಕಂಡುಹಿಡಿಯಲು ರೇಡಿಯೋಗ್ರಫಿ ಅತ್ಯುತ್ತಮ ವಿಧಾನವಾಗಿದೆ. ಇಲ್ಲಿ ಎಕ್ಸ್‌ರೇ, ಜೀ ಸ್ಕ್ಯಾನ್, ಅಲ್ಟ್ರಾ ಸೊನೋಗ್ರಫಿ – ಪಿ.ಯು.ಸಿ.ಯಲ್ಲಿ ವಿಜ್ಞಾನ ಓದಿರಬೇಕು.
- **ಬಿ.ಎಸ್ಸಿ. M.L.T. :** ಬ್ಯಾಚುಲರ್ ಆಫ್ ಸೈನ್ಸ್ ಇನ್ ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ, ವಿಜ್ಞಾನ ಓದು ಅವಶ್ಯಕ ಅವಧಿ ಮೂರು ವರುಷಗಳು.
- **ಮೆಡಿಕಲ್ ಲ್ಯಾಬ್ ಟೆಕ್ನೀಷಿಯನ್ ಆಪ್ಟಾಲ್ಮಿಕ್ ಟೆಕ್ನಾಲಜಿ :** ಕಣ್ಣಿಗೆ ಸಂಬಂಧಿಸಿದ ತರಬೇತಿ ಪಿ.ಯು.ಸಿ.ಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಓದಿರಬೇಕಾಗುತ್ತದೆ ಅಧ್ಯಯನ ಅವಧಿ ಮೂರು ವರುಷಗಳು.
- **ಬ್ಯಾಚುಲರ್ ಆಫ್ ನ್ಯಾಚುರೋಪತಿ & ಯೋಗಿಕ್ ಸೈನ್ಸ್ (BNYS)** : ವಿಜ್ಞಾನ ವಿಷಯ ಪಿ.ಯು.ಸಿಯಲ್ಲಿ ಅವಶ್ಯಕ.
- **ಬಿ.ಎಸ್ಸಿ ಇನ್ ಅನಸ್ತೇಷಿಯಾ ಟೆಕ್ನಾಲಜಿ :** ಪಿ.ಯು.ಸಿ.ಯಲ್ಲಿ ವಿಜ್ಞಾನ ಅವಶ್ಯಕ ಒಟ್ಟು ಅವಧಿ ಮೂರು ವರುಷ.
- **ಫಿಜಿಯೋಥೆರಪಿ** (BPT) ದೈಹಿಕ ವಿಜ್ಞಾನದಲ್ಲಿ ಪದವಿ ಆಕಾಂಕ್ಷಿಗಳು
- ಮೂರು ವರುಷಗಳ ಮೆಕ್ಯಾನಿಕ್ ಮಿಷಿನ್ ಟೂಲ್ ಮೆಂಟೇನೆನ್ಸ್ (M.M.T.M.)
- ಒಂದು ವರುಷ ಅವಧಿಯ ಎಡ್‌ವಾನ್ಸ್‌ಡ್ ಡಿಪ್ಲೋಮಾ ಇನ್ ಇನ್ಫರ್ಮೇಶನ್ ಟೆಕ್ನಾಲಜಿ (A.D.I.T.)
- ಡಿಪ್ಲೋಮಾ ಇನ್ ಆಫೀಸ್ ಅಟೋಮೇಶನ್ – ಆರು ತಿಂಗಳು (D.O.A.)
- ಡಿಪ್ಲೋಮಾ ಇನ್ ಡೆಸ್ಕ್‌ಟಾಪ್ ಪಬ್ಲಿಶಿಂಗ್ (D.D.T.P.)
- ಡಿಪ್ಲೊಮಾ ಇನ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್, ಮೆರೈನ್ ಅರೊನೊಟಿಕಲ್ ಅಪ್ಪೆರಲ್ ಡಿಸೈನ್ ಸೆರಾಮಿಕ್ ಟೆಕ್ನಾಲಜಿ, ಮೊಡರ್ನ್ ಆಫೀಸ್ ಪ್ರಾಕ್ಟೀಸ್, ಪೂಟ್‌ವೇರ್ ಡಿಸೈನ್, ಸೈನೋಗ್ರಫಿ, ಮ್ಯೂಸಿಕ್ ಆ್ಯಂಡ್ ಡ್ಯಾನ್ಸ್, ಹ್ಯಾಂಡ್‌ಲೂಮ್ ಟೆಕ್ನಾಲಜಿ.

**I.T.I. ಯಲ್ಲಿರುವ ವಿವಿಧ ಕೋರ್ಸುಗಳು ಈ ರೀತಿ ಇವೆ.**

ಡಿಪ್ಲೋಮಾ ಇನ್ ಇಲೆಕ್ಟ್ರೋಪ್ಲೇಟ್, ಶೀಟ್ ಮೆಟಲ್, ಶೀಟ್ ಮೆಟಲ್ ವರ್ಕರ್, ಸರ್ವೇಯರ್, ಆರ್ಕಿಟೆಕ್ಚ್ಯುವಲ್ ಅಸಿಸ್ಟಂಟ್, ಕಾರ್ಪೋರೇಟ್ ಹೌಸ್ ಕೀಪಿಂಗ್, ಈವೆಂಟ್ ಮ್ಯಾನೇಜ್‌ಮೆಂಟ್ ಅಸಿಸ್ಟೆಂಟ್, ಡಾಟಾ ಎಂಟ್ರಿ ಅಪರೇಟರ್, ಕ್ರಾಫ್ಟ್‌ಮೆನ್, ಫುಡ್ ಪ್ರೊಡಕ್ಷನ್, ಕ್ರೆಚ್ ಮೆನೇಜ್‌ಮೆಂಟ್, ಪೊಟೋಗ್ರಫಿ, ಡಿಪ್ಲೋಮಾ ಇನ್ ಟೆಕ್ನಿಕಲ್, ಡ್ರಾಫ್ಟ್‌ಮೆನ್ ಮೆಕ್ಯಾನಿಕಲ್ & ಸಿವಿಲ್), ಎಲೆಕ್ಟ್ರಿಷಿಯನ್, ಎಲೆಕ್ಟ್ರೋಪ್ಲೇಟರ್, ಫಿಟ್ಟರ್, ಮೆಷಿನಿಸ್ಟ್ (ಗ್ರೈಂಡರ್) ಟರ್ನರ್, ಇನ್‌ಸ್ಟ್ರುಮೆಂಟ್ ಮೆಕ್ಯಾನಿಕ್, ಇನ್‌ಫರ್ಮೇಷನ್ ಟೆಕ್ನಾಲಜಿ & ಎಲೆಕ್ಟ್ರಾನಿಕ್ ಸಿಸ್ಟಂ ಮೆಂಟೇನೆನ್ಸ್, ಮೆಕ್ಯಾನಿಕ್ ರೆಫ್ರಿಜರೇಷನ್ & ಏರ್‌ಕಂಡಿಷನಿಂಗ್, ಮೆಕ್ಯಾನಿಕ್ (ಮೋಟಾರ್ ವೆಹಿಕಲ್), ಅಟೆಂಡೆಂಟ್ ಪಿ.ಯು.ಸಿ.ಯಲ್ಲಿ ವಿಜ್ಞಾನವನ್ನು ಆಯ್ದುಕೊಂಡು ಅಧ್ಯಯನ ಮಾಡಿರಬೇಕಾಗುತ್ತದೆ.

- **ಬಿ.ವಿ.ಎಸ್ಸಿ (ಪಶು ವೈದ್ಯಕೀಯದಲ್ಲಿ ಪದವಿ)** : 5 ವರುಷಗಳ ಅವಧಿಯ ಪದವಿ ಶಿಕ್ಷಣ ಇದಾಗಿದ್ದು ಪಿ.ಸಿ.ಬಿ.ಯ ಆಯ್ಕೆ ಅವಶ್ಯಕ.
- **ಬಿ.ಎಸ್ಸಿ. ಇನ್ ಫಿಶರೀಸ್** (B.F.Sc.) ಇದರಲ್ಲಿ ಬಯಾಲಜಿ ಐಚ್ಛಿಕ ಅವಶ್ಯಕ ಅವಧಿ ನಾಲ್ಕು ವರುಷಗಳು.
- **ಬಿ.ಎಸ್ಸಿ. ನರ್ಸಿಂಗ್** – ಪಿ.ಯು.ಸಿ.ನಲ್ಲಿ ಪಿ.ಸಿ.ಬಿ. ಐಚ್ಛಿಕವನ್ನು ತೆಗೆದುಕೊಂಡವರು. ಕಲಾ ವಾಣಿಜ್ಯದವರು 3 ವರುಷಗಳ (ಜನರಲ್) ನರ್ಸಿಂಗ್ ಕೋರ್ಸಿಗೆ ಸೇರಬಹುದು.
- ಫಾರ್ಮಸ್ ಔಷಧಿಗಳ ತಯಾರಿ, ಸಮರ್ಪಕ ವಿತರಣೆ ಮುಂತಾದವುಗಳ ಅಧ್ಯಯನ ಸಂಬಂಧಿಸಿದ ಶಾಸ್ತ್ರವೇ ಫಾರ್ಮಸಿ ಆಗಿದೆ. ಪಿ.ಯು.ಸಿ.ಯಲ್ಲಿ ZBC ಓದಿದವರು ಫಾರ್ಮಸಿಯನ್ನು ಆಯ್ದುಕೊಳ್ಳಬಹುದಾಗಿದೆ. ಇಲ್ಲಿ ಬೇರೆ ಬೇರೆ ಕೋರ್ಸ್‌ಗಳಿದ್ದು 4 ವರುಷಗಳ ಬಿ. ಫಾರ್ಮಾ, 2 ವರುಷಗಳ ಎಂ. ಫಾರ್ಮಾ ಲಭ್ಯವಿದೆ.

→→→

➔➔➔

- **ಡೈರಿ ಟೆಕ್ನಾಲಜಿ :** (B.D.Tech) ಭೌತಶಾಸ್ತ್ರ, ಗಣಿತಶಾಸ್ತ್ರ ಮತ್ತು ರಸಾಯನಶಾಸ್ತ್ರ ಪಿ.ಯು.ಸಿ. ವಿಜ್ಞಾನದಲ್ಲಿ ಅವಶ್ಯಕ ಅಧ್ಯಯನ ವಿಷಯಗಳಾಗಿರಬೇಕು. 4 ವರುಷಗಳ ಅವಧಿಯ ಕಲಿಕಾ ಶಿಕ್ಷಣ ಇದಾಗಿದೆ.
- **ಕಂಪೆನಿ ಸೆಕ್ರೆಟರಿ :** ಮೊದಲ 8 ತಿಂಗಳ ಫೌಂಡೇಶನ್ ಕೋರ್ಸ್‌ಗೆ ಸೇರಿಕೊಳ್ಳಬೇಕಾಗಿದ್ದು, ವರ್ಷಂಪ್ರತಿ ಜೂನ್ ಮತ್ತು ಡಿಸೆಂಬರ್‌ನಲ್ಲಿ ಈ ಪರೀಕ್ಷೆ ನಡೆಯುತ್ತದೆ. ಈ ಪ್ರಥಮ ಅವಧಿಯಲ್ಲಿ ಅರ್ಥಶಾಸ್ತ್ರ, ಸಂಖ್ಯಾಶಾಸ್ತ್ರ, ವ್ಯವಹಾರ ಸಂವಹನ, ಅಕೌಂಟೆನ್ಸಿ, ಕಾನೂನು ಹಾಗೂ ನಿರ್ವಹಣೆ ಈ ವಿಷಯಗಳ ಮೇಲೆ ಬೆಳಕು ಚೆಲ್ಲಲಾಗುತ್ತದೆ. ಈ ತರಬೇತಿ ಅವಧಿ 15 ತಿಂಗಳುಗಳವರೆಗೆ ಇದ್ದು ಮ್ಯಾನೇಜ್‌ಮೆಂಟ್ ಇಂಟರ್‌ಶಿಪ್ ಮೂಲಕ ಈ ತರಬೇತಿಯನ್ನು ನೀಡಲಾಗುತ್ತದೆ. ವಿದ್ಯಾರ್ಹತೆ ಪಿ.ಯು.ಸಿ.ಯಲ್ಲಿ ಯಾವುದೇ ವಿಭಾಗದಿಂದ ತೇರ್ಗಡೆ ಹೊಂದಿರಬೇಕು.
- **ಬ್ಯೂಟೀಷಿಯನ್ :** ಪಿ.ಯು.ಸಿ. ಯಲ್ಲಿ ಯಾವುದೇ ಕೋರ್ಸನ್ನು (S.S.L.C.ಯೂ ಆಗಬಹುದಾಗಿದೆ) ಆಯ್ದುಕೊಳ್ಳಬಹುದಾಗಿದೆ. ಅತಿ ಸುಲಭವಾದ ಮತ್ತು ಅಷ್ಟೇ ಬೇಡಿಕೆಯ ಕೋರ್ಸ್ ಇದಾಗಿದ್ದು ತರಬೇತಿ ಅವಧಿ ವರುಷಗಳು, ಸಿನೇಮಾ, ರಂಗಭೂಮಿಗಳಲ್ಲಿ ಈ ವಿಭಾಗದಲ್ಲಿ ತರಬೇತಿ ಪಡೆದವರಿಗೆ ಹೆಚ್ಚಿನ ಆದ್ಯತೆಯಿದೆ.
- **ಬಯೋಕೆಮಿಸ್ಟ್ :** ಮೂರು ವರುಷಗಳ ಅವಧಿಯ ಕೋರ್ಸ್ ಇದಾಗಿದ್ದು ಪಿ.ಯು.ಸಿ.ಯಲ್ಲಿ ಬಯಾಲಜಿ ಮತ್ತು ಮ್ಯಾಥ್ಸ್ ಅವಶ್ಯಕ ವಿಷಯಗಳಾಗಿರಬೇಕು.
- **ಬಿ.ಎಸ್ಸಿ. ಅಗ್ರಿಕಲ್ಚರ್ :** ಪಿ.ಯು.ಸಿ ವಿಜ್ಞಾನ ವಿಭಾಗದಲ್ಲಿ ತೇರ್ಗಡೆ ಹೊಂದಿದವರು ಈ ಕ್ಷೇತ್ರದಲ್ಲಿ ಶಿಕ್ಷಣವನ್ನು ಮುಂದುವರಿಸಬಹುದಾಗಿದೆ. ತರಬೇತಿ ಅವಧಿ 3ರಿಂದ 4 ವರುಷಗಳು (ಇದಕ್ಕಾಗಿಯೇ ಪ್ರತ್ಯೇಕ ವಿ.ವಿ. (ವಿಶ್ವವಿದ್ಯಾಲಯ) ತೆರೆಯಲಾಗಿದೆ.)
- **ಮೈಕ್ರೋಬಯಾಲಜಿ :** ಪಿ.ಯು.ಸಿ.ಯಲ್ಲಿ ವಿಜ್ಞಾನ ವಿಭಾಗವನ್ನು ಆಯ್ದುಕೊಂಡು ಬಯಾಲಜಿ & ಗಣಿತ ಅವಶ್ಯಕ ಐಚ್ಛಿಕಗಳಾಗಿರಬೇಕು.
- **ಬ್ಯಾಚುಲರ್ ಆಫ್ ಹ್ಯೂಮನ್ ರಿಸೋರ್ಸ್ ಡೆವಲಪ್‌ಮೆಂಟ್** (B.H.R.D.) ಮಾನವ ಸಂಪನ್ಮೂಲ ಅಭಿವೃದ್ಧಿ ಸಂಬಂಧಿತ ಸ್ನಾತಕ ಪದವಿ ಇದಾಗಿದ್ದು ಒಟ್ಟು ಅವಧಿ ಮೂರು ವರುಷಗಳದ್ದಾಗಿರುತ್ತದೆ.
- **ಬ್ಯಾಚುಲರ್ ಆಫ್ ಹೋಟೇಲ್ ಮ್ಯಾನೇಜ್‌ಮೆಂಟ್ :** ಅವಧಿ 4 ವರುಷಗಳು ಪಿ.ಯು.ಸಿಯಲ್ಲಿ ಶೇ. 52% ಅಂಕ ಗಳಿಸಿದವರು ಈ ವಿಭಾಗಕ್ಕೆ ಸೇರ್ಪಡೆಗೊಳ್ಳಬಹುದು.
- **ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್ :** 5 ವರುಷಗಳ ಕೋರ್ಸ್ ಇದಾಗಿದ್ದು ಪಿ.ಯು.ಸಿ.ಯಲ್ಲಿ PCM ಅವಶ್ಯಕ ಐಚ್ಛಿಕದ ಜೊತೆಗೆ ಶೇ. 60% ಅಂಕ ಗಳಿಸಿದವರು ಈ ವಿಭಾಗದ ಲಾಭವನ್ನು ಪಡೆದುಕೊಳ್ಳಬಹುದಾಗಿದೆ.
- **ಕಾನೂನು ವ್ಯಾಸಂಗ (L.L.B.) :** ಪಿ.ಯು.ಸಿ.ಯಲ್ಲಿ ಕನಿಷ್ಠ 45% ಅಂಕ ಗಳಿಸಿದವರು 5 ವರುಷಗಳ ಕಾನೂನು ವ್ಯಾಸಂಗಕ್ಕೆ ಅರ್ಹರಾಗಿರುತ್ತಾರೆ. ಇಲ್ಲಿ ಸಿವಿಲ್, ಕ್ರಿಮಿನಲ್ ಲೇಬರ್ ಟ್ಯಾಕ್ಸ್ ಕಾರ್ಪೋರೇಟ್ ಮುಂತಾದ ಆಯ್ದ ವಿಭಾಗಗಳಲ್ಲಿ ತಜ್ಞ ಪದವಿಯನ್ನು ಪಡೆದುಕೊಳ್ಳಬಹುದಾಗಿದೆ.
- **ಬ್ಯಾಚುರಲ್ ಡಿಗ್ರಿ ಇನ್ ಫಾರಿನ್ ಲ್ಯಾಂಗ್ವೇಜ್ :** ಒಟ್ಟು 5 ವರುಷಗಳ ಇಂಟಗ್ರೇಟೆಡ್ ಮಾಸ್ಟರ್ ಕೋರ್ಸ್ ಇದಾಗಿದ್ದು BPOಗಳಲ್ಲಿ ಕೆಲಸದ ಅವಕಾಶಗಳು ಹೇರಳವಾಗಿವೆ.
- **ಡಿಪ್ಲೋಮಾ ಇನ್ ಎಜ್ಯುಕೇಶನ್** (D.Ed) ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಬಯಸುವವರು ಶಿಕ್ಷಕ ಶಿಕ್ಷಣದಲ್ಲಿ 2 ವರುಷಗಳ ಅವಧಿಯ ಡಿಪ್ಲೋಮಾ ಮಾಡಬಹುದಾಗಿದೆ. ಪಿ.ಯು.ಸಿ.ಯ ಯಾವುದೇ ವಿಭಾಗದಿಂದ ನಿರ್ದಿಷ್ಟಪಡಿಸಿದ ಅರ್ಹತೆಯೊಂದಿಗೆ ಈ ಕೋರ್ಸ್‌ಗೆ ಅವಕಾಶ ಗಿಟ್ಟಿಸಿಕೊಳ್ಳಬಹುದಾಗಿದೆ.
- **ಸಿ.ಪಿ.ಎಡ್ (C.P.Ed.) :** ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಕರಾಗಬಯಸುವವರು ಪಿ.ಯು.ಸಿ.ಯಲ್ಲಿ ತೇರ್ಗಡೆ ಹೊಂದಿದಲ್ಲಿ ಈ ಕೋರ್ಸಿಗೆ ಸೇರ್ಪಡೆಗೊಳ್ಳಬಹುದಾಗಿದೆ.
- **ಲೆದರ್ ಟೆಕ್ನಾಲಜಿ :** ನಾಲ್ಕು ವರುಷಗಳ ಸ್ನಾತಕ (B.Tech) ಪದವಿ ಇದಾಗಿದ್ದು ಪಿ.ಯು.ಸಿ. ಬಳಿಕ ಈ ಶಿಕ್ಷಣವನ್ನು ಮುಂದುವರಿಸಬಹುದಾಗಿದೆ.
- **ಡಿಪ್ಲೋಮಾ ಇನ್ ಲೈಬ್ರರಿ ಸೈನ್ಸ್ :** (DLS) ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ ನೀಡುತ್ತಿರುವ ಕೆಲವೊಂದು ಸರಕಾರಿ ಶಿಕ್ಷಣ ಸಂಸ್ಥೆಗಳಲ್ಲಿ 2 ವರುಷದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಆಸಕ್ತರು ಡಿಪ್ಲೋಮಾ ಮಾಡಬಹುದಾಗಿದೆ. ಪಿ.ಯು.ಸಿ.ಯಲ್ಲಿ ಯಾವುದೇ ವಿಭಾಗದಿಂದ ತೇರ್ಗಡೆ ಹೊಂದಿದವರು ಇದಕ್ಕೆ ಅರ್ಹರಾಗಿರುತ್ತಾರೆ.
- **ಪ್ರವಾಸೋದ್ಯಮ (BTM) :** ಪ್ರವಾಸೋದ್ಯಮ ನಿರ್ವಹಣೆಯಲ್ಲಿ ಪದವಿ ಗಳಿಸಬಯಸುವವರು ಪಿ.ಯು.ಸಿ ಶಿಕ್ಷಣವನ್ನು ಯಾವುದೇ ವಿಭಾಗದಿಂದ ಮುಗಿಸಿದವರಾಗಿರಬಹುದು. 3 ವರುಷಗಳ ಅವಧಿಯ ಪದವಿ ಇದಾಗಿದ್ದು ಇನ್ನು ಇದೇ ವಿಭಾಗದಲ್ಲಿ ಡಿಪ್ಲೋಮಾ ಇನ್ ಟೂರಿಸಂ ಮ್ಯಾನೇಜ್‌ಮೆಂಟ್, ಪಿ.ಇ. ಡಿಪ್ಲೋಮಾ ಇನ್ ಏವಿಯೇಶನ್ & ಟೂರಿಸಂ ಮ್ಯಾನೇಜ್‌ಮೆಂಟ್, ಬಿ.ಬಿ.ಎ ಟೂರಿಸಂ ಮ್ಯಾನೇಜ್‌ಮೆಂಟ್ ಜೊತೆಗೆ ಸರ್ಟಿಫಿಕೇಟ್ ಕೋರ್ಸ್‌ಗಳಾದ ಟ್ರಾವೆಲ್ ಟೂರಿಸಂ ಹೀಗೆ ಅಲ್ಪ ಅವಧಿಯ ಕೋರ್ಸ್‌ಗಳು ಲಭ್ಯವಿದೆ.
- **ಬ್ಯಾಚುಲರ್ ಡಿಗ್ರಿ ಇನ್ ಕಂಪ್ಯೂಟರ್ ಎಪ್ಲಿಕೇಶನ್ (BCA)** ಪಿ.ಯು.ಸಿ.ಯಲ್ಲಿ ಕನಿಷ್ಠ ಪಕ್ಷ ಶೇ. 45 ಅಂಕಗಳಿಸಿದಲ್ಲಿ ಈ ಮೇಲ್ಕಾಣಿಸಿದ ಕೋರ್ಸಿಗೆ ಅರ್ಜಿ ಸಲ್ಲಿಸಬಹುದು.
- **ಬ್ಯಾಚುಲರ್ ಆಫ್ ಫೈನ್ ಆರ್ಟ್ಸ್ (BFA)** ಲಲಿತ ಕಲೆಗಳಾದ ನೃತ್ಯ, ಸಂಗೀತ ಹಾಡುಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಅಭಿರುಚಿಯಿರುವವರು ಪಿ.ಯು.ಸಿ ತೇರ್ಗಡೆ ಹೊಂದಿದ ಪಕ್ಷದಲ್ಲಿ 4ರಿಂದ 5 ವರುಷಗಳ ಅವಧಿಯ ಈ ಕೋರ್ಸನ್ನು ಆಯ್ದುಕೊಳ್ಳಬಹುದಾಗಿದೆ.
- **ಪತ್ರಿಕೋದ್ಯಮ (Journalism)** ಯಾವುದೇ ವಿಭಾಗದಲ್ಲಿ ಪಿ.ಯು.ಸಿ ತೇರ್ಗಡೆ ಹೊಂದಿದಲ್ಲಿ ಪತ್ರಿಕೋದ್ಯಮದಲ್ಲಿ ಬಿ.ಎ. ಪದವಿಗೆ ಸೇರಿಕೊಳ್ಳಬಹುದಾಗಿದೆ. ಇದೇ ಕ್ಷೇತ್ರದಲ್ಲಿ ಒಂದು ವರುಷದ ಅವಧಿಯ ಇತರೆ ತರಬೇತಿ ಕೋರ್ಸ್‌ಗಳು ಲಭ್ಯವಿದ್ದು ಔದ್ಯೋಗಿಕವಾಗಿ ವಿಪುಲ ಅವಕಾಶಗಳಿವೆ.
- **ಫ್ಯಾಶನ್ ಟೆಕ್ನಾಲಜಿ :** ಯಾವತ್ತೂ ಹೊಸತನವನ್ನು ಬಯಸುವ ಕ್ಷೇತ್ರ ಫ್ಯಾಶನ್ ಟೆಕ್ನಾಲಜಿಯಾಗಿದ್ದು ಪಿ.ಯು.ಸಿ.ಯಲ್ಲಿ ತೇರ್ಗಡೆ ಹೊಂದಿದವರು ಈ ವಿಭಾಗಕ್ಕೆ ಸೇರಿಕೊಳ್ಳಬಹುದಾಗಿದೆ.

➔➔➔

➔➔➔

- **ಛಾಯಾಗ್ರಹಣ : (photography)** ನಿರ್ದಿಷ್ಟ ಶೈಕ್ಷಣಿಕತೆಯ ನಿರ್ಬಂಧವಿಲ್ಲದಿದ್ದರೂ ಪಿ.ಯು.ಸಿ. ಬಳಿಕ ಇದನ್ನು ಪಡೆಯಬಹುದಾಗಿದೆ. ಪತ್ರಿಕೆಗಳು, ರಂಗಚಟುವಟಿಕೆ, ಸಭೆ ಸಮಾರಂಭ ಮುಂತಾದ ಕ್ಷೇತ್ರಗಳಲ್ಲಿ ಉತ್ತಮ ಛಾಯಾಗ್ರಾಹಕರಿಗೆ ಬಹಳಷ್ಟು ಅವಕಾಶಗಳಿವೆ.
- **ಬಯೋಟೆಕ್ನಾಲಜಿ :** ಪಿ.ಯು.ಸಿ ಬಳಿಕ (ವಿಜ್ಞಾನ) ಈ ಕೋರ್ಸಿಗೆ ಸೇರಿಕೊಳ್ಳಬಹುದಾಗಿದೆ. ಜೈವಿಕ ತಂತ್ರಜ್ಞಾನವೆನ್ನುವ ಈ ವಿಭಾಗವು ಶಿಕ್ಷಣ ಕ್ಷೇತ್ರದ ಅಮೂಲ್ಯ ಆವಿಷ್ಕಾರವೆನ್ನಬಹುದು. ಕೃಷಿ, ಪಶು ವಿಜ್ಞಾನ ಹೀಗೆ ಜೈವಿಕತೆಯಿಂದ ಕೂಡಿದ ಕ್ಷೇತ್ರಗಳಲ್ಲಿ ಅಧ್ಯಯನ ಮಾಡಬೇಕಾಗುತ್ತದೆ. ಅವಧಿ 3 ವರುಷಗಳು.
- **ಬಿ.ಎಸ್ಸಿ. ಇನ್ ಆಪರೇಷನ್ ಥಿಯೇಟರ್ ಟೆಕ್ನಾಲಜಿ :** ಶಸ್ತ್ರ ಚಿಕಿತ್ಸಾ ಕೊಠಡಿಯಲ್ಲಿ ವೈದ್ಯರುಗಳಿಗೆ ಸಹಾಯ ನೀಡುವ ಕುರಿತಾದ ವಿಜ್ಞಾನ ಶಾಸ್ತ್ರವೇ ಈ ಕೋರ್ಸ್ ಆಗಿದೆ. ಪಿ.ಯು.ಸಿ.ಯಲ್ಲಿ ವಿಜ್ಞಾನ ಆರಿಸಿಕೊಂಡವರು ಈ ವಿಭಾಗದಲ್ಲಿ ಮುನ್ನಡೆಯಬಹುದು.
- **ಜಿಯೋಲಜಿ ಮತ್ತು ಜ್ಯುವೆಲ್ಲರಿ ಡಿಸೈನ್ (BBA)** ಮುತ್ತು ರತ್ನಗಳ ಕುರಿತಾದ ಅವುಗಳ ವಿನ್ಯಾಸಕ್ಕೆ ಸಂಬಂಧಿಸಿದ (ಬಂಗಾರವೂ ಸೇರಿ) ಆಭರಣಗಳನ್ನು ವಿನ್ಯಾಸಗೊಳಿಸುವ ಶಿಕ್ಷಣವೇ ಈ ಕೋರ್ಸ್ ಆಗಿದೆ. ಸಾಮಾನ್ಯವಾಗಿ ಪಿ.ಯು.ಸಿ. ಬಳಿಕ ಈ ವಿಭಾಗದಲ್ಲಿ ಅಧ್ಯಯನವನ್ನು ನಡೆಸಬಹುದಾಗಿದೆ.
- **ಮೆಡಿಸಿನ್ ಮತ್ತು ಸರ್ಜರಿಯಲ್ಲಿ ಪದವಿ (MBBS)** ಈ ಪದವಿಗೆ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ಉತ್ತಮ ಅಂಕಗಳನ್ನು ಸಂಪಾದಿಸಿ ವಿಶೇಷ ಪ್ರವೇಶ ಪರೀಕ್ಷೆ (CET)ಯಲ್ಲಿ ಅರ್ಹತೆಯನ್ನು ಪಡೆದುಕೊಳ್ಳಬೇಕಾಗಿದೆ. ಭೌತಶಾಸ್ತ್ರ, ರಸಾಯನಶಾಸ್ತ್ರ & ಜೀವಶಾಸ್ತ್ರವನ್ನು (PCB) ಐಚ್ಛಿಕ ವಿಷಯವಾಗಿ ಆಯ್ಕೆ ಮಾಡಿಕೊಂಡಿರಬೇಕು. 5 ವರುಷಗಳ ಅವಧಿಯ ಕೋರ್ಸ್ ಇದಾಗಿದೆ. (4+1)

  ಇಲ್ಲಿ ಅಲೋಪತಿ, ಹೋಮಿಯೋಪತಿ, ಆಯುರ್ವೇದ, ಯುನಾನಿ, ಡೆಂಟಲ್ ವಿಭಾಗಗಳಲ್ಲಿ ಯಾವುದಾದರೊಂದನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ.
- **ಬ್ಯಾಚುಲರ್ ಆಫ್ ಇಂಜಿನಿಯರಿಂಗ್ (PCM)** ಪಿ.ಯು.ಸಿ.ಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತ ಐಚ್ಛಿಕಗಳನ್ನು ಅವಶ್ಯಕವಾಗಿ ತೆಗೆದುಕೊಂಡಿರಬೇಕು 4 ವರುಷಗಳ ಅವಧಿಯ ಪದವಿ ಇದಾಗಿದ್ದು ಶಿಕ್ಷಣದಲ್ಲಿ ಏರೋನಾಟಿಕಲ್ಸ್, ಎಗ್ರಿಕಲ್ಚರಲ್, ಕೆಮಿಕಲ್, ಸಿವಿಲ್ ಕಂಪ್ಯೂಟರ್ ಇಂಜಿನಿಯರಿಂಗ್, ಇಲೆಕ್ಟ್ರಿಕಲ್ & ಇಲೆಕ್ಟ್ರಾನಿಕ್ಸ್, ಮೆಕ್ಯಾನಿಕಲ್, ಇನ್ಫಾರ್ಮೇಶನ್ ಟೆಕ್ನಾಲಜಿ, ಸಾಫ್ಟ್‌ವೇರ್, ಅಟೋ ಮೊಬೈಲ್, ಬಯೋ ಟೆಕ್ನಾಲಜಿ, ಸೆರಾಮಿಕ್ ಕೆಮಿಕಲ್, ಎಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್ಸ್ ಇಂಡಸ್ಟ್ರಿಯಲ್ & ಪ್ರೊಡಕ್ಷನ್, ಇನ್‌ಫಾರ್ಮೆಶನ್ ಸೈನ್ಸ್, ಮ್ಯಾನುಫೆಕ್ಚರಿಂಗ್ ಸೈನ್ಸ್, ಮೈನಿಂಗ್ ಪೊಲಿಮರ್, ಟೆಲಿಕಮ್ಯುನಿಕೇಶನ್ ಟೆಕ್ಸ್‌ಟೈಲ್ಸ್, ಸಾಫ್ಟ್‌ವೇರ್, ಹಾರ್ಡ್‌ವೇರ್ ... ಹೀಗೆ ಹತ್ತು ಹಲವು ವಿಭಾಗಗಳಿದ್ದು ಯಾವುದಾದರೊಂದು ಆಸಕ್ತಿದಾಯಕ ವಿಷಯದಲ್ಲಿ ಪದವಿ ಗಳಿಸಬಹುದಾಗಿದೆ.
- **ಬಿ.ಎಚ್.ಆರ್.ಡಿ. (B.H.R.D.)** ಹೊಸ ಕೋರ್ಸ್ ಇದಾಗಿದ್ದು ಪಿ.ಯು.ಸಿ.ಯಲ್ಲಿ ಯಾವುದೇ ವಿಭಾಗದಲ್ಲಿ ಅಧ್ಯಯನ ನಡೆಸಿರಬಹುದು ಅವಧಿ3 ವರುಷಗಳು.
- **ಬಿ.ಎಚ್.ಆರ್.ಎಂ. (B.H.R.M.) :** ಬ್ಯಾಚುಲರ್ ಆಫ್ ಹ್ಯೂಮನ್ ರಿಸೋರ್ಸ್ ಮ್ಯಾನೇಜ್‌ಮೆಂಟ್ : ಅವಧಿ ಮೂರು ವರುಷ ಯಾವುದೇ ವಿಷಯದಲ್ಲಿ ಪಿ.ಯು.ಸಿ. ತೇರ್ಗಡೆ ಹೊಂದಿ ಪ್ರವೇಶ ಪಡೆದುಕೊಳ್ಳಬಹುದು.
- **ಬಿ.ಎಚ್.ಎಸ್ಸಿ (B.H.Sc.) :** ಬ್ಯಾಚುಲರ್ ಆಫ್ ಹೋಮ್ ಸ್ಯಾನ್ಸ್ ಅವಧಿ ಮೂರು ವರುಷ, ಪಿ.ಯು.ಸಿ.ಯಲ್ಲಿ ಯಾವುದೇ ಆಯ್ಕೆ ಆಗಬಹುದು.
- **ಬಿ.ಎಚ್.ಎಮ್. (B.H.M.)** ಬ್ಯಾಚುಲರ್ ಆಫ್ ಹೊಟೇಲ್ ಮೆನೇಜ್‌ಮೆಂಟ್ ನಾಲ್ಕು ವರುಷಗಳ ಅವಧಿ ಪಿ.ಯು.ಸಿ.ಯಲ್ಲಿ ಯಾವುದೇ ವಿಭಾಗದಿಂದ ಶಿಕ್ಷಣ ಪಡೆದುಕೊಳ್ಳಬೇಕು.
- **ಬಿ.ಎಫ್.ಎ. :** ಬ್ಯಾಚುಲರ್ ಆಫ್ ಫೈನ್ ಆರ್ಟ್ಸ್ : ಲಲಿತ ಕಲೆ, ನೃತ್ಯ, ಸಂಗೀತ, ಹಾಡುಗಾರಿಕೆ, ನಾಲ್ಕರಿಂದ ಐದು ವರ್ಷಗಳು.
- **ಬ್ಯಾಚುಲರ್ ಡಿಗ್ರಿ ಇನ್ ಕಂಪ್ಯೂಟರ್ ಎಪ್ಲಿಕೇಶನ್ (BCA)** ಪಿ.ಯು.ಸಿ.ಯಲ್ಲಿ ಕನಿಷ್ಠ ಪಕ್ಷ ಶೇ. 45 ಅಂಕ ಗಳಿಸಿದಲ್ಲಿ ಈ ಮೇಲ್ಕಾಣಿಸಿದ ಕೋರ್ಸಿಗೆ ಅರ್ಜಿ ಸಲ್ಲಿಸಬಹುದು.
- **ಬ್ಯಾಚುಲರ್ ಆಫ್ ಆರ್ಟ್ಸ್ (B.A) :** ಸಾಂಪ್ರಾದಾಯಿಕ ಶಿಕ್ಷಣಗಳಲ್ಲಿ ಒಂದಾಗಿರುವ ಕಲಾ ವಿಭಾಗವನ್ನು ಪಿ.ಯು.ಸಿ.ಯಲ್ಲಿ ಕಲೆಯನ್ನು ಆಯ್ದುಕೊಂಡವರು ಈ ಪದವಿಯನ್ನು ಗಳಿಸಬಹುದಾಗಿದೆ. ಅವಧಿ 3 ವರುಷಗಳು.

**ಬ್ಯಾಚುಲರ್ ಆಫ್ ಆರ್ಟ್ಸ್ (B.A.)**

a) B.A., PPH / PPS
   ದೈಹಿಕ ಶಿಕ್ಷಣ, ರಾಜ್ಯಶಾಸ್ತ್ರ, ಇತಿಹಾಸ / ಸಮಾಜಶಾಸ್ತ್ರ

b) B.A., HBC
   ಇತಿಹಾಸ, ಭರತನಾಟ್ಯ ಮತ್ತು ಶಾಸ್ತ್ರೀಯ ಸಂಗೀತ

c) B.A., HPS
   ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ

d) B.A., EJP / EJH
   ಇಂಗ್ಲಿಷ್, ಪತ್ರಿಕೋದ್ಯಮ, ಮನಶಾಸ್ತ್ರ / ಇತಿಹಾಸ ಬ್ಯಾಚುಲರ್ ಆಫ್ ವಿಷ್ಯುವಲ್ ಆರ್ಟ್ಸ್ ಇದರಲ್ಲಿ ಚಿತ್ರಕಲೆ, ಪೈಂಟಿಂಗ್ ನಾಲ್ಕು ವರುಷದ ಪದವಿ ಕೋರ್ಸ್ ಇದಾಗಿರುತ್ತದೆ.

   ಬ್ಯಾಚುಲರ್ ಆಫ್ ಹ್ಯೂಮನ್ ರಿಸೋರ್ಸ್ ಡೆವಲಪ್‌ಮೆಂಟ್ ಮೂರು ವರುಷದ ಅವಧಿಯ ಕೋರ್ಸ್ ಇದಾಗಿರುತ್ತದೆ.

- **ಬ್ಯಾಚುಲರ್ ಆಫ್ ಕಾಮರ್ಸ್ (B.Com)** ವಾಣಿಜ್ಯ ವಿಭಾಗದಲ್ಲಿ ಪಿ.ಯು.ಸಿ. ಓದಿದವರು 3 ವರುಷಗಳ ಈ ಪದವಿಗೆ ಸೇರಿಕೊಳ್ಳಬಹುದಾಗಿದೆ.
- **ಬ್ಯಾಚುಲರ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್ (B.B.M.) :** ಪಿ.ಯು.ಸಿಯಲ್ಲಿ ಯಾವುದೇ ವಿಭಾಗದಿಂದ ತೇರ್ಗಡೆ ಹೊಂದಿದ ಪಕ್ಷದಲ್ಲಿ ಈ ಪದವಿಗೆ ಸೇರಿಕೊಳ್ಳಬಹುದಾಗಿದೆ. ಅವಧಿ ಮೂರು ವರುಷಗಳು.
- **ಬ್ಯಾಚುಲರ್ ಆಫ್ ಸೋಶಿಯಲ್ ವರ್ಕ್ಸ್ (BSW) :** ಮೂರು ವರುಷಗಳ ಅವಧಿಯ ಈ ಕೋರ್ಸಿಗೆ ಪಿ.ಯು.ಸಿ. ಶಿಕ್ಷಣ ಮುಗಿಸಿದವರು ಅರ್ಹರಾಗಿರುತ್ತಾರೆ.
- **ಬ್ಯಾಚುಲರ್ ಆಫ್ ಸ್ಯಾನ್ಸ್ (B.Sc)** ಪಿ.ಯು.ಸಿ.ಯಲ್ಲಿ ವಿಜ್ಞಾನವನ್ನು

➔➔➔

→→→

ತೆಗೆದುಕೊಂಡವರು ವಿಜ್ಞಾನದಲ್ಲಿ ಪದವಿ ಶಿಕ್ಷಣಕ್ಕೆ ಸೇರಬಹುದು ಅವಧಿ 3 ವರುಷ.

**ಬ್ಯಾಚುಲರ್ ಆಫ್ ಸಾಯನ್ಸ್ (B.Sc.)**

a) B.Sc. FND – ಫುಡ್, ನ್ಯೂಟ್ರಿಷನ್, ಡಯೆಟಿಕ್ಸ್

b) B.Sc. HS – ಹಾಸ್ಪಿಟಾಲಿಟಿ ಸ್ಯಾನ್ಸ್ (ಹೋಟೇಲ್ ಮೇನೇಜ್‌ಮೆಂಟ್)

c) B.Sc. PCM / PMC – ಫಿಸಿಕ್ಸ್, ಮ್ಯಾಥ್‌ಮೆಟಿಕ್ಸ್ & ಕೆಮಿಸ್ಟ್ರಿ/ ಕಂಪ್ಯೂಟರ್ ಸೈನ್ಸ್

d) B.Sc. MCZ – ಮೈಕ್ರೋಬಯಾಲಜಿ, ಕೆಮಿಸ್ಟ್ರಿ ಮತ್ತು ಝಿಯಾಲಜಿ

e) B.Sc. MBB – ಮೈಕ್ರೋಬಯಾಲಜಿ, ಬಯೋಕೆಮಿಸ್ಟ್ರಿ ಮತ್ತು ಬೊಟನಿ

f) B.Sc. BCB/ BCZ – ಬಯೋಟೆಕ್ನಾಲಜಿ, ಕೆಮಿಸ್ಟ್ರಿ, ಬೋಟನಿ/ ಝಿವಾಲಜಿ

g) B.Sc. BCZ – ಬೋಟನಿ / ಝಿವಾಲಜಿ, ಕೆಮಿಸ್ಟ್ರಿ,

* ಡಿಪ್ಲೋಮಾ ಇನ್ ಪೊರೆನ್ಸಿಕ್ ಮೆಡಿಸಿನ್ (D.F.M)
* ಡಿಪ್ಲೋಮಾ ಇನ್ ಗೈನಕಾಲಜಿ (D.G.O)
* ಡಿಪ್ಲೋಮಾ ಇನ್ ಇಂಡಸ್ಟ್ರಿಯಲ್ ಹೆಲ್ತ್ (D.I.H)
* ಡಿಪ್ಲೋಮಾ ಇನ್ ಮೆಡಿಕಲ್ ಪೆಥಾಲಜಿ ಆ್ಯಂಡ್ ಬ್ಯಾಕ್ಟೀರಿಯಾಲಜಿ (D.M.P.B)
* ಡಿಪ್ಲೋಮಾ ಇನ್ ಆಸ್ಚಿಯೋಲಜಿ ಆ್ಯಂಡ್ ಯುರಾಲಜಿ (D.O.E)
* ಡಿಪ್ಲೋಮಾ ಇನ್ ಫಾರ್ಮಸೆಟಿಕಲ್ ಮಾರ್ಕೆಟಿಂಕ್(DPHM)
* ಡಿಪ್ಲೋಮಾ ಇನ್ ಸೈಕಲಾಜಿಕಲ್ ಮೆಡಿಸಿನ್ (D.P.M)
* ಡಿಪ್ಲೋಮಾ ಇನ್ ಫಿಸಿಕಲ್ ಮೆಡಿಸಿನ್ ಆ್ಯಂಡ್ ರಿಹ್ಯಾಬಿಲಿಟೇಷನ್ (D.P.M. & R)
* ಡಿಪ್ಲೋಮಾ ಇನ್ ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್
* ಡಿಪ್ಲೋಮಾ ಆಫ್ ಎಸ್ವಿರಾನ್ ಮೆಂಟಲ್ ಮೇನೇಜ್ ಮೆಂಟ್, ಮೂರು ವರುಷಗಳ ಈ ಕೋರ್ಸ್ ಪರಿಸರ ನಿರ್ವಹಣೆ ಸಂಬಂಧಿ ಅಧ್ಯಯನ ವಿಷಯಗಳು
* ಬ್ಯಾಚುಲರ್ ಆಫ್ ಲೇಬರ್ ಮೇನೇಜ್‌ಮೆಂಟ್ ಮೂರು ವರ್ಷಗಳ ಕಾಲದ ಅಧ್ಯಯನದ ಕೋರ್ಸ್ ಇದಾಗಿದೆ. ಕಾರ್ಮಿಕ ಸಂಬಂಧಿ ಅಧ್ಯಯನ ವಿಷಯಗಳು ಇದರಲ್ಲಿವೆ.
* ಬ್ಯಾಚುಲರ್ ಆಫ್ ಟೆಕ್ಸ್‌ಟೈಲ್ಸ್ – ಮೂರು ವರುಷಗಳ ಈ ಕೋರ್ಸು ಇದಾಗಿದ್ದು ವಸ್ತ್ರ ಉತ್ಪಾದನೆ ಅದರ ನಿರ್ವಹಣೆ ಹೀಗೆ ಅಧ್ಯಯನ ವಿಷಯಗಳು ಇವೆ.
* ಕಂಪ್ಯೂಟರ್ ಎನಿಮೇಷನ್
* ಡಿಪ್ಲೊಮೊ ಇನ್ ಬಯೋಟೆಕ್ನಾಲಜಿ ಸ್ಕಿಲ್‌ಎನ್‌ಹ್ಯಾನ್ಸ್ ಮೆಂಟ್
* ಡಿಪ್ಲೊಮೊ ಇನ್ ವರ್ಮಿಟೆಕ್ನಾಲಜಿ
* ಡಿಪ್ಲೊಮೊ ಇನ್ ಕೊಂಕಣಿ ಲಾಂಗವೇಜ್
* ಬಿ.ಎಸ್‌ಸಿ ಇಮೇಜಿಂಗ್ ಟೆಕ್ನಾಲಜಿ
* ಬಿ.ಎಸ್ ರೆಸ್ಪಿರೇಟರಿ ಥೆರಪಿ
* ಬಿ.ಎಸ್.ಸಿ ಫ್ಯಾಶನ್ & ಅಪ್ಪರಲ್ ಡಿಸೈನ್
* ಫಾರ್ಮಾ ಡಿ
* ಹೊಟೇಲ್ ಮ್ಯಾನೇಜ್‌ಮೆಂಟ್ ಇನ್ ಫುಡ್, ನ್ಯೂಟ್ರಿಷಿಯನ್ & ಡಯೆಟೀಸ್
* ಬಿ.ಹೆಚ್.ಎಸ್. ಎವಿಯೇಶನ್
* ಬಿ.ಎಸ್.ಸಿ. ಫುಡ್ ಟೆಕ್ನಾಲಜಿ

**ಪದವಿ ಬಳಿಕ:**

ಸ್ನಾತಕೋತ್ತರ ಶಿಕ್ಷಣವೆನ್ನುವುದು ಒಂದು ರೀತಿಯಲ್ಲಿ ಜೀವನಕ್ಕೆ ಗಟ್ಟಿ ನೆಲೆಗಟ್ಟನ್ನು ಒದಗಿಸಬಲ್ಲ ಮತ್ತು ವ್ಯಕ್ತಿಗೆ ಮೌಲ್ಯವನ್ನು ಬದುಕಿಗೆ ಬೆಲೆಯನ್ನು ಕೊಡಬಲ್ಲ ಕ್ಷೇತ್ರ. ವಿಷಯ ಸಂಪನ್ನತೆಯ ಜೊತೆಗೆ ಪೂರ್ಣತೆಯ ಪ್ರಾಪ್ತತೆಯೆಡೆಗಿನ ನಡೆಯೆಂದರೆ ಹೆಚ್ಚು ಸೂಕ್ತವಾದೀತು. ನಮ್ಮ ದೇಶದಲ್ಲಿ ಉನ್ನತ ಶಿಕ್ಷಣ ಪಡೆಯುವವರ ಸಂಖ್ಯೆ ಶೇ. 10%ಕ್ಕಿಂತಲೂ ಕಡಿಮೆಯಿರುವಾಗ ಸ್ನಾತಕೋತ್ತರ ವ್ಯಾಸಂಗ ಎಷ್ಟು ಶೇಕಡಾ ಇರಬಹುದೆಂಬುದನ್ನು ನಾವು ಅರ್ಥೈಸಿಕೊಳ್ಳಬಹುದಾಗಿದೆ. ಪದವಿ ಶಿಕ್ಷಣದ ಬಳಿಕ ಸ್ನಾತಕೋತ್ತರ ಶಿಕ್ಷಣ ಪಡೆಯಬಯಸುವವರಿಗೊಂದು ಮುನ್ನಡೆ ಮಾರ್ಗಸೂಚಿಯನ್ನು ತೆರೆದಿಡುವ ಪ್ರಯತ್ನ ಇಲ್ಲಿದೆ.

- ಸಿಆರ್‌ಐಎಸ್‌ಐಎಲ್ – ಸರ್ಟಿಫೈಡ್ ಎನಲಿಸ್ಟ್ ಪ್ರೋಗ್ರಾಂ
- ಎಕ್ಸ್‌ಕ್ಯೂಟಿವ್ ಪ್ರೋಗ್ರಾಂ ಇನ್ ಅಪ್ಲ್ಯಾಯಿಡ್ ಫೈನಾನ್ಸ್
- ಹಾನರ್ಸ್ ಡಿಪ್ಲೋಮಾ ಇನ್ ಬ್ಯಾಂಕಿಂಗ್ & ಫೈನಾನ್ಸಿಯಲ್ ಸರ್ವಿಸಸ್
- ಇಂಟರ್ ನ್ಯಾಷನಲ್ ಪೋಸ್ಟ್ ಗ್ರಾಜ್ಯುವೇಟ್ ಡಿಪ್ಲೋಮಾ ಇನ್ ರಿಸ್ಕ್ ಮ್ಯಾನೇಜ್‌ಮೆಂಟ್
- ಮಾಸ್ಟರ್ ಇನ್ ಫೈನಾನ್ಸಿಯಲ್ ಮ್ಯಾನೇಜ್‌ಮೆಂಟ್
- ಮಾಸ್ಟರ್ ಇನ್ ರಿಟೈಲ್ ಮ್ಯಾನೇಜ್‌ಮೆಂಟ್
- ಎಂ.ಎ. ಇನ್ ಕ್ರಿಮಿನಾಲಜಿ
- ಎಮ್‌ಸಿಡಿಬಿಎ – ಸರ್ಟಿಫೈಡ್ ಮೈಕ್ರೋಸಾಫ್ಟ್ ಡಾಟಬೇಸ್ ಎಡ್ವರ್‌ಟೈಸ್‌ಮೆಂಟ್
- ಒಡಿಎಸಿ – ಒರೇಕಲ್ ಡಾಟಬೇಸ್ ಎಡ್ವರ್‌ಟೈಸ್‌ಮೆಂಟ್ ಕೋರ್ಸ್
- **ಬಿ.ಎಡ್ (B.Ed) :** ಪದವಿಯಲ್ಲಿ ಕಲೆ ಮತ್ತು ವಿಜ್ಞಾನ ವಿಷಯಗಳನ್ನು ಆರಿಸಿಕೊಂಡವರು ಈ ಪದವಿಗೆ ಸೇರಲು ಅರ್ಹರಾಗಿರುತ್ತಾರೆ. ಅದರಲ್ಲೂ ಪದವಿಯಲ್ಲಿ ಕನ್ನಡ ಮತ್ತು ಆಂಗ್ಲಭಾಷೆಗಳನ್ನು ಐಚ್ಛಿಕವಾಗಿ ತೆಗೆದುಕೊಂಡವರು ಈ ವಿಭಾಗದಲ್ಲಿ ಅನುಕೂಲತೆಯನ್ನು ಗಳಿಸುವುದು ಹೆಚ್ಚು. ಅವಧಿ 1 ವರುಷ.
- **ಬಿ.ಪಿ.ಎಡ್. (B.PEd) :** ಈ ಕೋರ್ಸಿಗೆ ಪದವಿಯಲ್ಲಿ ಯಾವುದೇ ವಿಭಾಗದಿಂದ ತೇರ್ಗಡೆ ಹೊಂದಿದವರು ಆಗಬಹುದಾಗಿದೆ. ಕ್ರೀಡಾಸಕ್ತಿ ಮತ್ತು ಕ್ರೀಡೆಗಳಲ್ಲಿ ವಿ.ವಿ. ಮಟ್ಟ ಅಥವಾ ಅದಕ್ಕಿಂತಲೂ ಮೇಲ್ಪಟ್ಟದ ಕೂಟದಲ್ಲಿ ಭಾಗಿಗಳಾಗಿದ್ದಲ್ಲಿ ಹೆಚ್ಚು ಅನುಕೂಲದಾಯಕ. ಅವಧಿ 1 ವರುಷ.
- **ಬಿ.ಲಿಬ್ ಸೈನ್ಸ್ (B. Lib. Sc) :** ಇದೀಗ ಈ ಕೋರ್ಸಿಗೆ ಪದವಿ ಬಳಿಕ ನೇರ ಸೇರ್ಪಡೆಗೊಳ್ಳುವ ಅವಕಾಶವಿದೆ. ಎಮ್.ಲಿಬ್. ಸೈನ್ಸ್ ಪದವಿ ಒಟ್ಟು ಅವಧಿ 2 ವರುಷಗಳು.
- **ಎಂ.ಎಚ್.ಎ. (MHA) :** ಮಾಸ್ಟರ್ ಆಫ್ ಹಾಸ್ಪಿಟಲ್

→→→

➔➔➔

ಎಡ್ಮಿನಿಸ್ಟ್ರೇಷನ್ : ಪದವಿ ಗಳಿಸಿದವರು ಎರಡು ವರುಷಗಳ ಅವಧಿಯ ಕೋರ್ಸಿಗೆ ಸೇರಿಕೊಳ್ಳಬಹುದಾಗಿದೆ. ಮಂಗಳೂರಿನ ಫಾದರ್ ಮುಲ್ಲರ್ ಶಿಕ್ಷಣ ಸಂಸ್ಥೆ ಕಂಕನಾಡಿ ಇಲ್ಲಿ ಈ ಸೌಲಭ್ಯವಿದೆ.

- **ಎಂ.ಬಿ.ಎ. (M.B.A.)** : ಹೆಚ್ಚು ಬೇಡಿಕೆ ಇರುವ ಮತ್ತು ಸ್ವಲ್ಪ ದುಬಾರಿ ಕೋರ್ಸ್ ಇದಾಗಿದ್ದು ಪ್ರವೇಶ ಪರೀಕ್ಷೆಯ ಮೂಲಕ ಆಯ್ಕೆಗೊಂಡು 2 ವರುಷಗಳ ಅವಧಿಯ ಈ ಕೋರ್ಸಿಗೆ ಸೇರ್ಪಡೆಗೊಂಡು ಬದುಕನ್ನು ಉಜ್ವಲಗೊಳಿಸಿ ಕೊಳ್ಳಬಹುದಾಗಿದೆ.
- **ಎಂ.ಟಿ.ಎ. (MTA)** : ಪ್ರವಾಸೋದ್ಯಮ ಶಿಕ್ಷಣದಲ್ಲಿ ಆಸಕ್ತಿಯಿರುವವರು ಈ ಕೋರ್ಸಿಗೆ ಸೇರ್ಪಡೆ ಬಯಸಬಹುದಾಗಿದೆ. ಅವಧಿ 2 ವರುಷಗಳು ಯಾವುದೇ ಪದವಿ ಇದಕ್ಕೆ ಅರ್ಹವಾಗಿರುತ್ತದೆ.
- **ಎಂ.ಸಿ.ಜೆ (MCJ) ಪತ್ರಿಕೋದ್ಯಮ** : ಇಂದು ಬಹಳಷ್ಟು ಬೇಡಿಕೆಯಿರುವ ಕೋರ್ಸ್ ಇದೆನಿಸಿದೆ. ಪದವಿಯನ್ನು ಗಳಿಸಿಕೊಂಡ ತರುವಾಯ. ಬರವಣಿಗೆ, ವಾಕ್ ಚಾತುರ್ಯವನ್ನು ಮೇಳೈಸಿಕೊಂಡಿದ್ದಲ್ಲಿ ಅವಕಾಶ ಅನಂತವಾಗಿರುತ್ತದೆ. ಅವಧಿ 2 ವರುಷಗಳು.
- **ಎಂ.ಎಸ್. ಡಬ್ಲ್ಯು (MSW) ಸಮಾಜಕಾರ್ಯ** : ಈ ರಂಗದಲ್ಲಿ ಹೆಚ್ಚು ಆಸಕ್ತಿಯಿರುವವರು. ಉತ್ತಮ ಭೂಮಿಕೆಯಿರುವ ಕ್ಷೇತ್ರ ಇದಾಗಿದ್ದು. ಪದವಿಯನ್ನು ಯಾವುದೇ ವಿಭಾಗದ ಆಯ್ಕೆ ಇದ್ದರೂ ಇಲ್ಲಿ ಅರ್ಹತೆಯನ್ನು ಪಡೆದುಕೊಳ್ಳಬಹುದಾಗಿದೆ. ಒಟ್ಟು ಅವಧಿ 2 ವರುಷಗಳು. ಈ ಪದವಿಯವರಿಗೆ ಆಸ್ಪತ್ರೆಗಳಲ್ಲಿ ಕೌನ್ಸೆಲರ್ ಆಗಿ ಅಥವಾ ಕಂಪೆನಿ ವಲಯಗಳಲ್ಲಿ ಎಚ್.ಆರ್. ಮೆನೇಜರ್ ಆಗಿ ಅವಕಾಶ ಪಡೆಯಬಹುದು.

**ಇನ್ನು ಪದವಿಯಲ್ಲಿ ಕಲೆಯನ್ನು ಆರಿಸಿಕೊಂಡವರು. ಕನ್ನಡ, ಹಿಂದಿ, ಆಂಗ್ಲಭಾಷೆ, ಸಂಸ್ಕೃತ– ಮುಂತಾದ ಭಾಷಾ ವಿಷಯಗಳಲ್ಲಿ ಹಾಗೂ ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಮನಃಶಾಸ್ತ್ರ, ಸಮಾಜಶಾಸ್ತ್ರ, ಗೃಹವಿಜ್ಞಾನ..... ಮುಂತಾದ ವಿಷಯಗಳಲ್ಲಿ ಎಂ.ಎ. (ಮಾಸ್ಟರ್ ಆಫ್ ಆರ್ಟ್ಸ್) ಪದವಿಯನ್ನು ಗಳಿಸಬಹುದಾಗಿದೆ.**

**ಪದವಿಯಲ್ಲಿ ವಾಣಿಜ್ಯ ವಿಭಾಗದಲ್ಲಿ ಅಧ್ಯಯನ ನಡೆಸಿದವರು. ಎಂ.ಕಾಂ. ಪದವಿ ಗಳಿಸಬಹುದು 2 ವರುಷಗಳ ಅವಧಿಯ ಬೇಡಿಕೆಯ ಕೋರ್ಸ್ ಇದಾಗಿದೆ.**

ಅಂತೆಯೆ ಸ್ನಾತಕ ಪದವಿಯಲ್ಲಿ ವಿಜ್ಞಾನವನ್ನು (ಬಿ.ಎಸ್ಸಿ) ಆಯ್ಕೆ ಮಾಡಿಕೊಂಡವರು ಈ ವಿಭಾಗದಲ್ಲಿ ಭೌತಶಾಸ್ತ್ರ, ಜೀವಶಾಸ್ತ್ರ, ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಸಂಖ್ಯಾಶಾಸ್ತ್ರ, ಗಣಿತ, ಪ್ರಾಣಿಶಾಸ್ತ್ರ, ಕಂಪ್ಯೂಟರ್ ಸೈನ್ಸ್, ವಸ್ತು ವಿಜ್ಞಾನ, ಸಾಗರ ಭೂಗರ್ಭ ವಿಜ್ಞಾನ, ಪರಿಸರ ವಿಜ್ಞಾನ, ಯೋಗಿಕ್ ಸೈನ್ಸ್, ಮೈಕ್ರೋಬಯಾಲಜಿ, ಬಯೋಕೆಮಿಸ್ಟ್ರಿ, ಎಂ.ಸಿ.ಎ.... ಮುಂತಾದ ವಿಭಾಗಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸಬಹುದಾಗಿದೆ. 2 ವರುಷಗಳ ಅವಧಿಯದ್ದಾಗಿದೆ. (4 ಸೆಮಿಸ್ಟರಿನ) ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಈ ಕೋರ್ಸ್‌ಗಳು ಆಸಕ್ತರಿಗೆ ಹಾಗೆಯೇ ಅರ್ಹರಿಗೆ ಲಭ್ಯವಿದೆ.

ಹಾಗೆಯೇ ಇನ್ನು ಬೇರೆ ಬೇರೆ ಕಾಲೇಜು ಮಟ್ಟದಲ್ಲಿ ಇತರೆ ಮಾಸ್ಟರ್ ಡಿಗ್ರಿಗಳನ್ನು ನೀಡುವ ವ್ಯವಸ್ಥೆ ಇತ್ತೀಚಿನಿಂದ ಪ್ರಚಲಿತದಲ್ಲಿದೆ. ಮುಖ್ಯವಾಗಿ ಎರಡು ವರುಷಗಳ Hospital Management, M.Sc. MLT ಪದವಿಗಳಿಸಬಹುದು. ಫಿಸಿಯೋಥೆರಪಿಯಲ್ಲಿ 2 ವರುಷಗಳ MPT ಸ್ನಾತಕೋತ್ತರ ಪದವಿ ಗಳಿಸಬಹುದು. Air Hostes ಈ ಕೋರ್ಸಿಗೆ ನಿರ್ದಿಷ್ಟ ವಿದ್ಯಾರ್ಹತೆ ನಿಗದಿಗೊಂಡಿಲ್ಲವಾದರೂ ಪದವಿ ಅವಶ್ಯಕ. ಪದವಿ ಮುಗಿಸಿದವರು ಟೂರ್ಸ್ & ಟ್ರಾವೆಲ್ಸ್, ಹೋಮ್ ಸೈನ್ಸ್, ಹೊಟೇಲ್ ಮ್ಯಾನೇಜ್‌ಮೆಂಟ್ ಓದಿದವರಿಗೆ ಹೆಚ್ಚು ಆದ್ಯತೆಯನ್ನು ನೀಡಲಾಗುತ್ತದೆ. ಸಾಮಾನ್ಯವಾಗಿ 19ರಿಂದ 25 ವರ್ಷದೊಳಗಿನ ಅಭ್ಯರ್ಥಿಗಳಿಗೆ ಅವಕಾಶ ಹೆಚ್ಚು. ಇಲ್ಲಿ Airlines ತಲುಪುವ ಪ್ರದೇಶಗಳ ಭಾಷೆಯ ಜೊತೆಗೆ ಹಿಂದಿ, ಇಂಗ್ಲೀಷನ್ನು ನಿರರ್ಗಳವಾಗಿ ಮಾತನಾಡುವ ಕಲೆಯನ್ನು ಒಲಿಸಿಕೊಂಡಿರತಕ್ಕದ್ದು, ಲಿಖಿತ ಮತ್ತು ಮೌಖಿಕ ಪರೀಕ್ಷೆಗಳ ಮೂಲಕ ಅಭ್ಯರ್ಥಿಗಳನ್ನು ಆರಿಸಲಾಗುತ್ತದೆ.

- **ಪ್ಯಾಕೇಜಿಂಗ್** : ವಿಜ್ಞಾನ ವಿಭಾಗದಲ್ಲಿ ಪದವಿ ಗಳಿಸಿದವರು ಆಕರ್ಷಕ ವರಮಾನ ಗಳಿಸಬಲ್ಲ ಈ ಪ್ಯಾಕೇಜಿಂಗ್ ತರಬೇತಿಗೆ ಸೇರಿಕೊಳ್ಳಬಹುದಾಗಿದೆ. ಬೇರೆ ಬೇರೆ ಕಂಪೆನಿಗಳು ವಿಶಿಷ್ಟ ಮಾದರಿಯ ಪ್ಯಾಕೇಜ್ ಬಳಸಿ ಗ್ರಾಹಕರನ್ನು ಸೆಳೆಯುವ ಜೊತೆಗೆ ವಸ್ತುಗಳು ದೀರ್ಘಕಾಲ ಬಾಳಿಕೆ ಬರುವಂತೆ ಮಾಡುವ ವಿಧಾನವನ್ನು ಬಳಸಿಕೊಳ್ಳಬೇಕಾಗುತ್ತದೆ. ಅದಕ್ಕಾಗಿಯೇ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಪ್ಯಾಕೇಜಿಂಗ್ 2 ವರುಷಗಳ ಪೋಸ್ಟ್ ಗ್ಯಾಜ್ಯುಯೇಟ್ ಡಿಪ್ಲೋಮಾ ತರಬೇತಿ ನೀಡುತ್ತಿದೆ.
- **ಫೈನ್ ಆರ್ಟ್ಸ್** : ಯಾವಾಗಲೂ ಹೊಸತನದ ಆವಿಷ್ಕಾರ, ತುಡಿತ, ಜೀವಂತಿಕೆ ನೀಡುವಿಕೆ, ಎಲ್ಲರೊಂದಿಗೆ ಬೆರೆಯುವ ವ್ಯಕ್ತಿತ್ವ, ಸೋಲು ಗೆಲುವುಗಳನ್ನು ಒಂದೇ ರೀತಿಯಾಗಿ ಸ್ವೀಕರಿಸುವ ಮನಃಸ್ಥಿತಿ ಇರುವವರು ಈ ರಂಗದಲ್ಲಿ ಯಶಸ್ಸನ್ನು ಗಳಿಸುತ್ತಾರೆ. ಪಿ.ಯು.ಸಿ. ಅರ್ಹತೆಯವರು ಈ ವಿಭಾಗದಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸಬಹುದಾಗಿದೆ. ಇಲ್ಲಿ ಚಿತ್ರಕಲೆ, ಶಿಲ್ಪಕಲೆಗಳಲ್ಲಿ, ಯಾವುದಾದರೊಂದನ್ನು ಆಯ್ದುಕೊಳ್ಳಬಹುದಾಗಿದೆ.
- **ಚಾರ್ಟರ್ಡ್ ಅಕೌಂಟಿಂಗ್ (C.A.)** ಇಂದು ಬಹಳಷ್ಟು ಅಪೇಕ್ಷಣೀಯ ಹಾಗೂ ಸಂಪಾದನೆ ದೃಷ್ಟಿಯಿಂದ ಈ ಕೋರ್ಸ್ ಬಹಳಷ್ಟು ಪ್ರಯೋಜನಕಾರಿಯಾಗಿದೆ. ಸುಮಾರು 20 ವರುಷ ವಯಸ್ಸು ಮೇಲ್ಪಟ್ಟ ಪದವೀಧರರು ತಮ್ಮ ಹೆಸರನ್ನು ಈ ವಿಭಾಗದಲ್ಲಿ ನೋಂದಾಯಿಸಿ ಕೊಳ್ಳಬಹುದಾಗಿದೆ. ಪದವಿಯಲ್ಲಿ ಶೇ. 50 ಅಂಕಗಳನ್ನು ಪಡೆಯುವುದು ಅಪೇಕ್ಷಣೀಯ.
- **ಕಾನೂನಿನಲ್ಲಿ ಪದವಿ ಯಾ ಸ್ನಾತಕೋತ್ತರ ಪದವಿ (LLB & LLM)** ಯಾವುದೇ ವಿಭಾಗದಲ್ಲಿ ಪದವಿಗಳಿಸಿದವರು 3 ವರುಷಗಳ ಕಾನೂನು ಪದವಿಗೆ ಸೇರಿಕೊಳ್ಳಬಹುದು ಕನಿಷ್ಠ ಶೇ 45% ಅಂಕ ಗಳಿಸಿರಬೇಕು, ಕಾನೂನು ವ್ಯಾಸಂಗದಲ್ಲಿ ಸಿವಿಲ್, ಕ್ರಿಮಿನಲ್, ಲೇಬರ್, ಟ್ಯಾಕ್ಸ್, ಕಾರ್ಪೋರೇಟ್ ವಿಭಾಗಗಳಿವೆ. ಇದೇ ವಿಭಾಗದಲ್ಲಿ 2 ವರುಷಗಳ ಸ್ನಾತಕೋತ್ತರ ಪದವಿಯನ್ನು ಗಳಿಸುವರೇ LLM ಪದವಿಗೆ ಸೇರಿಕೊಳ್ಳಬಹುದು.
- **ಮಾಸ್ಟರ್ ಆಫ್ ಫಿಶರೀಸ್ ಸೈನ್ಸ್ (MF. Sc)** : ಮೀನುಗಾರಿಕೆ ವಿಜ್ಞಾನದಲ್ಲಿ 3 ವರುಷಗಳ ಸ್ನಾತಕೋತ್ತರ ಪದವಿಯನ್ನು ಈ ವಿಭಾಗದಲ್ಲಿ ಸ್ನಾತಕ ಪದವಿ ಗಳಿಸಿದವರು ಮಾಡಬಹುದಾಗಿದೆ.
- **ಮಾಸ್ಟರ್ ಆಫ್ ಸೈನ್ಸ್ ಫುಡ್ ಟೆಕ್ನಾಲಜಿ (MSc Food & Tech)** ಅವಧಿ 2 ವರುಷಗಳು.
- **ಮಾಸ್ಟರ್ ಆಫ್ ವಿಶ್ಯುವಲ್ ಆರ್ಟ್ಸ್ (M.V.A.)**
- **ಮಾಸ್ಟರ್ ಆಫ್ ವೆಟರ್ನರಿ ಸೈನ್ಸ್ (M.V.Sc.)**
- **ಮಾಸ್ಟರ್ ಆಫ್ ಎಗ್ರಿಕಲ್ಚರಲ್ ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್**

➔➔➔

→→→

(M.A., M.M.)

- **ಮಾಸ್ಟರ್ ಆಫ್ ಅಡ್ವರ್‌ಟೈಸಿಂಗ್ ಆಂಡ್ ಪಬ್ಲಿಕ್ ರಿಲೇಷನ್ ಮ್ಯಾನೇಜ್‌ಮೆಂಟ್ (M.A.P.R.M.)**
- **ಮಾಸ್ಟರ್ ಆಫ್ ಕಂಪ್ಯೂಟರ್ ಮ್ಯಾನೇಜ್‌ಮೆಂಟ್ / ಕಾರ್ಪೋರೇಟ್ ಮ್ಯಾನೇಜ್‌ಮೆಂಟ್ (M.C.M.)**
- **ಮಾಸ್ಟರ್ ಆಫ್ ಕಮ್ಯುನಿಕೇಶನ್ ಸೈನ್ಸ್ ಸ್ಟಡೀಸ್ (M.cms)**
- **ಮಾಸ್ಟರ್ ಆಫ್ ಕಂಪ್ಯೂಟರ್ ಎಜ್ಯುಕೇಶನ್ (MC.Ed)**
- **ಮಾಸ್ಟರ್ ಆಫ್ ಎಂಜಿನಿಯರಿಂಗ್ ಆಂಡ್ ಮೆನೇಜ್‌ಮೆಂಟ್ (M.E.M.)**
- **ಮಾಸ್ಟರ್ ಆಫ್ ಮ್ಹಾಸ್ ಕಮ್ಯೂನಿಕೇಶನ್ (MC.Ed)**

* ಮಾಸ್ಟರ್ ಆಫ್ ಅಡ್‌ಮಿನಿಸ್ಟ್ರೇಟಿವ್ ಮೆನೇಜ್‌ಮೆಂಟ್ ಆ್ಯಂಡ್ ಮೆನೇಜ್‌ಮೆಂಟ್ (M.A.M) ಎರಡು ವರುಷಗಳ ಅಧ್ಯಯನ ಕೋರ್ಸ್ ಇದಾಗಿದೆ.
* ಮಾಸ್ಟರ್ ಫಿಶರೀಸ್ ಸೈನ್ಸಸ್ – ಎರಡು ವರುಷದ ಕೋರ್ಸ್ ಇದಾಗಿದ್ದು ಮತ್ಸ್ಯೋದ್ಯಮದ ಬಗ್ಗೆ ಅಧ್ಯಯನ ವಿಷಯಗಳು ಇದರಲ್ಲಿವೆ (M.F.Sc)
* ಮಾಸ್ಟರ್ ಆಫ್ ಲೇಬರ್ ಲಾ & ಪರ್ಸನಲ್ ಮ್ಯಾನೇಜ್‌ಮೆಂಟ್ (M.C.P.M)
* ಮಾಸ್ಟರ್ ಆಫ್ ಪಬ್ಲಿಕ್ ಹೆಲ್ತ್ (M.P.H)
* ಮಾಸ್ಟರ್ ಆಫ್ ಫಿಸಿಯೋ ಥೆರಪಿ (M.P.T)
* ಮಾಸ್ಟರ್ ಆಫ್ ಮಾರ್ಕೆಟಿಂಗ್ ಎಡ್ಮಿನಿಸ್ಟ್ರೇಷನ್ (M.M.A)
* ಮಾಸ್ಟರ್ ಆಫ್ ಮ್ಯೂಸಿಕ್ (M.Mus)
* ಮಾಸ್ಟರ್ ಆಫ್ ಮ್ಯಾನೇಜ್‌ಮೆಂಟ್ ಟೆಕ್ನಾಲಜಿ (M.M.T)
* ಮಾಸ್ಟರ್ ಡಿಗ್ರಿ ಇನ್ ಸ್ಪೋರ್ಟ್ಸ್ ಮೆನೇಜ್‌ಮೆಂಟ್
* ಮಾಸ್ಟರ್ ಆಫ್ ಡಿಸೈನ್ಸ್
* ಮಾಸ್ಟರ್ ಇನ್ ಇಂಟರ್‌ನ್ಯಾಷನಲ್ ಮೆನೇಜ್‌ಮೆಂಟ್
* ಮಾಸ್ಟರ್ ಇನ್ ಇಂಟರ್‌ನ್ಯಾಷನಲ್ ಬಿಸಿನೆಸ್ ಡೆವಲಪ್‌ಮೆಂಟ್
* ಮಾಸ್ಟರ್ ಇನ್ ಹಿಸ್ಟೋರಿಕಲ್ ಸ್ಟಡೀಸ್

**ಹೆಚ್ಚಿನೆಲ್ಲಾ ಈ ಕೋರ್ಸ್‌ಗಳು 2 ವರುಷಗಳ ಅವಧಿಯದ್ದಾಗಿದ್ದು ಪದವಿಯಲ್ಲಿ ವಿಜ್ಞಾನ ವಿಷಯವನ್ನು ಆಯ್ದುಕೊಂಡವರಿಗೆ ಹೆಚ್ಚು ಸೂಕ್ತವೆನಿಸಿದೆ.**

* ಮಾಸ್ಟರ್ ಆಫ್ ಇಂಟರ್‌ನ್ಯಾಷನಲ್ ಬ್ಯುಸಿನೆಸ್
* ಎಂ.ಎಸ್.ಸಿ ಇನ್ ಎ.ಎಸ್.ಐ.ಸಿ ಡಿಸೈನ್

**ಉಪ ಸಂಹಾರ**

ಪ್ರೀತಿಯ ಜಿಜ್ಞಾಸುಗಳೇ ತಮ್ಮ ಬದುಕನ್ನು ಹಸನುಗೊಳಿಸಿಕೊಳ್ಳಬೇಕೆಂಬ ಮಹತ್ತರ ಆಶಯವನ್ನು ಹೊತ್ತು ಮುಂದೆ ಸಾಗಬಯಸುವ ಹೊತ್ತಲ್ಲಿ ನಿಮ್ಮೆದುರು ಈ ಚಿಕ್ಕ ಕೈಮರವನ್ನು ಕಟ್ಟಿ ನಿಲ್ಲಿಸುವ ಪ್ರಯತ್ನವನ್ನು ಮಾಡಲಾಗಿದೆ. ಹೌದು ಕಲಿಯಲು ಆಸಕ್ತಿಯಿದೆ, ಆದರೆ ಆರ್ಥಿಕ ಚೈತನ್ಯವಿಲ್ಲವಲ್ಲವೆಂದು ವಿಲವಿಲ ಒದ್ದಾಡುವ ಅವಶ್ಯಕತೆ ಇಂದಿನ ದಿನಮಾನಗಳಲ್ಲಿ ಅಲ್ಪವಾದರೂ ಕಡಿಮೆಗೊಳಿಸುವ ನೆಲೆಯಲ್ಲಿ ನೀವು ಕಷ್ಟ ಪಟ್ಟು ಓದಿ ಒಳ್ಳೆ ಅಂಕಗಳನ್ನು ಸಂಪಾದಿಸಿದರೆ ಇಂದು ಸರಕಾರಿ ಮತ್ತು ವಿವಿಧ ಖಾಸಗಿ ಸಂಸ್ಥೆಗಳು ವಿದ್ಯಾರ್ಥಿ ವೇತನವನ್ನು ನೀಡಿ ಬಡ ವಿದ್ಯಾರ್ಥಿಗಳಿಗೆ ಆಧಾರ ಸ್ಥಂಬವಾಗುವ ಕೆಲಸ ಮಾಡುತ್ತಿದೆ. ಅದರ ಸದುಪಯೋಗವನ್ನು ಕೂಡ ತಾವು ಪಡೆದುಕೊಳ್ಳಬಹುದು. ವಿದ್ಯಾರ್ಜನೆಗಾಗಿ ಹಣಕಾಸು ಸಂಸ್ಥೆಗಳು ಸಾಲವನ್ನು ನೀಡುತ್ತಿವೆ. ಇದರ ಪ್ರಯೋಜನವನ್ನೂ ಕೂಡ ತಾವು ಪಡೆದುಕೊಳ್ಳಬಹುದೆಂದು ಹೇಳುತ್ತಾ ತಮಗೆ ಹಿತಕಾರಿಯಾದ ಕೋರ್ಸನ್ನು ಆಯ್ಕೆ ಮಾಡಿಕೊಂಡು ಬದುಕನ್ನು ಸಮೃದ್ಧಗೊಳಿಸಿಕೊಳ್ಳಿ ಎಂಬುದೇ ಆತ್ಮಶಕ್ತಿಯ ಹೆಬ್ಬಯಕೆಯಾಗಿದೆ.

– ಶುಭವಾಗಲಿ.

# ಬೇವಿನೆಲೆ ಸೇವನೆಯ ಬಹುಪಯೋಗ

ಹಲವಾರು ಔಷಧೀಯ ಗುಣಗಳಿರುವ ಬೇವಿನ ಎಲೆ. ತೊಗಟೆ, ಹೂವು ಬೀಜಗಳಿಂದ ಅನೇಕ ಆರೋಗ್ಯ ಮತ್ತು ಸೌಂದರ್ಯ ಸಂಬಂಧಿತ ಪ್ರಯೋಜನಗಳಿವೆ.



* ಬೇವಿನ ಎಲೆಯ ಹೊಗೆಯಿಂದ ಸೊಳ್ಳೆ ಮುಂತಾದ ಕೀಟಗಳನ್ನು ಓಡಿಸಬಹುದು.
* ಧಾನ್ಯಗಳಲ್ಲಿ ಬೇವಿನೆಲೆ ಹಾಕಿಟ್ಟರೆ ಹುಳಗಳ ಕಾಟ ಇರುವುದಿಲ್ಲ.
* ಬೇವಿನ ಸೊಪ್ಪನ್ನು ಕುದಿಸಿದ ನೀರಿನಿಂದ ತಲೆ ತೊಳೆದರೆ ಹೊಟ್ಟು ಮತ್ತು ತುರಿಕೆ ನಿವಾರಣೆಯಾಗುತ್ತದೆ.
* ಬೇವಿನ ತೊಗಟೆಯ ಭಸ್ಮದ ಲೇಪನದಿಂದ ಗಾಯ ಮತ್ತು ಹುಣ್ಣು ವಾಸಿಯಾಗುತ್ತವೆ.
* ಬೇವಿನೆಲೆಯ ರಸಕ್ಕೆ ಕಲ್ಲುಸಕ್ಕರೆ ಹಾಕಿ ಸೇವಿಸಿದರೆ ಆರಂಭಿಕ ಕಾಮಾಲೆ ನಿವಾರಣೆಯಾಗುತ್ತದೆ.
* ಬೇವಿನೆಣ್ಣೆ ಮತ್ತು ತುಳಸಿ ಎಲೆ ಹಾಕಿದ ನೀರಿನ ಸ್ನಾನದಿಂದ ಕಜ್ಜಿ ಮತ್ತು ಹುಣ್ಣು ಮಾಯವಾಗುತ್ತದೆ.
* ಬೇವಿನೆಣ್ಣೆ ಹೇನನ್ನು ದೂರ ಮಾಡುತ್ತದೆ. ಬೇವಿನ ಸೊಪ್ಪಿನ ರಸಕ್ಕೆ ಜೇನುತುಪ್ಪ ಹಾಕಿ ಬಾಯಿ ಮುಕ್ಕಳಿಸಿದರೆ ಗಂಟಲು ನೋವು ಕಡಿಮೆಯಾಗುತ್ತದೆ.
* ಬೇವಿನ ಹೂವು ನೆನೆಸಿದ ನೀರನ್ನು ಕುಡಿಯುವುದರಿಂದ ದೇಹ ತಂಪಾಗಿರುತ್ತದೆ. ಬೇವಿನೆಲೆಯ ರಸಕ್ಕೆ ಇಂಗು ಸೇರಿಸಿ ಖಾಲಿ ಹೊಟ್ಟೆಯಲ್ಲಿ ಸೇವಿಸಿದರೆ ಜಂತುಹುಳುಗಳು ಸಾಯುತ್ತವೆ.
* ಗಿಡಗಳಿಗೆ ಬೇವಿನೆಯ ರಸ ಸಿಂಪಡಣೆಯಿಂದ ಕೀಟ ಬಾಧೆ ದೂರವಾಗುತ್ತದೆ.

# ಪದವಿ ನಂತರ ಮುಂದೇನು? ಸರ್ಕಾರಿ ಉದ್ಯೋಗ

ಶ್ರೀಮತಿ ಅನುಪಮಾ ಸುರೇಶ್, ಬೆಂಗಳೂರು
ಮೊಬೈಲ್ : 9481033331

**ಈ ಸ್ಪರ್ಧಾತ್ಮಕ ಯುಗದಲ್ಲಿ ಯಶಸ್ಸಿನ ಜೀವನ ಪ್ರತಿಯೊಬ್ಬರ ಕನಸು, ಅದನ್ನು ಸಾಕಾರಗೊಳಿಸಲು ಒಂದು ಉತ್ತಮ ಉದ್ಯೋಗವನ್ನು ಆಯ್ಕೆ ಮಾಡುವುದು ಮತ್ತು ಸೇರಿಕೊಳ್ಳುವುದು ಬಹಳ ಮುಖ್ಯ. ಅದರಲ್ಲಿ ಸರಕಾರಿ ಉದ್ಯೋಗ ಒಂದು ಉತ್ತಮ ಆಯ್ಕೆ. ಇತ್ತೀಚಿನ ದಿನಗಳಲ್ಲಿ ಅವಕಾಶಗಳು ಹೆಚ್ಚುತ್ತಿದ್ದು, ಸ್ಪರ್ಧಾತ್ಮಕ ಪರೀಕ್ಷೆಗಳ ಉತ್ತಮ ತಯಾರಿ ಅತ್ಯಗತ್ಯ.**

**ಸ್ಪರ್ಧಾತ್ಮಕ ಪರೀಕ್ಷೆಗಳು:**

- IAS– ಕೇಂದ್ರ ಸೇವಾ ಆಯೋಗವು ನಡೆಸುವ ನಾಗರಿಕ ಸೇವಾ ಪರೀಕ್ಷೆಗಳು ಬಹಳ ಮುಖ್ಯ ಹಾಗೂ ಕಠಿಣ ಪರೀಕ್ಷೆ ಅದೇ ರೀತಿ ದೇಶದ ಅತ್ಯುನ್ನತ ಮಟ್ಟದ ಹುದ್ದೆ ಅಲಂಕರಿಸಬೇಕಾದ ಕ್ಷೇತ್ರವೂ ಕೂಡಾ. ಇದರಲ್ಲಿ 24 ಸೇವೆಗಳಿದ್ದು, (IAS, IPS, IFS, IRS, IAAS etc...) ಪ್ರತೀ ವರ್ಷ 1000 ಹುದ್ದೆಗಳಿಗೆ ಅಧಿಸೂಚನೆ ನೀಡಲಾಗುತ್ತಿದೆ. ಅಲ್ಲದೆ Indian Economic Service, Indian Statistical Service, Indian Medical Service, Indian Engineering Service, Indian Geological Service etc ಇನ್ನೂ 30 ಕ್ಕೂ ಹೆಚ್ಚು ಪರೀಕ್ಷೆಗಳನ್ನು ನಡೆಸಲಾಗುತ್ತದೆ.
- KAS– ಕರ್ನಾಟಕ ಲೋಕಸೇವಾ ಆಯೋಗದಿಂದ ಹತ್ತು ಸಾವಿರ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಗೆಜೆಟೆಡ್ ಆಫೀಸರ್ಸ್, ಎಫ್.ಡಿ.ಎ, ಎಸ್.ಡಿ.ಎ, ಪಿ.ಡಿ.ಒ, ಪಂಚಾಯತ್ ಕಾರ್ಯದರ್ಶಿ, (Gazetted Officers, Technical, Non Technical, FDA, SDA, PDO)etc
- IBPS, SSC, SBI Exams, Railways, Postal, Escoms, RBI, NABARD, Forest dept, Revenue Dept, etc ಸ್ಪರ್ಧಾತ್ಮಕ ಪರೀಕ್ಷೆಗಳು ಬರೆಯಲು ಅವಕಾಶಗಳಿವೆ. ಹೆಚ್ಚಿನವುಗಳು ಆನ್‌ಲೈನ್ ಮೂಲಕ ಪರೀಕ್ಷೆಗಳನ್ನು ನಡೆಸಲಾಗುತ್ತದೆ.

21 ವರ್ಷದಿಂದ 32 ವರ್ಷದವರೆಗೆ ಪರೀಕ್ಷೆಗಳನ್ನು ಬರೆಯಲು ಅವಕಾಶವಿದೆ. ಬೇರೆ ಬೇರೆ ಪರೀಕ್ಷೆಗಳಿಗೆ ಬೇರೆ ಬೇರೆ ವಯೋಮಿತಿ ಮತ್ತು ಅವಕಾಶಗಳನ್ನು ನಿಗದಿ ಮಾಡಲಾಗಿರುತ್ತದೆ, ಅಧಿಸೂಚನೆ ಸರಿಯಾಗಿ ಗಮನಿಸುವುದು. (ಹಿಂದುಳಿದ ವರ್ಗಗಳ ಮೂರು ವರ್ಷ & ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ 5 ವರ್ಷ ಸಡಿಲಿಕೆ ಇದೆ)

ಅಭ್ಯರ್ಥಿಯು ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಯಾವುದೇ ವಿಶ್ವವಿದ್ಯಾಲಯದ ಸ್ನಾತಕ ಅಥವಾ ಸ್ನಾತಕೋತ್ತರ ಪದವಿಯನ್ನು ಹೊಂದಿರತಕ್ಕದ್ದು ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು. ಹಾಗೂ ಕನಿಷ್ಠ 21 ವಯಸ್ಸು ಹೊಂದಿರಬೇಕು.

ಸಾರ್ವಜನಿಕ ಆಡಳಿತ ಸೇವೆ ಪರೀಕ್ಷೆಗಳು ಮೂರು ಹಂತಗಳಲ್ಲಿ ನಡೆಯುತ್ತವೆ. ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ, ಮತ್ತು ಸಂದರ್ಶನ. ಉಳಿದೆಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳು ಎರಡು ಹಂತಗಳಲ್ಲಿ ನಡೆಯುತ್ತವೆ ಅಂದರೆ ಪೂರ್ವಭಾವಿ ಮತ್ತು ಸಂದರ್ಶನ/ದಾಖಲೆಯ ಪರಿಶೀಲನೆ ಇರುತ್ತದೆ.

ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮೂಲಭೂತ ಎರಡು ವಿಚಾರದಲ್ಲಿ ಪರೀಕ್ಷೆ ನಡೆಸಲಾಗುತ್ತಿದೆ, ಸಾಮಾನ್ಯಜ್ಞಾನ ಮತ್ತು Aptitude Test. ಯುಪಿಸ್‌ಸಿ ಮತ್ತು ಕೆಪಿಸ್‌ಸಿ ಪರೀಕ್ಷೆಗಳಿಗೆ ಶೇ.80 ರಷ್ಟು ಸಾಮಾನ್ಯ ಜ್ಞಾನ ಮತ್ತು ಶೇ.20 ರಷ್ಟು Aptitude ವಿಚಾರಗಳಿಗೆ ಪ್ರಾಧಾನ್ಯತೆ ನೀಡಲಾಗುತ್ತದೆ. Banking, Railways, postal, SSC ಮುಂತಾದ ಪರೀಕ್ಷೆಗಳಿಗೆ ಶೇ.80ರಷ್ಟು Aptitude, Reasoning, Maths ಸಂಬಂಧಿಸಿದ ಪ್ರಶ್ನೆಗಳು ಹಾಗೂ ಶೇ.20 ರಷ್ಟು ಸಾಮಾನ್ಯಜ್ಞಾನ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಎರಡು ವಿಷಯಗಳು ಓದಿದಲ್ಲಿ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲವಾಗುತ್ತದೆ.

**ಸಾಮಾನ್ಯಜ್ಞಾನಕ್ಕೆ ಸಂಬಂಧಿಸಿದ ವಿಷಯಗಳು** : ಇತಿಹಾಸ, ರಾಜನೀತಿ, ಭೂಗೋಳ ಶಾಸ್ತ್ರ, ಆರ್ಥಿಕತೆ, ವಿಜ್ಞಾನ ಮತ್ತು ತಂತ್ರಜ್ಞಾನ, ಸಮಾನ್ಯ ವಿಜ್ಞಾನ, ಪ್ರಚಲಿತ ವಿದ್ಯಮಾನಗಳು, ಸರಕಾರಿ ಕಾರ್ಯಕ್ರಮಗಳು, ಬಜೆಟ್, ಆರ್ಥಿಕ ಸಮೀಕ್ಷೆಗಳು, ಅಂತರರಾಷ್ಟ್ರೀಯ ಸಂಸ್ಥೆಗಳು ಮತ್ತು ಸಂಬಂಧಗಳು ಇತ್ಯಾದಿ ವಿಚಾರಗಳನ್ನು ಹೊಂದಿರುತ್ತವೆ. ಶೇ. 50ರಷ್ಟು ಪ್ರಶ್ನೆಗಳು ಪ್ರಚಲಿತ ವಿದ್ಯಮಾನಗಳಿಗೆ ಸಂಬಂಧಪಟ್ಟಿದ್ದಾಗಿರುತ್ತದೆ.

**Aptitude Subjects**: General Mental ability, Verbal &Non-verbal Reasoning, Logical reasoning, Basic maths, Numberability, Data Analysis, Data interpretation, Essay writing, Comprehension, Languages, Soft Skills like Communication Skill, Decision Making, Intrapersonal skill, Leadership, Problem solving, ethics, Attitude etc.

Note: ಪ್ರತಿಯೊಂದು ಸ್ಪರ್ಧಾತ್ಮಕ ಪರೀಕ್ಷೆಗಳು ಅಧಿಸೂಚನೆಯಲ್ಲಿ ಅದರದ್ದೇ ಆದ ಪಠ್ಯಕ್ರಮ ನೀಡಲಾಗುತ್ತದೆ.

**ಪ್ರಥಮ ತಯಾರಿ ಹೇಗೆ?**

- ✓ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸರಾಗವಾಗಿ ಯಶಸ್ಸು ಗೊಳ್ಳಲು ಕನಿಷ್ಠ 2 ವರ್ಷಗಳ ತಯಾರಿ ಅತ್ಯಗತ್ಯ. 500 ದಿನಗಳ ಪ್ರಚಲಿತ ವಿದ್ಯಮಾನಗಳ ನೋಟ್ಸ್, ಪ್ರತಿನಿತ್ಯ ಬರೆದಿಡಬೇಕಾಗುತ್ತದೆ. ಎಲ್ಲಾ ಪುಸ್ತಕಗಳು ಮತ್ತು ಮಾಸಿಕ ಪತ್ರಿಕಗಳ ಪಟ್ಟಿ ಮಾಡಿ ಅದನ್ನು 10–12 ತಿಂಗಳುಗಳಲ್ಲಿ ಓದಿಕೊಳ್ಳಬೇಕಾಗುತ್ತದೆ.
- ✓ ಪ್ರತಿನಿತ್ಯ ದಿನಪತ್ರಿಕೆ, ಮತ್ತು ಅಂತರ್ಜಾಲಗಳ ಮೂಲಕ ಪ್ರಚಲಿತ ವಿದ್ಯಮಾನ ಮತ್ತು ಪೂರಕ ವಿಷಯಗಳನ್ನು ಸಂಗ್ರಹಿಸಲು ಸಮಯ ನಿಗದಿಮಾಡಿ ನಿರಂತರ ನೋಟ್ಸ್ ಮಾಡಬೇಕು.
- ✓ ಒಂದು ವರ್ಷದ ನಿರಂತರ ತಯಾರಿಯಾದ ಮೇಲೆ ಮಾದರಿ ಪರೀಕ್ಷೆಗಳನ್ನು ಬರೆಯಬೇಕು. ಉತ್ತಮ ಮಾಹಿತಿಯುಳ್ಳ ಆನ್‌ಲೈನ್ ಅಥವಾ ಕೋಚಿಂಗ್ ಸೆಂಟರ್‌ಗಳಲ್ಲಿ ಬರೆದರೆ ಒಳ್ಳೆಯದು.
- ✓ ಗುಂಪು–ಚಟುವಟಿಕೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಬಹಳ ಪರಿಣಾಮಕಾರಿಯಾಗಿ ತಯಾರಿಯಾಗಲು ಸಹಕರಿಸುತ್ತದೆ. 3–5 ಮಂದಿ ಒಟ್ಟಾಗಿ ಓದುವುದು, ವಿಷಯ ಹಂಚಿಕೆ, ಪ್ರಶ್ನೆಪತ್ರಿಕೆ ತಯಾರಿ, ಪ್ರಚಲಿತ–ವಿದ್ಯಮಾನಗಳ ಬಗ್ಗೆ ಚರ್ಚೆ ಇವೆಲ್ಲವೂ ವಿಷಯ ಮನನ ಮಾಡಿಕೊಳ್ಳಲು ಸಹಕಾರಿಯಾಗುತ್ತದೆ.
- ✓ ಹೆಚ್ಚಿನ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಬರುವ ಪ್ರಶ್ನೆಗಳು ಹೈಸ್ಕೂಲು ಮಟ್ಟದ್ದು, ಹಾಗಾಗಿ ಹೈಸ್ಕೂಲು ಮಟ್ಟದಿಂದ ತಯಾರಿ ಪ್ರಾರಂಭಿಸುವುದು ಉತ್ತಮ.

➔➔➔

- ✓ ಪಿ.ಯು.ಸಿ ಮತ್ತು ಪದವಿಯಲ್ಲಿ ಕಲಾವಿಭಾಗವನ್ನು ವ್ಯಾಸಂಗ ಮಾಡಿದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೆಚ್ಚು ಅನುಕೂಲ. ಕಲಾ ವಿಭಾಗದಲ್ಲಿ, ಇತಿಹಾಸ, ಆರ್ಥಿಕತೆ, ಮತ್ತು ರಾಜ್ಯಶಾಸ್ತ್ರ ವಿಷಯ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅದೇ ಮೂರು ವಿಷಯಗಳು ಒಳಗೊಂಡಿರುವುದರಿಂದ ಕಾಲೇಜು ವ್ಯಾಸಂಗದಲ್ಲಿ ಉತ್ತಮ ಸಾಧನೆ ಮಾಡಬಹುದು, ಹಾಗೂ ಲ್ಯಾಬ್ & ಪ್ರಾಜೆಕ್ಟ್ ವರ್ಕ್‌ಗಳು ಇರುವುದಿಲ್ಲ. ಪ್ರತ್ಯೇಕ ಬೇರೆ ವಿಷಯ ಕಲಿಯಬೇಕಾಗಿಲ್ಲ,
- ✓ ಕಾಲೇಜು ವ್ಯಾಸಂಗ ಮಾಡುವಾಗ ತಯಾರಿಗೊಂಡಲ್ಲಿ 3 ರಿಂದ 8 ವರ್ಷಗಳು ಅನುಭವ ಸಿಗುತ್ತದೆ. ಪ್ರತಿ ವರ್ಷ ಐ.ಎ.ಎಸ್ ಮತ್ತು ಕೆ.ಎ.ಎಸ್ ಪ್ರಶ್ನೆ ಪತ್ರಿಕೆಗಳನ್ನು ಪಡೆದು ಉತ್ತರಿಸುವಾಗ ವರ್ಷದಿಂದ ವರ್ಷಕ್ಕೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಭವ ಹೆಚ್ಚುತ್ತದೆ. 8 ನೇ ತರಗತಿಯಲ್ಲಿ ಪ್ರಾರಂಭಿಸಿದರೆ, ಡಿಗ್ರಿ ಮುಗಿಯುವಾಗ 7 ರಿಂದ 8ವರ್ಷಗಳ ಅನುಭವ ಸಿಗುತ್ತದೆ. ಐ.ಎ.ಸ್ ಮತ್ತು ಕೆ.ಎ.ಎಸ್ ಪರೀಕ್ಷೆಯ 3 ಹಂತಗಳನ್ನು ಯಶಸ್ವಿಯಾಗಿ ಮುಗಿಸಬಹುದೆಂಬ ವಿಶ್ವಾಸಗಳಿಸಬಹುದು.

**ನಿಮಗಿದುಗೊತ್ತೇ?**

- ಪ್ರತಿ ವರ್ಷ ಸುಮಾರು 12–15 ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ (ಐ.ಎ.ಸ್, ಕೆ.ಎ.ಎಸ್, ಬ್ಯಾಂಕಿಂಗ್, ರೈಲ್ವೇ, ಆರ್.ಬಿ.ಐ, ಸರಕಾರದ ಸಾಮಾನ್ಯ ಪರೀಕ್ಷೆಗಳು ಇತ್ಯಾದಿ) ಬರೆಯಲು ಅವಕಾಶಗಳಿವೆ. ನಿರಂತರ ತಯಾರಿ ನಡೆಸಿದರೆ ಯಾವುದಾದರೊಂದು ಪರೀಕ್ಷೆಯಲ್ಲಿ ಯಶಸ್ಸು ನಿಶ್ಚಿತ.
- ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳ ಪಠ್ಯಕ್ರಮದಲ್ಲಿ– ಇತಿಹಾಸ, ಭೂಗೋಳಶಾಸ್ತ್ರ, ಅರ್ಥಶಾಸ್ತ್ರ, ರಾಜಕೀಯ ನೀತಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ವಿಜ್ಞಾನ, ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ವಿಚಾರಗಳು, ಸಾಮಾನ್ಯಜ್ಞಾನ, ಭಾಷಾ ವಿಷಯಗಳು (ಕನ್ನಡ ಮತ್ತು ಇಂಗ್ಲೀಷ್) ಒಳಗೊಂಡಿರುತ್ತದೆ.
- ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪಠ್ಯಪುಸ್ತಕಗಳನ್ನು ಆಯ್ಕೆ ಮಾಡುವಾಗ ಯಾವುದು ಓದಬೇಕು, ಯಾವುದು ಓದಬಾರದು ಎಂಬುದು ಬಹಳ ಮುಖ್ಯ. ಇಲ್ಲವಾದಲ್ಲಿ ಸಮಯ ಅನಾವಶ್ಯಕವಾಗಿ ವ್ಯರ್ಥವಾಗುತ್ತದೆ.
- ಎಲ್ಲಾ ಸರಕಾರಿ/ ಖಾಸಗಿ ಉದ್ಯೋಗಗಳಿಗೆ ಪದವಿ ವಿದ್ಯಾಭ್ಯಾಸ ಅತ್ಯಗತ್ಯ.


**4 ಹಂತದಲ್ಲಿ ತರಬೇತಿ ಪಡೆಯಬಹುದು.**

* ಎಂಟನೇ ತರಗತಿ ಮೇಲ್ಪಟ್ಟು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿರುವ ಶನಿವಾರ ಅಥವಾ ಆದಿತ್ಯವಾರ ತರಬೇತಿ ಸಂಸ್ಥೆಗಳಲ್ಲಿ ನಿರಂತರ ತರಬೇತಿ ಪಡೆಯಬಹುದು.
* ಉದ್ಯೋಗದಲ್ಲಿರುವವರು ಆದಿತ್ಯವಾರದಂದು ತರಬೇತಿ ಪಡೆಯುವುದು.
* ಪದವಿ ನಂತರ ಪೂರ್ಣ ಪ್ರಮಾಣದಲ್ಲಿ ಒಂದು ವರ್ಷ ಅಥವಾ ಎರಡು ವರ್ಷ ನಿರಂತರ ತರಬೇತಿ ಪಡೆಯುವುದು
* ಅಂತರ್ಜಾಲ ಮುಖಾಂತರ ಸ್ವಂತ ಬುದ್ದಿಮತ್ತೆಯಲ್ಲಿ ತಯಾರಿ ಮಾಡಬಹುದು.

ಈ ಸ್ಪರ್ಧಾತ್ಮಕ ಯುಗದಲ್ಲಿ ಎಲ್ಲಾ ಪದವೀಧರರ ಮುಂದೆ ಇರುವ ಪ್ರಶ್ನೆ ಇದು. ಸರಕಾರಿ/ಖಾಸಗಿ ಉದ್ಯೋಗಗಳು ಬೇಕಾದಷ್ಟಿದ್ದರೂ ಅವುಗಳನ್ನು ಪಡೆಯುವಲ್ಲಿ ಸಾಕಷ್ಟು ಪೈಪೋಟಿ ಇರುವುದರಿಂದ ವಿಶೇಷ ಜ್ಞಾನ, ನಿರಂತರ ಅಭ್ಯಾಸ ಮತ್ತು ಅನುಭವ ಇರಬೇಕಾಗುದುದು ಬಹಳ ಮುಖ್ಯ. ಈ ನಿಟ್ಟಿನಲ್ಲಿ ವಿದ್ಯಾರ್ಥಿ ದೆಸೆಯಲ್ಲಿಯೇ ಮೂಲಭೂತ ತಯಾರಿ ಮಾಡಿಕೊಳ್ಳುವುದು ಅನಿವಾರ್ಯವಾಗಿದೆ. ವ್ಯಾಸಂಗ (ಹೈಸ್ಕೂಲು, ಪಿ.ಯು.ಸಿ, ಪದವಿ) ಮಾಡುತ್ತಿರುವಾಗಲೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿಗೊಂಡಲ್ಲಿ ಪದವಿನಂತರ ಮುಂದೇನು? ಎಂದು ಚಿಂತಿಸಬೇಕಾಗಿಲ್ಲ.

# ಶ್ರೀ ನಾರಾಯಣ ಗುರುಗಳು ಮತ್ತು ಶೈಕ್ಷಣಿಕ ಚಿಂತನೆ

ಮಹಾಪುರುಷರ ಬದುಕು ಮತ್ತು ದೂರದೃಷ್ಟಿಯ ನಡೆನುಡಿಗಳು ಒಂದು ಇಡೀ ಸಮಾಜದ ಪರಿವರ್ತನೆಗೆ ಪ್ರೇರಣೆಯಾಗುವುದಕ್ಕೆ ಜ್ವಲಂತ ಉದಾಹರಣೆ. ಕೇರಳದಿಂದೆದ್ದು ನಾಡನ್ನೆಲ್ಲಾ ಸಂಚಲನಗೊಳಿಸಿದ ಶ್ರೀ ನಾರಾಯಣ ಗುರುಗಳು ತನ್ನ ಸರಳ ಸಂದೇಶಗಳ ಮೂಲಕ ಅವರು ಇನ್ನಿತರ ಕ್ಷೇತ್ರಗಳಂತೆಯೇ ಶೈಕ್ಷಣಿಕ ಕ್ರಾಂತಿಗೆ ನಾಂದಿ ಹಾಡಿದ ಕ್ರಿಯಾತ್ಮಕ ತತ್ವಜ್ಞಾನಿ.



ಯಾವುದೇ ಸಮಾಜದಲ್ಲಾದರೂ ಅಂಟಿಗೊಂಡಿರುವ ಜಾಡ್ಯಗಳನ್ನು ನಿವಾರಿಸಿಕೊಳ್ಳಲು ಹೊಸತನವನ್ನು ಕಂಡುಕೊಳ್ಳಲು ಶಿಕ್ಷಣವೇ ಏಕ ಮಾತ್ರ ಮಾಧ್ಯಮ ಎಂಬುದು ನಾರಾಯಣ ಗುರುಗಳ ಖಚಿತ ಅಭಿಪ್ರಾಯವಾಗಿತ್ತು. ಸರ್ವರಿಗೂ ಶಿಕ್ಷಣ ಬೇಕು ಎಂಬ ನೆಲೆಯಲ್ಲಿ ಅವರು ಶಿವಗಿರಿಯಲ್ಲಿ ವಿದ್ಯೆಗೆ ಅದಿದೇವತೆಯಾದ ಶಾರದಾ ದೇವಿಯ ಪುತ್ಥಳಿಯನ್ನು ಕ್ರಿ.ಶ. 1912ರಲ್ಲಿ ಪ್ರತಿಷ್ಠಾಪಿಸಿದರು. ದೇವಸ್ಥಾನಗಳ ಸುತ್ತಮುತ್ತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿರಿ ಎಂದು ಕರೆಯಿತ್ತರು. ಅವರೇ ಕೆಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. "ಸಂಘಟನೆಯಿಂದ ಶಕ್ತಿ" ಎಂದ ಗುರುಗಳು "ಜಾತಿ ಯಾವುದಾದರೇನು ಮನುಷ್ಯ ಒಳ್ಳೆಯವನಾದರೆ ಸಾಕು" ಮಾನವರೆಲ್ಲಾ ಒಂದೇ ಕುಲ. ಎಲ್ಲರಿಗೂ ದೇವನೊಬ್ಬನೆ" ಎಂದು ಪ್ರತಿಪಾದಿಸಿದ ಬೆನ್ನಲ್ಲೇ "ಶಿಕ್ಷಣದಿಂದ ಸ್ವಾತಂತ್ರ್ಯ" ಎಂದು ಕರೆಕೊಟ್ಟರು. ಸ್ವಾತಂತ್ರ್ಯ ವೆಂದರೆ ಬೌದಿಕ ಸ್ವಾತಂತ್ರ್ಯ, ಸಮಾನತಾ ಸ್ವಾತಂತ್ರ್ಯ ಮತ್ತು ಆರ್ಥಿಕ ಸ್ವಾತಂತ್ರ್ಯ ಇವೆಲ್ಲದಕ್ಕೂ ಮೂಲ ದ್ರವ್ಯ ಜ್ಞಾನ ಸಂಪಾದನೆ. ಎಂದು ಅಂದು ಕಾರ್ಯ ಪವೃತ್ತರಾದರು. ಅವರ ಶ್ರೀ ನಾರಾಯಣ ಗುರು ಧರ್ಮ ಸಂಘ (ಎಸ್.ಎನ್.ಡಿ.ಪಿ) ಸಂಸ್ಥೆಯು ಅಂದು ಆರಂಭಿಸಿದ ಶಿಕ್ಷಣ ಸಂಸ್ಥೆಗಳು ಇಂದು ಕೇರಳ ರಾಜ್ಯದಲ್ಲಂತು ಅತ್ಯುಚ್ಚ ಶಿಕ್ಷಣದ ವಿವಿಧ ಪ್ರಾಕಾರಗಳಲ್ಲಿ ಕೋಟ್ಯಂತರ ಮಂದಿಯ ಬಾಳ ದೀವಿಗೆ ಯಾಗಿರುವುದಲ್ಲದೆ, ಗುರುಗಳ ಮಾತನ್ನು ಅನುಸರಿಸಿ ದಕ್ಷಿಣದ ಹಲವು ರಾಜ್ಯಗಳಲ್ಲಿ ಈ ಉಪಕ್ರಮಗಳು ಆರಂಭವಾಗಿ ಇಷ್ಟರಮಟ್ಟಿಗಾದರೂ ಪ್ರಗತಿಗೆ ಸಾಧಕವಾಗಿದೆ. ಶೋಷಣೆಗೆ ಬಲಿಯಾಗಿ ನಿಕೃಷ್ಟವೂ ಅಸ್ವಸ್ಥವೂ ಆದ ದುಃಸ್ಥಿತಿಗೆ ತಲುಪಿದ್ದೇನೆ ಎಂಬ ವ್ಯಕ್ತಿಗತ ಅರಿವಾಗುವ ತನಕ ಶೋಷಿತ ಸಮುದಾಯದ ಸುಧಾರಣೆ ಕಷ್ಟ ಸಾಧ್ಯ. ಪ್ರತಿಯೋರ್ವನಿಗೂ ಅವನವನ ಜನ್ಮ ಜಾತವಾದ ಸಮೂದಾಯಕ್ಕೆ ಮತ್ತು ವೈಯಕ್ತಿಕವಾಗಿ ಆತ ಯಾ ಆಕೆಗೆ ಒಟ್ಟು ಸಮಾಜದಲ್ಲಿ ಇರುವ ಸ್ಥಾನಮಾನ ಕುಂದುಕೊರತೆಗಳ ಬಗ್ಗೆ ಹಾಗೇಕೆ ಇವೆ ಎಂಬ ವಾಸ್ತವಿಕ ಮನವರಿಕೆ ಅರಿಯುವವರೆಗೆ ಸಾಮಾಜಿಕ ಪರಿವರ್ತನೆ ಅಸಾಧ್ಯ.

ತನ್ನ ಸಮಾಜದ ಹಿರಿಮೆ, ಗರಿಮೆಗಳ ಐತಿಹಾಸಿಕ ದಾಖಲೆಗಳ ತಿಳುವಳಿಕೆಯೊಂದಿಗೆ ಅಭಿಮಾನವೂ ಸ್ಫುರಿಸಬೇಕು. ಮತ್ತೊಬ್ಬರಿಗೆ ಅವಲಂಬಿತವಾಗದೆ ಸ್ವಂತ ಕಾಲಿನಲ್ಲಿ ನಿಂತು ಸ್ವಂತ ವಿಚಾರ ಆಸಕ್ತಿಯನ್ನು ರೂಢಿಸಿಕೊಳ್ಳಬೇಕು. ನಮ್ಮ ಕ್ರಿಯೆಗಳು ನಮಗೂ ಇತರರಿಗೂ ಸಂತೋಷವನ್ನು ನೀಡುವಂತಾಗಬೇಕು ಎನ್ನುವುದು ಗುರುಗಳ ಶೈಕ್ಷಣಿಕ ಕ್ರಾಂತಿಯ ಮಾನಸಿಕ ಪೂರ್ವಾ ಯೋಜಾನ ಸಂದೇಶ.

# ಶಿಕ್ಷಣ ಅಂಕಗಳಿಸಲು ಕಲಿಸಿ, ಬದುಕನ್ನು ಕಲಿಸುವಲ್ಲಿ ವಿಫಲವಾಯಿತೇ?

✍ ರಾಕೇಶ್ ಕೆ.ಯಸ್,
ಉಪನ್ಯಾಸಕರು, ರಸಾಯನಿಕ ಶಾಸ್ತ್ರ ವಿಭಾಗ
ಸೂರಜ್ ಪದವಿ ಪೂರ್ವ ಕಾಲೇಜು, ಮುಡಿಪು,

**ಹುಟ್ಟುವ ಪ್ರತಿ ಮಗುವು ಜಗತ್ತನ್ನಾಳುವ ಶಕ್ತಿ ಹೊಂದಿರುತ್ತದೆ ಎಂದು ಹೇಳುತ್ತಾರೆ. ಆದರೆ ಅದು ಸಾಧ್ಯವಾಗಬೇಕಾದರೆ ಆ ಮಗುವಿನಲ್ಲಿ ಸಾಧಿಸುವ ಛಲ ಇರಬೇಕು ಮತ್ತು ಆ ಮಗುವಿಗೆ ಮಾರ್ಗದರ್ಶನ ನೀಡುವ ಪ್ರೇರೆಪಿಸುವ ಗುರು ಇರಬೇಕು.**

ಹೌದು, ಮೇಲಿನ ಮಾತನ್ನು ಅರ್ಥೈಸಿದಾಗ ಅದು ನಿಜ ಅನಿಸುತ್ತದೆ. ನಾರಾಯಣ ಗುರುಗಳು ಹೇಳಿದಂತೆ "ಸಂಘಟನೆಯಿಂದ ಬಲಿಷ್ಟರಾಗಿರಿ ವಿದ್ಯೆಯಿಂದ ಸ್ವತಂತ್ರ್ಯರಾಗಿರಿ' ಎಂಬ ಸಂದೇಶ ಇಲ್ಲಿ ಉಲ್ಲೇಖನೀಯ. ಆದರೆ ಇವತ್ತು ಎಷ್ಟು ವಿದ್ಯಾರ್ಥಿಗಳು ವಿದ್ಯೆಯಿಂದ ಸ್ವತಂತ್ರ್ಯರಾಗಿದ್ದಾರೆ? ಇವತ್ತಿನ ಶಿಕ್ಷಣದಿಂದ ವಿದ್ಯಾರ್ಥಿಗಳು ಬದುಕನ್ನು ಕಟ್ಟಿಕೊಳ್ಳುವಲ್ಲಿ ಸಫಲರಾಗಿದ್ದಾರೆಯೇ? ಇವತ್ತಿನ ಶಿಕ್ಷಣ ಭವಿಷ್ಯ ಮತ್ತು ಬದುಕಿಗೆ ಸಂಬಂಧವನ್ನು ಕಲ್ಪಿಸಿದೆಯೇ? ಜೀವನದ ಮೂಲಭೂತ ಹಕ್ಕು ಆದಂತಹ ಶಿಕ್ಷಣವೇ ಬದುಕನ್ನು ನಿರ್ಮಿಸಲು ಸಾಧ್ಯವಾಗದಿದ್ದರೆ ಅದು ಎಂತಹ ಶಿಕ್ಷಣ? ಪರೀಕ್ಷೆಗೆ ನಿಗದಿಯಾದ ಪೂರ್ಣಾಂಕಗಳು ಅಥವಾ ಕೇವಲ ಒಂದೆರಡು ಅಂಕಗಳ ನಷ್ಟದೊಂದಿಗೆ ಅಂಕಗಳನ್ನು ಪಡೆದು ನಂಬಲಸಾಧ್ಯ ಸಾಧನೆ ಮಾಡುವ ಬದುಕಿನ ವಿವಿಧ ಸವಾಲುಗಳನ್ನು ಎದುರಿಸಲು ನಾಲ್ಕು ಜನರೊಂದಿಗೆ ಬೆರೆಯಲು ಇತರರೊಂದಿಗೆ ಹೊಂದಿಕೊಂಡು ಬದುಕಲು ಕಲೆ, ಸಾಹಿತ್ಯಗಳು ತಮ್ಮನ್ನು ತೊಡಗಿಸಿಕೊಳ್ಳಲು ಸಾಕೆ? ಉದ್ಯೋಗ ಸಿಗದೆ ಹೋದಾಗ ಜೀವನ ನಿರ್ವಹಿಸಲು ಕಷ್ಟವಾದಾಗ ಹಲವರು ತಡವರಿಸುತ್ತಾರೆ. ನೂರಾರು ಒತ್ತಡಗಳಿಗೆ ಸಿಲುಕಿ ಆತಂಕ ಖಿನ್ನತೆಗಳಂತಹ ಮಾನಸಿಕ ಸಮಸ್ಯೆಗಳಿಗೆ ತುತ್ತಾಗುತ್ತಾರೆ. ಕೆಲವರು ಆತ್ಮಹತ್ಯೆಯಲ್ಲಿ ಶಾಶ್ವತ ಪರಿಹಾರ ಕಾಣುತ್ತಾರೆ.

ಹುಟ್ಟುವ ಪ್ರತಿ ಮಗುವು ಜಗತ್ತನ್ನಾಳುವ ಶಕ್ತಿ ಹೊಂದಿರುತ್ತದೆ ಎಂದು ಹೇಳುತ್ತಾರೆ. ಆದರೆ ಅದು ಸಾಧ್ಯವಾಗಬೇಕಾದರೆ ಆ ಮಗುವಿನಲ್ಲಿ ಸಾಧಿಸುವ ಛಲ ಇರಬೇಕು ಮತ್ತು ಆ ಮಗುವಿಗೆ ಮಾರ್ಗದರ್ಶನ ನೀಡುವ ಪ್ರೇರೆಪಿಸುವ ಗುರು ಇರಬೇಕು. ಇದಕ್ಕೆ ಇತಿಹಾಸದಲ್ಲಿ ಎರಡು ಪ್ರಸಿದ್ಧ ಉದಾಹರಣೆಗಳನ್ನು ನೋಡಬಹುದು. ಒಂದನೇಯದು ಮಹತ್ವಾಕಾಂಕ್ಷಿ ಚಂದ್ರಗುಪ್ತ ಚಾಣಕ್ಯನ ಮಾರ್ಗದರ್ಶನದಲ್ಲಿ ಮೌರ್ಯ ಸಾಮ್ರಾಜ್ಯ ಸ್ಥಾಪನೆ. ಎರಡನೇಯದು ಅಲೆಕ್ಸಾಂಡರ್ ಅರಿಸ್ಟಾಟಲ್‌ನ ಮಾರ್ಗದರ್ಶನದಲ್ಲಿ ತನ್ನ ಸಾಮ್ರಾಜ್ಯವನ್ನು ಜಗತ್ತಿನಾದ್ಯಂತ ಸ್ಥಾಪಿಸಿದಂತೆ ಅಲೆಕ್ಸಾಂಡರ್ ದಿಗ್ರೇಟ್ ಎಂಬ ಹೆಸರಿನಿಂದ ಇತಿಹಾಸದಲ್ಲಿ ಚಿರಸ್ಥಾಯಿಯಾಗಿದ್ದಾನೆ.

ಉದ್ಯೋಗ ಸಿಕ್ಕಿದರೆ ಮಾತ್ರ ಶಿಕ್ಷಣ ಇಲ್ಲವಾದಲ್ಲಿ ಅಂತಹ ಶಿಕ್ಷಣ ವ್ಯರ್ಥ ಎನ್ನುವಂತಹದು ಪ್ರಸ್ತುತ ಎಲ್ಲರ ಮನದಲ್ಲಿ ಮೂಡಿದೆ. ಮಗುವಿನಲ್ಲಿರುವ ಸುಪ್ತವಾದ ಪ್ರತಿಭೆಯನ್ನು ಹೊರಗೆಳೆಯಲು ಸಾಧ್ಯವಾಗದಿದ್ದರೆ ಮತ್ತು ಸ್ವಾವಲಂಬನೆ ಬದುಕು ಕಲಿಸದ ಇಂದಿನ ಶಿಕ್ಷಣ ನಿಜವಾದ ಗುಣಾತ್ಮಕ ಶಿಕ್ಷಣವಲ್ಲ.

ಪದವಿಪೂರ್ವ ಶಿಕ್ಷಣ ಪಡೆದ ನಂತರ ಉನ್ನತ ಶಿಕ್ಷಣ ಪಡೆಯಬೇಕು ನಿಜ, ಆದರೆ ಶಿಕ್ಷಣ ಮುಂದುವರಿಸಲು ಆಗದಿದ್ದರೆ ಅಥವಾ ಮುಂದೆ ಉದ್ಯೋಗ ಸಿಗದೇ ಹೋದಾಗ ಅವನಿಗೆ ಸ್ವಂತ ಕಾಲ ಮೇಲೆ ನಿಲ್ಲಲು ಸಾಧ್ಯವಾಗದಿದ್ದರೆ ಅವನು ಅಥವಾ ಅವಳು ಕಲಿತ ವಿದ್ಯೆಯಿಂದ ಸಂಪಾದಿಸಿದ ಪ್ರಮಾಣಪತ್ರದಿಂದ ಏನು ಪ್ರಯೋಜನ? ಅಂಕಗಳನ್ನು ಪಡೆಯುವ ವಿದ್ಯಾರ್ಥಿಗಳು ಅಂಕ ಪಡೆಯುವಲ್ಲಿ ಸೀಮಿತವಾಗಿರುತ್ತಾರೆ. ಆದರೆ ಬದುಕಲು ಕಲಿತಿರುವುದಿಲ್ಲ, ಸವಾಲುಗಳನ್ನು ಎದುರಿಸಲು ಕಲಿತಿರುವುದಿಲ್ಲ, ಜೀವನ ಮೌಲ್ಯಗಳನ್ನು ಕಲಿತಿರುವುದಿಲ್ಲ. ಏಕೆಂದರೆ ಪ್ರಸ್ತುತ ನಮಗೆ ಸಿಗುತ್ತಿರುವ ಶಿಕ್ಷಣವು ಅಂಕಗಳು ಮೇಲೆ ಅಂಕಿ ಅಂಶಗಳ ಮೇಲೆ ನಿಂತಂತಿದೆ.

ಇವತ್ತಿನ ಶಾಲೆಗಳಲ್ಲಿ ಸಿಗುತ್ತಿರುವ ಶಿಕ್ಷಣ ಪದ್ಧತಿ ಬದಲಾಗಬೇಕು. ಸೃಜನಶೀಲತೆ ಮತ್ತು ಕೌಶಲವನ್ನು ಬೆಳೆಸುವಂತಹ ವಿಷಯಗಳನ್ನು ಶಿಕ್ಷಣ ಸಂಸ್ಥೆಗಳು ಬೋಧಿಸಬೇಕು. ಪ್ರೌಢಶಾಲೆಯಲ್ಲಿ ಕಲಿತ ಸೃಜನಶೀಲ ವಿಷಯವನ್ನು ಉನ್ನತ ಶಿಕ್ಷಣದ ಹಂತದಲ್ಲಿ ಅದನ್ನು ಪ್ರಧಾನ ಐಚ್ಛಿಕ ವಿಷಯವನ್ನಾಗಿ ಕಲಿಯಲು ಅವಕಾಶ ನೀಡಬೇಕು. ಇದರಿಂದ ಹೊರೆ ರಹಿತ ಶಿಕ್ಷಣ, ಗುಣಮಟ್ಟದ ಶಿಕ್ಷಣದ ಪರಿಕಲ್ಪನೆಗಳು ಸಾಕ್ಷಾತ್ಕಾರಗೊಳ್ಳುತ್ತದೆ.

# ಅಂತರ್‌ರಾಷ್ಟ್ರೀಯ ಬಾಲ ಪ್ರತಿಭೆ ಚೈತ್ರ

**ಪ್ರತಿಭೆ ಪ್ರದರ್ಶನಕ್ಕಿಟ್ಟಷ್ಟೂ ಬೆಳಗುತ್ತದೆ ಎಂಬಂತೆ, ಚೈತ್ರ ತನ್ನ ಆಸಕ್ತಿಯ ಕರಾಟೆಯಲ್ಲಿ ಪುಣೆ, ಬೆಂಗಳೂರು, ಚಿಕ್ಕಮಗಳೂರು, ದೆಹಲಿ, ತ್ರಿಶೂರ್, ಕೊಯಂಬತ್ತೂರು, ತರೀಕೆರೆ, ಹೈದರಾಬಾದ್, ಉಡುಪಿ ಮಂಗಳೂರು, ಕಾರ್ಕಳ, ಕುಂದಾಪುರ, ಚೆನ್ನೈ ಮತ್ತಿತರೆಡೆಗಳಲ್ಲಿ ನಡೆದ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದು ಈವರೆಗೆ ಸುಮಾರು 50ಕ್ಕೂ ಮಿಕ್ಕಿ ಚಿನ್ನ, 43ಕ್ಕೂ ಅಧಿಕ ಬೆಳ್ಳಿ, 35ರಷ್ಟು ಕಂಚಿನ ಪದಕಗಳನ್ನು ಬಾಚಿಕೊಂಡಿದ್ದಾಳೆ. ಇದೀಗ ಅಂತಾರಾಷ್ಟ್ರೀಯ ಮಟ್ಟದಲ್ಲಿನ ಸಾಧನೆಗೆ ಅರ್ಹವಾಗಿರುವ ಚೈತ್ರಾ ಪೊಲೀಸು ಇಲಾಖೆ ಸಹಿತ ಹಲವೆಡೆ ಮಾಡಿದ ಸಾಧನೆಗಳಿಗೆ ಅಭಿನಂದನೆ, ಸನ್ಮಾನಗಳನ್ನು ಪಡೆದಿದ್ದಾಳೆ.**



ದೇಶದಾದ್ಯಂತ ಜನಪ್ರಿಯವಾದ ಆತ್ಮರಕ್ಷಣೆಗಾಗಿ ಕಲಿತ ಕರಾಟೆಯಲ್ಲಿ ಸತತ ಪರಿಶ್ರಮದ ಹಾದಿ ತುಳಿದು ಅಂತರಾಷ್ಟ್ರೀಯ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಪ್ರಥಮ (ಚಿನ್ನ) ಮತ್ತು ಕಂಚಿನ ಪದಕವನ್ನು ಬೇಟೆಯಾಡಿದ ಉಡುಪಿ ಜಿಲ್ಲೆಯ ಎರ್ಮಾಳು ತೆಂಕದ ಚೈತ್ರಾ ಎ. ಸಾಲ್ಯಾನ್ ಅವರದ್ದು ಅಪೂರ್ವ ಸಾಧನೆಯಾಗಿದೆ.

ಬಹಳಷ್ಟು ವಿಶಿಷ್ಟ ರೀತಿಯಲ್ಲಿ ಎದುರಾಳಿಯನ್ನು ಎದುರಿಸುವ ಪ್ರವೀಣೆಯಾಗಿರುವ ಈಗೆ ಶಾಸ್ತ್ರೀಯವಾದ ಚಲನವಲನಗಳನ್ನು ಮೀರಿ ಎದುರಾಳಿಗೆ ನೀಡುವ ನಿಖರತೆಯುಳ್ಳ ಪರಿಣಾಮಕಾರಿ ಹೊಡೆತಗಳೇ ಈಕೆಯ ಗೆಲುವಿಗೆ ಕಾರಣವಾಗಿದೆ. ಪದಕಗಳ ಬೇಟೆಯಿಂದ ಅತ್ಯಾನಂದದ ಭಾವಾವೇಶವನ್ನು ವ್ಯಕ್ತಪಡಿಸುತ್ತಿರುವ ಈಕೆ ಇದೇ ಪರಿಶ್ರಮವನ್ನು ಮುಂದುವರೆಸಿ ಮುಂದಕ್ಕೆ 2020ರಲ್ಲಿ ನಡೆಯಲಿರುವ ಒಲಂಪಿಕ್ ಕ್ರೀಡೆಯಲ್ಲಿ ಪ್ರವೇಶ ಪಡೆಯಲಿದೆ ಎನ್ನಲಾಗುವ ಕರಾಟೆಯ ಸ್ಪರ್ಧೆಯಲ್ಲಿ ಪಾಲ್ಗೊಂಡು ಭಾರತವನ್ನು ಮತ್ತೊಮ್ಮೆ ಪ್ರತಿನಿಧಿಸುವ ಹೆಬ್ಬಯಕೆ ಈ ಬಾಲ ಪ್ರತಿಭೆಯದ್ದು.

ಈಕೆ ಪಿ.ಯು.ಸಿಯಲ್ಲಿ 90% ಹೆಚ್ಚು ಅಂಕ ಪಡೆದು ಉತ್ತೀರ್ಣಳಾಗಿದ್ದಾಳೆ. ಈಕೆಗೆ ಆತ್ಮಶಕ್ತಿ ಬಳಗದ ಅಭಿನಂದನೆಗಳು.


NETHRAVATHI
COACHING INSTITUTE
COACHING CLASSES FOR
B.E.
BE : Engg MATHS & Other Subjects of E&C / E&E / CIVIL/CS/IS/AERONAUTICAL BRANCHES
MECH/ CIVIL/AUTO Branches
DIPLOMA Engg:
MATHS & Other Subjects.
WE ALSO CONDUCT CLASSES FOR
B.COM/B.B.A
Regular & Correspondence Courses
I / II PUC: COMMERCE/PCMB
Tuitions: 8th & SSLC (MATHS & SCIENCE CBSE/STATE
COACHING FOR BANK CLERK / PO EXMAS.
III FLOOR, SHALIMAR COMPLEX, (Near Ganesh Medicals),
KANKANADY, MANGALDRE
0824-2438353, 9731909365, 9538472202

Dilip Kumar
Ph : 0824-4265879
Mob : 9448215360





WIN SPORTS
THE COMPLETE FITNESS SHOP
Distributors for :
Imported Company fitness & Gym Equipments, "Quality Sports" Nutritions (Indian & U.S.A. Products)
Email: dilip_winsports@yahoo.co.in
Shiva Ganesh Complex,
Opp Omega Hospital
Pumpwell, Mangalore - 575002

# ತಾಂತ್ರಿಕ ಶಿಕ್ಷಣದತ್ತ ಯುವಜನತೆ

ಶ್ರೀ ಸದಾನಂದ ಪೂಜಾರಿ, ನಿವೃತ್ತ ಪ್ರಾಚಾರ್ಯರು
ಶ್ರೀ.ಧ.ಮ. ಐಟಿಐ, ವೇಣೂರು

**1978ರಲ್ಲಿ ಮಂಗಳೂರಿನ ಕರ್ನಾಟಕ ಪಾಲಿಟೆಕ್ನಿಕ್ ಎಲೆಕ್ಟ್ರಿಕಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ ಪದವಿ, ಮಂಗಳೂರಿನ ಯುನಿಯನ್ ಹೋಂ ಪ್ರಾಡಕ್ಟ್‌ನಲ್ಲಿ ನಾಲ್ಕು ವರ್ಷ ಎಲೆಕ್ಟ್ರಿಕಲ್ ನಿರ್ವಹಣೆ ವಿಭಾಗದಲ್ಲಿ ಉದ್ಯೋಗದಲ್ಲಿ ಸೇವೆ ಸಲ್ಲಿಸಿದ್ದಾರೆ. ಈ ಮಧ್ಯೆ 1982ರಲ್ಲಿ ಕರ್ನಾಟಕ ಪಾಲಿಟೆಕ್ನಿಕ್‌ನಲ್ಲಿ ರೆಫ್ರಿಜರೇಶನ್-ಏರ್ ಕಂಡಿಶನ್ ವಿಷಯದಲ್ಲಿ ಒಂದು ವರ್ಷದ ಪೋಸ್ಟ್ ಡಿಪ್ಲೋಮಾ ವ್ಯಾಸಂಗ, 1983ರಿಂದ 1986ರ ವರೆಗೆ ಕುದ್ರೋಳಿಯ ನಾರಾಯಣ ಗುರು ಐಟಿಐಯಲ್ಲಿ ಬೋಧನಾ ವೃತ್ತಿ. 1986ರಿಂದ ವೇಣೂರಿನ ಶ್ರೀ ಧ.ಮ.ಐಟಿಐಯಲ್ಲಿ ಬೋಧಕರಾಗಿ ಸೇರಿ ತರಬೇತಿ ಅಧಿಕಾರಿಯಾಗಿ ಭಡ್ತಿಕೊಂಡು, 1986ರ ವರೆಗೆ ಪ್ರಾಚಾರ್ಯರಾಗಿ ಕರ್ತವ್ಯ ನಿರ್ವಹಿಸಿ 2018ನೇ ಮಾರ್ಚ್ ತಿಂಗಳಿನಲ್ಲಿ ಸೇವೆಯಿಂದ ನಿವೃತ್ತಿ ಪಡೆದಿದ್ದಾರೆ.**

**ಎಸ್**.ಎಸ್.ಎಲ್.ಸಿ. / ಪಿ.ಯು.ಸಿ. ಉತ್ತೀರ್ಣರಾದ ವಿದ್ಯಾರ್ಥಿಗಳು ಮಾತ್ರ ನಿಶ್ಚಿತ ಗುರಿಯೊಂದಿಗೆ ತಾವು ಇಚ್ಚಿಸಿದ ಭವಿಷ್ಯದ ಶಿಕ್ಷಣವನ್ನು ಆಯ್ಕೆ ಮಾಡಿ ಕೊಳ್ಳುತ್ತಾರೆ. ಆದರೆ ಕೆಲವು ಬಹುತೇಕ ಬಡ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಹಾಗೂ ಮಾಹಿತಿಯ ಕೊರತೆಯಿಂದಾಗಿ ಅವರ ಆಸಕ್ತಿಯ ಸೂಕ್ತ ಶಿಕ್ಷಣವನ್ನು ಆಯ್ಕೆ



ಮಾಡಿಕೊಳ್ಳುವಲ್ಲಿ ವಿಫಲರಾಗುತ್ತಾರೆ. ಈ ನಿಟ್ಟಿನಲ್ಲಿ ಜಾಗತಿಕವಾಗಿ ಉದ್ಯೋಗದ ಭರವಸೆ ಇರುವ ತಾಂತ್ರಿಕ ಶಿಕ್ಷಣದ ಬಗ್ಗೆ ಮಾಹಿತಿ ಮತ್ತು ಪ್ರೇರಣೆ ನೀಡುವುದೇ ಈ ಲೇಖನದ ಉದ್ದೇಶ.

ಹತ್ತೊಂಬತ್ತನೇ ಶತಮಾನದ ಕೈಗಾರಿಕಾ ಕ್ರಾಂತಿ ನಮ್ಮ ಜೀವನ ಕ್ರಮವನ್ನು ಯಾಂತ್ರೀಕರಣ ಗೊಳಿಸಿದೆ. ಎಲ್ಲಾ ರಂಗಗಳಲ್ಲಿ ನಾವು ಯಂತ್ರಗಳನ್ನು ಅವಲಂಭಿಸುವುದು ಅನಿವಾರ್ಯವಾಗಿದೆ. ವಿದ್ಯುತ್ ಉತ್ಪಾದನೆ, ವಿತರಣೆ, ಮೂಲಭೂತ ಸೌಕರ್ಯ ನಿರ್ಮಾಣ, ಕೃಷಿ ಆಹಾರ ಸಂಸ್ಕರಣೆ, ನೀರು ಮತ್ತು ಇಂಧನ ಸರಬರಾಜು, ಪ್ರಯಾಣ ಮತ್ತು ಸರಕು ಸಾಗಾಣಿಕೆ, ಆರೋಗ್ಯ ಸೇವೆ, ಪ್ರವಾಸೋಧ್ಯಮ, ಶಿಕ್ಷಣ, ಮಾಹಿತಿ, ಸಂಪರ್ಕ, ಮನೋರಂಜನೆ, ಮುದ್ರಣ, ವೈಜ್ಞಾನಿಕ ಸಂಶೋಧನೆ ಇತ್ಯಾದಿ ಎಲ್ಲಾ ಕ್ಷೇತ್ರಗಳಲ್ಲಿ ತಂತ್ರಜ್ಞಾನ ಅಧುನೀಕರಣ ಗೊಳ್ಳುತ್ತಿದೆ. ಹಾಗಾಗಿ ಈ ಕ್ಷೇತ್ರಗಳಲ್ಲಿನ ಯಂತ್ರಗಳ ಉತ್ಪಾದನೆ, ಚಾಲನೆ ದುರಸ್ತಿ ಹಾಗೂ ಮೇಲ್ವಿಚಾರಣೆ ಬಗ್ಗೆ ತಾಂತ್ರಿಕ ಜ್ಞಾನ ಇಂದಿನ ಜನಾಂಗಕ್ಕೆ ಅನಿವಾರ್ಯವಾಗಿದೆ.

ಈ ದೃಷ್ಟಿಯಿಂದ ತಾಂತ್ರಿಕ ಶಿಕ್ಷಣವನ್ನು ಆಯ್ಕೆ ಮಾಡ ಬಯಸುವ ವಿದ್ಯಾರ್ಥಿಗಳಿಗೆ, ಐಟಿಐ, ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಲಭ್ಯವಿರುವ ವಿವಿಧ ತಾಂತ್ರಿಕ ಕೋರ್ಸುಗಳ ಮಾಹಿತಿಯನ್ನು ನೀಡಲಾಗಿದೆ.

**ನಮ್ಮ ರಾಜ್ಯದಲ್ಲಿ ತಾಂತ್ರಿಕ ಶಿಕ್ಷಣ ನೀಡುವ ಮೂರು ಸ್ತರದ ಶಿಕ್ಷಣ ಸಂಸ್ಥೆಗಳಾದ ಐಟಿಐಗಳು, ಪಾಲಿಟೆಕ್ನಿಕ್ ಗಳು ಮತ್ತು ಇಂಜಿನಿಯರಿಂಗ್ ಕಾಲೇಜುಗಳು [ಸರ್ಕಾರಿ, ಅನುದಾನಿತ ಮತ್ತು ಖಾಸಗಿ] ಸಾಕಷ್ಟು ಸಂಖ್ಯೆಯಲ್ಲಿ ಸ್ಥಾಪನೆಯಾಗಿದೆ. ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಎಲ್ಲಾ ವರ್ಗದ ವಿದ್ಯಾರ್ಥಿಗಳು ತಮ್ಮ ಆಸಕ್ತಿ ಹಾಗೂ ಅರ್ಹತೆಗೆ ಅನುಗುಣವಾಗಿ ಸೂಕ್ತವಾದ ವೃತ್ತಿ ವಿಭಾಗವನ್ನು ಆಯ್ಕೆ ಮಾಡಿ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳಬಹುದು.**

ಐಟಿಐಗಳಲ್ಲಿ ಒಂದು ವರ್ಷದ ಹಾಗೂ ಎರಡು ವರ್ಷಗಳ ಅವಧಿಯ ವಿವಿಧತಾಂತ್ರಿಕ ಹಾಗೂ ತಾಂತ್ರಿಕೇತರ ವೃತ್ತಿಗಳಲ್ಲಿ ತರಬೇತಿಯನ್ನು ಪೂರೈಸಿದವರಿಗೆ ರಾಷ್ಟ್ರೀಯ ಪ್ರಮಾಣ ಪತ್ರವನ್ನು ನೀಡಲಾಗುತ್ತಿದೆ. ಪಾಲಿಟೆಕ್ನಿಕ್ ಗಳಲ್ಲಿ ವಿವಿಧ ಕೋರ್ಸುಗಳಲ್ಲಿ ಮೂರು ವರ್ಷಗಳ ಡಿಪ್ಲೋಮಾ ಶಿಕ್ಷಣ ನೀಡಲಾಗುತ್ತಿದೆ.

ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಿವಿಧ ತಾಂತ್ರಿಕ ವಿಭಾಗಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ಶಿಕ್ಷಣವನ್ನು

→→→

→→→
ನೀಡಲಾಗುತ್ತಿದೆ.ತಾಂತ್ರಿಕ ಪರಿಣಿತರಿಗೆ ದೇಶ ವಿದೇಶಗಳ ಕೈಗಾರಿಕಾ ಘಟಕಗಳಲ್ಲಿ ಉದ್ಯೋಗಾವಕಾಶಗಳು ಹೇರಳವಾಗಿದೆ. ಅಲ್ಲದೇ ಎಲ್ಲಾ ವಿಭಾಗಗಳಲ್ಲಿ ಸ್ವ–ಉದ್ಯೋಗಕ್ಕೂ ವಿಪುಲ ಅವಕಾಶಗಳಿವೆ.

**ವಿದ್ಯುತ್ ಶಕ್ತಿ ವಿಭಾಗ:** ವಿದ್ಯುತ್ ತಾಂತ್ರಿಕತೆಯಲ್ಲಿ ಉತ್ಪಾದನೆ, ಸಾಗಾಟ, ವಿತರಣೆ ಹಾಗೂ ಉಪಯೋಗ ಎಂಬ ನಾಲ್ಕು ಹಂತಗಳಿವೆ. ಆಧುನಿಕ ಜೀವನದಲ್ಲಿ ವಿದ್ಯುತ್ ಚಾಲಿತಯಂತ್ರ ಹಾಗೂ ಉಪಕರಣಗಳನ್ನೇ ಉಪಯೋಗಿಸಲಾಗುತ್ತಿದೆ. ಇವುಗಳ ಚಾಲನೆ ನಿರ್ವಹಣೆ ಹಾಗೂ ದುರಸ್ತಿಗಾಗಿ ನುರಿತ ತಂತ್ರಜ್ಞರ ಅವಶ್ಯಕತೆ ಬಹಳಷ್ಟಿದೆ. ಅಲ್ಲದೆ ವಯರಿಂಗ್, ವೈಂಡಿಂಗ್ ಇತ್ಯಾದಿ ಕೆಲಸ ನಿರ್ವಹಿಸಲು ತರಬೇತಿ ಪಡೆದ ಕಾರ್ಮಿಕರ ಕೊರತೆ ಇದೆ. ಹಾಗಾಗಿ ವಿದ್ಯಾರ್ಥಿಗಳಿಗೆ ಎಲೆಕ್ಟ್ರಿಕಲ್ ವೃತ್ತಿ ವಿಭಾಗಗಳಲ್ಲಿ ಉತ್ತಮ ಅವಕಾಶಗಳಿವೆ. ಡಿಪ್ಲೋಮಾ, ಪದವಿ ಮತ್ತು ಐಟಿಐಗಳಲ್ಲಿ ಎಲೆಕ್ಟ್ರಿಶಿಯನ್, ವೈರ್ ಮೆನ್, ಎಲೆಕ್ಟ್ರೋಪ್ಲೇಟರ್ ಇತ್ಯಾದಿ ವೃತ್ತಿ ವಿಭಾಗಳಿವೆ.

**ಮೆಕ್ಯಾನಿಕಲ್ ವಿಭಾಗ** : ವಿವಿಧ ಯಂತ್ರೋಪಕರಣಗಳು ಮತ್ತು ಅವುಗಳ ವಿನ್ಯಾಸ, ಜೋಡಣೆ ಹಾಗೂ ನಿರ್ವಹಣೆ ಬಗ್ಗೆ ವಿವಿಧ ಹಂತದ ತಾಂತ್ರಿಕ ಶಿಕ್ಷಣದ ಅವಕಾಶಗಳಿವೆ. ಐಟಿಐಗಳಲ್ಲಿ ಫಿಟ್ಟರ್, ಟರ್ನರ್, ಮೆಶಿನಿಸ್ಟ್, ಮೆಕ್ಯಾನಿಕಲ್ ಡ್ರಾಫ್ಟ್ಸ್ ಮೆನ್, ಮೆಕಾಟ್ರಾನಿಕ್ಸ್, ಇತ್ಯಾದಿ ವೃತ್ತಿ ವಿಭಾಗಗಳಿವೆ. ಮೆಕ್ಯಾನಿಕಲ್ ವಿಭಾಗ ಕೈಗಾರಿಕಾ ಘಟಕಗಳಲ್ಲಿ ಮೂಲ ಸೌಕರ್ಯವನ್ನು ಕಲ್ಪಿಸುವ ಅತ್ಯಾವಶ್ಯಕ ವಿಭಾಗವಾದುದರಿಂದ ಹೆಚ್ಚಿನ ಬೇಡಿಕೆಯನ್ನು ಪಡೆದಿದೆ.

**ಆಟೋಮೊಬೈಲ್ ವಿಭಾಗ :** ಜಗತ್ತಿನಲ್ಲಿ ಪ್ರಸ್ತುತ: ಅತಿ ವೇಗವಾಗಿ ಬೆಳವಣಿಗೆ ಹೊಂದುತ್ತಿರುವ ಕ್ಷೇತ್ರವೆಂದರೆ ಅಟೋ ಮೊಬೈಲ್ ವಿಭಾಗವಾಗಿದೆ. ದಿನಂಪ್ರತಿ ನವೀನ ಮಾದರಿಯ ವಾಹನಗಳು ನೂತನ ತಂತ್ರಜ್ಞಾನದೊಂದಿಗೆ ಮಾರುಕಟ್ಟೆಯನ್ನು ಪ್ರವೇಶಿಸುತ್ತಿವೆ. ಪ್ರಯಾಣ ಹಾಗೂ ಸರಕು ಸಾಗಾಟಕ್ಕಾಗಿ ಉಪಯೋಗಿಸುವ ನಾನಾ ಸಾಮರ್ಥ್ಯ ಹಾಗೂ ಮಾದರಿಯ ವಾಹನಗಳು ಬರುತ್ತಿವೆ. ಇದು ನಿರಂತರ ಬೆಳವಣಿಗೆ ಯಾಗುತ್ತಿರುವ ಕ್ಷೇತ್ರವಾದುದರಿಂದ ನುರಿತ ತಾಂತ್ರಿಕ ತಂತ್ರಜ್ಞರಿಗೆ ಬೇಡಿಕೆ ಅವಧಿಯ ಮೆಕ್ಯಾನಿಕಲ್ ಡಿಸೇಲ್, ಅಟೋ ಎಲೆಕ್ಟ್ರಿಶಿಯನ್, ದ್ವಿಚಕ್ರ, ತ್ರಿಚಕ್ರ ಹಾಗೂ ಮಧ್ಯಮ, ಭಾರಿ ಗಾತ್ರದ ವಾಹನ ದುರಸ್ತಿ ನಿರ್ವಹಣೆ ಬಗ್ಗೆ ತರಬೇತಿ ಪಡೆಯ ಬಹುದು.

**ಎಲೆಕ್ಟ್ರಾನಿಕ್ಸ್ ಮತ್ತುಕಂಪ್ಯೂಟರ ವಿಭಾಗ :** ಕೈಗಾರಿಕೆ ಹಾಗೂ ನಮ್ಮ ಜೀವನದಲ್ಲಿ ಆಧುನಿಕ ತಂತ್ರಜ್ಞಾನದ ಬೆಳವಣಿಗೆಗೆ ಎಲೆಕ್ಟ್ರಾನಿಕ್ಸ್ ಹಾಗೂ ಕಂಪ್ಯೂಟರ್ ಕ್ಷೇತ್ರ ಮಹತ್ವದ ಕೊಡುಗೆಯನ್ನು ನೀಡಿದೆ. ಯಂತ್ರಗಳಿಗೆ ಸ್ವಯಂಚಾಲಿತ ವ್ಯವಸ್ಥೆ ಹಾಗೂ ಯಂತ್ರ ಮಾನವನ ತಂತ್ರಜ್ಞಾನದ ಬೆಳವಣಿಗೆಯಲ್ಲಿ ಈ ಎರಡು ವಿಭಾಗಗಳು ಅನಿವಾರ್ಯವಾಗಿದೆ. ಕೈಗಾರಿಕಾ ಘಟಕಗಳಲ್ಲಿ ಅಪಾಯಕಾರಿ ಕೆಲಸಗಳನ್ನು ನಿರ್ವಹಿಸಲು ಈಗ ಯಂತ್ರಮಾನವರನ್ನು ಬಳಸಿ ಕೊಳ್ಳುತ್ತಾರೆ. ಬಹು ಬೇಡಿಕೆಯ ಸಾಫ್ಟ್ ವೇರ್ ಉದ್ಯಮಕ್ಕೆ ಕಂಪ್ಯೂಟರ್ ತಜ್ಞರ ಅವಶ್ಯಕತೆ ಸಾಕಷ್ಟಿದೆ. ಈ ವಿಭಾಗದಲ್ಲಿ ಇದೀಗ ಬೆಳೆಯುತ್ತಿರುವ ಕ್ಷೇತ್ರಗಳೆಂದರೆ ಮೆಡಿಕಲ್ಎಲೆಕ್ಟ್ರೋನಿಕ್ಸ್ ಮತ್ತು ಮೆಕಟ್ರಾನಿಕ್ಸ್, ಬೌದ್ಧಿಕ ಸಾಮರ್ಥ್ಯ ತೀಕ್ಷ್ಣವಾದ ವಿದ್ಯಾರ್ಥಿಗಳು ಕಂಪ್ಯೂಟರ್ ಮತ್ತು ಎಲೆಕ್ಟ್ರಾನಿಕ್ಸ್ ವಿಷಯಗಳನ್ನು ಆರಿಸಿ ಕೊಳ್ಳಬಹುದು.

**ಸಿವಿಲ್ ವಿಭಾಗ :** ಕಟ್ಟಡ ವಿನ್ಯಾಸ ಹಾಗೂ ನಿರ್ಮಾಣ ಸಂಬಂಧಿಸಿದ ಸಿವಿಲ್ ಇಂಜಿನಿಯರಿಂಗ್ ವಿಭಾಗ ಪ್ರಸ್ತುತ: ತೀವ್ರಗತಿಯಲ್ಲಿ ಬೆಳವಣಿಗೆ ಹೊಂದುತ್ತಿರುವ ಕ್ಷೇತ್ರವಾಗಿದೆ. ಈ ವಿಭಾಗದಲ್ಲಿ ಪದವಿ, ಡಿಪ್ಲೋಮಾಗಳಲ್ಲದೆ ಐಟಿಐಗಳಲ್ಲಿ ಸಿವಿಲ್ ಡ್ರಾಫ್ಟ್ಸ್‌ಮನ್ ಮತ್ತು ಅರ್ಕಿಟೆಕ್ಚರಲ್ ಅಸಿಸ್ಟೆಂಟ್ ವೃತ್ತಿಗಳಲ್ಲಿ ತರಬೇತಿಯನ್ನು ಪಡೆಯ ಬಹುದು. ಸಿವಿಲ್ ವಿಭಾಗದಲ್ಲಿ ಕಟ್ಟಡಗಳ ವಿನ್ಯಾಸ, ನೀಲ ನಕ್ಷೆ, ಕಟ್ಟಡ ನಿರ್ಮಾಣ ಹಾಗೂ ನಿರ್ವಹಣೆ ಇತ್ಯಾದಿ ಕ್ಷೇತ್ರಗಳಿಗೆ ಮಾನವ ಸಂಪನ್ಮೂಲದ ಅವಶ್ಯಕತೆ ಅಧಿಕವಾಗಿದೆ. ದೇಶ ವಿದೇಶಗಳಲ್ಲಿ ಪ್ರಸುತ: ತೀವ್ರವಾಗಿ ಬೆಳೆಯುತ್ತಿರುವ ಮೂಲ ಸೌಕರ್ಯ ಅಭಿವೃದ್ಧಿಯ ಅಂಗಗಳಾದ ರಸ್ತೆ, ಸೇತುವೆ, ಆಣೆಕಟ್ಟು ಹಾಗೂ ಬಹುಮಹಡಿ ಕಟ್ಟಡಗಳ ನಿರ್ಮಾಣದಲ್ಲಿ ನುರಿತ ತಂತ್ರಜ್ಞರಿಗೆ ಬೇಡಿಕೆ ಬೆಳೆಯುತ್ತಲೆ ಇರುತ್ತದೆ.

**ಶೀತಲೀಕರಣ ಮತ್ತು ಹವಾ ನಿಯಂತ್ರಣ** : ಒಂದು ಕಾಲದಲ್ಲಿ ಐಷಾರಾಮಿ ಎಂದು ಪರಿಗಣಿಸಲ್ಪಟ್ಟ ಶೀತಲೀಕರಣ ಮತ್ತು ಹವಾನಿಯಂತ್ರಣ ಉಪಕರಣಗಳು ಈಗ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಅನಿವಾರ್ಯವೆನಿಸಿದೆ. ಆಧುನಕ ಬದುಕಿನ ಎಲ್ಲಾ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಈ ವಿಭಾಗವನ್ನು ಅವಲಂಭಿಸಬೇಕಾಗಿದೆ. ಶೀಘ್ರ ಹಾಳಾಗುವ ತರಕಾರಿ, ಮೀನು, ಮಾಂಸ, ಹಾಲು, ಮೊಟ್ಟೆ ಇತ್ಯಾದಿ ಆಹಾರ ಪದಾರ್ಥಗಳ ಸಂಸ್ಕರಣೆ, ಸಾಗಾಟ, ಶೇಖರಣೆ ಮಂಜುಗಡ್ಡೆ ಉತ್ಪಾದನೆ, ಸೂಕ್ತ ಯಂತ್ರೋಪಕರಣಗಳ ನಿರ್ವಹಣೆ, ವೈಜ್ಞಾನಿಕ ಸಂಶೋಧನೆ ಇತ್ಯಾದಿ ಜೀವನಾವಶ್ಯಕ ಕ್ಷೇತ್ರಗಳಲ್ಲಿ ಶೀತಲೀಕರಣ ಅತ್ಯವಶ್ಯಕವಾಗಿದೆ. ಹವಾ ನಿಯಂತ್ರಣದ ಉಪಯೋಗ ಕೇವಲ ತಂಪು ವಾತಾವರಣ ಕಲ್ಪಿಸುವುದಕ್ಕೆ ಸೀಮಿತವಾಗದೆ ಹಲವಾರು ಆಸ್ಪತ್ರೆ, ಹೋಟೆಲ್, ವಾಹನ ಹಾಗೂ ಕೈಗಾರಿಕೆಗಳಲ್ಲಿ ಅನಿವಾರ್ಯವಾಗಿದೆ. ಜಾಗತಿಕ ತಾಪಮಾನ ಏರುತ್ತಿರುವ ಈ ದಿನಗಳಲ್ಲಿ ಹವಾನಿಯಂತ್ರಣ ಕ್ಷೇತ್ರವು ಶೀಘ್ರ ಗತಿಯಲ್ಲಿ ಬೆಳವಣಿಗೆ ಹೊಂದುತ್ತಿದೆ. ಈ ಕ್ಷೇತ್ರದಲ್ಲಿ ತರಬೇತಿ ಪಡೆದು ವಿದ್ಯಾರ್ಥಿಗಳಿಗೆ ದೇಶದಲ್ಲಿ ಮಾತ್ರವಲ್ಲದೆ ಗಲ್ಫ್ ರಾಷ್ಟ್ರಗಳಲ್ಲಿ ಉಜ್ವಲ ಅವಕಾಶಗಳಿವೆ.

**ಇತರ ವೃತ್ತಿಗಳು** : ನಮ್ಮಜೀವನದ ನಿತ್ಯೋಪಯೋಗಿ ಹಾಗೂ ಕೈಗಾರಿಕೆಗಳಲ್ಲಿ ಅವಶ್ಯವಾಗಿರುವ ಇತರ ವೃತ್ತಿ ವಿಭಾಗಗಳೆಂದರೆ ವೆಲ್ಡರ್, ಪ್ಲಂಬಿಂಗ್, ಕಾರ್ಪೆಂಟರ್, ಪೈಂಟಿಂಗ್, ಕಟ್ಟಡ ನಿರ್ಮಾಣ, ಮುದ್ರಣ ಇತ್ಯಾದಿ. ಈ ವಿಭಾಗಗಳಲ್ಲಿ ತರಬೇತಿ ಪಡೆದು ನುರಿತ ತಂತ್ರಜ್ಞರಿಗೆ ಸ್ಥಳೀಯವಾಗಿ ಹಾಗೂ ವಿದೇಶಗಳಲ್ಲಿ ಹೆಚ್ಚಿನ ಉದ್ಯೋಗದ ಅವಕಾಶಗಳಿವೆ. ಇತ್ತೀಚೆಗೆ ಅತೀ ಶೀಘ್ರವಾಗಿ ಅಧುನೀಕರಣ ಗೊಳ್ಳುತ್ತಿರುವ ಮುದ್ರಣ ಕ್ಷೇತ್ರವು ಸಾಫ್ಟ್‌ವೇರ್ ಕ್ಷೇತ್ರಕ್ಕಿಂತ ಮೂರು ಪಟ್ಟು ಬೆಳವಣಿಗೆ ಹೊಂದಿದೆ. ಈ ವಿಭಾಗಗಳಲ್ಲಿ ಸ್ವ–ಉದ್ಯೋಗಕ್ಕೂ ವಿಪುಲ ಅವಕಾಶಗಳಿವೆ. ●

NOW
**MIFSE** in collaboration with
**NSDC**, Govt. of India

**ADMISSION OPEN** 2019-20

**Mifse**®
AN ISO 9001:2015 CERTIFIED INSTITUTION

**N·S·D·C**
National
Skill Development
Corporation

Courses Offered in
**Diploma | P.G Diploma | Advanced Diploma**

- Affiliated to Mangalore University
- Affiliated to University of Mysore
- Affiliated to Bangalore University
- Affiliated to Kuvempu University

2nd Floor, CeePee Complex
Pumpwell, Mangalore-575002
**Ph: 0824-2433933 / 2434933**
**Mob:7022289933**
www.mifse.com

# SHREYA ENTERPRISES

**Contact:**
**All TYPES OF PRINTING SOLUTIONS**
**Regal Plaza, Opp: Campco Ltd, Mission Street,**
**Mangalore-575001 Ph: 0824-426544**




**Domestic & International**
**Courier & Cargo Services**

## SHREYA TRAVEL AGENCIES

**Flight Ticket, (Domestic & International)**
**Train Ticket, Bus Ticket**
**Mob: 7022967740, 9448529959**
**Ph : 0824-426544**

**Rao& Rao Circle, Mangalore-1 Mob: 7022967740**

# ಶ್ರೀ ಕೃಷ್ಣಪ್ಪ ಗೌಡ, ಪಡ್ಡಂಬೈಲ್

# ಶಿಕ್ಷಣ ಇಲಾಖೆಯ ಹಸಿರು ಕ್ರಾಂತಿಯ ಭಗೀರಥ



**ಸು**ಳ್ಯ ತಾಲೂಕಿನ ಅಜ್ಜಾವರ ಗ್ರಾಮದ ಪ್ರಸಿದ್ಧ 'ಪಡ್ಡಂಬೈಲ್' ಮನೆತನದ ದಿ. ಅಣ್ಣಯ್ಯ ಗೌಡ ಮತ್ತು ಬಾಲಕ್ಕ ದಂಪತಿಯ ಪುತ್ರರಾಗಿದ್ದು ಇವರು ಮೂಲತಃ ಕೃಷಿ ಕುಟುಂಬದಿಂದ ಬಂದವರಾಗಿರುತ್ತಾರೆ. ಅಜ್ಜಾವರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಪ್ರಾರಂಭಿಸಿ ಮುಂದೆ ಸರಕಾರಿ ಪದವಿ ಪೂರ್ವ ಕಾಲೇಜು ಸುಳ್ಯ ಇಲ್ಲಿ ವಿದ್ಯಾಭ್ಯಾಸವನ್ನು ಪೂರೈಸಿಕೊಂಡು ಉದ್ಯೋಗ ನಿಮಿತ್ತ ಮಂಗಳೂರಿಗೆ ಆಗಮಿಸಿ ಇಲ್ಲಿ ಖಾಸಗಿ ಸಂಸ್ಥೆಯಲ್ಲಿ ವೃತ್ತಿ ಜೀವನವನ್ನು ಪ್ರಾರಂಭಿಸಿ ಸುಳ್ಯ ತಾಲೂಕು ಇಲ್ಲಿ ನೌಕರಿ ಪಡೆದರು 3 ವರ್ಷಗಳ ಬಳಿಕ ಮಂಗಳೂರಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಗೆ ವರ್ಗಾವಣೆಗೊಂಡು, ನಂತರ ಆಗಿನ ದ.ಕ. ಜಿಲ್ಲಾ ಪರಿಷತ್ತಿಗೆ ಸೇರಿಕೊಂಡರು. ಮುಂದೆ ಸರಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದಲ್ಲಿ 13 ವರ್ಷ ಸೇವೆ ಸಲ್ಲಿಸಿ 2013 ರ ಜೂನ್‌ನಿಂದ ಪುನಃ ಈಗನ ದ.ಕ. ಜಿಲ್ಲಾ ಪಂಚಾಯತ್‌ನಲ್ಲಿ 3 ವರ್ಷಗಳನ್ನು ಪೂರೈಸಿಕೊಂಡು ಪ್ರಸ್ತುತ

ಬದುಕಿನಲ್ಲಿ ಛಲವೊಂದಿದ್ದರೆ ಸೋಲು–ಗೆಲುವುಗಳು ಮುಖ್ಯವೇ ಅಲ್ಲ. ಆದರೆ ಈ ಸಾಧನೆಗೆ ಆತ ಕಂಡುಕೊಳ್ಳಬೇಕಾದ ಮಾರ್ಗವೇ ಸಮಯ ಪ್ರಜ್ಞೆ, ತಾಳ್ಮೆ, ನಿಷ್ಠೆ, ಪ್ರಾಮಾಣಿಕತೆ, ಪರಿಶ್ರಮ. ಇವುಗಳನ್ನು ಜೀವನದಲ್ಲಿ ಮೈಗೂಡಿಸಿಕೊಂಡರೆ ಪ್ರತಿಫಲದ ಜೊತೆಗೆ ಸಂತೃಪ್ತಿಯೂ ನಿಶ್ಚಿತ. ಇಂತಹ ದಾರಿಯಲ್ಲಿ ನಡೆದ ಪಡ್ಡಂಬೈಲ್ ಕೃಷ್ಣಪ್ಪ ಗೌಡರ ಜೀವನ ಮಾರ್ಗ ನಮಗೆಲ್ಲ ದಾರಿದೀಪವಾಗಬೇಕು.

ಸರಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹಳ್ಳಿ ಬಿಟ್ಟು ಪಟ್ಟಣ ಸೇರಿದರೂ ಮಣ್ಣಿನ ಬಾಂಧವ್ಯ ಉಳಿಸಲು ಗೌಡರು ಮರೆಯಲಿಲ್ಲ. ತನ್ನ ಮನೆಯ ಸುತ್ತಮುತ್ತಲಿನ ಸ್ಥಳ ಸಾಕಾಗದಿದ್ದಾಗ ಏನು ಮಾಡುವುದು ಎಂದು ಆಲೋಚಿಸಿದ ತಕ್ಷಣ ಕಣ್ಮುಂದೆ ಸಿಕ್ಕಿದ್ದು ತಾರಸಿ ಜಾಗ. ಇಲ್ಲಿ ಕೃಷಿಯನ್ನು ನಮ್ಮ ಜೀವನದಿ ಅವಿಭಾಜ್ಯ ಅಂಗವಾಗಿ ಸ್ವೀಕರಿಸಿ ಈಗ ತಮ್ಮ ದಿನಚರಿಯನ್ನು ಕೃಷಿಯ ಚಟುವಟಿಕೆಯಿಂದ ಆರಂಭಿಸಿದ್ದಾರೆ.

24ನೇ ಪುಟಕ್ಕೆ

# ಶತಾಯುಷಿ ಅಪ್ಪು ಪೂಜಾರಿ ರೆಂಜಾಳ



**ಕಾ**ರ್ಕಳ ತಾಲೂಕಿನ ರೆಂಜಾಳ ಗ್ರಾಮದ ಕೆಳಗಿನ ಬ್ರಾಣಬೆಟ್ಟು ಒಂದನೇ ಬಾರಿಕೆ ಮನೆ ಗುರಿಕಾರ, ಗಡಿಕಾರ, ಪಶುನಾಟಿ ವೈದ್ಯ, ಗ್ರಾಮದ ಹಿರಿಯ ಬಿಲ್ಲವ ಮುಖಂಡ, ಸಮಾಜದ ನೇತಾರ, ಶತಾಯುಷಿ ಅಪ್ಪು ಪೂಜಾರಿ ರೆಂಜಾಳ (110) ಇವರು ಇತ್ತೀಚೆಗೆ ನಿಧನ ಹೊಂದಿದರು. 5ನೇ ತರಗತಿವರೆಗೆ ಆ ಕಾಲದಲ್ಲಿಶಿಕ್ಷಣ ಪಡೆದ ಇವರು ಇತ್ತೀಚಿನವರೆಗೂ ಕನ್ನಡಕ ಧರಿಸದೆ ಪಂಚಾಂಗ ಓದಿ ನೆರೆಕರೆಯವರಿಗೆ ತಿಥಿ ಗತಿ ಕಾಲಮಾನ, ಗಳಿಗೆಗಳನ್ನು ಕರಾರುವಕ್ಕಾಗಿ ಹೇಳುತ್ತಿದ್ದರು. ಜೀವಮಾನದಲ್ಲೆಂದೂ ಪಾದರಕ್ಷೆ ಧರಿಸದೆ ನಡೆದಾಡುತ್ತಾ ಆರೋಗ್ಯದ ಗುಟ್ಟನ್ನು ಸಾರುತ್ತಿದ್ದರು. ಇತ್ತೀಚಿನವರೆಗೂ ಅಕ್ಕಿ ಮುಡಿ ಕಟ್ಟುತ್ತಿದ್ದರು. ನಿಧನಪೂರ್ವದವರೆಗೂ ತೆಂಗಿನ ಸೋಗೆ ಹೆಣೆಯುತ್ತಿದ್ದರು. ಹಿತಮಿತ ಭಾಷಿ ಆಹಾರಿಯಾಗಿದ್ದರು. ಗಡಿಕಾರರಿಗೆ ಆದರ್ಶ ಪ್ರಾಯರಾಗಿದ್ದರು. ಸಾವಯುವ ಕೃಷಿಕರಾಗಿ ಹೆಸರುಗಳಿಸಿದ್ದರು. ಇತ್ತೀಚಿನವರೆಗೂ ತರಕಾರಿ ಬೆಳೆಸುತ್ತಿದ್ದರು. ಕಿರಿಯರಿಗೆ ಮಾರ್ಗದರ್ಶಕರಾಗಿದ್ದರು. ಇವರಿಗೆ ಊರ ಬಿಲ್ಲವ ಗ್ರಾಮ ಸಮಿತಿ ಸಾಧಕನ ನೆಲೆಯಲ್ಲಿ ಸನ್ಮಾನಿಸಿತ್ತು. ದೈವ ದೇವಸ್ಥಾನಗಳಿಗೆ ಕೊಡುಗೈ ದಾನಿಯಾಗಿ, ಸುಬ್ರಹ್ಮಣ್ಯ ಶ್ರೀಗಳಿಂದ ಅಭಿನಂದನೆಗೆ ಪಾತ್ರರಾಗಿದ್ದರು. ಶ್ರೀಯುತರು ಪತ್ನಿ ಶ್ರೀಮತಿ ಕಮಲ ಪೂಜಾರ್ತಿ ಹಾಗೆಯೇ ಬಜ್ಪೆ ಸುಂಕದಕಟ್ಟೆ ಶ್ರೀ ನಿರಂಜನ ಸ್ವಾಮಿ ಪ್ರಥಮ ದರ್ಜೆ ಕಾಲೇಜಿನ ಗ್ರಂಥಪಾಲಕರೂ, ಆತ್ಮಶಕ್ತಿ ತ್ರೈಮಾಸಿಕ ಪತ್ರಿಕೆಯ ಸಹಾಯಕ ಸಂಪಾದಕರೂ ಆದ ಶ್ರೀ ವಿಶ್ವನಾಥ ಪೂಜಾರಿ ರೆಂಜಾಳ ಸಹಿತ ಆರು ಮಂದಿ ಪುತ್ರರು, ನಾಲ್ಕು ಮಂದಿ ಪುತ್ರಿಯರು 28 ಮೊಮ್ಮಕ್ಕಳು 22 ಮರಿ ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

23ನೇ ಪುಟದಿಂದ

**ಶ್ರೀ ಕೃಷ್ಣಪ್ಪ ಗೌಡ, ಪಡ್ಡಂಬೈಲ್ ಶಿಕ್ಷಣ...**



ಬೆಳಗಿನ ಜಾವ ಎದ್ದು ಕಛೇರಿಗೆ ತೆರಳುವವರೆಗೂ ತಾರಸಿ ತೋಟದ ಸಸಿಗಳ ಆರೈಕೆ ಮುಗಿಸಿ ಬೆಳಿಗ್ಗೆ ಕಛೇರಿ ಕೆಲಸದಲ್ಲಿ ತೊಡಗಿ ಸಂಜೆ ಹಿಂದಿರುಗಿದ ನಂತರವೂ ತಾರಸಿ ಕೆಲಸದಲ್ಲಿ ಸಂತೃಪ್ತಿ ಪಡುವ ಕರ್ಮಯೋಗಿಯಾಗಿದ್ದಾರೆ. ತಮ್ಮ ಈ ಸಾಧನೆಯನ್ನು ವೀಕ್ಷಿಸಲು ದೂರ ದೂರದ ಊರುಗಳಿಂದ ವೀಕ್ಷಕರು ಬರುತ್ತಿರುವುದು, ಟಿ.ವಿ. ಚಾನಲ್, ರೇಡಿಯೋ, ಪತ್ರಿಕೆಗಳಲ್ಲಿ ಅವರ ಬಗ್ಗೆ ಮೆಚ್ಚುಗೆಯ ಮಾತುಗಳು ಸಂದರ್ಶನ ವರದಿಗಳು ಪ್ರಕಟವಾದಾಗಲೆಲ್ಲ ಇಡೀ ಜಿಲ್ಲೆಯ ಜನತೆ ಹೆಮ್ಮೆ ಪಡುವಂತಾಗಿದೆ. ಹವ್ಯಾಸದಿಂದ ದೇಹಕ್ಕೆ ವ್ಯಾಯಾಮ, ಮನಸ್ಸಿಗೆ ಮುದ ನೀಡುತ್ತದೆ. ಮನೆಮಂದಿಗೂ ಸಂತಸ ನೀಡುತ್ತಿದೆ ಎಂಬ ಕೃಷ್ಣಪ್ಪ ಗೌಡರ ಅನುಭವ ಇದೀಗ ಜಿಲ್ಲೆ, ರಾಜ್ಯ, ಅಂತರಾಜ್ಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲೂ ಪ್ರೇರಣೆಯಾಗಿದೆ.

ಅವರ ಪತ್ನಿ ಶ್ರೀಮತಿ ಮೀನಾಕ್ಷಿ ಕೆ. ಗೌಡ, ಸರಕಾರಿ ಆರೋಗ್ಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪುತ್ರಿ ಕುಮಾರಿ ಗಹನಾ ಹಾಗೂ ಪುತ್ರ ಅಮೋದ್ ಕುಮಾರ್ ಮಂಗಳೂರಿನ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಪದವಿ ವ್ಯಾಸಂಗ ಮಾಡಿಕೊಂಡಿದ್ದಾರೆ. ಇವರೆಲ್ಲರಿಗೂ ಕೃಷಿಯ ಬಗ್ಗೆ ಒಲವು ಮೂಡಿಸಿ ಅವರೂ ಈ ಕಾಯಕದಲ್ಲಿ ಕೈಜೋಡಿಸುವಂತೆ ಮಾಡಿರುವುದು ವಿಶೇಷ. ತಾರಸಿ ಮತ್ತು ಮನೆಯ ಸುತ್ತಮುತ್ತ ಒಂದಿಂಚೂ ಜಾಗ ಬಿಡದೆ ಹಣ್ಣಿನ ಗಿಡಗಳನ್ನು ತರ ತರದ ತರಕಾರಿಗಳನ್ನು, ಹಾಗೇನೇ ಬಣ್ಣ ಬಣ್ಣದ ಹೂಗಳನ್ನು ವಿಶೇಷವಾಗಿ ವಿಧ ವಿಧದ ಔಷಧಿ ಗಿಡಗಳನ್ನು ಬೆಳೆಸಿದ್ದಾರೆ. ಇವೆಲ್ಲವನ್ನೂ ಕೀಟ ನಾಶಕ, ರಸಗೊಬ್ಬರಗಳನ್ನೂ ಬಳಸದೆ ಬೆಳೆಸಿ ಮಾದರಿ ಸಾವಯವ ಕೃಷಿಕ ಎನಿಸಿಕೊಂಡಿದ್ದಾರೆ. ಕೃಷಿ ಇಲಾಖೆ ರೋಟರಿ ಕ್ಲಬ್ ಲಯನ್ಸ್ ಕ್ಲಬ್ ಇನ್ನರ್ ವೀಲ್ ಹಾಗೂ ಲಯನೆಸ್ ಸಂಸ್ಥೆಗಳು ಹಾಗೂ ಇನ್ನಿತರ ಸಂಘ ಸಂಸ್ಥೆಗಳು ಗೌಡರನ್ನು ಸನ್ಮಾನಿಸಿವೆ. ರೇಡಿಯೋದಲ್ಲಿ ಅವರ ಸಂದರ್ಶನ ಲಕ್ಷಾಂತರ ಶ್ರೋತೃಗಳನ್ನು ತಲುಪಿದೆ. ಟಿ.ವಿ. ಚಾನಲ್‌ಗಳು, ವಿವಿಧ ಪತ್ರಿಕೆಗಳು ಮುಕ್ತ ಹಾಗೂ ಕಾಂಕ್ರೀಟ್ ಕಾಡಲ್ಲಿ ಹಸಿರನ್ನು ಅರಳಿಸಿದ ಭಗೀರಥ ಎಂದೆಲ್ಲಾ ಶ್ಲಾಘಿಸಿವೆ.

ಇತ್ತೀಚೆಗೆ ಈ ತಾರಸಿ ತೋಟಕ್ಕೆ ಜರ್ಮನ್ ದೇಶದ ವಿದ್ಯಾರ್ಥಿ ಮಾಕ್ಸಿಮ್ ಸಂದರ್ಶಿಸಿ ಸಂದರ್ಶನಕಾರರಿಗೆ ಇರಿಸಿದ ಡೈರಿಯಲ್ಲಿ "ಅಮೇಜಿಂಗ್ ಎಕ್ಸ್‌ಪೀರಿಯನ್ಸ್" ಎಂದು ಉಲ್ಲೇಖಿಸಿರುವುದು ಗೌಡರ ತಾರಸಿ ತೋಟಕ್ಕೆ ಇನ್ನಷ್ಟು ಮೆರಗು ನೀಡಿದಂತಾಗಿದೆ.

ನಗರದ ಕಾಂಕ್ರೀಟ್ ಕಾಡಲ್ಲಿ ಹಸಿರು ನಳನಳಿಸುವಂತೆ ಮಾಡಿರುವ ಕೃಷ್ಣಪ್ಪ ಗೌಡರು ಓರ್ವ ಹೃದಯವಂತ ಸಾವಯವ ಕೃಷಿಕ ತನ್ನ ತಾರಸಿನಲ್ಲಿ ಬೆಳೆದ ಹಣ್ಣು ತರಕಾರಿಗಳನ್ನು ತಾವು ಬಳಸುವುದಕ್ಕಿಂತ ಹೆಚ್ಚು ನೆರೆ–ಹೊರೆಯವರಿಗೆ ಮತ್ತು ಸ್ನೇಹಿತರಿಗೆ ಹಂಚಿ ತೃಪ್ತಿ ಪಡೆದುಕೊಳ್ಳುತ್ತಾರೆ. ತನ್ನ ಕೈ ತೋಟವನ್ನು ಕಾಣಲು ಬಂದ ಸಂದರ್ಶಕರು, ಮಾಧ್ಯಮದವರು ಮತ್ತು ಶಾಲಾ ಮಕ್ಕಳನ್ನು ನಗುಮೊಗದಿಂದ ಎದುರುಗೊಂಡು ಅವರನ್ನು ಉಪಚರಿಸಿ ವಿವಿಧ ಮಾಹಿತಿ ನೀಡುತ್ತಾರೆ. ಮಾಜಿ ಪ್ರಧಾನ ಮಂತ್ರಿ ಶ್ರೀ ಎಚ್.ಡಿ. ದೇವೇಗೌಡ ಅವರು ಶ್ರೀ ಕೃಷ್ಣಪ್ಪ ಗೌಡ ಅವರು ತಾರಸಿ ಕೃಷಿಯ ಸೇವೆ ಹಾಗೂ ಸಾಧನೆಯನ್ನು ಗಮನಿಸಿ ಸನ್ಮಾನ ಮಾಡಿರುತ್ತಾರೆ. ಸಂಪನ್ಮೂಲ ವ್ಯಕ್ತಿಯಾಗಿ ದ.ಕ.ಜಿಲ್ಲೆ ಅಲ್ಲದೆ ಹೊರ ಜಿಲ್ಲೆಯಾದ ಬಳ್ಳಾರಿ, ಹೊಸಪೇಟೆ ತಾಲೂಕು, 2017–18ನೇ ಸಾಲಿನ ಸಖಿ ಟ್ರಸ್ಟ್ ಕಿರ್ಲೋಸ್ಕರ್ ಲೇಡೀಸ್ ಕ್ಲಬ್ ಇವರ ಜಂಟಿ ಆಶ್ರಯದಲ್ಲಿ ಹಸಿರು ಹೆಜ್ಜೆ ಸುಸ್ಥಿರ ಕೃಷಿ ತರಬೇತಿಯ ಉದ್ಘಾಟನೆಯನ್ನು ಮತ್ತು ತಾರಸಿ ತೋಟದ ಪ್ರಾತ್ಯಕ್ಷಿಕೆಗೆ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿರುವುದು ಇವರ ಮುಡಿಗೆ ಸಂದ ಇನ್ನೊಂದು ಗರಿ. ಇದಲ್ಲದೆ ಇವರು ಇತರ ಜಿಲ್ಲೆಗಳಲ್ಲಿ ಕೂಡಾ ತಾರಸಿ ತೋಟ ಮತ್ತು ಸಾವಯವ ಕೃಷಿಯ ಬಗ್ಗೆ ಮಾರ್ಗದರ್ಶನ ನೀಡುತ್ತಾರೆ.

ಇಷ್ಟಿದ್ದರೂ ಓರ್ವ ನಿಷ್ಠಾವಂತ ಸರಕಾರಿ ಶಿಕ್ಷಣ ಇಲಾಖೆಯ ನೌಕರರಾಗಿ ಶ್ರದ್ಧೆಯಿಂದ ತನ್ನ ವೃತ್ತಿಯನ್ನು ನಿರ್ವಹಿಸಿ ಬಿಡುವಿನ ವೇಳೆ ತಾರಸಿನಲ್ಲಿ ದುಡಿಯುವ ಕಾಯಕದಿಂದ ಸಹೋದ್ಯೋಗಿಗಳು ಹಾಗೂ ಮೇಲಾಧಿಕಾರಿಯವರ ಮೆಚ್ಚುಗೆಗೂ ಪಾತ್ರರಾಗಿದ್ದಾರೆ. ಕರ್ನಾಟಕ ಸರಕಾರ ಕೃಷಿ ಇಲಾಖೆ ದ.ಕ.ಜಿಲ್ಲೆ ಮಂಗಳೂರು ಇವರು 2014–15ನೇ ಸಾಲಿನಲ್ಲಿ ತಾರಸಿಯಲ್ಲಿ ಬತ್ತದ ಬೇಸಾಯ ಮಾಡಿರುವುದನ್ನು ಗುರುತಿಸಿ ಇವರನ್ನು ಸನ್ಮಾನಿಸಿರುತ್ತಾರೆ. ಕರ್ನಾಟಕ ಸರಕಾರ ದ.ಕ.ಜಿಲ್ಲೆ ಪಂಚಾಯತ್ ತೋಟಗಾರಿಕೆ ಇಲಾಖೆಯವರು ಫಲ ಪುಷ್ಪ ಪ್ರದರ್ಶನದಲ್ಲಿ ಪ್ರಶಸ್ತಿ ನೀಡಿರುತ್ತಾರೆ.

ಇತ್ತೀಚೆಗೆ ಆರ್ಯಭಟ ಸಾಂಸ್ಕೃತಿಕ ಸಂಸ್ಥೆ (ರಿ) ಬೆಂಗಳೂರು ಇವರು 42ನೇ ವಾರ್ಷಿಕ ಆರ್ಯಭಟ ಅಂತರಾಷ್ಟ್ರೀಯ ಪ್ರಶಸ್ತಿ



→→→



ಪ್ರದಾನ ಸಮಾರಂಭದಲ್ಲಿ ರವೀಂದ್ರ ಕಲಾಕ್ಷೇತ್ರ ಬೆಂಗಳೂರು ಇಲ್ಲಿ 2016 "ಆರ್ಯಭಟ ಅಂತರಾಷ್ಟ್ರೀಯ" ಪ್ರಶಸ್ತಿಯನ್ನು ಸ್ವೀಕರಿಸಿರುತ್ತಾರೆ. ನಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಜಿಲ್ಲಾಡಳಿತ, ದ.ಕ. ಜಿಲ್ಲೆ, ಮಂಗಳೂರು ಮಹಾನಗರ ಪಾಲಿಕೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಇದರ ಸಂಯುಕ್ತ ಆಶ್ರಯದಲ್ಲಿ ಪ್ರಕೃತಿ ಸಂರಕ್ಷಣಾ ದಿನಾಚರಣೆ ಮತ್ತು ಜಿಲ್ಲಾ ಪರಿಸರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ 2017ರ 'ಪರಿಸರ ಪ್ರಶಸ್ತಿ'ಯನ್ನು ಸ್ವೀಕರಿಸಿರುತ್ತಾರೆ ಅಲ್ಲದೆ ಜ್ಞಾನಮಂದಾರ ಅಕಾಡಮಿ ಬೆಂಗಳೂರು ಇದರ ಬೆಳ್ಳಿ ಹಬ್ಬದ ನೆನಪಿನಲ್ಲಿ "ಸಮಾಜರತ್ನ" ರಾಜ್ಯ ಪ್ರಶಸ್ತಿ 2017 ಪ್ರಶಸ್ತಿಯನ್ನು ಸ್ವೀಕರಿಸಿರುತ್ತಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ಮಂಜುನಾಥ ಎಜ್ಯುಕೇಷನ್ ಟ್ರಸ್ಟ್ (ರಿ), ಹೃದಯವಾಹಿನಿ – ಕರ್ನಾಟಕ, ಮಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ "ಕರ್ನಾಟಕ ಸೌರಭ" ಪ್ರಶಸ್ತಿ 2017 ಮತ್ತು ಯುಗಪುರುಷ ಕಿನ್ನಿಗೋಳಿ ಇವರು "ಯುಗಪುರುಷ ರಾಜ್ಯೋತ್ಸವ ಪ್ರಶಸ್ತಿ" ಜ್ಞಾನಮಂದಾರ ಅಕಾಡಮಿ ಬೆಂಗಳೂರು ಇದರ 7ನೇ ಅಖಿಲ ಭಾರತ ಕನ್ನಡ ವಚನ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮ್ಮೇಳನ 2018, ಬಿಲ್ಲವ ಭವನ್, ಸಾಂತಕ್ರೂಜ್(ಪ) ಮುಂಬೈ ಇಲ್ಲಿಯ ಸಮಾರಂಭದಲ್ಲಿ ರಾಷ್ಟ್ರೀಯ "ಬಸವ ಶ್ರೀ" ಪ್ರಶಸ್ತಿ 2018 ಪ್ರಶಸ್ತಿಯನ್ನು ನೀಡಿ ಗೌರವಿಸಿರುತ್ತಾರೆ. ದಿನಾಂಕ 28.01.2018ರಂದು ಕಾಂತಬಾರೆ–ಬೂದಬಾರೆ ಇವರ ಜನ್ಮ ಕ್ಷೇತ್ರ ಕೊಲ್ಲೂರು ಮುಲ್ಕಿ ಇಲ್ಲಿ ನಡೆದ ಕೆ. ಸೋಮಪ್ಪ ಸುವರ್ಣರ 6 ನೇ ವರ್ಷದ ಸಂಸ್ಮರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕೊಡಲ್ಪಡುವ ಶಿಕ್ಷಣ, ಕೃಷಿ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಇವರನ್ನು ಗುರುತಿಸಿ ತಾರಸಿಯ ಬತ್ತದ ಕೃಷಿಯ ಸಾಧನೆಗಾಗಿ ಕೆ. ಸೋಮಪ್ಪ ಸುವರ್ಣರ ಪ್ರಶಸ್ತಿಯನ್ನು ನೀಡಿ ಗೌರವಿಸಿರುತ್ತಾರೆ. ಕರ್ನಾಟಕ ಸರಕಾರ, ದ.ಕ ಜಿಲ್ಲಾ ಪಂಚಾಯತ್ ತೋಟಗಾರಿಕಾ ಇಲಾಕೆ ಹಾಗೂ ಸಿರಿ ತೋಟಗಾರಿಕೆ ಸಂಘ (ರಿ) ದ.ಕ.ಜಿಲ್ಲೆ ಮಂಗಳೂರು ದಿನಾಂಕ 29.01.2018 ರಂದು ಕದ್ರಿ ಉದ್ಯಾನವನದಲ್ಲಿ ಜರಗಿದ ಫಲ ಪುಷ್ಪ ಪ್ರದರ್ಶನ 2018 ಹಮ್ಮಿಕೊಂಡ ತಾರಸಿ ತೋಟ ಸ್ಪರ್ಧೆಯಲ್ಲಿ ಶ್ರೀಯುತ ಗೌಡರನ್ನು ಗೌರವಿಸಿ ಪ್ರಶಸ್ತಿಯನ್ನು ನೀಡಲಾಯಿತು. ಕಥಾಬಿಂದು ಸಾಹಿತ್ಯ ಸಾಂಸ್ಕೃತಿಕ ವೇದಿಗೆ ಹಾಗೂ ಮಂಜುನಾಥ ಎಜ್ಯುಕೇಶನ್ ಟ್ರಸ್ಟ್ (ರಿ) ಮಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಶ್ರೀ ಕೃಷ್ಣ ಮಠದ ರಾಜಾಂಗಣ ಉಡುಪಿ, ದಿನಾಂಕ. 27.02.2018ರಂದು ಪರ್ಯಾಯ ಪೂಜ್ಯ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀ ಪಾದಂಗಳವರು ಪಲಿಮಾರು ಮಠ ಉಡುಪಿ ಇವರು "ಕರ್ನಾಟಕ ಚೇತನ ಪ್ರಶಸ್ತಿ" ನೀಡಿ ಗೌರವಿಸಿರುತ್ತಾರೆ. ದಿನಾಂಕ.15.04.2018 ರಂದು Indo-Nepal Friendship Economical Growth & Social Development ಕಾಠ್ಮಂಡು ನೇಪಾಲ ಇವರು "Rising and talented personalities Award" ನ್ನು Kathmandu (Nepal) ಇಲ್ಲಿ ಪ್ರಶಸ್ತಿ ನೀಡಿ ಗೌರವಿಸಿರುತ್ತಾರೆ, ಇತ್ತೀಚೆಗೆ ತುಮಕೂರು ಶ್ರೀ ಸಿದ್ದಗಂಗಾ ಮಠದಲ್ಲಿ ಶತಾಯುಷಿ ಡಾ। ಶ್ರೀ ಶ್ರೀ ಶಿವಕುಮಾರ್ ಸ್ವಾಮಿಗಳಿಂದ ಸನ್ಮಾನವನ್ನು ಸ್ವೀಕರಿಸಿರುತ್ತಾರೆ. India Virtual Academy for peace and Education ಇದರ ಘಟಕೋತ್ಸವದಲ್ಲಿ ಮೈಸೂರಿನ ಹ್ಯೂಮನ್ ರೈಟ್ಸ್ ಕಮಿಟಿ ವಿಂಗ್‌ನ ಅಧ್ಯಕ್ಷೆ ಡಾ। ಎ. ಪುಷ್ಪಾ ಅಯ್ಯಂಗಾರ್‌ರವರಿಂದ ಗೌರವ ಡಾಕ್ಟರೇಟ್ ಪದವಿಯನ್ನು ಪಡೆದಿರುತ್ತಾರೆ. ಕಥಾ ಬಿಂದು ಸಾಂಸ್ಕೃತಿಕೋತ್ಸವ – ಡಿಸೆಂಬರ್ 2018 ರಲ್ಲಿ ಕುಂಜತ್‌ಬೈಲ್, ಮಂಗಳೂರು ಇಲ್ಲಿ ನಡೆದ ಸಮಾರಂಭದಲ್ಲಿ ಗಣ್ಯರ ಸಮ್ಮುಖದಲ್ಲಿ "ಕರಾವಳಿ ರತ್ನ" ಪ್ರಶಸ್ತಿಯನ್ನು ಪಡೆದಿರುತ್ತಾರೆ. ತುಳುನಾಡ ರಕ್ಷಣಾ ವೇದಿಕೆ (ರಿ) ಇದರ ದಶ ಸಂಭ್ರಮದ ಅಂಗವಾಗಿ ಮಂಗಳೂರಿನ ಪುರಭವನದಲ್ಲಿ ಮಾರ್ಚ್ ನಡೆದ ವಿಶ್ವ ತುಳುವರ ಸಮ್ಮಿಲನ ತೌಳವ ಉಚ್ಚಯ ಕಾರ್ಯಕ್ರಮದಲ್ಲಿ "ತೌಳವ ಸಾಧಕ" ಪ್ರಶಸ್ತಿಯನ್ನು ಪಡೆದಿರುತ್ತಾರೆ. ಇತ್ತೀಚೆಗೆ ಬಿಲ್ಲವರ ಭವನ ಸಾಂತಾಕ್ರೂಜ್ ಮುಂಬಯಿ ಇಲ್ಲಿ ನಡೆದ ಜಾಗತಿಕ ಮಾನವಾಧಿಕಾರ ಪ್ರತಿಭಾ ಮಹಾಸಮ್ಮೇಳನದ ಅಂಗವಾಗಿ "ನೆಲ್ಸನ್ ಮಡೇಲ ಅಂತರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿರುತ್ತಾರೆ.

ಜಗತ್ತಿನಲ್ಲಿರುವ ಲಕ್ಷಾಂತರ ಜೀವಿಗಳಲ್ಲಿ ಶ್ರೇಷ್ಠನಾದವ 'ಮನುಷ್ಯ'. ಅವನು ಮನಸ್ಸು ಮಾಡಿದರೆ ಏನು ಬೇಕಾದರೂ ಸಾಧಿಸಬಲ್ಲ ಅದ್ಭುತ ಜೀವಿ. ಬದುಕಿನಲ್ಲಿ ಛಲವೊಂದಿದ್ದರೆ ಸೋಲು–ಗೆಲುವುಗಳು ಮುಖ್ಯವೇ ಅಲ್ಲ. ಆದರೆ ಈ ಸಾಧನೆಗೆ ಆತ ಕಂಡುಕೊಳ್ಳಬೇಕಾದ ಮಾರ್ಗವೇ ಸಮಯ ಪ್ರಜ್ಞೆ, ತಾಳ್ಮೆ, ನಿಷ್ಠೆ, ಪ್ರಾಮಾಣಿಕತೆ, ಪರಿಶ್ರಮ. ಇವುಗಳನ್ನು ಜೀವನದಲ್ಲಿ ಮೈಗೂಡಿಸಿಕೊಂಡರೆ ಪ್ರತಿಫಲದ ಜೊತೆಗೆ ಸಂತೃಪ್ತಿಯೂ ನಿಶ್ಚಿತ. ಇಂತಹ ದಾರಿಯಲ್ಲಿ ನಡೆದ ಪಡ್ಡಂಬೈಲ್ ಕೃಷ್ಣಪ್ಪ ಗೌಡರ ಜೀವನ ಮಾರ್ಗ ನಮಗೆಲ್ಲ ದಾರಿದೀಪವಾಗಬೇಕು. ಇವರು ತಮ್ಮ ಜೀವನದಲ್ಲಿ ಇನ್ನಷ್ಟು ಸಾಧನೆಗೈದು ಯಶಸ್ಸನ್ನು ಕಾಣಲಿ ಹಾಗು 'ತಾರಸಿ' ತೋಟದಂತೆ ಅವರ ಜೀವನವೂ ಹಚ್ಚ ಹಸಿರಾಗಿ ಸಮೃದ್ಧವಾಗಿ ಇರಲಿ ಎಂಬುದು ನಮ್ಮೆಲ್ಲರ ಹಾರೈಕೆ.

*With Best Compliments from*

**Smt Kusumavathi Seena Suvarna**
**Sri Shashidhar Suvarna (Son)**
**Sri Ashok Suvarna (Son)**

**Grand Children, Tara Suvarna**
**Diya Suvarna, Arush Suvarna**
**Goregaon, Mumbai**

# ದೂರದೃಷ್ಟಿಯ ನಾಯಕ ಶ್ರೀ ಶಂಕರ ಪೂಜಾರಿ



**ಬಿಲ್ಲವ ಸಮಾಜದ ಪ್ರಾಮಾಣಿಕ ರಾಜಕಾರಣಿಗಳ ಮಧ್ಯೆ ಶಂಕರ ಪೂಜಾರಿಯವರ ಹೆಸರು ತನ್ನದೇ ಆದ ಸ್ಥಾನವನ್ನು ಪಡೆದಿರುವುದು ಅದು ಅವರ ಸೇವಾ ಮನೋಭಾವ ಮತ್ತು ಹೋರಾಟದ ಕಾರಣದಿಂದಲೇ ಆಗಿದೆಯೆನ್ನಲು ಹೆಮ್ಮೆಯೆನಿಸುತ್ತದೆ.**

ಇಂತಹುದನ್ನು ಮಾಡು ಎಂದು ಆದೇಶಿಸುವವನು ಯಜಮಾನ, ಬಿಟ್ಟುಬಿಡಿ ನಾನು ಮಾಡುತ್ತೇನೆ ಎಂದು ಮುಂದೆ ಬರುವವ ನಾಯಕ. ಯಜಮಾನಿಕೆ ಮತ್ತು ನಾಯಕತ್ವ ನಡುವಿನ ವ್ಯತ್ಯಾಸಗಳಲ್ಲಿ ಮುಖ್ಯವಾದ ಅಂಶಗಳಲ್ಲಿ ಇದೂ ಒಂದು. ಇವತ್ತು ಯಜಮಾನಿಕೆ ತೋರಿಸುವವರು ಬೇಕಾದಷ್ಟು ಸಿಗುತ್ತಾರೆ, ಜೊತೆಗೆ ನಾಯಕರೂ ಕೂಡ, ಆದರೆ ನಿಜ ಅರ್ಥದ ನಾಯಕರು ಸಿಗುವುದು ಬಲು ಅಪರೂಪ. ಇಂದು ನಾಯಕತ್ವದಲ್ಲಿ ಎರಡು ವಿಧಗಳನ್ನು ಕಾಣುತ್ತೇವೆ. ಹಿಂಬಾಲಕರನ್ನು ಅನುಯಾಯಿಗಳನ್ನು ಸೃಷ್ಟಿಸುವವರು ಒಂದೆಡೆಯಾದರೆ, ಮುಂದಿನ ಪೀಳಿಗೆಗೆ ನಾಯಕರನ್ನು ತಯಾರು ಮಾಡುವ ನಾಯಕ ಇನ್ನೊಂದೆಡೆ. ಇದರಲ್ಲಿ ನಿಜ ಅರ್ಥದ ನಾಯಕನೆಂದರೆ, ಅನುಯಾಯಿಗಳೊಂದಿಗೆ ನಾಯಕರನ್ನೂ ಸೃಷ್ಟಿಸುವವರು. ಇಂತಹವರು ಇಂದು ನಮ್ಮ ನಿಮ್ಮ ನಡುವೆ ವಿರಳವಾಗುತ್ತಿರುವ ನಡುವೆಯೇ ತನ್ನ ಸರಳ ವ್ಯಕ್ತಿತ್ವದಿಂದಲೇ ಮುಂಚೂಣಿಗರಾಗಿ ತನ್ನನ್ನು ಅನಾವರಣಗೊಳಿಸಿಕೊಂಡವರು ಸಜ್ಜನ ವ್ಯಕ್ತಿತ್ವದ ರಾಜಕಾರಣಿ, ಸಮಾಜ ಸೇವಕ ಶ್ರೀ ಶಂಕರ ಪೂಜಾರಿ ಇವರು.

ಜನಪರ ಕಾಳಜಿ ಮತ್ತು ಹೋರಾಟಗಳಿಂದಲೇ ಮತ್ತು ಸಮಾಜ ಸಮುದಾಯದ ನಡುವೆ ಹೆಚ್ಚು ಕ್ರಿಯಾಶೀಲತೆಯನ್ನು ಮೆರೆದ ಕಾರಣದಿಂದಲೇ ಅವರಿಂದು ಸೀಮಾತೀತವಾಗಿ ಹೆಚ್ಚು ಪರಿಚಿತರಾಗಿದ್ದಾರೆ.

31ನೇ ಪುಟಕ್ಕೆ

# ಜನಾನುರಾಗಿ ವಿದ್ಯಾರ್ಥಿ ಸ್ನೇಹಿ ಗುರುಗಳು

## ಮೂಡಬಿದಿರೆ ಕೋಟೆ ಬಾಗಿಲಿನ ಶ್ರೀ ಬಾಬು ಮಾಸ್ತರ್

ಸಂದರ್ಶಿಸಿದವರು:
ವಿಶ್ವನಾಥ ಪೂಜಾರಿ ರೆಂಜಾಳ, ಕೆ. ವಾಮನ್

**ಚಿನ್ನ ಎಲ್ಲಿದ್ದರೂ ಅದು ಬಂಗಾರವೇ ಅನ್ನುವಂತೆ ಮೂಡಬಿದಿರೆ ಕೋಟೆ ಬಾಗಿಲಿನ ನಿವಾಸಿಯಾಗಿರುವ ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ಬಾಬು ಮಾಸ್ತರ್ ಇವರು ತನ್ನ ಸೇವಾವಧಿ ತುಂಬೆಲ್ಲಾ ಹಿರಿ ಹೆಜ್ಜೆ ಗುರುತುಗಳನ್ನು ಮೂಡಿಸಿದ ಗುರುಶ್ರೇಷ್ಠರು.**

ಶಿಕ್ಷಕ ವೃತ್ತಿಯೆಂದರೆ ಅದಕ್ಕೆ ಯಾವುದೇ ಉಪಮೆಗಳು ಹೋಲಿಕೆಗಳು ಕಾಣಸಿಗುವುದಿಲ್ಲ. ಜಗತ್ತಿನಲ್ಲೆ ಅತೀ ಶ್ರೇಷ್ಠ ಕೆಲಸವೆಂದರೆ ಅದು ಶಿಕ್ಷಕ ವೃತ್ತಿ, ಕತ್ತಲೆಯನ್ನು ಸರಿಸಲು ದೀಪಗಳನ್ನು ಬೆಳಗಿಸುತ್ತಾ, ವಿಶ್ವವನ್ನೇ ಪ್ರಾಜ್ವಲ್ಯಮಾನಗೊಳಿಸುವ ಶಕ್ತಿ ಸಾಧನಗಳಿಸುವುದು ಈ ಗುರುವಿನಲ್ಲಿ ಬಹುಶಃ ಅದಕ್ಕೆ ಹೇಳಿರಬೇಕು, 'ಶಿವೇ ರುಷ್ಠೆ ಗುರುಸ್ತ್ರಾತಃ ಗುರ್‌ರುಷ್ಠೆ ನ ಕಶ್ಚನ' ಎಂದು ಆದರೆ ಗುರುವಾದವ ಯಾವತ್ತೂ ಮುನಿಯುವುದಿಲ್ಲ ಆತ ಸದಾ ಒಲಿಯುತ್ತಾನೆನ್ನುವ ವಾಸ್ತವ ನಂಬಿಕೆಗಳನ್ನು ಇಂದಿಗೂ ಜೀವಂತವಾಗಿರಿಸಿದ ಗುರುಶ್ರೇಷ್ಠರು ಆಗಿಹೋಗಿದ್ದಾರೆ ಇವತ್ತಿಗೂ ನಮ್ಮೊಂದಿಗಿದ್ದಾರೆ. ಬಹಳಷ್ಟು ಮಂದಿ ತಮ್ಮನ್ನು ಬೆಳಕಿಗೊಡ್ಡಿದರೆ ಇನ್ನು ಹಲವಾರು ಮಂದಿ ಎಲೆಮರೆಕಾಯಿಗಳಂತೆ ಸದ್ದು ಗದ್ದಲವಿಲ್ಲದೆ ತಮ್ಮನ್ನು ನಿರಂತರ ಕ್ರಿಯಾಶೀಲಗೊಳಿಸಿಕೊಂಡು ಸಮಾಜೋದ್ಧಾರದ ಕನಸನ್ನು ಕಾಣುತ್ತಾ ಅದನ್ನು ಸಾಕಾರಗೊಳಿಸುತ್ತಾ ಹೋಗುತ್ತಾರೆ ಆದರೆ, ಚಿನ್ನ ಎಲ್ಲಿದ್ದರೂ ಅದು ಬಂಗಾರವೇ ಅನ್ನುವಂತೆ ಮೂಡಬಿದಿರೆ ಕೋಟೆ ಬಾಗಿಲಿನ ನಿವಾಸಿಯಾಗಿರುವ ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ಬಾಬು ಮಾಸ್ತರ್ ಇವರು ತನ್ನ ಸೇವಾವಧಿ ತುಂಬೆಲ್ಲಾ ಹಿರಿ ಹೆಜ್ಜೆ ಗುರುತುಗಳನ್ನು ಮೂಡಿಸಿದವರು. ಆದರ್ಶ ಶಿಕ್ಷಕ ಹೇಗಿರಬೇಕು ಎಂಬುದಕ್ಕೆ ಕ್ರಿಯಾಶೀಲ ವ್ಯಕ್ತಿತ್ವ ಎಂತದ್ದಿರಬೇಕು ಅನ್ನುವುದಕ್ಕೆ, ತಾನು ಸೇವೆ ಸಲ್ಲಿಸಿದ ಶಾಲೆಗಳಿಗೆ ತನ್ನನ್ನು ಹೇಗೆ ತ್ರಿಕರಣ ಪೂರ್ವಕವಾಗಿ ಸಮರ್ಪಿಸಿಕೊಂಡು ಮಾದರಿಯಾಗ ಬಹುದೆನ್ನುವುದಕ್ಕೆ ಸಾಕ್ಷಿಯಾಗಿ ನಿಲ್ಲುವವರು ಶ್ರೀ ಬಾಬು ಮಾಸ್ತರ್ ಇವರು,



ಹತ್ತು ಹಲವಾರು ಪ್ರಶಸ್ತಿ, ಸಮ್ಮಾನಗಳಿಂದ ಪುರಸ್ಕೃತರಾಗಿರುವ ಇವರು ಈ ಬಾರಿಯ ನಮ್ಮ ಶಿಕ್ಷಣ ವಿಶೇಷಾಂಕದಲ್ಲಿ ಸಂದರ್ಶಿಸಲು ಬಹಳಷ್ಟು ಸಂತೋಷ ಪಡುತ್ತಿದ್ದೇವೆ.

* **ತಮ್ಮ ಹುಟ್ಟು-ಹುಟ್ಟೂರು, ಬಾಲ್ಯಜೀವನ, ಎದುರಿಸಿದ ಸವಾಲುಗಳು ಮತ್ತು ಶಿಕ್ಷಣ.**

ದ.ಕ.ಜಿಲ್ಲೆಯ ಮೂಡುಬಿದ್ರಿ ತಾಲೂಕಿನ ಪ್ರಾಂತ್ಯಗ್ರಾಮದ ಕೋಟೆ ಬಾಗಿಲಿನ 'ಶ್ರೀ ರಾಘವೇಂದ್ರ ಕೃಪಾ' ಕೃಷಿ ಕೂಲಿ ಕಾರ್ಮಿಕ ಕುಟುಂಬ ತಂದೆ ಶ್ರೀ ಸೋನ ತಾಯಿ ಶ್ರೀಮತಿ ಕಲ್ಯಾಣಿ ಅವರ ಮಗನಾಗಿ 15.08.1952ರಂದು ಜನನ.

27ನೇ ಪುಟಕ್ಕೆ

26ನೇ ಪುಟದಿಂದ

**ಜನಾನುರಾಗಿ ವಿದ್ಯಾರ್ಥಿ ಸ್ನೇಹಿ ಗುರುಗಳು**

ಇವರು ಹಿರಿಯ ಮಗ. 3 ಮಂದಿ ಸಹೋದರರು, 2 ಮಂದಿ ಸಹೋದರಿಯರು ಒಟ್ಟು 6 ಜನ ಮಕ್ಕಳು.

ಬಡತನದಲ್ಲಿಯೇ ಬೆಳೆದು ಬಂದ ಇವರು ಕಷ್ಟ-ಸಹಿಯುಷ್ಣತೆ ಎಂಬುದನ್ನು ಮೈ ಗೂಡಿಸಿಕೊಂಡವರು. ಬಡತನದಲ್ಲಿದ್ದ ಕಾರಣ ಒಬ್ಬಳು ಸಹೋದರಿ ಮತ್ತೊಬ್ಬ ಸಹೋದರ ವಿದ್ಯಾಭ್ಯಾಸದಿಂದ ವಂಚಿತರಾಗಿದ್ದರೂ ಕೂಡ ಸಾಕ್ಷರತೆ – ವಿದ್ಯಾಭ್ಯಾಸ ಪಡೆದಿರುತ್ತಾರೆ ಎಂದು ತಿಳಿಸಲು ಬೇಸರವಾಗುತ್ತದೆ. 4 ಮಂದಿಗೆ ಮಾತ್ರ ಶಿಕ್ಷಣ ಕೊಡಲು ತಂದೆ-ತಾಯಿಯವರಿಗೆ ಸಾಧ್ಯವಾಯ್ತು.

ಪ್ರಾಥಮಿಕ ಶಿಕ್ಷಣವನ್ನು ಕೋಟೆಬಾಗಿಲು ಜನರಲ್ ಮತ್ತು ಜ್ಯೋತಿನಗರ ಶಾಲೆಯಲ್ಲಿ ಪಡೆದು ಪ್ರೌಢಶಾಲಾ ಶಿಕ್ಷಣವನ್ನು ಶ್ರೀ ಬಾಬು ರಾಜೇಂದ್ರ ಪ್ರಸಾದ್ ಹೈಸ್ಕೂಲು ಮೂಡುಬಿದಿರೆ ಇಲ್ಲಿ ಪಡೆದು, ಪದವಿಪೂರ್ವ ಶಿಕ್ಷಣವನ್ನು ಕಾರ್ಕಳ ಬೋರ್ಡ್ ಹೈಸ್ಕೂಲ್‌ನಲ್ಲಿ ಪಡೆಯಲಾಯ್ತು ಆನಂತರ 2 ವರ್ಷಗಳ ಕಾಲ ಉದ್ಯೋಗವಿಲ್ಲದೆ ಅಲೆದಾಡಿ ಬೇರೆಬೇರೆ ಕೆಲಸಗಳಲ್ಲಿ ತೊಡಗಿಸಿಕೊಂಡು ತಂದೆ-ತಾಯಿಯವರಿಗೆ ಹಾಗೂ ಕಿರಿಯ ಸಹೋದರ-ಸಹೋದರಿಯರಿಗೆ ವಿದ್ಯಾಭ್ಯಾಸದಲ್ಲಿ ಸಹಕಾರ ನೀಡಿದೆ.

* **ಶಿಕ್ಷಣ ವೃತ್ತಿಯ ಬಗ್ಗೆ ಆಸಕ್ತಿ ಮೂಡಿದ ಬಗೆ**

ಪ್ರಾಥಮಿಕ ಶಿಕ್ಷಣದ ಸಂದರ್ಭ 6 ಮತ್ತು 7ನೇ ತರಗತಿಯಲ್ಲಿ ನಮ್ಮ ನೆಚ್ಚಿನ ಕನ್ನಡ ಪಾಠದ ಗುರುಗಳಾದ ಕೆ. ಸುಬ್ಬರಾವ್ ಸ.ಹಿ.ಪ್ರಾ.ಶಾಲೆ ಜ್ಯೋತಿನಗರ ಇವರ ಪ್ರಚೋದನೆ ಹಾಗೂ ಪ್ರೋತ್ಸಾಹ, ಆಶೀರ್ವಾದದ ಫಲದಿಂದ ನನ್ನ ಮನಸ್ಸಿನಲ್ಲಿ ಶಿಕ್ಷಕನಾಗಬೇಕೆಂಬ ಹಂಬಲದಿಂದ ಶಿಕ್ಷಕ ವೃತ್ತಿಗೆ ದಿನಾಂಕ 09.01.1973 ರಂದು ಸೇರ್ಪಡೆಗೊಂಡು ಸ.ಹಿ.ಪ್ರಾ. ಶಾಲೆ ಕಡಿಕೆ ಕುಂದಾಪುರ ಇಲ್ಲಿ 6 ವರ್ಷಗಳ ಕಾಲ ಇದರ ಜೊತೆಗೆ ಆಗಿನ ನೆಹರೂ ಯುವ ಕೇಂದ್ರ ನಡೆಸುತ್ತಿದ್ದ ರಾತ್ರಿ ಶಾಲಾ ಅಧ್ಯಾಪಕರಾಗಿ ಕೂಡಾ ಸೇವೆ (19.07.1979) 20.07.1979 ರಿಂದ 31.12.1987ರ ವರೆಗೆ ಸುಮಾರು 9 ವರ್ಷಗಳ ಕಾಲ ಜಿ.ಪಂ.ಮಾ.ಹಿ.ಪ್ರಾ.ಶಾಲೆ ಬೆಳುವಾಯಿ ಮೈನ್ (ಕೆಸರ್‌ಗದ್ದೆ) ಇಲ್ಲಿ ಸಹ ಶಿಕ್ಷಕರಾಗಿ, ಸ್ಕೌಟ್ ಅಧ್ಯಾಪಕರಾಗಿ, ಕ್ರೀಡೆ, ನಾಟಕ, ಸಂಗೀತಗಳಲ್ಲಿ ಹೆಚ್ಚಿನ ಆಸಕ್ತಿ ಮೂಡಿಸಿ ಹಲವಾರು ಬಹುಮಾನಗಳನ್ನು ಪಡೆಯುವಲ್ಲಿ ಮುಖ್ಯ ಪಾತ್ರವನ್ನು ವಹಿಸಲಾಗಿದೆ.

ದಿನಾಂಕ 01.01.1988 ರಿಂದ ಕ್ಯಾಡರ್ ಮುಖ್ಯೋಪಾಧ್ಯಾಯರಾಗಿ ಭಡ್ತಿಗೊಂಡು ಜಿ.ಪಂ.ಹಿ.ಪ್ರಾ.ಶಾಲೆ ದರೆಗುಡ್ಡೆಗೆ ಸೇರ್ಪಡೆಗೊಂಡು 2001-ಜುಲಾಯಿ 23 ರವರೆಗೆ ಒಟ್ಟು 13 ವರ್ಷಗಳ ಕಾಲ ಸುದೀರ್ಘವಾದ ಸೇವೆಸಲ್ಲಿಸಿ ಹಲವಾರು ಪ್ರಗತಿ ಕಾರ್ಯಗಳನ್ನು ಶಾಲೆಯ ಸರ್ವತೋಮುಖ ಅಭಿವೃದ್ಧಿ ಮಾಡಿ ಜನರ ಮೆಚ್ಚುಗೆಗೆ ಪಾತ್ರ.

ದಿನಾಂಕ. 24.07.2001 ರಂದು ಪದವೀದರೇತರ ಮುಖ್ಯೋಪಾಧ್ಯಾಯರಾಗಿ ಭಡ್ತಿಗೊಂಡು ಜಿ.ಪಂ.ಹಿ.ಪ್ರಾ.ಶಾಲೆ ಬೆಳುವಾಯಿ (ಚರ್ಚ್‌ಬಳಿ) ಇಲ್ಲಿ ಸೇರ್ಪಡೆಗೊಂಡು 12 ವರ್ಷಗಳ ಕಾಲ ಸೇವೆ ಸಲ್ಲಿಸಿ ಇಲ್ಲಿಯೂ ಮಹೋತ್ಸವ ಸಮಾರಂಭವನ್ನು ನೆರವೇರಿಸಿ ಜನಮನ್ನಣೆ ದೊರಕಿದೆ. ಭಾರತ್-ಸ್ಕೌಟ್/ಗೈಡ್ಸ್‌ನ ಅತ್ಯುನ್ನತ ಪದವಿ H.W.B(S) ಪಡೆದಿದ್ದು ಸ್ಕೌಟಿಂಗ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದು 31.08.2012ರಂದು ವಯೋ ನಿವೃತ್ತಿ ಹೊಂದಿದ್ದು ಸುಮಾರು 39 ವರ್ಷ 7 ತಿಂಗಳು ಶಿಕ್ಷಕ ವೃತ್ತಿಯಲ್ಲಿ ಸೇವೆ ಸಲ್ಲಿಸಲಾಗಿದೆ.

* **ತಪ್ಪು ಮಾಡದೆ ತಪ್ಪನ್ನು ತಿದ್ದುವವ ಗುರು**

ಗುರು ಅಥವಾ ಶಿಕ್ಷಕ ಎಲ್ಲರಿಗೂ ಮಾದರಿಯಾಗಿದ್ದು, ವಿದ್ಯಾರ್ಥಿಗಳಿಗೆ ಆದರ್ಶವಾಗಿದ್ದು ವಿದ್ಯಾರ್ಥಿಗಳ ಮನಸ್ಸನ್ನು ಅರಿತವನಾಗಿರಬೇಕು. ಶಿಕ್ಷಕನು ವಿದ್ಯಾರ್ಥಿಯನ್ನು ಸರ್ವ ರೀತಿಯಿಂದ ಪರಿಪಕ್ವವನ್ನಾಗಿ ಮಾಡುತ್ತಾನೆ. ಅವರು ಪಾಠ ಮಾಡುವಾಗ ಸಂದರ್ಭಕ್ಕೆ ಸರಿಯಾಗಿ ಸ್ವಾತಂತ್ರ್ಯ ಹೋರಾಟ ವೀರರ ಕಥೆ. ಗಾಂಧೀಜಿಯವರ ಸತ್ಯ ಅಹಿಂಸೆಯ ಅವಶ್ಯಕಥೆಗಳನ್ನು ವಿವರಿಸುವುದರಿಂದ ಮಕ್ಕಳು ಸುಸಂಸ್ಕೃತರಾಗಿ ಬೆಳೆಯಲು ಸಾಧ್ಯ. ಇದರಿಂದ ತಪ್ಪು ಮಾಡದೆ ತಪ್ಪನ್ನು ತಿದ್ದುವವನೇ ಗುರು ಎಂದೆನಿಸುತ್ತದೆ.

* **ಸುದೃಢ ದೇಶ ನಿರ್ಮಾಣಕ್ಕೆ ಆರೋಗ್ಯ ಪೂರ್ಣ ವ್ಯಕ್ತಿಗಳನ್ನು ಸೃಷ್ಟಿಸುವಲ್ಲಿ ಪ್ರಾಥಮಿಕ ಶಿಕ್ಷಣವೆನ್ನುವುದು ಗಟ್ಟಿ ಅಡಿಪಾಯ.**

ಮಕ್ಕಳ ಬಗ್ಗೆ ಗುರುವಿನ ಜವಾಬ್ದಾರಿ ಗುರುತರವಾದದ್ದು. ಮಕ್ಕಳು ಅವರ ಕೈಯಲ್ಲಿ ಹಸಿಯ ಜೇಡಿ ಮಣ್ಣು ಇದ್ದಂತೆ ಈ ಸಮಯಕ್ಕೆ ಅದಕ್ಕೆ ಸುಂದರವಾದ, ಉಪಯುಕ್ತ ರೀತಿಯ ಆಕೃತಿಯನ್ನು ನೀಡಿ ತಿದ್ದುವವರು ಗುರುಗಳೇ, ಹಸಿಜೇಡಿ ಮಣ್ಣು ಒಣಗಿದ ಮೇಲೆ ಅಂದರೆ ದೊಡ್ಡವರಾದ ಮೇಲೆ ಅವರನ್ನು ತಿದ್ದಲು ಸಾಧ್ಯವಾಗುವುದಿಲ್ಲ ಚಿಕ್ಕಂದಿನ ವಿದ್ಯೆಯೇ ಮುಂದಿನ ಜೀವನದ ದಾರಿದೀಪವಾಗಿದೆ. ಆದ್ದರಿಂದ ಸುದೃಢ ದೇಶ ನಿರ್ಮಾಣಕ್ಕೆ ಆರೋಗ್ಯ ಪೂರ್ಣ ವ್ಯಕ್ತಿಗಳನ್ನು ಸೃಷ್ಟಿಸುವಲ್ಲಿ ಪ್ರಾಥಮಿಕ ಶಿಕ್ಷಣವೆನ್ನುವುದು ಗಟ್ಟಿ ಅಡಿಪಾಯವಾಗಿರುತ್ತದೆ.

* **ಸರಕಾರಿ ಶಾಲೆಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ವ್ಯವಸ್ಥೆಯೊಂದಿಗೆ ಶಿಕ್ಷಕನಾದವ ಹೇಗೆ ಕೈ ಜೋಡಿಸಬಹುದು.**

ಇತ್ತೀಚೆಗೆ 'ಆಂಗ್ಲಮಾಧ್ಯಮ' ಶಾಲೆಗಳ ಪ್ರಭಾವದಿಂದ ಕನ್ನಡ ಮಾಧ್ಯಮ ಸರಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗತೊಡಗಿದೆ, ಕಾರಣ ಹೆತ್ತವರು ಆಂಗ್ಲಮಾಧ್ಯಮ ಶಾಲೆಗೆ ಮಾರು ಹೋಗಿದ್ದಾರೆ. ಏಕೆಂದರೆ ಅಲ್ಲಿ ಎಲ್ಲಾ ಸೌಕರ್ಯಗಳು ಇವೆ. ಹೋಗಿ ಬರಲು ಸಾರಿಗೆ ವ್ಯವಸ್ಥೆ ಆ ಸಂಸ್ಥೆಯವರೇ ಮಾಡುತ್ತಾರೆ. ಹಾಗಾಗಿ ಹೆತ್ತವರ ಹಲವಾರು ಜವಾಬ್ದಾರಿಗಳು ಇಲ್ಲವಾಗುತ್ತದೆ. ಕನ್ನಡ ಮಾಧ್ಯಮ ಸರಕಾರಿ ಶಾಲೆಗಳಲ್ಲಿ ಹಲವಾರು ಮೂಲಭೂತ ಸೌಕರ್ಯಗಳೂ ಈಗಲೂ ಇಲ್ಲವಾಗಿದೆ. ಸಮರ್ಪಕವಾದ ಕಟ್ಟಡ, ಆಟದ ಬಯಲು ಪಾಠೇತರ ಚಟುವಟಿಕೆಗಳು, ಸ್ಕೌಟ್/ಗೈಡ್ಸ್ ದಳಗಳ ಕೊರತೆ ಪ್ರವಾಸ ವಾರ್ಷಿಕೋತ್ಸವ ಇತ್ಯಾದಿ ಕಾರ್ಯಕ್ರಮಗಳು ಮಕ್ಕಳ ಸಂಖ್ಯೆ ಕಡಿಮೆಯಾಗಿ ಕನ್ನಡ ಸರಕಾರಿ ಶಾಲೆಗಳನ್ನು ಉಳಿಸಿಕೊಳ್ಳುವ ಸ್ಥಿತಿ ಬಂದೊದಗಿದೆ. ಇದಕ್ಕೆ ಮತ್ತೊಂದು ಕಾರಣ ಅಧ್ಯಾಪಕರ ಸಂಖ್ಯೆ ಕೊರತೆ. ಅದಕ್ಕಾಗಿ ಶಿಕ್ಷಕರಾದವರು ತಮ್ಮ ತಮ್ಮ ಶಾಲೆಗಳಲ್ಲಿ ಉತ್ತಮ ರೀತಿಯ ಪಾಠಪ್ರವಚನ, ಪಾಠೇತರ ಚಟುವಟಿಕೆಗಳನ್ನು ಹೆಚ್ಚು ಹೆಚ್ಚು ಅಳವಡಿಸಬೇಕು. ವಿದ್ಯಾರ್ಥಿಗಳಿಗೆ ಶಿಕ್ಷಕರು ಪ್ರೀತಿಯಿಂದ, ತಾಳ್ಮೆಯಿಂದ ಯಾವುದೇ ರೀತಿಯ ಬೇಧಭಾವ ಇಲ್ಲದೆ ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಕೈ ಜೋಡಿಸಿದರೆ ಖಂಡಿತವಾಗಿ ಸರಕಾರಿ ಶಾಲೆಗಳನ್ನು ಉಳಿಸಿ ಬೆಳೆಸಬಹುದು.

* **ಸರಕಾರಿ ಕೆಲಸಬೇಕು ಸರಕಾರಿ ಶಾಲೆಯಲ್ಲಿ ತಮ್ಮ ಮಕ್ಕಳು ಕಲಿಯುವುದು ಬೇಡವೆಂದರೆ ಹೇಗೆ?**

→→→

→→→

ನಮ್ಮ ಜನಪ್ರತಿನಿಧಿಗಳು ಹಾಗೂ ಅನೇಕ ರಾಜಕೀಯ ವ್ಯಕ್ತಿಗಳು ಮತ್ತು ಶ್ರೀಮಂತರು ವೇದಿಕೆಯಲ್ಲಿ ಭಾಷಣ ಮಾಡುವಾಗ ಎಲ್ಲರೂ ಸರಕಾರಿ ಶಾಲೆಗಳಿಗೆ ಹೆಚ್ಚಿನ ಮಾನ್ಯತೆ ನೀಡಿ ಮಕ್ಕಳನ್ನು ಸರಕಾರಿ ಶಾಲೆಗಳಿಗೆ ಕಳುಹಿಸಬೇಕು ಎಂದು ಭಾಷಣ ಬಿಗಿಯುತ್ತಾರೆ. ಆದರೆ ತಮ್ಮ ಮಕ್ಕಳನ್ನು ಆಂಗ್ಲಮಾಧ್ಯಮ ಖಾಸಗಿ ಶಾಲೆಗಳಿಗೆ ಕಳುಹಿಸಿಕೊಡುತ್ತಾರೆ. ಹಾಗೆಯೇ ನಮ್ಮ ಅನೇಕ ಸರಕಾರಿ ನೌಕರರು ಕೂಡ ಇದೇ ರೀತಿ ಮಾಡುತ್ತಾರೆ. ಆದುದರಿಂದ ಸರಕಾರಿ ನೌಕರರೆಲ್ಲರ ಮಕ್ಕಳನ್ನು ಕಡ್ಡಾಯವಾಗಿ ಸರಕಾರಿ ಶಾಲೆಗಳಿಗೆ ಸೇರಿಸುವ ಕಾನೂನು ಮಾಡಬೇಕು.

* **ಸರಕಾರಿ ಶಾಲೆಗಳನ್ನು ಕನ್ನಡ ಮಾಧ್ಯಮ ಶಾಲೆಗಳನ್ನು ಉಳಿಸಿಬೆಳೆಸಬೇಕೆಂಬ ನಿಟ್ಟಿನಲ್ಲಿ ಸಂಘ ಸಂಸ್ಥೆಗಳು ಈಗೀಗ ಉಪಕ್ರಮಿಸಲಾರಂಭಿಸಿವೆ ಒಟ್ಟು ಸಾಮಾಜಿಕ ಜವಾಬ್ದಾರಿ ಬಗ್ಗೆ.**

  ಸರಕಾರಿ ಶಾಲೆಗಳನ್ನು ಕನ್ನಡ ಮಾಧ್ಯಮ ಶಾಲೆಗಳನ್ನು ಉಳಿಸಿ ಬೆಳೆಸಬೇಕೆಂಬ ನಿಟ್ಟಿನಲ್ಲಿ ಅನೇಕ ಸಂಘ ಸಂಸ್ಥೆಗಳು, ಶಾಲಾಭಿವೃದ್ಧಿ ಸಮಿತಿಗಳು ಹಲವಾರು ಕ್ರಮಗಳನ್ನು ಕೈಗೊಂಡು ಶಾಲೆಗಳಲ್ಲಿ ಮಕ್ಕಳಿಗೆ ಸಮವಸ್ತ್ರ, ಪುಸ್ತಕ, ಚೀಲ, ಲೇಖನ ಸಾಮಗ್ರಿ, ಬರೆಯುವುದು ಪುಸ್ತಕಗಳನ್ನು ನೀಡುವ ಕಾರ್ಯಕ್ರಮಗಳಲ್ಲಿ ಪ್ರತೀ ಕಡೆಗಳಲ್ಲಿಯೂ ಸಾರ್ವಜನಿಕರು, ಪ್ರಾಯೋಜಕರೂ ಮುಂದೆ ಬರುತ್ತಾರೆ. ಹಾಗಾಗಿ ಶಾಲಾ ಮುಖ್ಯೋಪಾಧ್ಯಾಯರು ಮತ್ತು ಅಧ್ಯಾಪಕ ವೃಂದ ಇವರನ್ನು ಸಂಪರ್ಕಿಸಿ ಶಾಲಾ ವಿದ್ಯಾರ್ಥಿಗಳಿಗೆ ನೆರವಾಗಲು ಪ್ರಯತ್ನಿಸಬೇಕು.

* **ಶಿಕ್ಷಕನಾದವ ವೃತ್ತಿ ಜೊತೆಗೆ ಪ್ರವೃತ್ತಿ ಕ್ರಿಯಾಶೀಲತೆ, ಸೃಜನಾತ್ಮಕತೆ ಇವನ್ನೂ ಹೆಚ್ಚು ಹೆಚ್ಚಾಗಿ ಮೈಗೂಡಿಕೊಂಡರೆ ವ್ಯಕ್ತಿತ್ವಕ್ಕೆ ಹೆಚ್ಚು ತೂಕ ಬರುತ್ತದೆ.**

  ಎಲ್ಲಾ ವೃತ್ತಿಗಿಂತ ಶಿಕ್ಷಕ ವೃತ್ತಿ ಶ್ರೇಷ್ಠವಾದುದು. ಅಂತೆಯೇ ಶಿಕ್ಷಕನಾದವನು ಎಲ್ಲರಿಗೆ ಆದರ್ಶಪ್ರಾಯನಾಗಿರಬೇಕು. ಮಾದರಿಯಾಗಿರಬೇಕು ಎಲ್ಲರಲ್ಲಿಯೂ ಸ್ನೇಹ ಪರನಾಗಿರಬೇಕು. ಅವನಲ್ಲಿ ವೃತ್ತಿ ಗೌರವವಿರಬೇಕು. ಇತರರನ್ನು ಗೌರವಿಸುವ ಗುಣವಿರಬೇಕು. ಯಾವುದೇ ಕೆಲಸದಲ್ಲಿ ಕ್ರಿಯಾಶೀಲನಾಗಿರಬೇಕು ಪಾಠಕ್ಕೆ ಸಂಬಂಧಿಸಿದಂತೆ ಎಲ್ಲಾ ವಿಷಯುಗಳನ್ನು ಮೈಗೂಡಿಸಿಕೊಂಡಿರಬೇಕು. ಸರ್ವತೋಮುಖ ಅಭಿವೃದ್ಧಿಯ ಕಡೆಗೆ ಗಮನವಿರಿಸಬೇಕು. ಸೇವಾ ಮನೋಭಾವನೆ ಜೊತೆಗೆ ತ್ಯಾಗವೂ ತನ್ನಲ್ಲಿದ್ದರೆ ಅವನ ವ್ಯಕ್ತಿತ್ವಕ್ಕೆ ಎಲ್ಲರೂ ಬೆಲೆಕೊಡುತ್ತಾರೆ, ಗೌರವವೂ ದೊರೆಯುತ್ತದೆ.

* **ಹೆತ್ತವರು ಮಕ್ಕಳ ಮೊದಲ ಗುರುಗಳು ಹಾಗೆಯೇ ಗುರುಗಳು ಆ ಮಕ್ಕಳ ಎರಡನೇ ಪೋಷಕರು ಈ ನೆಲೆಯುಲ್ಲಿ ಶಾಲಾ ಮಕ್ಕಳೊಂದಿಗಿನ ಬಾಂಧವ್ಯವನ್ನು ವೃದ್ಧಿಕೊಳ್ಳುವ ಬಗೆ ಹೇಗೆ.**

  ಹೆತ್ತವರು (ತಾಯಿ) ಮಕ್ಕಳಿಗೆ ಮೊದಲ ಗುರು. ತಾಯಂದಿರು ಗುರುಭಕ್ತಿಯ ಪಾಠವನ್ನು ಪೂರ್ವಭಾವಿಯಾಗಿ ಕಲಿಸಿ, ಶಾಲೆಗೆ ಕಳುಹಿಸಿಕೊಡುತ್ತಾರೆ. ಆದರೆ ಆನಂತರದ ಜ್ಞಾನದ ಪೂರ್ಣ ವಿಕಾಸ ಉಂಟಾಗುವುದು ಶಾಲೆಯಲ್ಲಿ ಗುರುಗಳ ಮೂಲಕ ಶಿಕ್ಷಕರು ಮಕ್ಕಳ ಮನಸ್ಸನ್ನು ಅರಿತು, ಶಾಲಾಪಾಠಗಳನ್ನು ಬೋಧಿಸುವುದರ ಜೊತೆಗೆ, ಬೋಧಪ್ರದವಾದ ಹಾಗೂ ನೀತಿಪ್ರದ ಎನಿಸಿದ ಪುರಾಣ ಪುಣ್ಯ ಪುರುಷರ ಹಾಗೂ ಸ್ವಾತಂತ್ರ್ಯ, ವೀರರ ಕಥೆಗಳನ್ನು ಹೇಳಿ ಅವರಲ್ಲಿ ಧೈರ್ಯದ, ಸಾಹಸದ ಭಾವಗಳನ್ನು ಎಳೆ. ವಯಸ್ಸಿನಲ್ಲಿಯೇ ತುಂಬುವಂತೆ ಮಾಡಬೇಕು. ಇದರಿಂದ ಅವರಲ್ಲಿ ದೇಶಭಕ್ತಿ ದೇಶಪ್ರೇಮ, ಸತ್ಯಸಂಧತೆ, ನ್ಯಾಯಪರತೆ ಮೊದಲಾದ ಸದ್ಗುಣಗಳು ತಾವಾಗಿ ಉದ್ಭವಿಸಿ ವಿಕಾಸಗೊಳ್ಳಲು ಅವಕಾಶ ಆಗುವುದು. ಈ ರೀತಿಯಲ್ಲಿ ಶಾಲಾ ಮಕ್ಕಳೊಂದಿಗೆ ಉತ್ತಮ ಬಾಂಧವ್ಯವನ್ನು ಬೆಳೆಸಲು ಸಾಧ್ಯವಿದೆ.

* **ನಿಮ್ಮ ಕಲ್ಪನೆಯಲ್ಲಿ ಶಾಲೆಯೆಂದರೆ ಹೇಗಿರಬೇಕು? ಏನೇನಿರಬೇಕು?**

  ನನ್ನ ಕಲ್ಪನೆಯಂತೆ – ಶಾಲೆಯು ಒಳ್ಳೆಯ ಪರಿಸರದಲ್ಲಿ ಸುಂದರವಾಗಿ ಕಂಗೊಳಿಸಿರಬೇಕು. ಶಾಲೆಗೊಂದು ಉತ್ತಮ ವಿಶಾಲವಾದ ಆಟದ ಮೈದಾನ, ಸುಸಜ್ಜಿತವಾದ ಮುಖ್ಯೋಪಾಧ್ಯಾಯರ ಕೊಠಡಿ, ವಿಶಾಲವಾದ ಅಧ್ಯಾಪಕರ ಕೊಠಡಿ, ಆಕರ್ಷಿತವಾದ ತರಗತಿ ಕೊಠಡಿಗಳು, ತೃಪ್ತಿಕರವಾದ ಪೀಠೋಪಕರಣ, ಅಚ್ಚುಕಟ್ಟಾದ ವಾಚನಾಲಯ ಸಮರ್ಪಕವಾದ ಪ್ರಯೋಗಾಲಯ, ಉತ್ತಮ ಕ್ರೀಡಾಕೊಠಡಿ, ಉತ್ತಮ ಕಂಪ್ಯೂಟರ್ ಕೊಠಡಿ, ಉತ್ತಮ ಸಭಾಭವನ ಕಲಾಮಂಟಪ ಸಮರ್ಪಕವಾದ ಶೌಚಾಲಯಗಳು, ನೀರಿನ ಟಾಂಕಿ ಉತ್ತಮ ನೀರಿನ ಸರಬರಾಜು, ಯೋಗ್ಯವಾದ ಅಡುಗೆಕೋಣೆ, ದಾಸ್ತಾನು ಕೊಠಡಿಗಳು ಹಾಗೂ ಸಾಕಷ್ಟು ವಿದ್ಯಾರ್ಥಿಗಳ ಸಂಖ್ಯೆ ಮತ್ತು ಅಧ್ಯಾಪಕರ ಸಂಖ್ಯೆ ಪ್ರಾಮುಖ್ಯವಾಗಿರುತ್ತದೆ.

* **ಮುಖ್ಯ ಮೂರು ಋಣಗಳಲ್ಲಿ ಗುರು ಋಣವೂ ಒಂದು. ವಿದ್ಯಾರ್ಥಿಯಾದವ ಗುರು ಋಣವನ್ನ ಸಂದಾಯ ಮಾಡಲು ಇರುವ ದಾರಿ (ಗುರುದಕ್ಷಿಣೆ ಹೊರತಾಗಿ)**

  ಪಿತೃ, ಭೂಮಿ, ಗುರು, ಋಣ ತೀರಿಸಬೇಕಾದುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯ. ಈ ಮೂರು ಋಣಗಳೂ ಶ್ರೇಷ್ಠವಾದುದು. ಜೀವನದಲ್ಲಿ ಗುರುವಿನ ಪಾತ್ರ ಅತ್ಯಂತ ಶ್ರೇಷ್ಠ. ಗುರುವಿನ ಋಣವನ್ನು ಏನು ಕೊಟ್ಟರೂ ತೀರಿಸಲಾಗದು. ಅದಕ್ಕಾಗಿ ಅವಿರತ ಸೇವೆ, ಭಕ್ತಿ, ಗುರುವಿಗೆ ತನುಮನದಿಂದ ಪೂಜಿಸಿ ಗೌರವಿಸಬೇಕು. ಗುರು ಕಾರುಣ್ಯದಿಂದ ಎಲ್ಲವನ್ನೂ ಸಾಧಿಸಬಹುದು. ಶ್ರದ್ಧೆ ಭಕ್ತಿ ಸಮರ್ಪಣೆಯಿಂದ ಗುರುವಿನ ಆಶೀರ್ವಾದ ಪಡೆಯಲು ಸಾಧ್ಯ. ಹಾಗಾಗಿ ನಾವು ಸದಾ ಇವರಿಗೆ ಕೃತಜ್ಞತೆಯಿಂದ ನಡೆದು ಕೊಳ್ಳಬೇಕು.

* **ಹಳೆ ವಿದ್ಯಾರ್ಥಿಗಳು ಶಾಲೆಯ ಆಸ್ತಿ ಇವರನ್ನ ಶಾಲೆಯ ಅಭಿವೃದ್ಧಿಯಲ್ಲಿ ಹೇಗೆ ತೊಡಗಿಸಿಕೊಳ್ಳಬಹುದು.**

  ಶಾಲಾ ಹಳೆ ವಿದ್ಯಾರ್ಥಿಗಳು ಶಾಲೆಯ ಆಸ್ತಿ ಇವರನ್ನು ಶಾಲೆಯ ಬೆನ್ನೆಲುಬು ಎಂದು ಹೇಳುತ್ತಾರೆ. ಪ್ರತಿಯೊಂದು ಶಾಲೆಯಲ್ಲಿಯೂ ಹಳೆ ವಿದ್ಯಾರ್ಥಿ ಸಂಘ ಇದ್ದೇ ಇರುತ್ತದೆ. ಶಾಲಾಭಿವೃದ್ಧಿ ಜೊತೆಯಲ್ಲಿ ಒಟ್ಟು ಗೂಡಿ ಶಾಲೆಯ ಅಭಿವೃದ್ಧಿ ಕಾರ್ಯ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸುತ್ತದೆ. ಕೆಲವೊಮ್ಮೆ ಶಾಲೆಗಳಲ್ಲಿ ಶಿಕ್ಷಕರು/ಹಳೆ ವಿದ್ಯಾರ್ಥಿಗಳ ಒಮ್ಮತ ಇರುವುದಿಲ್ಲ. ಶಾಲಾಭಿವೃದ್ಧಿ ಸಮಿತಿಗೂ ಪರಸ್ಪರ ಸ್ನೇಹ ಭಾವ ಇರದೇ ಭಿನ್ನಾಭಿಪ್ರಾಯಗಳಿರುತ್ತವೆ. ಕೆಲವೊಮ್ಮೆ ಮುಖ್ಯೋಪಾಧ್ಯಾಯರನ್ನೆ ಆರೋಪ ಹೊರಿಸುವ ಅನೇಕ ಹಳೆ ವಿದ್ಯಾರ್ಥಿ ಸಂಘಗಳೂ ಇವೆ. ಆದರೆ ನಾನು ತಿಳಿದುಕೊಂಡ ಹಾಗೇ ಬೆಳುವಾಯಿ (ಚರ್ಚ್‌ಬಳಿ) ಶಾಲಾ ಹಳೆ ವಿದ್ಯಾರ್ಥಿ ಸಂಘ ಮೂಡುಬಿದ್ರಿ ತಾಲೂಕಿನಲ್ಲಿಯೇ ಮಾದರಿಯಾಗಿದೆ ಎಂದು ಸಂತೋಷ ಪಡುತ್ತೇನೆ. ಶಾಲೆಗಾಗಿ ಸತತ ಪ್ರಯತ್ನದಿಂದ ಎಲ್ಲಾ ಮೂಲಭೂತ ಸೌಕರ್ಯವನ್ನು ಪೂರೈಸಿ ಇದೀಗ 2019–2020ನೇ ಸಾಲಿನಲ್ಲಿ ಶಾಲೆಯಲ್ಲಿ ಎಲ್.ಕೆ.ಜಿ. ಮತ್ತು ಒಂದನೇ ತರಗತಿಯಿಂದ ಆಂಗ್ಲ

→→→

→→→
ವಾಧ್ಯಮ ಶಾಲೆಯನ್ನಾಗಿ ಮಾಡಲು ಪ್ರಯತ್ನಿಸುತ್ತಾ ಶಾಲೆಗೊಂದು ವಾಹನ ಇನ್ನಿತರ ಸೌಲಭ್ಯಗಳನ್ನು ಪೂರೈಸುವಲ್ಲಿ ಪ್ರಯತ್ನಿಸುತ್ತಿದೆ. ಶಾಲೆಯಲ್ಲಿ, ಮಕ್ಕಳಿಗೆ ಪುಸ್ತಕ, ಸಮವಸ್ತ್ರ ಇತ್ಯಾದಿಗಳನ್ನು ನೀಡಿ ಸಹಕರಿಸುತ್ತಿದೆ.

* **ಶಿಕ್ಷಕರಾಗಿ ಮುಖ್ಯ ಶಿಕ್ಷಕರಾಗಿ, ಮುಖ್ಯೋಪಾಧ್ಯಾಯರಾಗಿ ತಾವು ದುಡಿದ ಸಂಸ್ಥೆಗಳಿಗೆ ತಮ್ಮನ್ನು ಅರ್ಪಿಸಿಕೊಂಡ ಬಗೆಯನ್ನ ವಿವರಿಸಿ**

ನಾನು ಶಿಕ್ಷಕನಾಗಿ ಶಾಲೆಗೆ ಸಮಯಕ್ಕಿಂತಲೂ ಮುಂಚಿತವಾಗಿ ಹೋಗುತ್ತಿದ್ದು ಎಲ್ಲಾ ಕೆಲಸಗಳನ್ನು ತರಗತಿ ಆರಂಭಕ್ಕಿಂಥ ಮೊದಲೇ ನೆರವೇರಿಸಿ ಅಧ್ಯಯನ ಗಂಟೆಗೆ ಮಕ್ಕಳಿಗೆ ಓದಲು ಬಿಡುತ್ತಿದ್ದೆ. ನನಗೆ ಕೊಟ್ಟ ಪಾಠವನ್ನು ಆಕರ್ಷಕವಾಗಿ ಸಮರ್ಪಕವಾಗಿ ನಿರ್ವಹಿಸಿ ಕ್ಲಪ್ತ ಸಮಯಕ್ಕೆ ಮುಗಿಸಿ ಅಭ್ಯಾಸಕ್ಕಾಗಿ ಸಮಯವನ್ನು ಮೀಸಲಾಗಿರಿಸುತ್ತಿದ್ದೆ. ದೈಹಿಕ ಶಿಕ್ಷಣ ಅಧ್ಯಾಪಕರಿಲ್ಲದ ಕಾರಣ 'ದೈಹಿಕ ಶಿಕ್ಷಣ' ವನ್ನು ಮಕ್ಕಳಿಗೆ ಬೋಧಿಸುತ್ತಿದೆ. ಮುಖ್ಯೋಪಾಧ್ಯಾಯರಾಗಿ ಭಡ್ತಿ ಹೊಂದಿದ ಮೇಲೆಯೂ ಸಮಯದ ಅನುಪಾಲನೆ ಮಾಡುತ್ತಾ ಉಳಿದ ಸಹ ಶಿಕ್ಷಕರು ಕೂಡ ಉತ್ತಮ ರೀತಿಯ ಸಹಕಾರ ನೀಡುವಂತೆ ಮನವಲಿಸಿ ಪರಸ್ಪರ ಹೊಂದಾಣಿಕೆಯಿಂದ ಕೆಲಸಕಾರ್ಯಗಳನ್ನು ಮಾಡುತ್ತಾ ಶಾಲಾವಾರ್ಷಿಕೋತ್ಸವ, ಇತರ ಶೈಕ್ಷಣಿಕ ಕಾರ್ಯಕ್ರಮ, ಸ್ಕೌಟ್/ಗೈಡ್ಸ್ ಕಾರ್ಯಕ್ರಮ ಮಾಡುವುದರೊಂದಿಗೆ ಶಾಲೆಯ ಮಕ್ಕಳಿಗೆ ಆಕರ್ಷಣೀಯವಾಗಿದ್ದು ಎಲ್ಲಾ ಮಕ್ಕಳು ಸಂತೋಷದಿಂದ ಲವಲವಿಕೆಯಿಂದ ಬರುವಂತೆ ಮಾಡಲಾಗಿದೆ. ನನ್ನ 25 ವರ್ಷಗಳ ಮುಖ್ಯೋಪಾಧ್ಯಾಯರ ಸೇವೆಯಲ್ಲಿ, ಶಾಲೆಗಳಲ್ಲಿ, ನೀರಿನ ವ್ಯವಸ್ಥೆ, ಗೌರವ ಶಿಕ್ಷಕರ ನೇಮಕ, ಮೊದಲಾದ ಕಾರ್ಯಕ್ರಮಗಳನ್ನು ಮಾಡಿ ಜನಪ್ರಿಯತೆ ಲಭಿಸಿದೆ.

* **ತಮ್ಮ ಅನುಭವದ ಹಿನ್ನೆಯಲ್ಲಿ ವೃತ್ತಿ ಬಾಂಧವರಿಗೆ/ಪಾಲಕರಿಗೆ/ ವಿದ್ಯಾರ್ಥಿಗಳಿಗೆ ಒಂದಿಷ್ಟು ಟಿಪ್ಸ್.**

ನನ್ನ ಅನುಭವದ ಹಿನ್ನೆಲೆಯಲ್ಲಿ ವೃತ್ತಿ ಬಾಂಧವರು ತಮ್ಮ ಶಾಲೆಗಳಿಗೆ ಸಂತಸದಿಂದಲೇ ಹೋಗಬೇಕು ಮಕ್ಕಳೊಂದಿಗೆ ಅನ್ಯೋನ್ಯವಾಗಿ ಪ್ರೀತಿ ವಾತ್ಸಲ್ಯದಿಂದ ಇರಬೇಕು. ಆದರೆ ಶಿಸ್ತಿಗೆ ಪ್ರಾಧ್ಯಾನ್ಯತೆ ನೀಡಿ ಯಾವುದೇ ಕಾರಣಕ್ಕೆ ಮಕ್ಕಳನ್ನು ಭಯ್ಯಬೇಡಿ. ಬೇಧಭಾವ ಮಾಡಬೇಡಿ. ಇತರರೊಂದಿಗೆ ಪರಸ್ಪರ ಸ್ನೇಹದಿಂದ ಇರಬೇಕು.

ಮುಖ್ಯವಾಗಿ ಇಂದು ಎಳೆ ವಯಸ್ಸಿನವರೇ ದುರಾಭ್ಯಾಸಗಳಿಗೆ ತುತ್ತಾಗುತ್ತಿರುವುದು, ಕೂತಲ್ಲೇ ಕೂತು ವೀಡಿಯೋ ಗೇಮ್ ಕಂಪ್ಯೂಟರ್‌ನಲ್ಲೇ ವಿಶ್ವದರ್ಶನ ಮಾಡುತ್ತಿರುವುದು. ಪ್ರತಿಯೊಂದು ಮನೆಯ ಮಕ್ಕಳು ಮಾಡುವ ಅವಾಂತರ ಹೆತ್ತವರು ನೋಡುತ್ತಿರುತ್ತಾರೆ. ಕೆಲವರು ಸಣ್ಣ ಮಕ್ಕಳಿಗೆ ಮೊಬೈಲ್ ನೀಡಿ ಮನರಂಜನೆ ಪ್ರೋತ್ಸಾಹ ನೀಡುವುದನ್ನು ನೋಡುತ್ತಿದ್ದೇವೆ. ಆದರೆ ಖಂಡಿತಾ ಮಾಡಕೂಡದು. ಇದರಿಂದ ಮಕ್ಕಳಲ್ಲಿ ಕೆಟ್ಟ ಪರಿಣಾಮ ಬೀರುತ್ತದೆ.

ಈಗಿನ ವಿದ್ಯಾರ್ಥಿಗಳ ಕೈಯಲ್ಲಿ 'ಮೊಬೈಲ್' ಇಲ್ಲದವರನ್ನು ನೋಡುವುದು ಬಹಳಷ್ಟು ಕಡಿಮೆ. ಎಲ್ಲರಲ್ಲಿಯೂ ಇದೆ. ಆದರೆ ಹಿತ–ಮಿತವಾಗಿ ಬಳಕೆ ಮಾಡಿದರೆ ಅಡ್ಡಿಯಿಲ್ಲ, ಕ್ಷಣಕ್ಷಣಕ್ಕೂ ಅದನ್ನು ಬಳಸುವುದರಿಂದ ಸಮಯ ಹಾಳು ವಿದ್ಯಾರ್ಜನೆಗೆ ತೊಂದರೆ ಇನ್ನಿತರ ಅನೇಕ ಹಾನಿಗಳು ದುರಾಭ್ಯಾಸಗಳು ನಮ್ಮನ್ನು ಪ್ರವೇಶಿಸುತ್ತದೆ. ಆದಷ್ಟು ಇದರಿಂದ ದೂರವಿರುವುದೇ ಒಳಿತು. ಅಗತ್ಯಕ್ಕಾಗಿ ಮಾತ್ರ ಮೊಬೈಲ್‌ಗಳನ್ನು ಬಳಸುವುದು ಲೇಸು.

* **ಪ್ರಭಾವಿ ಮತ್ತು ಸರ್ವತ್ರ ಸ್ವೀಕಾರಾರ್ಹ ಶಿಕ್ಷಕನಾಗುವ ಹಿನ್ನೆಲೆಯಲ್ಲಿ ಆವಿರ್ಭವಿಸಿಕೊಳ್ಳಬೇಕಾಗದ ಅನುಷ್ಠಾನಗೊಳಿಸಿಕೊಳ್ಳಬೇಕಾದ ಗುಣ ವಿಶೇಷತೆಗಳು.**

ಒಬ್ಬ ವ್ಯಕ್ತಿಯ ವ್ಯಕ್ತಿತ್ವ ರೂಪಿಸುವಲ್ಲಿ ಶಿಕ್ಷಕನ ಪಾತ್ರ ಮಹತ್ವವಾದದ್ದು. ಪ್ರತಿಯೊಬ್ಬ ಶಿಕ್ಷಕರು ಬೇರೆ ಬೇರೆ ಗುಣವನ್ನು ಹೊಂದಿಕೊಂದಿರುತ್ತಾರೆ. ಮಾತ್ರವಲ್ಲದೆ ಅವರಲ್ಲಿ ಆದರ್ಶ ಗುಣಗಳನ್ನು ನಾವು ಕಾಣಬಹುದಾಗಿದೆ. ಶಿಕ್ಷಕರು ಸರ್ವಗುಣ ಸಂಪನ್ನರಾಗಿರುತ್ತಾರೆ. ಶಿಕ್ಷಕರು ತನ್ನ ನೈಜ ಗುಣವನ್ನು ಪ್ರತಿಯೊಬ್ಬರಲ್ಲಿಯೂ ಬಿತ್ತಲು ಪ್ರಯತ್ನಿಸುತ್ತಾರೆ. ಕಲಿಕೆಯಲ್ಲಿ ಆಸಕ್ತಿ ಇರುವ ಎಲ್ಲರಿಗೂ ಗುರುವೊಬ್ಬರು ಬೇಕೆ ಬೇಕು. ಜಗತ್ತಿನಲ್ಲಿ ಅಮ್ಮನ ಹೊರತಾಗಿ ಎಲ್ಲಾ ಸಮಸ್ಯೆಗಳಿಗೂ ದಾರಿ ದೀಪವಾಗಿ ನಿಲ್ಲಬಲ್ಲ ಸೃಷ್ಟಿ ಎಂದರೆ ಅದು ಶಿಕ್ಷಕರು ಮಾತ್ರ. ವಿದ್ಯೆ, ಜ್ಞಾನ, ಮಾಹಿತಿ ಪಡೆಯುವುದು ಈಗ ಸುಲಭವಾದರೂ, ಯಾವುದು ಸರಿ, ಯಾವುದು ತಪ್ಪು, ಎಂಬುದನ್ನು ತಿಳಿಹೇಳಲು ಗುರುವೊಬ್ಬರು ಅಗತ್ಯ. ಸರಳತೆ, ತಾಳ್ಮೆ, ಕ್ಷಮಾಗುಣ, ಪ್ರೀತಿ, ಸ್ನೇಹ, ಶಿಸ್ತು, ಸಮಗ್ರತೆಯ ಪ್ರತಿರೂಪವಾಗಿ ನಾವು ನಮ್ಮ ಜೀವನದಲ್ಲಿ ಧನಾತ್ಮಕ ಚಿಂತನೆಯನ್ನು ಬೆಳೆಸಿ ಸರಿ ಮಾರ್ಗವನ್ನು ತೋರುವವರು ಅವರೇ ಶಿಕ್ಷಕರು. ನಾವು ಸದಾ ಕಾಲ ತಪ್ಪು ಮಾಡುತ್ತಿದ್ದಾಗ ಅದನ್ನು ತಿದ್ದಿ ಬುದ್ಧಿ ಹೇಳಿ ಸರಿ ಮಾರ್ಗದಲ್ಲಿ ಹಾಗೂ ಒಳ್ಳೆಯ ಸಂಸ್ಕಾರವನ್ನು ತಿಳಿಸಿಕೊಡುವ ಎಲ್ಲ ಗುಣವನ್ನು ಹೊಂದಿರುತ್ತಾರೆ.

* **ನಿವೃತ್ತಿ ಬಳಿಕವೂ ಜೀವನವನ್ನ ಕ್ರಿಯಾಶೀಲವಾಗಿಸಿ ಹೇಗೆ ಸುಂದರಗೊಳಿಸಿಕೊಳ್ಳಬಹುದು.**

ನಿವೃತ್ತಿಯಾದ ಬಳಿಕ ಅನೇಕ ರೀತಿಯ ಸಣ್ಣಪುಟ್ಟ ಕೆಲಸಗಳನ್ನು ಮಾಡುತ್ತಾ ಕೆಲವರು ದುಡಿಯುವವರೂ ಇದ್ದಾರೆ. ಆದರೆ ಆರೋಗ್ಯ ಮುಖ್ಯವಾಗಿರುತ್ತದೆ. ಅನೇಕ ಸಂಘ ಸಂಸ್ಥೆಗಳಲ್ಲಿ ಕೂಡ ಸೇವೆ ಸಲ್ಲಿಸುವವರೂ ಇದ್ದಾರೆ. ಆದರೆ ಶಿಕ್ಷಕರಾದವರು ಸಮಯವಕಾಶ ದೊರೆತರೆ ಶಾಲಾ ಮಕ್ಕಳಿಗೆ ಪಾಠ ಹೇಳಿಕೊಡುವ ಅಭ್ಯಾಸ ಮಾಡಬಹುದು. ಹೆಚ್ಚಿನವರಿಗೆ ಬಿ.ಪಿ, ಶುಗರ್ ಇದ್ದೆ ಇರುತ್ತದೆ. ನಾನು ಬೆಳಿಗ್ಗೆ ಮತ್ತು ಸಂಜೆ ನಡೆಯುವುದರಿಂದ ಸರಳ ವ್ಯಾಯಾಮ ದಿನಾಲೂ ಮಾಡುತ್ತಿದ್ದು ಸ್ಕೌಟ್/ಗೈಡ್ಸ್ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಸಮಯ ಕಳೆಯುತ್ತಿದ್ದೇನೆ. ಕೆಲವು ಸಂಘ ಸಂಸ್ಥೆಗಳಲ್ಲಿ, ಸಹಕಾರ ಮನೋಭಾವದಿಂದ ಇದ್ದು ಸಮಾಜ ಸೇವೆ ಕೂಡಾ ಮಾಡುತ್ತಾ ನಿವೃತ್ತ ಜೀವನವನ್ನು ನೆಮ್ಮದಿಯಿಂದ ಕಳೆಯುತ್ತಿದ್ದೇನೆ. ಹೀಗೆ ನಿವೃತ್ತಿಯ ಬಳಿಕವೂ ಜೀವನವನ್ನು ಕ್ರಿಯಾಶೀಲವಾಗಿಸಿ ಸುಂದರಗೊಳಿಸಬಹುದು ಎಂದು ತಿಳಿಯಬಹುದು.

* **ನೈತಿಕ ಮೌಲ್ಯಗಳು ಸಂಸ್ಕೃತಿ ಸಂಸ್ಕಾರಗಳು ಉದಾತ್ತ ಧ್ಯೇಯೋದ್ದೇಶಗಳು ಎಲ್ಲೋ ಒಂದು ಕಡೆ ಅಧೋಮುಖಿಯಾಗುತ್ತಿದೆಯೆಂದು ಅನಿಸುವ ಈ ಹೊತ್ತಲ್ಲಿ ಅದನ್ನೆ ಎತ್ತಿ ಹಿಡಿಯುವಲ್ಲಿ ಶಿಕ್ಷಕನಾದವ ವಹಿಸಬಹುದಾದ ಪ್ರಯತ್ನವನ್ನು ತಿಳಿಸಿ**

ಶಿಕ್ಷಕರು ತಮ್ಮ ಸ್ವಾಭಿಮಾನವನ್ನು ಮೌಲ್ಯೀಕರಿಸಬೇಕು ಮತ್ತು ಈ ಕೆಟ್ಟ ವೃತ್ತಕ್ಕೆ ಕೊಡುಗೆ ನೀಡುವ ಬದಲು ತಮ್ಮ ಪರಿಸ್ಥಿತಿಯನ್ನು ನಿಯಂತ್ರಿಸಬೇಕು. ಸ್ವಯಂ ಗೌರವ ಮತ್ತು ಅನ್ಯಾಯದ ಮೇಲೆ ರಾಜಿ ಮಾಡಿಕೊಳ್ಳುವುದಕ್ಕಿಂತ ಬದಲಾಗಿ ತಮ್ಮ ಕೌಶಲ್ಯಗಳನ್ನು ಅತ್ಯುತ್ತಮ ಸ್ಥಾನದಲ್ಲಿ ಇರಿಸಲು ಪ್ರಯತ್ನಿಸಬೇಕು ಶಿಕ್ಷಣವು ಎಲ್ಲರ ಶಿಕ್ಷಣದ ಬಗ್ಗೆ ಯೋಚಿಸುವುದಿಲ್ಲ ಅದು ಒಂದು ದೊಡ್ಡ ಸಂಪತ್ತು.
→→→

➔➔➔

ಶಿಕ್ಷಣವು ವ್ಯವಹಾರವಾಗಿರಬಹುದು ಆದರ್ಶವಾದ, ಪ್ರಾಮಾಣಿಕತೆ ಮತ್ತು ನ್ಯಾಯೋಚಿತ ಅಭ್ಯಾಸವನ್ನು ಯಾವತ್ತಿಗೂ ಮರೆಯಬಾರದು. ಒಳ್ಳೆಯ ಶಿಕ್ಷಕನು ವಿಶ್ವದಾದ್ಯಂತ ಅಭ್ಯಾಸ ಮಾಡುವ ಅತ್ಯುತ್ತಮ ಅಭ್ಯಾಸಗಳೊಂದಿಗೆ ಸತತವಾಗಿ ಪ್ರಯತ್ನಿಸಬೇಕು.

* **ವಿದ್ಯಾರ್ಥಿಗಳ ಪರಮಾಪ್ತ ಗುರುಗಳು ತಾವು ಅವರ ಭಕ್ತಿ, ಗೌರವ ಸಮರ್ಪಣೆಗಳನ್ನು ಕಾಣುವಾಗ ಕಂಡು ಬರುವ ಧನ್ಯತಾ ಭಾವ.**
ನಾವು ಕಲಿಸಿದ ವಿದ್ಯಾರ್ಥಿಗಳು ಆಕಸ್ಮಿಕವಾಗಿ ಸಂಪರ್ಕಿಸಿದಾಗ ಅವರು ತೋರುವ ಭಕ್ತಿ, ಗೌರವ, ನಯ ವಿನಯಗಳು ಮಾನವೀಯ ಮೌಲ್ಯಗಳನ್ನು ಮೈಗೂಡಿಸುವಲ್ಲಿ ಸಫಲರಾಗಿದ್ದಾರೆ. ಒಳ್ಳೆಯ ಮನುಷ್ಯರೊಂದಿಗೆ ಒಳ್ಳೆಯ ಸಮಾಜ ಕಟ್ಟುವಲ್ಲಿ ಸಾಮಾರ್ಥ್ಯವನ್ನು ಹೊಂದಿದ್ದಾರೆ. ಸಾರ್ಥಕ ಜೀವನವನ್ನು ನಡೆಸಬಲ್ಲರು ಎಂಬ ಧನ್ಯತಾ ಭಾವಗಳು ಬಂದು ತುಂಬಾ ಸಂತೋಷವಾಗುತ್ತದೆ. ಹಾಗೆಯೇ ಅವರಲ್ಲಿ ಪ್ರೀತಿ ವಿಶ್ವಾಸಗಳು ಹೆಚ್ಚಾಗುತ್ತದೆ.

* **ನೀವು ದುಡಿದ ಶಿಕ್ಷಣ ಸಂಸ್ಥೆಗೆ ನೀವು ಮಾಡಿದ ಕಾಯಕಲ್ಪ** ವಿವರಿಸಿ.
ನಾನು ಶಾಲಾ ಮುಖ್ಯೋಪಾಧ್ಯಾಯರಾಗಿ ದರೆಗುಡ್ಡೆ ಶಾಲೆಯಲ್ಲಿ ಉತ್ತಮವಾದ ಶೌಚಾಲಯಗಳು, ಶಾಲಾವನ, ನಳ್ಳಿನೀರಿನ ವ್ಯವಸ್ಥೆ, ಶಾಲೆಗೆ ಆವರಣ, ಶೌಚಾಲಯಗಳು ಮತ್ತು 5 ತೆಂಗಿನಮರಗಳನ್ನು ನೆಡಲಾಗಿದೆ. ಟಿ.ವಿ. ಅಳವಡಿಕೆ ಸ್ಕೌಟ್/ಗೈಡ್ಸ್ ದಳ, ಶಾಲೆಗೆ ವಿದ್ಯುತ್ತೀಕರಣ.
ಬೆಳುವಾಯಿ (ಚರ್ಚ್‌ಬಳಿ) ಶಾಲೆಯಲ್ಲಿ ನೀರಿನ ಟಾಂಕಿ ನವೀಕರಣ, ಶೌಚಾಲಯ ನಿರ್ಮಾಣ, ವಿದ್ಯುತ್ ಜೋಡಣೆ, ನೀರಿನ ಪೈಪ್ ಜೋಡಣೆ, ಆವರಣ ಗೋಡೆ ನಿರ್ಮಾಣ, ಅಕ್ಷರ ದಾಸೋಹ ಕೊಠಡಿ ಮತ್ತು ದಾಸ್ತಾನು ಕೊಠಡಿ ನಿರ್ಮಾಣ, ಕಂಪ್ಯೂಟರ್ ಕೊಠಡಿ, ಶಾಲಾ ಸೌಂದರೀಕರಣ, ಶಾಲಾ ಕಟ್ಟಡದ ದುರಸ್ತಿ, ರಂಗ ಮಂಟಪಕ್ಕೆ ಶೆಟರ್ – ಬಾಗಿಲು ವ್ಯವಸ್ಥೆ, ಸುವರ್ಣ ಮಹೋತ್ಸವದ ನೆನಪಿಗಾಗಿ ಬಯಲು ರಂಗ ಮಂಟಪದ ರಚನೆ, ಶಾಲಾ ಕೈತೋಟ ಇತ್ಯಾದಿ.

* **ತಮ್ಮ ಸಾಂಸಾರಿಕ ಜೀವನದ ಬಗ್ಗೆ**
ತಂದೆ, ತಾಯಿಯವರು ದಿವಂಗತರಾಗಿದ್ದಾರೆ. ಈಗ ನಾನು ನನ್ನ ಶ್ರೀಮತಿ ರಮಣಿ (ಬಿಡುಗು) ಮತ್ತು ನನ್ನ ಮೂವರು ಪುತ್ರಿಯರು ಹಾಗೂ ನನ್ನ ಸಹೋದರ ಸಹೋದರಿಯೊಂದಿಗೆ ಒಂದು ರೀತಿಯ ಕೂಡು ಕುಟುಂಬದೊಂದಿಗೆ ವಾಸವಾಗಿದ್ದೇವೆ. ನಾನು ಮತ್ತು ನನ್ನ ಪತ್ನಿ ಶಿಕ್ಷಕರಾಗಿದ್ದು ವಯೋ ನಿವೃತ್ತಿ ಹೊಂದಿ ವಿಶ್ರಾಂತಿ ಜೀವನದಲ್ಲಿದ್ದೇವೆ. ನನ್ನ ಮಕ್ಕಳಾದ

1. ಪ್ರಥಮ ಪುತ್ರಿ ನಿರ್ಮಲಾ ಎಂ. ಬಿ.ಎ., ಬಿ.ಎಡ್ (ಅತಿಥಿ) ಶಿಕ್ಷಕಿಯಾಗಿ ಕೆಲಸ ನಿರ್ವಹಣೆ
2. ದ್ವಿತೀಯ ಪುತ್ರಿ ಶರ್ಮಿಳಾ ಎಂ. ಬಿ.ಎ., ಪಿಜಿಡಿಸಿಎ (ಅತಿಥಿ) ಕಂಪ್ಯೂಟರ್ ಟೀಚರ್
3. ತೃತೀಯ ಪುತ್ರಿ ಸುಮಂಗಳಾ ಎಂ. ಬಿ.ಬಿ.ಎಂ. ಪಿಜಿಡಿಸಿಎ ಕಂಪ್ಯೂಟರ್ ಟೀಚರ್

* **ಸ್ಫೂರ್ತಿದಾಯಕ ಮತ್ತು ಆದರ್ಶ ಶಿಕ್ಷಕರಾಗಿರುವ ತಮಗೆ ಸಂದ ಪ್ರಶಸ್ತಿ, ಪುರಸ್ಕಾರ, ಗೌರವ ಮತ್ತು ಸಮ್ಮಾನಗಳು.**
**ದೊರಕಿದ ಪ್ರಶಸ್ತಿಗಳು**

1. 2002–2003 ನೇ ಸಾಲಿನಲ್ಲಿ ಜನಮೆಚ್ಚಿದ ಶಿಕ್ಷಕ ಪ್ರಶಸ್ತಿ
2. 2003–2004 ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ
3. ಅಖಿಲ ಭಾರತ ಸರ್ವೋದಯ ಸಾಹಿತ್ಯಾಸಕ್ತಾರ ಒಕ್ಕೂಟ ಸಾಂಗತ್ಯ "ಶಿಕ್ಷಕ ಬಂಧು" ಎಂಬ ಬಿರುದು ನೀಡಿ ಪ್ರಶಸ್ತಿ
4. ಕನ್ನಡ ಜಾಗೃತಿ ಬಳಗ (ರಿ) ಮಂಗಳೂರು ದಶಮಾನೋತ್ಸವದ ಸನ್ಮಾನ–ಪ್ರಶಸ್ತಿ
5. 'ಕೋಟಿ ಚೆನ್ನಯ ಯುವಶಕ್ತಿ' ಅಳಿಯೂರು ವಾಲ್ಪಾಡಿ ಸನ್ಮಾನ ಪ್ರಶಸ್ತಿ (01.09.1991)
6. ಹರಿಹರ ಸೇವಾ ಸಮಿತಿ (ರಿ) ಶ್ರೀ ಸತ್ಯ ಸಾರಮಾನಿ ಸೇವಾ ಸಮಿತಿ ಪದವು ನಿಡ್ಡೋಡಿ ಸನ್ಮಾನ – ಪ್ರಶಸ್ತಿ.
ಹೀಗೆ ಹಲವಾರು ಸಂಘ ಸಂಸ್ಥೆಗಳು ಗೌರವಿಸಿ ಸನ್ಮಾನ ಪತ್ರಗಳನ್ನು ನೀಡಿರುತ್ತಾರೆ.

●

Joseph J. George
Cell : 98450 85577
Ph: 0824 - 24922050



J.T. Printers

#15, 16, 17 & 18 Shivagiri Shopping Arcade,
Near Gokarnanatheshwara Temple, Alake,
Mangalore - 575 003
Email : jtprinters2000@gmail.com
jtprint2000@yahoo.in

Dr Anand Bangera
M.D., DNB
Consultant Anesthesiologist
& Intensivist Professor
Dept. of Anasthesiology & Critical care

Dr. Vasanthi A. Bangera
MBBS., DOMS, DNB
Consultant Opthalmologist & Eye Surgeon
Associate Professor
Dept. of Opthalmology

K.S. HEGDE MEDICAL ACADEMY Deralakatte, Mangalore
Mob : 98452 78880, 9845251178
Thripthi (Daughter) Nayan (Son)

26ನೇ ಪುಟದಿಂದ

**ದೂರದೃಷ್ಟಿಯ ನಾಯಕ ಶ್ರೀ ಶಂಕರ ಪೂಜಾರಿ.....**

ವಿದ್ಯಾರ್ಥಿ ಜೀವನದಿಂದಲೇ ನಿಜ ನಾಯಕತ್ವದ ಛಾಪನ್ನು ಮೂಡಿಸುತ್ತಾ, ಕಾಲೇಜು ವಿದ್ಯಾರ್ಥಿ ಬದುಕಿನಲ್ಲಿ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾಗಿ, ಬೆಳೆಯುವ ಸಿರಿ ಮೊಳಕೆಯಲ್ಲಿ ಅನ್ನುವಂತೆ ತನ್ನ ಪ್ರಾಮಾಣಿಕ ನಿಷ್ಠೆ ಕಾರ್ಯತತ್ಪರತೆಯನ್ನು ಮೂಡಿಸಿದವರು ಶ್ರೀಯುತರು. ಇಂದು ಸಮುದಾಯ, ಸಮಾಜವನ್ನು ತಮ್ಮ ರಾಜಕೀಯ ಉನ್ನತಿಗಾಗಿ ಮೆಟ್ಟಿಲಾಗಿಸುವ ಮಂದಿಯ ನಡುವೆ ಶ್ರೀ ಶಂಕರ್ ಪೂಜಾರಿಯವರು ರಾಜಕೀಯವನ್ನು ಸಮಾಜ ಸೇವೆಯ ಕ್ಷೇತ್ರವಾಗಿಸಿ ಆ ಮೂಲಕ ಭಿನ್ನವಾಗಿ ಕಾಣುವ ಬೆರಳೆಣಿಕೆಯ ಮಂದಿಯ ನಡುವೆ ನಡುಬೆರಳಾದವರು.


ಬಿಲ್ಲವ ಸಮಾಜದ ಪ್ರಾಮಾಣಿಕ ರಾಜಕಾರಣಿಗಳ ಮಧ್ಯೆ ಶಂಕರ ಪೂಜಾರಿಯವರ ಹೆಸರು ತನ್ನದೇ ಆದ ಸ್ಥಾನವನ್ನು ಪಡೆದಿರುವುದು ಅದು ಅವರ ಸೇವಾ ಮನೋಭಾವ ಮತ್ತು ಹೋರಾಟದ ಕಾರಣದಿಂದಲೇ ಆಗಿದೆಯೆನ್ನಲು ಹೆಮ್ಮೆಯೆನಿಸುತ್ತದೆ. ಉಡುಪಿ ತಾಲ್ಲೂಕು ಪಂಚಾಯತ್ ಅಧ್ಯಕ್ಷರಾಗಿ ಉಡುಪಿ ಜಿಲ್ಲಾ ಪಂಚಾಯತ್ ಸದಸ್ಯರಾಗಿ ಅಧ್ಯಕ್ಷರಾಗಿ ಅವರು ಸಲ್ಲಿಸಿದ ಕೊಡುಗೆ ಅದು ಯಾವತ್ತೂ ಅನುಭವ ವೇದ್ಯವೇ ಆಗಿದೆ. ತಂದೆ ಸುಕ್ರ ಪೂಜಾರಿ ಹಾಗೂ ತಾಯಿ ಶ್ರೀಮತಿ ಮಂಜಿ ಪೂಜಾರ್ತಿಯವರ ಸುಪುತ್ರರಾಗಿ ಬ್ರಹ್ಮಾವರದಲ್ಲಿ ಜನಿಸಿದ ಇವರು ಬಿ.ಎ ಪದವೀಧರರಾಗಿ ಶೈಕ್ಷಣಿಕವಾಗಿಯೂ ಸಂಪನ್ನತೆಯನ್ನು ಸಾಧಿಸಿದವರು. ಬ್ರಹ್ಮಾವರದಲ್ಲಿ ವ್ಯವಹಾರದಲ್ಲಿ ತೊಡಗಿಸಿಕೊಂಡು ಶ್ರೀಲಕ್ಷ್ಮೀ ಟ್ರಾನ್ಸ್‌ಪೋರ್ಟ್ ಸಂಸ್ಥೆಯನ್ನು ಆರಂಭಿಸಿ, ಕಾವುಂಡರ್ ಕಾವಡಿಯಲ್ಲಿ ತಂಪು ಪಾನೀಯ ಘಟಕ ಪ್ರಾರಂಭಿಸಿ ಹಾಗೆಯೇ ಶ್ರೀ ಲಕ್ಷ್ಮೀ ವಸತಿಗೃಹ, ಹೋಟೇಲ್ ಮಾನಸವೆಂಬ ಹೆಸರಿನೊಂದಿಗೆ ಹೋಟೆಲ್ ಉದ್ದಿಮೆಗೂ ಕೈ ಹಾಕಿ ಸೈ ಎನಿಸಿಕೊಂಡುದುದು ಮಾತ್ರವಲ್ಲದೆ, ಈ ಎಲ್ಲಾ ವ್ಯವಹಾರದ ಮೂಲಕ ನೂರಾರು ಮಂದಿಗೆ ಉದ್ಯೋಗ ನೀಡಿ ಅವರ ಬದುಕಿನಲ್ಲಿ ಬೆಳಕನ್ನು ಹರಿಸಿದ ಭಾಗ್ಯದಾತರು, ಅನ್ನದಾತರು ಶ್ರೀ ಶಂಕರ ಪೂಜಾರಿಯವರು.

ನಿರಂತರ ಚಟುವಟಿಕೆ, ಕ್ರಿಯಾಶೀಲತೆಗೆ ಹೆಸರುವಾಸಿಯಾಗಿರುವ ಇವರು ಹತ್ತು ಹಲವಾರು ಸಂಘ ಸಂಸ್ಥೆಗಳಲ್ಲಿ ತನ್ನನ್ನು ತ್ರಿಕರಣಪೂರ್ವಕವಾಗಿ ಅರ್ಪಿಸಿಕೊಂಡು ಸಂಸ್ಥೆಗಳ ಏಳಿಗೆಗೆ ಕಾರಣಕರ್ತರಾಗಿದ್ದಾರೆ. ಬಿಲ್ಲವ ಸಂಘ ಬ್ರಹ್ಮಾವರ ಇದರ ಅಧ್ಯಕ್ಷರಾಗಿ, ಉಡುಪಿ ತಾಲ್ಲೂಕು ಪಂಚಾಯತ್ ಸದಸ್ಯರಾಗಿ, ಅಧ್ಯಕ್ಷರಾಗಿ, ಉಡುಪಿ ಜಿಲ್ಲಾ ಪಂಚಾಯತ್ ಸದಸ್ಯರಾಗಿ, ಅಧ್ಯಕ್ಷರಾಗಿ, ಉಡುಪಿ ತಾಲ್ಲೂಕು ಶ್ರೀ ನಾರಾಯಣಗುರು ಸೇವಾ ಸಂಘಕ್ಕೆ ಒಳಪಟ್ಟ ಕೂಟದ ಅಧ್ಯಕ್ಷರಾಗಿ ಹೀಗೆ ತನ್ನ ಸೇವಾ ಕಾರ್ಯಕ್ಷೇತ್ರವನ್ನು ವಿಸ್ತಾರಗೊಳಿಸಿಕೊಂಡು ಹಲವಾರು ಬಡ ಕುಟುಂಬದ ಮುಳಿ ಹುಲ್ಲಿನ ಮನೆಗಳಿಗೆ ಕಾಯಕಲ್ಪ ನೀಡಿದ ಹೃದಯ ಶ್ರೀಮಂತರೂ ಆಗಿದ್ದಾರೆ. ಸದಾ ಕ್ರಿಯಾಶೀಲತೆಯನ್ನು ಮೆರೆಯುತ್ತಾ ಇತ್ತೀಚೆಗೆ ಬ್ರಹ್ಮಾವರದಲ್ಲಿ ಲಕ್ಷೋಪ ಮಂದಿ ಬಿಲ್ಲವರನ್ನು ಒಂದು ಸೂರಿನಡಿ ಸೇರಿಸಿ ಐತಿಹಾಸಿಕ ಬೃಹತ್ ಸಮಾವೇಶವನ್ನು ನಡೆಸಿ ಬಿಲ್ಲವರನ್ನು ಪ್ರವರ್ಗ 2ಎ ಯಿಂದ ಪ್ರವರ್ಗ 1ಕ್ಕೆ ಉನ್ನತೀಕರಿಸಬೇಕೆಂಬ ಹಾಗೂ ಇನ್ನಿತರ ಬೇಡಿಕೆಗಳನ್ನು ಸರಕಾರದೆದುರು ಮಂಡಿಸಿ ಇಡೀ ಸಮಾವೇಷವನ್ನು 'ನ ಭೂತೋ' ಎಂದೆನಿಸುವಂತೆ ಮಾಡಿ ಬಿಲ್ಲವರ ಶಕ್ತಿಯನ್ನು ಪ್ರದರ್ಶಿಸುವಲ್ಲಿನ ರೂವಾರಿಯೆನಿಸಿದವರು ಶ್ರೀ ಶಂಕರಪೂಜಾರಿ ಇವರು. ಹೀಗಾಗಿ ಪ್ರಾರಂಭದಲ್ಲೇ ಹೇಳಿದ ಹಾಗೆ ಅವರೋರ್ವರು ನಿಜ ಅರ್ಥದ ನಾಯಕರೆನಿಸಿದ್ದಾರೆ.ಪತ್ನಿ ಶ್ರೀಮತಿ ಸ್ಮಿತಾ, ಮಕ್ಕಳಾದ ಶ್ರೀಲಕ್ಷ್ಮೀ ಹಾಗೂ ಸಿದ್ಧಾರ್ಥರೊಂದಿಗೆ ನೆಮ್ಮದಿಯ ಜೀವನವನ್ನು ಸಾಗಿಸುತ್ತಿರುವ ಇವರ ವ್ಯಷ್ಠಿ ಮತ್ತು ಸಮಷ್ಠಿಯ ಕಾರ್ಯಾಶೋತ್ತರಗಳು ಯಾವಾಗಲೂ ಈಡೇರುತ್ತಿರಲಿ. ರಾಜಕೀಯವಾಗಿ ಅವರು ಇನ್ನೂ ಎತ್ತರಕ್ಕೇರುವಂತಾಗಲಿ, ನಮ್ಮ ಸಮಾಜಕ್ಕೆ ಅವರಿಂದ ಇನ್ನಷ್ಟು ಕೊಡುಗೆಗಳು ಸಲ್ಲಲಿ ಎಂಬುದೇ ಆತ್ಮಶಕ್ತಿಯ ಆಶಯ ಮತ್ತು ಹಾರೈಕೆಯಾಗಿದೆ.

## ನುಡಿಮುತ್ತು

* ಆತ್ಮವಿಶ್ವಾಸ ಉಳಿಸಿಕೊಂಡು ಮಿಕ್ಕೆಲ್ಲವನ್ನು ಕಳೆದುಕೊಂಡರೂ ಚಿಂತೆಯಿಲ್ಲ ಏಕೆಂದರೆ ಆತ್ಮವಿಶ್ವಾಸ ಬಲದಿಂದ ಎಲ್ಲವನ್ನೂ ಸಂಪಾದಿಸಬಹುದು.
* ದೇವಸ್ಥಾನ ಮಾನವನ ಏಕಾಗ್ರತೆ, ಏಳಿಗೆಗೆ ಒಂದು ಸಾಧನ ಮಾತ್ರ ಅದರ ಮುಂದಿನ ಮೆಟ್ಟಲು ಶಿಕ್ಷಣ.
* ಅನ್ಯರ ಸಂತೋಷ ತನ್ನ ಸಂತೋಷ. ತನ್ನ ಸಂತೋಷದ ದಾರಿ ಇತರರಿಗೆ ಸಂತೋಷ ನೀಡುವದ್ದಾಗಿರಬೇಕು.
* ಜ್ಞಾನ ಮಾತ್ರ ಸರ್ವತ್ರ ಪ್ರಕಾಶಿಸುತ್ತದೆ. ಆದುದರಿಂದ ಜ್ಞಾನಾರ್ಜನೆಯೇ ನಮ್ಮ ಧ್ಯೇಯವಾಗಿರಬೇಕು.
* ಜನಸೇವೆ ನಮ್ಮ ಋಣದ ಹೊರೆ ಹಗುರಗೊಳಿಸುವ ದಾರಿ. ನಾವು ಉಪಕಾರ ಮಾಡುತ್ತೇವೆಂಬ ಭ್ರಮೆ ಸರಿಯಲ್ಲ.

– ನಾರಾಯಣ ಗುರು

# A Bright Future to the Students

## ... Commerce Subject

✍ **Dr Suresh Poojary,**
Dean, Faculty of Commerce, St Aloysius College (Autonomous), Mangalure, DK, Mobile: 9448696436

**Commerce is an application oriented course, which has vast opportunities for future careers for commerce students. Scope for Commerce increased with the development taking place in Indian and the world economies.**

India is a fast growing economy in every sector. As per the Statistics given by the Central Statistical Report, New Delhi, Reserve Bank of India Report, World Bank Report, Indian economy is growing at 7.4%;it is the 7th largest in the world measured by GDP. India is the third largest economy by purchasing power parity. India is classified as a newly industrialized country and one of the G-20 major economies. It is the fastest growing service sectors in the world. This growth of the economy provided vast opportunities for skilled and talented commerce graduates in India. Selecting commerce as a career option is one of the best to grab the existing and future opportunities.

**Courses available in Commerce stream**

After Secondary School, one can take commerce with a definite aim of taking challenging career in his/her life. Different combinations in commerce are offered by different Colleges, but Accountancy, Business Studies and Economics must be the basic subject to be studied by every commerce student. Other subjects are optional papers can be selected as per the interest of the student. After passing 12th Standard from Commerce stream from a recognized Board, one can enroll for a Degree Programme as per the interest of the student which is given below;

| Degree Programmes (3 years) | Professional Programmes – can be pursued after 12th (4-5 Years) | Masters Programmes after Degree/ Doctorate Programmes (PhD) | Diploma Programmes (2 Years after 12th Post Graduate Diploma (after Degree) |
|---|---|---|---|
| * Bachelor of Commerce (B. Com)<br>* Bachelor Commerce (B. Com Honours)<br>* Bachelor of Commerce (B. Com - Logistics and Supply Chain Management)<br>* Bachelor of Business Administration (BBA) | * Chartered Accountancy – CA<br>* Institute of Cost and Works Accounting (ICWA)<br>* Company Secretary – CS<br>* Chartered Financial Analyst – CFA<br>* Associated Chartered Certified Accountant – ACCA | * Master of Commerce (M. Com)<br>* Master of Business Administration (MBA)<br>* Master of Arts in Economics (MA Economics)<br>* Master of Social Work (MSW)<br>* Master of Hospital Administration (MHA) | * Diploma in Travel and Tourism<br>* Diploma in Hotel Management<br>* Diploma in Air Hostess and Flight Steward<br>* Diploma in Education<br>* Diploma in Management<br>→→→ |

| | | | |
|---|---|---|---|
| * Bachelor of Business Management (BBM)<br>* Bachelor of Business Studies (BBS)<br>* BBA – LLB<br>* BA – LLB<br>* Bachelor of Computer Application (BCA)<br>* B. Com – Computers<br>* BA – Economics<br>* Bachelor of Hotel Management (BHM)<br>* Bachelor in Fashion Design<br>* Bachelor of Education (BEd) | * Certified Management Accountant – CMA<br>* Certificate from National Institute of Securities Market, Mumbai<br>* Institute of Actuaries of India, Mumbai | * Master of Hotel Management (MHM)<br>* Master of Tourism and Hospitality Science<br>* Master of Corporate Psychology (MSc in Corporate Psychology)<br>* Master of Philosophy (M. Phil)<br>* Management Programmes in foreign countries<br>* PhD in Various branches of Commerce and Management | * Diploma in Advertising<br>* Diploma in different branches of Management<br>* Post Graduate Diplomas in different branches of Management such as PGDBM, PGDHRM, PGDFM, PGDMM, PGDCA |

* **Dr Suresh Poojary, Dean, Faculty of Commerce, St Aloysius College (Autonomous), Mangalure, DK, Mobile: 9448696436**

**Commerce Graduates and Career Options:**

**Commerce Graduates have two options:**

a. Seek direct entry into immediate employment

b. Prepare himself for a career of his choice

**Job Opportunities open to them are as follows:**

a. Competing for Government posts through competitive examinations conducted by UPSC or KPSC. Union Public Service Commission conducts Civil Service Examinations to recruit IAS, IPS, IFS, IRS, Indian Postal Service, Indian Customs and Central Excise Services, Indian Income Tax Service, etc. Karnataka Public Service Commission conducting KAS Examinations to recruit the job of State civil service, judicial service, secretarial and ministerial service etc.

b. Competing for other All-India posts through competitive examinations conducted by Staff Selection Commission – C and D Group, Non-gazetted posts in the Departments of Government of India are recruited through written tests and interview.

c. Preparing for Competitive Examinations conducted by Railway Recruitment Board, Institute of Banking Personnel Selection (IBPS), LIC and other Insurance Companies, Airlines and Airport Authorities.

Attractivecareer opportunities are available for Commerce graduates and post graduates in public and private sectors in profit and non-profit organizations. Career options are available in the following areas; ➔➔➔

➔➔➔

**Career in Banking:**

Public/Private Sector Indian and foreign banks recruit graduates and postgraduates in Commerce for clerical and probationary officers' posts on the basis of All-India level examinations conducted by the Institute of Banking Personnel Selection (IBPS). Private sector and foreign sector banks also recruit MBA's, CA's, CFA's etc at junior positions through direct interviews and campus recruitments.

**Career in Accounting and Taxation:**

After 10+2, by passing CPT or after B. Com/BBA can pursue Chartered Accountancy Course (CA) offered by the Institute of Chartered Accountants of India, New Delhi. CA examinations are conducted in three levels, first, Common Proficiency Test (CPT) after 10+2 or direct entry after Degree, second stage is Integrated Professional Competency Course (IPCC), and the third stage is Final Course. Many Universities included taxation as an important paper in Degree curriculum. Taxation is one of the areas having vast scope for jobs and private consultation in the area of auditing, tax consultant, tax policy analysts, tax collector etc. Chartered Accountants are in great demand in India. The Institute of Cost and Works Accountants of India conducts CWA examinations. CWAs can either take up jobs or do independent practices in cost accounting field.

**Career in Forensic Accounting:**

Forensic Accounting is an emerging are which involves legal investigation and analysis of financial documents of the client/firms who is involved in legal dispute and frauds. With growing number of fraud cases, the demand for forensic accountant is on the rise in government and corporate sector. Several Institutions are offering training and education in forensic accounting such as India forensic, Pune, Institute of Chartered Financial Analysts of India University, Tripura.

**Career in Company Secretary:**

The Institute of Company Secretaries of India (ICSI) regulates the profession of company secretaries in India. Company secretaries can find well paid positions in the corporate sector, banks and financial institutions. Ample opportunities for private practice are also available for company secretaries.

**Career in Investment Banking:**

Investment banker is a person/institution which helps in raising funds, endorsing securities, trading of stocks and bonds, facilitating mergers and acquisitions, maintain broker-dealer operations, providing financial guidance, issuing and placements of stocks, etc. Many prominent institutions in India are offering investment banking courses.

**Career in Financial Analysis:**

Course like Certified Financial Analysts is especially designed for financial analysis. In this field job options are available in India and overseas. Banks and corporate firms are always in need of good financial analysts. Reputed Institutions like Birla Institute of Technology and Science, Rajasthan; Narsee Monzee Institute of Management, Mumbai; SP Jain Institute ofManagement and Research, Mumbai; Xavier Institute of Management, Bubaneshwara, ICFAI University, Hyderabad, Institute of Management, Bangalore, etc are offering CFA courses.

**Career in Insurance:**

Indian insurance industry has witnessed exceptional growth with the participation of public and private sector. Various posts of assistants to officers' position are available in insurance sector, recruited through written test and interview as per IRDA guidelines. Actuarial Society of India, Mumbai conducts actuarial examination which is the license to become

➔➔➔

➔➔➔

insurance actuary, which has great demand in India.

**Career in Management:**

Professional MBAs from reputed Management Institutes like IIMs, XLRI and Management 'B' Schools have good career opportunities in lower, middle and senior level management cadres in the corporate sector.

**Career in Marketing:**

Industries and service organizations offer marketing jobs in the field of sales, advertising and distribution management. Marketing is very attractive and high earning area for hard working and challenging youths.

**Career inCapital Market and Mutual Fund**s:

Capital Market includes Stock Exchanges and Mutual Funds. Capital Market is a good field of earning for youngsters, because it is highly remunerative. All brokers and dealers in the stock market must obtain NCFM certificate (National Stock Exchange Certification in Financial Markets). Mutual Fund industries offer multiple career options to the youths. Securities and Exchange Board of India (SEBI) made mandatory for persons/institutions associated with MF industries to obtain Certificate (Advisor Module) and Registration number from the Association of Mutual Funds of India (AMFI). Graduates having AMFI certificate can work with public and private sector mutual funds companies.

**Career in Teaching and Research:**

Commerce graduates and post graduates find many opportunities as teachers in higher secondary institutions, Colleges, Management Institutes and Universities. Higher Secondary teachers with BEd qualification are eligible to teach up to 12th Standard. M. Com/MBAs have opportunities to teach in Colleges, management institutes and Universities, PhD is preferred qualification. There is a good opportunity to involve in research in various branches of commerce and industry.

**Opportunities for Self Employment and Entrepreneurship:**

Commerce graduates can set up own business with his business knowledge. Government supports a lot through various schemes like Make in India, Start Up, self employment loans through banks and support through District Industries Centre. Youths must utilize those self employment programmes of the Government.

**Career in IT and ITES Sector:**

Lots of jobs are available for commerce graduates in Information Technology and Information Technology Enabled Services. Many BPOs and Call Centre organizations managed by Multi National Corporations (MNCs) offer different categories of jobs to commerce students. MNCs visit Colleges to recruit various positions of their organizations.

Defense services offer a wide selection of specializations in various positions for commerce graduates. Commerce graduates also find career opportunities in journalism field. Employment opportunities are more in the foreign countries for commerce graduates in clerical, accounting, computer, teaching, air hostess and marketing fields.Ample opportunities are available in Income Tax, State and Central Excise and Railways which are not grabbed by the graduates of this part of our country. Communication skills, computer skills, human relations skills and knowledge in the field of commerce take commerce students to the higher positions and make their life meaningful and successful.

# ಬ್ಯಾಂಕುಗಳ ಶಿಕ್ಷಣ ಸಾಲ

✍ ಲೋಹಿದಾಸ್ ಆರ್.
ವಕೀಲರು ಹಾಗೂ ತೆರಿಗೆ ತಜ್ಞರು, ಮಂಗಳೂರು

> ಹಣವಂತರಿಗೆ ವಿಶೇಷ ಮಣೆ ಹಾಕುವ ಇಂದಿನ ಕಾಲದಲ್ಲಿ 'ವಿದ್ವಾನ್ ಸರ್ವತ್ರ ಪೂಜ್ಯತೇ' ಎಂಬ ಸಂಸ್ಕೃತ ಸುಭಾಷಿತ ಎಷ್ಟು ಪ್ರಸ್ತುತವೋ ಗೊತ್ತಿಲ್ಲ ಆದರೆ "ಸಂಘಟಿತರಾಗಿರಿ ನೀವು ಶಕ್ತಿಶಾಲಿಯಾಗುವಿರಿ; ವಿದ್ಯಾಭ್ಯಾಸ ಪಡೆಯಿರಿ ನೀವು ಸ್ವತಂತ್ರರಾಗುವಿರಿ" ಎಂಬುದಾಗಿ ತಿಳಿಹೇಳಿದ ಹಾಗೂ ಹಿಂದುಳಿದ ಜನಾಂಗಗಳ ಏಳಿಗೆಗಾಗಿ ತನ್ನ ತಪೋಬಲ ಹಾಗೂ ಶಕ್ತಿಯನ್ನು ವ್ಯಯಿಸಿ ಶ್ರಮಿಸಿದ ಬ್ರಹ್ಮಶ್ರೀ ನಾರಾಯಣ ಗುರುಗಳ ಈ ಮೇಲಿನ ಬೋಧನೆ ಎಂದೆಂದಿಗೂ ಪ್ರಸ್ತುತ.

ವಿದ್ಯಾರ್ಥಿಗಳ ಫಲಿತಾಂಶಗಳು ಒಂದೊಂದೇ ಪ್ರಕಟವಾಗುತ್ತಿವೆ. ಕೆಲವೊಂದು ವಿದ್ಯಾರ್ಥಿಗಳ ಮೊಗದಲ್ಲಿ ಮಂದಹಾಸ ಮಿನುಗುತ್ತಿದ್ದರೆ, ಕೆಲವೊಂದು ವಿದ್ಯಾರ್ಥಿಗಳ ಮೊಗದಲ್ಲಿ ಚಿಂತೆ! ಅದರಲ್ಲೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಮನದಲ್ಲಿ ಮುಂದೇನೋ ಎಂಬ ಕಳವಳ! ಇಂದಿನ ತುಟ್ಟಿಯಾದ ದಿನಗಳಲ್ಲಿ ಅನೇಕ ಮಂದಿ ಬಡವರಿಗೆ ಹಾಗೂ ಮಧ್ಯಮ ವರ್ಗದ ಜನರಿಗೆ ಉತ್ತಮ ಶಿಕ್ಷಣ ಎಂಬುದು ಇಂದಿಗೂ ಮರೀಚಿಕೆಯಾಗಿಯೇ ಉಳಿದಿದೆ. ಮಾರ್ಗದ ಬದಿಯ ಪ್ಲಾಸ್ಟಿಕ್ ಜೋಪಡಿಯಲ್ಲಿ ವಾಸವಾಗಿದ್ದುಕೊಂಡು ಭಿಕ್ಷೆ ಬೇಡಿ ತನ್ನ ಮಗಳನ್ನು ಎಂ.ಎಸ್.ಡಬ್ಲು. ವರೆಗೂ ಓದಿಸಿ, ಅವಳನ್ನು ಐ.ಎ.ಎಸ್. ಆಫೀಸರ್ ಮಾಡಬೇಕೆಂಬ ಮಹದಾಸೆ ಹೊಂದಿದ ಭಿಕ್ಷುಕಿ ತಾಯಿಯ ಬಗ್ಗೆ ಟಿ.ವಿ. ಮಾಧ್ಯಮಗಳಲ್ಲಿ ನೋಡಿದಾಗ ಮನಸ್ಸು ಕರಗುತ್ತದೆ. ಇಂತಹ ಅದೆಷ್ಟೋ ಬಡವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಎಷ್ಟೇ ಮುಂದುವರಿದಿದ್ದರೂ ಸಹಾ ಆರ್ಥಿಕ ಕೊರತೆಯಿಂದಾಗಿ ಉನ್ನತ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಕೂಲಿನಾಲಿ ಮಾಡಿಯೋ ಯಾ ಸಣ್ಣಪುಟ್ಟ ನೌಕರಿ ಮಾಡಿಯೋ ಹೊಟ್ಟೆ ತುಂಬಿಸಿಕೊಳ್ಳಲು ಪರದಾಡುವ ಮಂದಿಗೆ ತಮ್ಮ ಮಕ್ಕಳಿಗೆ ಇಂಜಿನಿಯರಿಂಗ್, ಮೆಡಿಕಲ್ ನಂತಹ ಉನ್ನತ ಶಿಕ್ಷಣ ಕೊಡಿಸುವುದು ಸುಲಭದ ಮಾತಲ್ಲ. ವಿಪರ್ಯಾಸವೆಂದರೆ, ಭ್ರಷ್ಟ ರಾಜಕಾರಣಿಗಳ ಹಾಗೂ ಅವರಿಗೆ ಸಾಥ್ ನೀಡುವ ಲಂಚಕೋರ ಅಧಿಕಾರಿಗಳ ಖಜಾನೆಗಳು ಹಲವು ತಲೆಮಾರು ಕೂತು ತಿಂದರೂ ಕರಗದಷ್ಟು ತುಂಬಿ ತುಳುಕುತ್ತಿದೆ. ಆಗೊಮ್ಮೆ ಈಗೊಮ್ಮೆ ಇಂತಹವರ ಮೇಲೆ ಐ.ಟಿ. ಹಾಗೂ ಸಿ.ಬಿ.ಐ. ದಾಳಿ ನಡೆಸಿದ ಸುದ್ದಿ ಕೇಳಿಸುತ್ತದೆ. ಕೆಲವೇ ದಿನಗಳ ಅಂತರದಲ್ಲಿ ಎಲ್ಲಾ ತಣ್ಣಗಾಗುತ್ತದೆ. ಅವರಂತೂ ಮೊದಲಿನಂತೆಯೇ ಇರುತ್ತಾರೆ! ಇಂತಹ ಭ್ರಷ್ಟರ ನಡುವೆಯೂ

ವಿದ್ಯಾರ್ಥಿಗಳಿಗೆ / ಪೋಷಕರಿಗೆ ಶಿಕ್ಷಣ ಸಾಲದ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇವರನ್ನು ಸಂಪರ್ಕಿಸಬಹುದು. (ಫೋನ್ ನಂಬ್ರ 9845175974 ಹಾಗೂ 0824–2491074)

ಕೆಲವೊಂದು ಸೇವಾ ಮನೋಭಾವದ, ಬಡವರ ಕಷ್ಟಗಳಿಗೆ ಸ್ಪಂದಿಸುವ ಸಹೃದಯಿ ರಾಜಕಾರಣಿಗಳಿದ್ದಾರೆ. ಇಂತಹ ಕೆಲವು ನಿಸ್ವಾರ್ಥಿ ಸೇವಾ ಮನೋಭಾವದ, ರಾಜಕಾರಣಿಗಳ ಹಾಗೂ ಅಧಿಕಾರಿಗಳ ಪ್ರಯತ್ನದ ಫಲವಾಗಿ ಬಡ ವಿದ್ಯಾರ್ಥಿಗಳಿಗೂ ಇಂದು ಶಿಕ್ಷಣ ಸಾಲ (Education Loan) ಬ್ಯಾಂಕುಗಳಲ್ಲಿ ದೊರೆಯುತ್ತಿದೆ. ಆದರೆ ಹೆಚ್ಚಿನ ಜನರಿಗೆ/ ವಿದ್ಯಾರ್ಥಿಗಳಿಗೆ ಈ ಬಗ್ಗೆ ಸಂಪೂರ್ಣ ಮಾಹಿತಿಯೇ ಇಲ್ಲ. ಅಂತಹವರ ಮಾಹಿತಿಗಾಗಿ ಬ್ಯಾಂಕುಗಳು ನೀಡುವ ಶಿಕ್ಷಣ ಸಾಲದ ಬಗ್ಗೆ ಇಲ್ಲಿದೆ ಒಂದು ಪಕ್ಷಿ ನೋಟ.

**1. ಶಿಕ್ಷಣ ಸಾಲ ಎಲ್ಲೆಲ್ಲಿ ದೊರೆಯುತ್ತದೆ?**

ಎಲ್ಲಾ ರಾಷ್ಟ್ರೀಕೃತ ಬ್ಯಾಂಕ್ ಶಾಖೆಗಳಲ್ಲಿ ಹಾಗೂ ಕೆಲವೊಂದು ರಾಷ್ಟ್ರೀಕರಣವಾಗದ ಶೆಡ್ಯೂಲ್ಡ್ ಬ್ಯಾಂಕ್‌ಗಳಲ್ಲಿ ಕೂಡಾ.

**2. ಯಾವ ಯಾವ ಕೋರ್ಸ್‌ಗಳಿಗೆ ಸಾಲ?**

ಅಧಿಕೃತ ಮನ್ನಣೆ ಪಡೆದ ಸಂಸ್ಥೆಗಳು ನೀಡುವ ಈ ಕೆಳಗಿನ ಕೋರ್ಸ್‌ಗಳಿಗೆ:

* ಪದವಿ ಶಿಕ್ಷಣ (B.A., B.Sc., B.Com., B.B.M., B.C.A. ಹಾಗೂ ಇನ್ನಿತರ ಸಮನಾದ ಯಾವುದೇ ಡಿಗ್ರಿ ಯಾ ಡಿಪ್ಲೋಮಾ ಕೋರ್ಸುಗಳು)
* ಪ್ರೊಫೆಷನಲ್ ಪದವಿ ಶಿಕ್ಷಣ (B.E., M.B.B.S., BAMS, BHMS, BDS, ಯಾ ಇನ್ನಿತರ ಪ್ರೊಫೆಷನಲ್ ಕೋರ್ಸುಗಳು)
* ಸ್ನಾತಕೋತ್ತರ ಪದವಿ ಶಿಕ್ಷಣ (M.A., M.Sc., M.Com., MBA, MCA, MSW, M.D., M.Tech., M.S. ಇತ್ಯಾದಿ)
* C.A., CFA., ICWA ಶಿಕ್ಷಣ
* IIT ಹಾಗೂ IIM ಸಂಸ್ಥೆಗಳು ನೀಡುವ ಪದವಿ ಹಾಗೂ ಸ್ನಾತಕೋತ್ತರ ಪದವಿ ಶಿಕ್ಷಣ
* ಅಧಿಕೃತ ಮನ್ನಣೆ ಪಡೆದ ಸಂಸ್ಥೆಗಳು ನೀಡುವ ಏರೋನಾಟಿಕಲ್ ಇಂಜಿನಿಯರಿಂಗ್, ಶಿಪ್ಪಿಂಗ್, ಪೈಲಟ್ ಟ್ರೈನಿಂಗ್, ಹೋಟೆಲ್ ಮ್ಯಾನೇಜ್‌ಮೆಂಟ್ ಇತ್ಯಾದಿ ಡಿಗ್ರಿ / ಡಿಪ್ಲೋಮಾ ಕೋರ್ಸುಗಳು
* ಹತ್ತನೇ ತರಗತಿ (SSLC) ನಂತರದ ಐ.ಐ.ಟಿ./ ಪಾಲಿಟೆಕ್ನಿಕ್ ಕೋರ್ಸುಗಳು
* ಮಾನ್ಯತೆ ಪಡೆದ ಸಂಜೆ ಕಾಲೇಜುಗಳು ನೀಡುವ ಪದವಿ ಶಿಕ್ಷಣ

→→→

→→→

* ಪರದೇಶಗಳಲ್ಲಿನ ಮನ್ನಣೆ ಪಡೆದ ಸಂಸ್ಥೆಗಳು ನೀಡುವ ಪದವಿ, ಸ್ನಾತಕೋತ್ತರ ಪದವಿ ಶಿಕ್ಷಣಗಳು
* ಕೆಲವೊಂದು ಬ್ಯಾಂಕುಗಳು (ಉದಾ: ಬ್ಯಾಂಕ್ ಆಫ್ ಬರೋಡಾ) ನರ್ಸರಿ ಶಿಕ್ಷಣದಿಂದ ತೊಡಗಿ ಹನ್ನೆರಡನೇ ತರಗತಿವರೆಗೆ (P.U.C.) ಕೂಡಾ ಶಿಕ್ಷಣ ಸಾಲ ನೀಡುವ ಯೋಜನೆ ರೂಪಿಸಿದ್ದಾರೆ. ಆದರೆ ಈ ಸಾಲವನ್ನು ಪೋಷಕರ ಆದಾಯಕ್ಕನುಗುಣವಾಗಿ ಮಂಜೂರು ಮಾಡಿ ಮುಂದಿನ ವರ್ಷದ 12 ತಿಂಗಳೊಳಗೆ ಮರುಪಾವತಿ ಮಾಡಬೇಕೆಂಬ ನಿಯಮವಿದೆ.

**3. ಶಿಕ್ಷಣ ಸಾಲ ಪಡೆಯಲು ಅರ್ಹತೆಯೇನು?**

* ಭಾರತೀಯ ರಾಷ್ಟ್ರೀಯತೆ ಹೊಂದಿರಬೇಕು.
* ಈ ಹಿಂದಿನ ಕಲಿಕೆಯಲ್ಲಿ ಹಾಗೂ ಹತ್ತನೇ ತರಗತಿ (S.S.L.C.) ಹಾಗೂ ಹನ್ನೆರಡನೇ ತರಗತಿ (P.U.C.) ಯಾ ಪದವಿ ಪರೀಕ್ಷೆಗಳಲ್ಲಿ ಯಾ ಸಂಬಂಧಿಸಿದ ಯಾವುದೇ ಪರೀಕ್ಷೆಗಳಲ್ಲಿ ಉತ್ತಮ ಅಂಕ ಪಡೆದಿರಬೇಕು. ಆದರೆ ಕನಿಷ್ಟ ಅಂಕದ ನಿಯಮಗಳ ಸಡಿಲಿಕೆ ಬ್ಯಾಂಕುಗಳ ವಿವೇಚನೆಗೆ ಬಿಟ್ಟದ್ದು. ಒಂದು ವೇಳೆ ವಿದ್ಯಾರ್ಥಿ ಹಿಂದೆ ಫೈಲ್ ಆಗಿದ್ದಲ್ಲಿ ಸೂಕ್ತ ಕಾರಣ ಇದ್ದಲ್ಲಿ ಬ್ಯಾಂಕುಗಳು ಶಿಕ್ಷಣ ಸಾಲವನ್ನು ನೀಡಬಹುದು.
* ಸಾಲ ಪಡೆಯುವ ವಿದ್ಯಾರ್ಥಿಗಳ ಪೋಷಕರ ವಾಸ್ತವ್ಯ ಸಾಮಾನ್ಯವಾಗಿ ಸಾಲನೀಡುವ ಬ್ಯಾಂಕುಗಳ ಸರಹದ್ದಿನೊಳಗಿರಬೇಕು. ಒಂದು ವೇಳೆ ಪೋಷಕರು ನೌಕರಿ ನಿಮಿತ್ತ ಬೇರೆ ಊರುಗಳಲ್ಲಿ ಸೇವೆ ಸಲ್ಲಿಸುತ್ತಿದ್ದರೆ ಅಲ್ಲಿಯ ಬ್ಯಾಂಕುಗಳು ಸಾಲ ನೀಡಬಹುದಾಗಿದೆ.

**4. ಯಾವ ಯಾವ ಖರ್ಚು ವೆಚ್ಚಗಳಿಗೆ ಸಾಲ?**

* ಶಿಕ್ಷಣ ಸಂಸ್ಥೆಗೆ ಕಟ್ಟಬೇಕಾದಂತಹ ಶಿಕ್ಷಣ ಶುಲ್ಕ, ಪರೀಕ್ಷಾ ಶುಲ್ಕ, ಲೆಬೋರೇಟರಿ ಶುಲ್ಕ, ಮಾತ್ರವಲ್ಲದೇ ಕಾಷನ್ ಡೆಪೋಜಿಟ್, ಬಿಲ್ಡಿಂಗ್ ಫಂಡ್ ಮತ್ತಿತರ ಡಿಪಾಸಿಟ್‌ಗಳು
* ಶಿಕ್ಷಣಕ್ಕೆ ಸಂಬಂದಿಸಿದ ಪುಸ್ತಕ ಸಾಮಾಗ್ರಿಗಳು, ಕಂಪ್ಯೂಟರ್, ಲಾಪ್‌ಟಾಪ್, ಸಮವಸ್ತ್ರ ಇತ್ಯಾದಿ ಅವಶ್ಯಕ ಸಾಮಾಗ್ರಿಗಳ ವೆಚ್ಚ.
* ಶೈಕ್ಷಣಿಕ ಪ್ರವಾಸ ಹಾಗೂ ಪ್ರಾಜೆಕ್ಟ್ ವರ್ಕ್‌ಗಳಿಗೆ ಸಂಬಂದಿಸಿದ ವೆಚ್ಚ
* ಹಾಸ್ಟೆಲ್ ಶುಲ್ಕ (ಊಟ ತಿಂಡಿ ಸೇರಿ). ಒಂದು ವೇಳೆ ಹಾಸ್ಟೆಲ್ ಸೌಲಭ್ಯವಿಲ್ಲದಿದ್ದಲ್ಲಿ ಸೂಕ್ತ ದಾಖಲೆಗಳನ್ನು ಸಲ್ಲಿಸಿದಲ್ಲಿ ಸಂಬಂಧಪಟ್ಟ ರೂಂ ಬಾಡಿಗೆ, ಊಟ ತಿಂಡಿ ಖರ್ಚು.
* ಪರದೇಶಗಳಲ್ಲಿನ ವ್ಯಾಸಂಗವಾದರೆ ವಿಮಾನ ಯಾನ ವೆಚ್ಚ ಕೂಡಾ ಸೇರಿಸಲಾಗುವುದು.
* ಅವಶ್ಯಕತೆಗನುಗುಣವಾಗಿ ಕೆಲವೊಮ್ಮೆ ರೂ. 50,000/– ದವರೆಗೆ ದ್ವಿಚಕ್ರ ವಾಹನ ಕೊಳ್ಳಲು ಕೂಡಾ ಬ್ಯಾಂಕುಗಳು ಶಿಕ್ಷಣ ಸಾಲದಡಿ ಮಂಜೂರಾತಿ ನೀಡಬಹುದಾಗಿದೆ.

ಎಲ್ಲಾ ಸಾಲದ ಮೊತ್ತವನ್ನು ಸೂಕ್ತ ದಾಖಲಾತಿಗಳನ್ನು ಪಡೆದುಕೊಂಡು ಸಂಬಂಧಪಟ್ಟ ಶಿಕ್ಷಣ ಸಂಸ್ಥೆಗೆ ಯಾ ಇತರರಿಗೆ ಬ್ಯಾಂಕುಗಳು ಸಮಯ ಸಮಯಕ್ಕೆ ನೇರವಾಗಿ ಬಿಡುಗಡೆ ಮಾಡುತ್ತವೆ. ಆದರೆ ಪ್ರಥಮ ವರ್ಷದಲ್ಲಿ ಮೊತ್ತ ಮೊದಲು ಪಾವತಿಸಿದ ಶುಲ್ಕ ಹಾಗೂ ಇತರ ವೆಚ್ಚಗಳನ್ನು ವಿದ್ಯಾರ್ಥಿಗಳ ಖಾತೆಗೆ ಜಮಾ ಮಾಡಬಹುದಾಗಿದೆ.

**5. ಶಿಕ್ಷಣ ಸಾಲ ಪಡೆಯಲು ಬ್ಯಾಂಕುಗಳಿಗೆ ಏನೆಲ್ಲಾ ದಾಖಲೆಗಳನ್ನು ಸಲ್ಲಿಸಬೇಕು?**

* ಸಂಬಂಧಿಸಿದ ಶಿಕ್ಷಣ ಸಂಸ್ಥೆಯ ದಾಖಲಾತಿ ಪ್ರಮಾಣ ಪತ್ರ (Admission Certificate)
* ಪಾವತಿ ಮಾಡಬೇಕಾದಂತಹ ಶುಲ್ಕಗಳ ವಿವರಗಳನ್ನೊಳಗೊಂಡ ಶಿಕ್ಷಣ ಸಂಸ್ಥೆಯ ಅಧಿಕೃತ ಪತ್ರ.
* ತಹಶೀಲ್ದಾರ್‌ರವರಿಂದ ಪ್ರಮಾಣಿಸಲ್ಪಟ್ಟ ಆದಾಯ ಪ್ರಮಾಣಪತ್ರ ಇಲ್ಲವಾದರೆ ಆದಾಯದ ಬಗ್ಗೆ ವಿವರಗಳನ್ನೊಳಗೊಂಡ ಅಧಿಕೃತ ದಾಖಲೆಗಳು
* ಹತ್ತನೇ ತರಗತಿ (SSLC) ಮತ್ತು ಹನ್ನೆರಡನೇ ತರಗತಿ (PUC) ಅಂಕಪಟ್ಟಿ; ಸ್ನಾತಕೋತ್ತರ ಶಿಕ್ಷಣ ಸಾಲವಾದರೆ ಪದವಿ ಪರೀಕ್ಷೆಗಳ ಅಧಿಕೃತ ಅಂಕಪಟ್ಟಿ.
* 2 ಪಾಸ್‌ಪೋರ್ಟ್ ಸೈಜಿನ ಫೋಟೋ

**6. ಶಿಕ್ಷಣ ಸಾಲಕ್ಕೆ ಭದ್ರತೆ ನೀಡಬೇಕೆ?**

* ರೂ. 4 ಲಕ್ಷವರೆಗಿನ ಸಾಲಕ್ಕೆ ಯಾವುದೇ ಭದ್ರತೆ ಬೇಡ. ಪೋಷಕರಷ್ಟೆ ಸಹಸಾಲಗಾರರಾಗಿ ಬ್ಯಾಂಕಿನ ದಾಖಲೆಗಳಿಗೆ ಸಹಿ ಹಾಕಿದರೆ ಸಾಕು.
* ರೂಪಾಯಿ 4 ಲಕ್ಷಕ್ಕೆ ಮೇಲ್ಪಟ್ಟು ರೂಪ್ಯಾ 7.50 ಲಕ್ಷಗಳವರೆಗಿನ ಸಾಲಕ್ಕೆ ಯಾರಾದರೂ ಉತ್ತಮ ಆದಾಯವಿರುವ ಮೂರನೇ ವ್ಯಕ್ತಿಯ ಜಾಮೀನು ಕೂಡಾ ಬೇಕಾಗುತ್ತದೆ. ಆದರೆ ಭದ್ರತೆ ಬೇಡ.
* ರೂಪಾಯಿ 7.50 ಲಕ್ಷಗಳ ಮೇಲಿನ ಸಾಲಕ್ಕೆ ಮಾತ್ರ ಪೋಷಕರ ಹಾಗೂ ಮೂರನೇ ವ್ಯಕ್ತಿಯ ಜಾಮೀನಿನ ಜೊತೆ ಸೂಕ್ತ ಭದ್ರತೆ ಕೂಡಾ ನೀಡಬೇಕಾಗುತ್ತದೆ. ಸ್ಥಿರಾಸ್ತಿಗಳು, ಹಾಗೂ ಬ್ಯಾಂಕುಗಳು ಒಪ್ಪಿಕೊಳ್ಳುವಂತಹ ಯಾವುದೇ ಚರಾಸ್ತಿಗಳು ಉದಾ: ಇನ್ಶೂರೆನ್ಸ್ ಪಾಲಿಸಿಗಳು, ಬ್ಯಾಂಕ್ ಡಿಪೋಸಿಟ್‌ಗಳು, ನೇಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು, ವಾಹನ ಇತ್ಯಾದಿ.

**7. ವಿದ್ಯಾರ್ಥಿ/ ಪೋಷಕರ ಪಾಲು ಎಷ್ಟಿರಬೇಕು?**

* ರೂಪಾಯಿ 4 ಲಕ್ಷಗಳವರೆಗಿನ ಸಾಲಕ್ಕೆ ಯಾವುದೇ ಪಾಲು ಬಂಡವಾಳ ಬೇಕಿಲ್ಲ.
* ರೂಪಾಯಿ 4 ಲಕ್ಷಕ್ಕೆ ಮೇಲ್ಪಟ್ಟ ಸಾಲವಾದರೆ ಒಟ್ಟು ಖರ್ಚು ವೆಚ್ಚಗಳ ಶೇಕಡಾ 5ರಿಂದ ಶೇಕಡ 15ರವರೆಗೆ ಪೋಷಕರು ಭರಿಸಬೇಕಾಗುತ್ತದೆ.

**8. ಶಿಕ್ಷಣ ಸಾಲದ ಮರುಪಾವತಿ ಹೇಗೆ?**

* ಶಿಕ್ಷಣ ಅವಧಿಯ ಕಾಲದಲ್ಲಿ ಯಾವುದೇ ಮರುಪಾವತಿ ಮಾಡಬೇಕಾಗಿಲ್ಲ.

→→→

→→→

* ಪೋಷಕರು ಇಚ್ಛಿಸಿದಲ್ಲಿ ಮಾತ್ರ ತಿಂಗಳ ಬಡ್ಡಿಯನ್ನು ಕಾಲ ಕಾಲಕ್ಕೆ ಮರುಪಾವತಿ ಮಾಡಿದಲ್ಲಿ, ಬಡ್ಡಿ ದರದಲ್ಲಿ ಶೇಕಡಾ 1ರಷ್ಟು ರಿಯಾಯಿತಿ ಪಡೆಯುವ ಸೌಲಭ್ಯವಿದೆ.
* ಸಂಬಂಧಪಟ್ಟ ಶಿಕ್ಷಣದ ಶೈಕ್ಷಣಿಕ ವರ್ಷ (Academic Year) ಮುಗಿದು 1 ವರ್ಷದ ನಂತರ ಯಾ ವಿದ್ಯಾರ್ಥಿಗೆ ಕೆಲಸ ದೊರಕಿದರೆ ಕೆಲಸ ದೊರಕಿದ 6 ತಿಂಗಳ ನಂತರ (ಯಾವುದೋ ಮೊದಲೋ ಅಲ್ಲಿಂದ) ಮರುಪಾವತಿ ಪ್ರಾರಂಭವಾಗುತ್ತದೆ. ಈ ರಜಾವಧಿಯನ್ನು Moratorium Period' ಎನ್ನುತ್ತಾರೆ.
* ಸಾಧಾರಣವಾಗಿ ಸಾಲದ ಮೊತ್ತಕ್ಕನುಗುಣವಾಗಿ ಮರುಪಾವತಿಯ ಅವಧಿ 10ರಿಂದ 15 ವರ್ಷಗಳವರೆಗೆ ಇರುತ್ತದೆ.
* ಮರುಪಾವತಿಯ ಪ್ರಾರಂಭಕ್ಕೆ ಮೊದಲು ಅದುವರೆಗಿನ ಬಡ್ಡಿಯನ್ನು ಅಸಲಿಗೆ ಸೇರಿಸಿ ಕಂತನ್ನು (EMI) ನಿಗದಿ ಪಡಿಸಲಾಗುತ್ತದೆ. ಸರಳಬಡ್ಡಿ Moratorium Period ಗಷ್ಟೇ ಸೀಮಿತ.

**9. ಬ್ಯಾಂಕುಗಳು ಶಿಕ್ಷಣ ಸಾಲಕ್ಕೆ ನಿಗದಿ ಪಡಿಸುವ ಬಡ್ಡಿದರ ಎಷ್ಟು?**

ಬೇರೆ ಬೇರೆ ಬ್ಯಾಂಕುಗಳಲ್ಲಿ ಬಡ್ಡಿದರ ಸ್ವಲ್ಪ ವ್ಯತ್ಯಾಸವಾಗಬಹುದು. ಸಾಧಾರಣವಾಗಿ ರೂಪಾಯಿ 7.50 ಲಕ್ಷದ ವರೆಗಿನ ಸಾಲಕ್ಕೆ ಶೇಕಡಾ 10 ಹಾಗೂ ಹೆಚ್ಚಿನ ಮೊತ್ತದ ಸಾಲಕ್ಕೆ ಸ್ವಲ್ಪ ಹೆಚ್ಚಿನ ಬಡ್ಡಿದರ ವಿಧಿಸಬಹುದು.

* ವಿಶೇಷವಾಗಿ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ನೀಡಿದ ಶಿಕ್ಷಣ ಸಾಲದ ಮೇಲೆ ಶೇಕಡಾ 0.50 ರಿಯಾಯಿತಿ ಎಲ್ಲಾ ಬ್ಯಾಂಕುಗಳಲ್ಲೂ ಲಭ್ಯ.
* ಬಡ್ಡಿಯನ್ನು ಲೆಕ್ಕ ಹಾಕಿ ತಿಂಗಳ ಅಂತ್ಯಕ್ಕೆ ಸಾಲದ ಖಾತೆಗೆ ಹೊಂದಾಣಿಕೆ ಮಾಡಲಾಗುತ್ತದೆ. ಆದರೆ ಮರುಪಾವತಿ ಅವಧಿ ಪ್ರಾರಂಭದ ವರೆಗೆ ಕೇವಲ ಸರಳ ಬಡ್ಡಿಯನ್ನಷ್ಟೇ ವಿಧಿಸಲಾಗುತ್ತದೆ.
* ವಿದ್ಯಾರ್ಥಿ / ಪೋಷಕರು ತಿಂಗಳು ತಿಂಗಳು ಬಡ್ಡಿಯನ್ನು ಕಾಲಕಾಲಕ್ಕೆ ಚುಕ್ತಾ ಮಾಡಿದಲ್ಲಿ ಶೇಕಡಾ 1 ರಿಯಾಯಿತಿ ದೊರೆಯುತ್ತದೆ.
* ಕಾಲಕಾಲಕ್ಕೆ, ದೇಶದ ಆರ್ಥಿಕ ಪರಿಸ್ಥಿತಿಗನುಗುಣವಾಗಿ ರಿಸರ್ವ್ ಬ್ಯಾಂಕ್ ನಿರ್ದೇಶನದಂತೆ ಬಡ್ಡಿದರದಲ್ಲಿ ತುಸು ಏರಿಕೆ ಯಾ ಇಳಿಕೆಯಾಗಬಹುದು.
* ಒಂದು ವೇಳೆ ಮರುಪಾವತಿಯ ಕಂತು ನಿಗದಿತ ದಿನಾಂಕದೊಳಗೆ ಮರುಪಾವತಿ ಮಾಡದಿದ್ದರೆ ಬಾಕಿಯಾದ ಮೊತ್ತಕ್ಕೆ ಶೇಕಡಾ 2ರಷ್ಟು ಹೆಚ್ಚಿಗೆ ದಂಡನಾ ಬಡ್ಡಿ ವಿಧಿಸಲಾಗುತ್ತದೆ.

**10. ಕೇಂದ್ರ ಸರಕಾರದ ಬಡ್ಡಿ ಸಹಾಯಧನ ಯೋಜನೆ (Interest Subsidy Scheme)**

01.04.2009ರಿಂದ ಶಿಕ್ಷಣ ಸಾಲ ಪಡಕೊಂಡ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಕೇಂದ್ರ ಸರಕಾರದ ಸಹಾಯಧನ (Interest Subsidy) ಕೂಡಾ ದೊರೆಯುತ್ತದೆ.

* ಈ ಸಹಾಯಧನ ಪಡೆಯಲು ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂಪಾಯಿ 4.50 ಲಕ್ಷ ಮೀರಬಾರದು.
* ತಹಶೀಲ್ದಾರರಿಂದ ಪಡೆದ ಆದಾಯ ಪ್ರಮಾಣ ಪತ್ರ ಸಲ್ಲಿಸಿ ಅರ್ಜಿ ಸಲ್ಲಿಸಿದಲ್ಲಿ ಮಾತ್ರ ಈ ಸಹಾಯಧನ ದೊರೆಯುತ್ತದೆ.
* ಈ ಸಹಾಯಧನದ ಸೌಲಭ್ಯ ಕೇವಲ ತಾಂತ್ರಿಕ, ವೈದ್ಯಕೀಯ ಹಾಗೂ ವೃತ್ತಿಪರ ಕೋರ್ಸುಗಳಿಗಷ್ಟೇ ಸೀಮಿತ.
* ಶಿಕ್ಷಣ ಸಾಲದ ಮರುಪಾವತಿವರೆಗಿನ ಅವಧಿಯಲ್ಲಿ (Moratorium Period) ಲೆಕ್ಕ ಹಾಕಿದ ಸರಳಬಡ್ಡಿಯನ್ನು ಈ ಸಹಾಯಧನದ ರೂಪದಲ್ಲಿ ಕೇಂದ್ರ ಸರಕಾರ ಸಂಬಂಧಿಸಿದ ಶಿಕ್ಷಣ ಸಾಲದ ಖಾತೆಗಳಿಗೆ ಬಿಡುಗಡೆ ಮಾಡುತ್ತದೆ.
* ಶಿಕ್ಷಣ ಸಾಲ ನೀಡಿದ ಬ್ಯಾಂಕುಗಳು 6 ತಿಂಗಳಿಗೊಮ್ಮೆ ಯಾ ವರ್ಷಕ್ಕೊಮ್ಮೆ ಈ ಬಡ್ಡಿ ಮೊತ್ತದ ಬಗ್ಗೆ ಸಂಬಂಧಿಸಿದ ನೋಡಲ್ ಬ್ಯಾಂಕುಗಳಿಗೆ ಅರ್ಜಿ ಸಲ್ಲಿಸಿ ಈ ಮೊತ್ತವನ್ನು ವಿದ್ಯಾರ್ಥಿಗಳ ಶಿಕ್ಷಣ ಸಾಲಕ್ಕೆ ಹೊಂದಾಣಿಕೆ ಮಾಡಬೇಕಾಗುತ್ತದೆ. ಕೇವಲ ಒಮ್ಮೆಯಷ್ಟೆ ಈ ಸೌಲಭ್ಯ ವಿದ್ಯಾರ್ಥಿಗಳಿಗೆ ದೊರೆಯುತ್ತದೆ.

**11. ಡಾ. ಅಂಬೇಡ್ಕರ್ ಸಬ್ಸಿಡಿ ಸ್ಕೀಂ.**

ಇದು ಕೂಡಾ ಕೇಂದ್ರ ಸರಕಾರದ, ಶಿಕ್ಷಣ ಸಾಲ ಪಡೆದ ವಿದ್ಯಾರ್ಥಿಗಳಿಗೋಸ್ಕರವೇ ರೂಪಿಸಿದ ಧನಸಹಾಯ ಯೋಜನೆ. ಈ ಯೋಜನೆಯನ್ವಯ 01.10.2017ರಿಂದ ಎಲ್ಲಾ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಕೆಳಗೆ ಕಾಣಿಸಿದ ನಿಯಮಗಳನ್ವಯ ಪರದೇಶದಲ್ಲಿ ನಡೆಸುವ ಉನ್ನತ ವ್ಯಾಸಂಗಕಷ್ಟೇ ಸಬ್ಸಿಡಿ ದೊರೆಯುತ್ತದೆ.

* ಹಿಂದುಳಿದ ಜಾತಿಯ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂಪಾಯಿ 4.50 ಲಕ್ಷ ಮೀರಬಾರದು.
* ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂಪಾಯಿ 2.50 ಲಕ್ಷ ಮೀರಬಾರದು.
* ಮೊದಲು ಬಂದ ಅರ್ಜಿಗಳಿಗೆ ಮೊದಲ ಆದ್ಯತೆ ನೀಡಲಾಗುತ್ತದೆ.
* ಈ ಯೋಜನೆಯನ್ವಯ ಶೇಕಡಾ 50ರಷ್ಟು ಯೋಜನಾ ಮೊತ್ತವನ್ನು ವಿದ್ಯಾರ್ಥಿನಿಯರಿಗೆ ಮೀಸಲಾಗಿಡಲಾಗಿದೆ.
* ಪರದೇಶದಲ್ಲಿ ನಡೆಸುವ ಉನ್ನತ ವ್ಯಾಸಂಗಕ್ಕಷ್ಟೇ ಇದು ಸೀಮಿತ. (M.Phil., Phd., MBA, M.S.) ಇತ್ಯಾದಿ
* ಈ ಯೋಜನೆಯನ್ವಯ, ಸಹಾಯಧನ ಶಿಕ್ಷಣ ಸಾಲದ ರಜಾ ಅವಧಿಯಲ್ಲಿನ (Moratorium Period) ಬಡ್ಡಿ ಮೊತ್ತಕ್ಕಷ್ಟೇ ಸೀಮಿತ.

**12. ವಿದ್ಯಾಲಕ್ಷ್ಮೀ ಎಜ್ಯುಕೇಶನ್ ಲೋನ್ ಸ್ಕೀಂ ಪೋರ್ಟಲ್ (www.vidyalakshmi.co.in)**

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕೇಂದ್ರ ಸರಕಾರವು ಇತ್ತೀಚೆಗೆ ಈ ಪೋರ್ಟಲ್‌ನಲ್ಲಿ, ಇಂಟರ್‌ನೆಟ್ ಮುಖಾಂತರ ವಿದ್ಯಾರ್ಥಿ ವೃಂದಕ್ಕೆ ಉಪಯುಕ್ತ ಮಾಹಿತಿಯನ್ನು ನೀಡುತ್ತಿದೆ. ಈ ಪೋರ್ಟಲ್‌ನಲ್ಲಿ ಬೇರೆ ಬೇರೆ ಬ್ಯಾಂಕುಗಳ ಶಿಕ್ಷಣ ಸಾಲದ ಬಗ್ಗೆ ಕೇಂದ್ರ ಸರಕಾರ ಪ್ರಾಯೋಜಿತ, ಬೇರೆ ಬೇರೆ ಸ್ಕಾಲರ್‌ಶಿಪ್ ಹಾಗೂ ಸಬ್ಸಿಡಿ ಯೋಜನೆಗಳ ಬಗೆಗಿನ ಉಪಯುಕ್ತ ಮಾಹಿತಿ ದೊರೆಯುತ್ತದೆ ಹಾಗೂ

→→→

→→→

ಕುಳಿತಲ್ಲಿಂದಲೇ ವಿದ್ಯಾರ್ಥಿಗಳು ಸಂಬಂಧಪಟ್ಟ ಬ್ಯಾಂಕುಗಳಿಗೆ ಶಿಕ್ಷಣ ಸಾಲಕ್ಕಾಗಿ ಅರ್ಜಿ ಸಲ್ಲಿಸುವ ನಮೂನೆ ಕೂಡಾ ಇದೆ. ಜಗತ್ತಿನ ಯಾವುದೇ ಮೂಲೆಯಲ್ಲಿದ್ದರೂ ಕೂಡಾ ತಾವು ಸಲ್ಲಿಸಿದ ಅರ್ಜಿಯ ಸ್ಥಿತಿಗತಿ ಅರಿತು ಸೂಕ್ತ ಕ್ರಮ ಕೈಗೊಳ್ಳಲು ಈ ಪೋರ್ಟಲ್ ಅನುವು ಮಾಡಿಕೊಡುತ್ತದೆ.

***"Give me a fish and I eat for a day; Teach me to fish and I eat for a life time"*** ಎಂಬ ಆಂಗ್ಲ ನಾಣ್ಣುಡಿ ಒಂದು ಸರ್ವಕಾಲಿಕ ಸತ್ಯ. ನಮ್ಮ ಭಾರತ ದೇಶದ ಜನಸಂಖ್ಯೆಯ ಪೈಕಿ ಶೇಕಡಾ 54ರಷ್ಟು 25 ವರ್ಷಗಳಿಗಿಂತಲೂ ಕಿರಿಯ ವಯಸ್ಸಿನವರು. ಈ ಯುವ ಶಕ್ತಿಗೆ ಸೂಕ್ತ ಶಿಕ್ಷಣ ಯಾ ತರಬೇತಿ ದೊರೆತಲ್ಲಿ ಮುಂದೊಂದು ದಿನ ಜಗತ್ತಿನ ಬೇರೆ ಯಾವ ರಾಷ್ಟ್ರಗಳೂ ನಮ್ಮೊಂದಿಗೆ ಪೈಪೋಟಿ ನಡೆಸಲಾರದಷ್ಟು ಭಾರತ ನಂಬರ್ ಒಂದು ಸಶಕ್ತ ರಾಷ್ಟ್ರವಾಗಿ ಹೊರಹೊಮ್ಮಲಿದೆ ಎಂದರೆ ಅತಿಶಯೋಕ್ತಿಯಲ್ಲ. ಆದ್ದರಿಂದ ಪ್ರಿಯ ವಿದ್ಯಾರ್ಥಿಗಳೇ, ಬರೇ ಅದೃಷ್ಟವನ್ನು ನಂಬಿಕೊಂಡು ಬದುಕುವುದಕ್ಕಿಂತ 'ಆತ್ಮವಿಶ್ವಾಸ' 'ಕಠಿನ ಪರಿಶ್ರಮ' ಹಾಗೂ 'ದೇವರಲ್ಲಿ ಮತ್ತು ಗುರುಹಿರಿಯರಲ್ಲಿ ನಂಬಿಕೆ ಇರಿಸಿ' ಸಾಧನೆ ಮಾಡಿದರೆ ಯಾವುದೇ ರಂಗಗಳಲ್ಲಿ ಯಶಸ್ಸು ಸಾಧಿಸಲು ಸಾಧ್ಯ. ವಿದ್ಯಾರ್ಥಿಗಳೆಲ್ಲರ ಹಂಬಲ ಈಡೇರಲಿ, ಭವಿಷ್ಯ ಉಜ್ವಲವಾಗಲಿ ಹಾಗೂ ನಿಮ್ಮ ಬಾಳು ಬಂಗಾರವಾಗಲಿ ಎಂದು ಎಲ್ಲಾ ವಿದ್ಯಾರ್ಥಿಗಳಿಗೆ ಶುಭ ಹಾರೈಸುತ್ತೇನೆ. ಹಾಗೂ ವಿದ್ಯಾರ್ಥಿಗಳಿಗೆ ಈ ಉಪಯುಕ್ತ ಮಾಹಿತಿ ನೀಡಲು ಶ್ರಮಿಸಿದ ಆತ್ಮಶಕ್ತಿ ಪತ್ರಿಕೆಗೂ ಒಂದು ಸಲಾಂ.

ಮಾಹಿತಿ

## ಆಹಾರವನ್ನು ತೊಳೆದು ತಿನ್ನುತ್ತೆ ಈ ಪ್ರಾಣಿ

ರೆಕೂನ್ ಎಂಬುದು ತುಂಬ ವಿಚಿತ್ರ ಪ್ರಾಣಿ. ಇದು ಆಹಾರವನ್ನು ತಿನ್ನುವ ಮೊದಲು ಅದನ್ನು ನೀರಿನಲ್ಲಿ ತೊಳೆದುಕೊಳ್ಳುತ್ತದೆ. ಕೆಲವು ರೆಕೂನ್‌ಗಳಂತೂ ನೀರು ಸಿಗದಿದ್ದರೆ ಆಹಾರವನ್ನೇ ತೆಗೆದುಕೊಳ್ಳುವುದಿಲ್ಲ.

ರೆಕೂನ್, ಆಹಾರವನ್ನು ಏಕೆ ನೀರಿನಲ್ಲಿ ತೊಳೆಯುತ್ತದೆ ಎಂಬುದು ಇಂದಿಗೂ ತಿಳಿಯದ ವಿಷಯ. ನೀರಿನಲ್ಲೇ ಇರುವ ಜೀವಿಗಳನ್ನು ಬೇಟೆಯಾಡಿ ತಿನ್ನುವಾಗಲೂ ರೆಕೂನ್ ಅವನ್ನು ತೊಳೆದೇ ತಿನ್ನುತ್ತದೆ. ಇವು ಮೀನು, ಕಪ್ಪೆ, ಏಡಿಗಳನ್ನೇ ಹೆಚ್ಚಾಗಿ ತಿನ್ನುತ್ತವೆ.

ರೆಕೂನ್‌ಗಳು ನೀರಿರುವ ಮತ್ತು ವಾಸಿಸಲು ಮರಗಳಿರುವಂತಹ ಜಾಗದಲ್ಲಿ ನೆಲೆಸುತ್ತವೆ. ಸಾಮಾನ್ಯವಾಗಿ ಇವು ಕೆನಡಾ, ಅಮೆರಿಕಾ ಮತ್ತು ಮಧ್ಯ ಅಮೆರಿಕದಲ್ಲಿ ಕಂಡುಬರುತ್ತವೆ. ರೆಕೂನ್‌ಗಳ ತುಪ್ಪಳ ತುಂಬ ಆಕರ್ಷಕವಾಗಿರುತ್ತದೆ.


ಮನೋಜ್ ಶಾಂತಿ
ನಾಗಪಾತ್ರಿ
ಶಾಂತಿನಗರ,
ಶ್ರೀ ದೇವಿ ಲಕ್ಷ್ಮಿ ನಿವಾಸ್,
ಕಾವೂರು, ಮಂಗಳೂರು – 15
Mob : 9741100670





ಮೊಬೈಲ್: 8971089255, 9481630437

Rekhi and Healthy Living Practice

Get Rid Off Nagative Energy

ನಿಮ್ಮ ದೇಹದ ಎಲ್ಲಾ ಭಾಗಗಳನ್ನು ನೀವೇ ಶುದ್ಧಮಾಡಿಕೊಂಡು ಆರೋಗ್ಯವಂತರಾಗಿ, ನಿಮ್ಮ ಖಾಯಿಲೆಗಳನ್ನು ಗುಣಪಡಿಸುವ ಮತ್ತು ನಿಮ್ಮ ಇಷ್ಟಾರ್ಥಗಳನ್ನು ಈಡೇರಿಸಿ ಸಂತೋಷವಾಗಿ ಬದುಕುವ ವಿದ್ಯೆಯೇ "ರೇಕಿ."





ಬಿ. ಗಣೇಶ್, ಕುಂಜತ್ತಬೈಲು
ರೇಕಿ ಗುರುಗಳು





ರೇಕಿಯಿಂದಾಗುವ ಲಾಭಗಳು : ಜ್ಞಾಪಕಶಕ್ತಿ, ಮಾನಸಿಕ ನೆಮ್ಮದಿ, ಏಕಾಗ್ರತೆ, ವಾಕ್ಚಾತುರ್ಯ, ರೋಗ ನಿವಾರಣೆ, ಸಂಬಂಧ ಸುಧಾರಣೆ ಅತ್ತೆ ಸೊಸೆಯರಲ್ಲಿ ಉತ್ತಮ ಸಂಬಂಧ.

ನೆಗೆಟಿವ್ ರಿಮೂವಿಂಗ್ ದೀಕ್ಷೆ : ದೇಹದಲ್ಲಿ ಸೇರಿಕೊಂಡಿರುವ ನೆಗೆಟಿವ್ಸ್‌ಗಳನ್ನು ದೀಕ್ಷೆಯ ಮೂಲಕ ಹೊರತೆಗೆಯುವುದು. ಮನುಷ್ಯನ ಏಳಿಗೆಗೆ ಅಡ್ಡಿಯಾಗುವ ಹಾಗೂ ನಾನಾ ವಿಧದ ಹೆದರಿಕೆ ಮತ್ತು ಈಗ ಇರುವ ಹಾಗೂ ಮುಂದೆ ಬರಬಹುದಾದ ಖಾಯಿಲೆಗಳಿಂದ ಮುಕ್ತಿ.

# ಶಿಕ್ಷಕರ ತರಬೇತಿ ಸಂಸ್ಥೆಗಳು – ಸವಾಲುಗಳು

✍ ಉಮೇಶ್ ಕಾರಂತ್
ಉಪನ್ಯಾಸಕರು



ಶಿಕ್ಷಕರ ಶಿಕ್ಷಣ ಅಥವಾ ತರಬೇತಿ ಶಿಕ್ಷಣ ವ್ಯವಸ್ಥೆಯ ಡಿ.ಇಡಿ/ಡಿ.ಇಎಲ್.ಇಡಿ ಹಾಗೂ ಬಿ.ಇಡಿ ಕಾಲೇಜುಗಳಲ್ಲಿಯೇ ನಡೆಯುತ್ತದೆ. ಇದನ್ನು ವೃತ್ತಿ ಶಿಕ್ಷಣ ಎಂದು ಕರೆಯಬಹುದಾದರೂ ಒಂದರ್ಥದಲ್ಲಿ ಬದುಕನ್ನು ಕಟ್ಟಿಕೊಡುವ ಶಿಕ್ಷಣದ ಚೌಕಟ್ಟು ಎಂದು ಕರೆಯಬಹುದು. ಇದು ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಪಟ್ಟಿರಲಿ. ಪ್ರೌಢ ಶಿಕ್ಷಣಕ್ಕೆ ಅನುವಾಗಿರಲಿ. ಇವೆರಡೂ ಮಗುವೊಂದರ ಕಲಿಕೆಗೆ ಬೆನ್ನೆಲುಬಾಗಿ ಮಾರ್ಗದರ್ಶಕವಾಗಿ ಮಾರ್ಗದರ್ಶಕರನ್ನು ಸಿದ್ಧಗೊಳಿಸುವ 'ತರಬೇತಿ ಸಂಸ್ಥೆಗಳೆಂದೇ' ಕರೆಯಲ್ಪಡುವ ಸಂಘಟನೆ ಎನ್ನುವುದೇ ಇಲ್ಲಿ ನಾವು ಗಮನಿಸಬೇಕಾದ ಅತಿ ಮುಖ್ಯವಾದ ಅಂಶವಾಗಿದೆ.

ಅಭಿವೃದ್ಧಿ ಹೊಂದುತ್ತಿರುವ ಭಾರತದಂತ ರಾಷ್ಟ್ರಗಳಿಗೆ ಶಿಕ್ಷಣ ಒಂದು ಮೂಲಭೂತ ಹಕ್ಕು ಹಾಗೂ ಕರ್ತವ್ಯವೂ ಕೂಡ. ಪ್ರತಿಯೊಂದು ಮಗುವೂ 14ರ ವಯೋಮಿತಿಯವರೆಗೆ ಶಿಕ್ಷಣವನ್ನು ಗಳಿಸಲೇಬೇಕು. ಅದಕ್ಕೆ ಸೂಕ್ತ ಪರಿಸರ ಅವಕಾಶ ವಿರುವುದು 45ನೇ ವಿಧಿ (ಅರ್ಟಿಕಲ್) ನಿಯಮದಲ್ಲಿ. ಮನೆಯೇ ಮೊದಲ ಪಾಠಶಾಲೆ ಜನನಿ ತಾನೇ ಮೊದಲ ಗುರುವು' ಎಂಬ ಮಾತು ಒಂದು ಕಾಲದಲ್ಲಿತ್ತು. ಆದರೆ ಬದಲಾಗುತ್ತಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಹೆತ್ತವರ ಈ ಜವಾಬ್ದಾರಿಯನ್ನು ಪ್ರಾಥಮಿಕ – ಪ್ರೌಢಶಾಲಾ ಶಿಕ್ಷಕರೇ ಅನಿವಾರ್ಯವಾಗಿ ವಹಿಸಿಕೊಳ್ಳಬೇಕಾದ ಪರಿಸ್ಥಿತಿ ಬಂದೊದಗಿದೆ. ಒಂದು ಕಾಲದಲ್ಲಿ 'ಶಾಲೆಗಳಿರುವುದೇ ಮಕ್ಕಳಿಗಾಗಿ' ಎಂಬ ಮಾತಿತ್ತು. ಆದರೆ ಈಗೀಗ 'ಮಕ್ಕಳನ್ನು ಶಾಲೆಗೆ ಬರುವಲ್ಲಿ ಆಕರ್ಷಕ ಶಕ್ತಿಯಾಗಿ ರೂಪುಗೊಳ್ಳುವುದೇ ಶಾಲೆಯ ಪರಮ ಕರ್ತವ್ಯ ಎಂಬ ಮಾತೂ ಕೇಳಿಬರುತ್ತಿದೆ. ಇದಕ್ಕಾಗಿ ಅಧ್ಯಾಪಕರ ಶಿಕ್ಷಣದ ಸ್ವರೂಪವೂ ಬದಲಾಗಬೇಕಾದ ಪರಿಸ್ಥಿತಿಯೊದಗಿದೆ. – "ಚೌಕ್ ಎಂಡ್ ಚಾಕ್' 'ಬೆಲ್ ಎಂಡ್ ಬಿಲ್' ಎಂಬ ಸರಳ ಚಿಂತನೆಗಳು ಈ ವೃತ್ತಿ ಬದುಕಿನಲ್ಲಿ ಬದುಕಿನ ಹಿನ್ನೆಲೆಯಲ್ಲಿ –ಅಲ್ಲಲ್ಲಿ ಕೇಳಿ ಬಂದರೂ ಶಿಕ್ಷಕನ ವ್ಯಕ್ತಿತ್ವ – ಅವನನ್ನು ರೂಪುಗೊಳಿಸುವ ತರಬೇತಿ ಸಂಸ್ಥೆಗಳ (ಕಾಲೇಜುಗಳ) ಜವಾಬ್ದಾರಿ ಹಿಂದೆಂದಿಗಿಂತಲೂ ಈಗೀಗ ಹೆಚ್ಚಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಪಿ.ಯು.ಸಿ ವಿದ್ಯಾಭ್ಯಾಸ ಪಡೆದವರನ್ನು ಡಿ.ಇಡಿ/ಡಿ.ಇಎಲ್.ಇಡಿ ಕಾಲೇಜಿಗಾಗಲೀ ಪದವಿ ಶಿಕ್ಷಣ ಪಡೆದವರನ್ನು ಬಿ.ಇಡಿ ಕಾಲೇಜಿಗಾಗಲೀ ಸೇರ್ಪಡೆಗೊಳಿಸುವಲ್ಲಿ – ಪ್ರ ಶಿಕ್ಷಣಾರ್ಥಿಗಳ ವ್ಯಕ್ತಿತ್ವವೇ ಒಂದು ಮೂಲಭೂತ ಮಾನದಂಡವಾಗಿದೆ. ಅವನು ಆ ತರಬೇತಿ ಅವಧಿಯಲ್ಲಿ ತೊಡಗಿಸಿಕೊಳ್ಳುವಿಕೆಯಲ್ಲಿಯೇ ಕಾಯಾ, ವಾಚಾ, ಮನಸಾ, ಸ್ವೀಕಾರಾರ್ಹ ಮನೋಭಾವವನ್ನು ಗಳಿಸಿಕೊಂಡರೆ ಮುಂದಿನ ದಾರಿಗಳೆಲ್ಲ ಸುಗಮವಾಗುವುದರಲ್ಲಿ ಸಂಶಯವಿಲ್ಲ.

ಈ ಚಿಂತನೆಯಲ್ಲಿ ಶಿಕ್ಷಕರ ಶಿಕ್ಷಣದ ಪ್ರಮುಖವಾದ ಅಂಶಗಳೆಂದರೆ ಪ್ರಾಥಮಿಕವಿರಲಿ, ಪ್ರೌಢವಿರಲಿ ಅಲ್ಲಿನ ಶಿಕ್ಷಣ ವ್ಯವಸ್ಥೆಯಲ್ಲಿರುವ ವಿವಿಧ ವಿಷಯಗಳನ್ನು ಸಮರ್ಪಕವಾಗಿಯೂ ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾಗಿ ಜ್ಞಾನ ಚಕ್ಷುವಾಗಿಸುವಲ್ಲಿ ವಿವಿಧ ಕೌಶಲ. (ಅನುಬೋಧನಾ ಕೌಶಲ) ವಿಧಾನ (ಬೋಧನಾ ವಿಧಾನಗಳಾದ ಉಪನ್ಯಾಸ, ಪ್ರಶ್ನೋತ್ತರ, ಆಕರ, ಕಥನ ಇತ್ಯಾದಿ) ಹಾಗೂ ತಂತ್ರಗಾರಿಕೆ (ನಾಟಕಾಭಿನಯ, ಮೂಕಾಭಿನಯ, ಹಾಡು, ನೃತ್ಯ–ಚಿತ್ರ ಪ್ರದರ್ಶನ) ಗಳೊಂದಿಗೆ ತನ್ನ ಕೈಗಳಿಗೆ ಬರುವ ವಿದ್ಯಾರ್ಥಿಗಳನ್ನು ಅರ್ಥಮಾಡಿಕೊಂಡು (ಮನೋವೈಜ್ಞಾನಿಕ ಹಿನ್ನೆಲೆಯಿಂದ) ಅವರಿಗನುಗುಣವಾದ ಭಾಷಾ ಕೌಶಲ (ಆಲಿಸುವಿಕೆ ಮಾತನಾಡುವಿಕೆ ಓದುವಿಕೆ, ಬರೆಯುವಿಕೆ)ಗಳನ್ನು ತಾನು ಅರಿತು ಸೂಕ್ತ ರೀತಿಯಲ್ಲಿ ಸಂವಹಿಸುವ ಸಂಪೂರ್ಣ ಜವಾಬ್ದಾರಿಯನ್ನು ತನ್ನದಾಗಿಸಿಕೊಳ್ಳುವುದೇ ನಿಜವಾದ ಪ್ರೌ ಶಿಕ್ಷಣಾರ್ಥಿಯ ಕರ್ತವ್ಯವಾಗಿರುತ್ತದೆ. ಇದಕ್ಕೆ ಕಲಿಕೆದಾರನ ಆಸಕ್ತಿ–ಉತ್ಸಾಹಗಳೇ ಕಾರಣವಾಗಿರುತ್ತದೆ. ಉತ್ತಮ ದೇಹದಲ್ಲಿ ಉತ್ತುಮ ಆರೋಗ್ಯ ಉತ್ತಮ ಆರೋಗ್ಯವಿದ್ದರೆ – ಉತ್ತಮ ಬೌದ್ಧಿಕತೆ (ಬೌದ್ಧಿಕ ಬೆಳವಣಿಗೆ – ಚಿಂತನೆಗೆ ಅವಕಾಶ) ಇರುತ್ತದೆಂಬುದು ಇದಕ್ಕೆ ಪೂರಕವಾದ ಅಂಶವಾಗಿರುತ್ತದೆ.

**ಕೊನೆಯಲ್ಲೊಂದು ಮಾತು ಯಾವ ವೃತ್ತಿಯೂ ಪರಮ ಶ್ರೇಷ್ಠವೂ ಅಲ್ಲ. ಅತ್ಯಂತ ಕನಿಷ್ಠನೂ ಅಲ್ಲ. ಆದರೆ ಶಿಕ್ಷಕ ವೃತ್ತಿಯನ್ನು ಆಯ್ದುಕೊಳ್ಳಬೇಕೆಂಬ ಹಂಬಲವಿದ್ದ ವಿದ್ಯಾರ್ಥಿಗಳಲ್ಲಿ ನಿತ್ಯ ನಿರಂತರ 'ಸ್ವೀಕಾರ' 'ಆಸಕ್ತಿ' ಎಂಬೆರಡು ವೈಚಾರಿಕ ಶಬ್ದಗಳು ಇದ್ದರೆ ಅವರದನ್ನು ತಮ್ಮ ಮೈಮನಗಳಲ್ಲಿ ಆದ್ಯಾತ್ಮಗಳಿಸಿಕೊಂಡರೆ ಮಾತ್ರ ಶಿಕ್ಷಕ ವೃತ್ತಿಗೊಂದು ದೃಢ ನಂಬಿಕೆ ನನ್ನದು. ಯಾಕೆಂದರೆ 'ಶಿಕ್ಷಕನೋರ್ವ ಸಮುದಾಯದ ಸೃಷ್ಟಿಕರ್ತ ತಾನೆ???**

ಈ ದೃಷ್ಟಿಯಲ್ಲಿ ಒಬ್ಬ ಸಾಮಾನ್ಯ ವಿದ್ಯಾರ್ಥಿಯ – ಪ್ರೌ ಶಿಕ್ಷಣಾರ್ಥಿಯಾಗಿ ಬಳಿಕ ಶಿಕ್ಷಕನಾಗುವಲ್ಲಿನ ಅವಸ್ಥಾ ಬೇದಗಳಲ್ಲಿ ಶಿಕ್ಷಣ ವೃತ್ತಿ ನಿಷ್ಠೆಯಲ್ಲಿ ಅಥವಾ ಆ ವೃತ್ತಿಯಲ್ಲಿ ಪರಕಾಯ ಪ್ರವೇಶ ಪಡೆದು ಜೀವನ ಪರ್ಯಂತ ಶಿಕ್ಷಕನಾಗುವಲ್ಲಿ ಶಿಕ್ಷಕನಾಗಿ ಹುಟ್ಟಿ ಶಿಕ್ಷಕನಾಗಿಯೇ ಗತಿಸುವಲ್ಲಿ ಅವನನ್ನು ಸಮಾಜ 'ಶಿಕ್ಷಕ' ಎಂದು ಗುರುತಿಸಿ – ಗೌರವಿಸಬೇಕಾದಲ್ಲಿ ಅವನ ಅಂತರಂಗವೂ ಬಹಿರಂಗವೂ' ಹಾಗೇ ಆ ಹೆಸರಿಗೇ ಅನ್ವರ್ಥಗೊಳ್ಳಬೇಕಲ್ಲವೇ? ಇಂದು ಕೇವಲ ಪುಸ್ತಕದ ವಿಚಾರವನ್ನು ವಿದ್ಯಾರ್ಥಿಗಳ ಮುಂದಿಟ್ಟರೆ ತನ್ನೆಲ್ಲ ಕೆಲಸ ಕಾರ್ಯಗಳು ಮುಗಿಯಿತೆಂದು →→

→→→

ತಿಳಿದುಕೊಳ್ಳುವ ಪ್ರೌಢ ಶಿಕ್ಷಣಾರ್ಥಿಗಳ ಗುಂಪು ಒಂದೆಡೆಯಾದರೆ – ಇನ್ನೊಂದೆಡೆ ಪ್ರಾಥಮಿಕ, ಪ್ರೌಢ ಶಾಲಾ ಶಿಕ್ಷಕರನ್ನು ಕೇವಲ ಹೊರನೋಟದಿಂದಲೇ ಅಳೆದು ತರಬೇತಿ ಸಂಸ್ಥೆಗೆ ಎಂಟ್ರಿ ಕೊಡುವ ಗುಂಪು ಇದೆ. ಇದೆಲ್ಲದರ ನಡುವೆ ಅರಾಮ ಹಾರಾಮ ಎಂದು ಕೇವಲ ಸರ್ಟಿಫಿಕೇಟ್' ಸಿಕ್ಕರೆ ಸಾಕು ನಾಳೆ ತನ್ನದೇ ಜೀವನ ಎಂದು ಭಾವುಕವಾಗಿ ಆಲೋಚಿಸಿ ಇಂಥ ಸಂಸ್ಥೆಗಳಿಗೆ ಸೇರಿಕೊಳ್ಳುವವರು ಇದ್ದಾರೆ.

ಆದರೆ, ಇದೆಲ್ಲವನ್ನು ಮೀರಿ ನಿಜವಾದ 'ತರಬೇತಿ'ಗೊಳಪಟ್ಟರೆ ಮಾತ್ರ ಈ ತರಬೇತಿಯ ಪ್ರತಿ ಕ್ಷಣಕ್ಷಣದಲ್ಲಿಯೂ ಆತ್ಮಾರ್ಪಣೆ ಮಾಡಿಕೊಂಡರೆ ಮಾತ್ರ ಅವನೊಬ್ಬ ಉತ್ತಮ ಶಿಕ್ಷಕನಾಗಲು ಸಾಧ್ಯ. 'ಕಷ್ಟ ಪಟ್ಟರೆ ಇಷ್ಟ ಸಿಗುವುದು' ತಾನೇ? ಬದಲಿಗೆ ಮನರಂಜನೆ ಆಧುನಿಕ ಮಾಧ್ಯಮಗಳ ಒಡನೆ ಅತಿಹೆಚ್ಚಿನ ಒಡನಾಟ ಹದಿಹರೆಯದ ಮನೋವ್ಯಾಪಾರಗಳೊಂದಿಗೆ ಸಿಲುಕಿಕೊಂಡು ಅದೇ ಬದುಕು ಎಂದು ತಿಳಿದವರಿಗೆ ಈ ಡಿ.ಇಡಿ ಇರಲಿ ಬಿ.ಇಡಿ ಇರಲಿ ಸೂಕ್ತವೆಂದೆನಿಸುವುದಿಲ್ಲ. ಆದುದರಿಂದ ತರಬೇತಿ ಸಂಸ್ಥೆಗಳಲ್ಲಿ ನೀಡುವ – ವಿಷಯದ ಜ್ಞಾನ, ಮಗುವಿನ ಮನೋವಿಜ್ಞಾನದ ಜ್ಞಾನ ಶಿಕ್ಷಣ ಶಾಸ್ತ್ರ ತತ್ವಗಳ ಜ್ಞಾನ, ಶಿಕ್ಷಣ ಗುರಿಗಳ ಜ್ಞಾನ, ಬೋಧ ಸಾಮಗ್ರಿಗಳ ಬಳಕೆಯ ಜ್ಞಾನ ಹೊಂದಾಣಿಕೆ) ಮಗು ಸಹೋದ್ಯೋಗಿಗಳೊಡನೆ) ಯ ಜ್ಞಾನ ಪಾಠ–ಪಠ್ಯೇತರ ಚಟುವಟಿಕೆಗಳ ಜ್ಞಾನ ಮೌಲ್ಯ ಮಾಪನ ಪದ್ಧತಿಗಳ ಜ್ಞಾನ–ಗಳ ಬಗ್ಗೆ ಸಂಪೂರ್ಣ ಜ್ಞಾನವನ್ನು ಪಡೆದುಕೊಂಡರೆ ಮಾತ್ರ ಅವನೊಬ್ಬ ಅತ್ಯುತ್ತಮ ಶಿಕ್ಷಕನಾಗಲು ಸಾಧ್ಯ. ಇಲ್ಲವಾದರೆ ಹೊಟ್ಟೆಪಾಡಿನ ಸಮಾಜದ ಇತರ ಉದ್ಯೋಗಗಳಂತೆ ಇದೂ ಒಂದು ಉದ್ಯೋಗ ಅವನದಾಗುತ್ತದೆ.

## ಲತಾ ಆರ್. ಕೋಟ್ಯಾನ್ ಅವರಿಗೆ ಪಿ.ಎಚ್.ಡಿ. ಪದವಿ



ಶ್ರೀ ನಿರಂಜನ ಸ್ವಾಮಿ ಪ್ರಥಮ ದರ್ಜೆ ಕಾಲೇಜು ಸುಂಕದಕಟ್ಟೆ ಇಲ್ಲಿನ ಪ್ರಾಂಶುಪಾಲರಾದ ಮಂಗಳೂರಿನ ಲತಾ ಆರ್. ಕೋಟ್ಯಾನ್ ಅವರು ಹಂಪಿ ವಿಶ್ವವಿದ್ಯಾನಿಲಯದ ಡೆವಲಪ್‌ಮೆಂಟ್ ಸ್ಟಡಿ ವಿಭಾಗದ ಪ್ರೊ. ಡಾ ಸಿದ್ಧಗಂಗಮ್ಮ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ "ವಿಮೆನ್ ಇನ್ ಅನ್‌ಆರ್ಗನೈಸ್ಡ್ ಸೆಕ್ಟರ್ ಆ್ಯಂಡ್ ಪೊಲಿಟಿಕಲ್ ಮೊಬಿಲೈಸೇಶನ್ – ಸ್ಟಡಿ ಆಫ್ ವಿಮೆನ್ ಡೊಮೆಸ್ಟಿಕ್ ವರ್ಕರ್ಸ್ ಇನ್ ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್" ಎಂಬ ಮಹಾಪ್ರಬಂಧಕ್ಕೆ ಹಂಪಿ ವಿಶ್ವವಿದ್ಯಾನಿಲಯವು ಅತ್ಯುತ್ತಮ ಶ್ರೇಣಿಯಲ್ಲಿ ಪಿ.ಎಚ್.ಡಿ. ಪದವಿ ನೀಡಿ ಗೌರವಿಸಿದೆ. ಇವರು ಕೊಂಚಾಡಿಯ ಶ್ರೀನಿವಾಸ ನಗರದ ದಿ. ಸೋಮಯ್ಯ ಮೇಸ್ತ್ರಿ ಮತ್ತು ಶ್ರೀಮತಿ ಜಯಂತಿ ಇವರ ಪುತ್ರಿ ಮತ್ತು ದಾಮಸ್ ಕಟ್ಟೆಯ ದಿ. ರುಕ್ಕಪ್ಪ ಕೋಟ್ಯಾನ್ ಹಾಗೂ ಶ್ರೀಮತಿ ರಾಜೀವಿ ಕೋಟ್ಯಾನ್ ಇವರ ಸೊಸೆ. ಕೆ.ಎಂ.ಸಿ.ಯ ಡಾ. ರವೀಂದ್ರ ಕೋಟ್ಯಾನ್‌ರವರ ಸಹಧರ್ಮಿಣಿ.

## ಪೊಣ್ಣೊಚ್ಚಿದ್ ಕೊರ್ಪಿನ ಪದ

ನಡತಿ ಮದಿಮೆಗ್ ಕೂಡ್ದಿ ಗಲೋಟು ಸೇರ್ದಿನಾ ಓ ಬಿನ್ನೆರೇ
ಉಡಲ ತುಡರುಗು ಐಸಿರಿ ದ ಸಿರಿ ಮಗಲೆ ದಾರೆನ್ ಮೈತಯೇ...
ಸಂತೆಸಿದ ಕೊಡಿ ಪೊಣ್ಣು ಮಗಲೆನ್ ಒಚ್ಚಿ ಕೊರ್ಪಿನ ಪೊರ್ತುಯೆ
ಕೋಡೆ ಪುಟಿಯೊಲ್ ಸಾದ ಬಲತೊಲ್ ದಾಲ ತೆರಿಯಂದಿ ಬಾಲೆಯೇ..

ಒಂಜಿ ಕೆನ್ನಿಡ್ ನೆತ್ತೆರುಯೆ ನನ ಒಂಜಿ ಕೆನ್ನಿಡ್ ಪೇರುಯೇ...
ನೆತ್ತೆರುನ್ ನೀರಾದ್ ಮಲ್ತ್‌ದ್ ಅರ್ತಿ ಪೊರ್ಲುಡು ತಾಂಕಿಯಾ...
ಕರ್ಲ್‌ಕಡ್ತ್‌ದ್ ಪುಟಿನ ಮಗಲೆನ್ ಉಡಲ್ ದಿಂಜಿದ್ ಕಾತಯೇ...
ತಿರ್ತ್ ದೀಂಡ ಪಿಜಿನ್ ಕೊನೊವು ಮಿತ್ತ್ ದೀಂಡ ಪಕ್ಕಿ ಕೊನೊವು

ಪನ್ಪಿ ಬಾಮೊಡ್ ಜೋಕೆ ಮೋಕೆ ಡ್ ತಾಂಕಿಯಾ
ಒಂಜಿ ತೆರಿಂಡ ಸಾರ ತೆರಿಯಂದ್ ಬಾಲ ಮೋಕೆದ ಮಗಲ್ ಯೇ
ನೆರ್ದ್ ಪಿನಯೆ ಕುಟುದು ಪಿನಯೆ ನಿಗಲೆ ಬಂಜಿಗ್ ಪಾಡುವ
ಸಾರ ತಪ್ಪುನ್ ಆಲ್ ಮಲ್ಪಡ್ ಬಾಲೆ ಪಂಡ್ ದ್ ಬಾಮಿಲೆ

ಭೂಮಿದಪ್ಪೆ ನಮನ್ ಮಾಪು ಮಲ್ತಿ ಲಕ್ಕನೆ ಕಾಪುಲೆ
ಪೊಣ್ಣ ಬದುಕುಡ್ ನೀತಿ ಉಂದುವೆ ಊರೆ ಇಲ್ಲನ್ ಸೇರುನಾ
ನಿಗಲೆ ಇಲ್ಲದ ಮುಟ್ಟಿ ಕಲ್ಲನ್ ಬಲತ ಕಾರ್ಡ್ ದಾಂಟ್‌ದ್
ಅಲೆನ ಬಾಗ್ಗೆಡ್ ನಿಗಲೆ ಪುಣ್ಯಡ್ ಐಸಿರಿಲ ಉರ್ಕೇರಡ್

ಇಲ್ಲ ಸತ್ತೆಡ್ ಬತ್ತಿ ಬಿನ್ನೆರ್ ಬಂಜರುಂಡುದ್ ಪೋವಡ್
ಮಾಮಿ ತಮ್ಮಲೆ ಬಾವೆ ಮೈತ್‌ನೆ ಮಾತೆರುಲ ಒಂಜಾವಡ್
ಪೇರ್ ನೀರ್ ದ ಲೆಕ್ಕ ಇತ್ತಿನ ಕಂಡನಿನ ಸುಖ ತಿಕ್ಕಡ್
ಅಗಲೆಗಾಪಿನ ವಂಶ ಬೆಳಗುನ ಸಂತೆಸಿದ ಕೊಡಿ ಪುಟ್ಟಡ್

ಆಲ್ ಪುಟುದಿನ ಸೇರಿ ಇಲ್ಲದ ನಂದಲದ ತುಡರ್ಲ್‌ಡ್
ಕಟ್ಟೆ ತುಳಸಿಡ್ ಇತ್ತಿ ದೇವೆರ್ ಸತ್ಯ ದೈವೊಲ್ ಕಾಪಡ್
ಸುರಿಯೆ ಚಂದಿರೆ ಇಪ್ಪ ಮುಟ್ಟಲ ಐಸಿರೊಡ್ ನನ ಬುದುಕಡ್
ಪೋದು ಬಲ್ಲಪ್ಪೆ ಈಲ ಪೋದು ಬಲ್ಲಪ್ಪೆ

ಕೈ ಪತ್ ದಿನ ಕಂಡನಿನ್ ದಿಂಜಿಲ್ಲದ ಬದ್ಕ್‌ನ್
ತತ್ತ್‌ದ್‌ಲ ಈ ದಂಟಡ. ಇಲ್ಲಡ್‌ಲ ಪಗೆ ಮಾನ್ಯಡ
ಕಂಡನಿನ ಚಾಕಿರಿನ್ ಈಲ ಪೊರ್ಲುಡೇ ಮಲ್ಪುಲ
ಸಿರಿತ ತುಪ್ಪೆನೆ ಎನ್ನ ಮಗಲೆ ಮೋನೆದೈಸಿರಿ ಬಾಗ್ಗೆಡ್
ಪಂತೊಗುಲ ಪನೆಪಾಡಡ ತಪ್ಪುನುಲ ಈ ಮದಪುಲ

ಉಂದುವೆ ನಿನ್ನ ಎಡ್ಡೆ ಬದುಕುಡ್ ಸಾದಿನಾಂಡಲ ತೋಜವು
ಎಡ್ಡೆ ಪಡಿಕೆಡ್ ಕೂಡು ಕುಟುಮದ ಮಾನ ಕಾಪುಲ ಬಾಲೆನೆ
ಕಂಡನಿನ ನಿರೆಲಾದ್ ಬದುಕುಲ ಎಡ್ಡೆ ಪಾತೆರ ಕೇನ್‌ಲ
ನಂಬಿ ದೈವೊಲ್ ಎಡ್ಡೆ ಮಲ್ಪಡ್ ಉಂದುವೆ
ಎಂಕ್ಲೆನ ಪರಕೆಲ, ಉಂದುವೆ ಎಂಕ್ಲೆನ ಪರಕೆಲ...


**ಲವ ಕೋಟ್ಯಾನ್**
**ಮತ್ತು ಕುಟುಂಬಸ್ಥರು**
ಅಂಗಡಿ ಮಾಲಿಕರು
ತಣ್ಣೀರು ಬಾವಿ

# ವಿದ್ಯಾರ್ಥಿ ಸಮುದಾಯದ ಜ್ಞಾನ ಸೌಧ ಮಂಗಳೂರು ವಿಶ್ವವಿದ್ಯಾನಿಲಯ

✍ ಜಗನ್ನಾಥ ಶಿರ್ಲಾಲ್



**ಶಿ**ಕ್ಷಣವೆಂಬುದು ಒಬ್ಬ ವ್ಯಕ್ತಿಯ ವ್ಯಕ್ತಿತ್ವದ ಔನ್ನತ್ಯಕ್ಕೆ ಅವಶ್ಯವಾದುದು. ಶಿಕ್ಷಣದ ಮೂಲಕ ಮಾತ್ರ ಸ್ವಸ್ಥ ಸಮಾಜವನ್ನು ನಿರ್ಮಿಸಲು ಸಾಧ್ಯ. ಬದಲಾಗುತ್ತಿರುವ ಜೀವನದ ಶೈಲಿ, ಜಾಗತೀಕರಣದ ಪ್ರಭಾವದಿಂದ ಶಿಕ್ಷಣದ ಮೂಲಕ ಇಂದು ಆರೋಗ್ಯವಂತ ಪ್ರಜೆಗಳನ್ನು ನಿರ್ಮಿಸಲು ಸಾಧ್ಯವಾದುದು ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೆ ಪ್ರತಿ ಹಂತಗಳು ಇಂದು ಪ್ರಾಮುಖ್ಯತೆಯನ್ನು ಪಡೆಯುತ್ತಿದೆ. ಜೊತೆಗೆ ಶಿಕ್ಷಣ ಮಾಧ್ಯಮ, ಗುಣಮಟ್ಟದ ಕಡೆಗೆ ಪ್ರತಿಯೊಬ್ಬರ ಗಮನವೂ ಕೇಂದ್ರೀಕರಿಸಲ್ಪಟ್ಟಿದೆ. ಉನ್ನತ ಶಿಕ್ಷಣ ಪಡೆಯುವವರ ಸಂಖ್ಯೆ ಸೀಮಿತಗೊಳ್ಳುತ್ತಿದೆ. ಇದಕ್ಕೆ ಹಲವಾರು ಕಾರಣಗಳಿರಬಹುದು. ಆದರೆ

**ದಕ್ಷಿಣ ಕನ್ನಡ, ಉಡುಪಿ ಮತ್ತು ಕೊಡಗು ಜಿಲ್ಲೆಗಳ ಉನ್ನತ ಶಿಕ್ಷಣದ ಅಗತ್ಯಗಳನ್ನು ಪೂರೈಸುವ ಉದ್ದೇಶದಿಂದ ಮಂಗಳೂರು ವಿಶ್ವವಿದ್ಯಾನಿಲಯವು ಸೆಪ್ಟೆಂಬರ್ 10, 1980ರಂದು ಸ್ಥಾಪನೆಗೊಂಡಿದೆ. ನಗರದ ಗದ್ದಲ ಇನ್ನೂ ಸೋಕಿರದ, ನಗರಕ್ಕೆ ಹತ್ತಿರವಿದ್ದು ಎಲ್ಲ ಸೌಲಭ್ಯವೂ ಲಭ್ಯವಿರುವ ಪ್ರಾಕೃತಿಕ ಸೊಬಗಿನ ಪರಿಸರದ ಚಿಕ್ಕ ಗ್ರಾಮ ಕೊಣಾಜೆಯಲ್ಲಿ ಬೆಳೆದು ನಿಂತ, ಬೆಳೆಯುತ್ತಿರುವ ವಿದ್ಯಾಕೇಂದ್ರವೇ ಮಂಗಳಗಂಗೋತ್ರಿ. ಈ ವಿ.ವಿ. ನಿಲಯಕ್ಕೆ ನ್ಯಾಕ್ ಟೀಮಿನ ಎ. ಗ್ರೇಡ್ ಮಾನ್ಯತೆ ಸಿಕ್ಕಿದೆ.**

ಉನ್ನತ ಶಿಕ್ಷಣಕ್ಕೆ ಕೇಂದ್ರ ಸರ್ಕಾರಗಳು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದು ಇದರಿಂದ ಇಂದು ಹಲವಾರು ಬಡ, ಗ್ರಾಮೀಣ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುವ ಕನಸು ಸಾಕಾರಗೊಳ್ಳುತ್ತಿದೆ. ಇತ್ತೀಚೆಗೆ ಸರ್ಕಾರಗಳು ವಿಶ್ವವಿದ್ಯಾನಿಲಯಗಳಿಗೆ ಹೆಚ್ಚು ಅನುದಾನ ಬಿಡುಗಡೆ ಮಾಡುವ ಮೂಲಕ ಮಾನವ ಸಂಪನ್ಮೂಲ ಅಭಿವೃದ್ಧಿಗೆ ಉತ್ತೇಜನ ನೀಡುತ್ತಿದೆ. ಈ ದೃಷ್ಟಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯವು ಸ್ಥಾಪನೆ ಯಾಗಿರುವುದು ಕರಾವಳಿ ಭಾಗದ ವಿದ್ಯಾರ್ಥಿಗಳ ಪಾಲಿಗೆ ಒಂದು ಜ್ಞಾನ ದೇಗುಲವಾಗಿದೆ.

ದಕ್ಷಿಣ ಕನ್ನಡ, ಉಡುಪಿ ಮತ್ತು ಕೊಡಗು ಜಿಲ್ಲೆಗಳ ಉನ್ನತ ಶಿಕ್ಷಣದ ಅಗತ್ಯಗಳನ್ನು ಪೂರೈಸುವ ಉದ್ದೇಶದಿಂದ ಮಂಗಳೂರು ವಿಶ್ವವಿದ್ಯಾನಿಲಯವು ಸೆಪ್ಟೆಂಬರ್ 10, 1980ರಂದು ಸ್ಥಾಪನೆಗೊಂಡಿದೆ. ನಗರದ ಗದ್ದಲ ಇನ್ನೂ ಸೋಕಿರದ ನಗರಕ್ಕೆ ಹತ್ತಿರವಿದ್ದು ಎಲ್ಲ ಸೌಲಭ್ಯವೂ ಲಭ್ಯವಿರುವ ಪ್ರಾಕೃತಿಕ ಸೊಬಗಿನ ಪರಿಸರದ ಚಿಕ್ಕ ಗ್ರಾಮ ಕೊಣಾಜೆಯಲ್ಲಿ ಬೆಳೆದು ನಿಂತ, ಬೆಳೆಯುತ್ತಿರುವ ವಿದ್ಯಾಕೇಂದ್ರವೇ ಮಂಗಳಗಂಗೋತ್ರಿ. ಉನ್ನತ ಶಿಕ್ಷಣ ಮತ್ತು ಅಧ್ಯಯನ ಸಂಶೋಧನೆಯ ಕೇಂದ್ರವಾಗಿರುವ ವಿಶ್ವವಿದ್ಯಾನಿಲಯವು ಗುಣಮಟ್ಟದ ಶಿಕ್ಷಣ ಮತ್ತು ಸಂಶೋಧನಾ ಚಟುವಟಿಕೆಯ ಫಲವಾಗಿ ರಾಷ್ಟ್ರ ಮಟ್ಟದಲ್ಲಿ ಉತ್ತಮ ಹೆಸರನ್ನು, ಸ್ಥಾನವನ್ನು ಪಡೆದಿದೆ. ನ್ಯಾಕ್ ವತಿಯಿಂದ 'ಫೋರ್ ಸ್ಟಾರ್' ಮನ್ನಣೆಗೆ ಪಾತ್ರವಾಗಿದೆ.

ಮಂಗಳೂರು ವಿಶ್ವವಿದ್ಯಾನಿಲಯವು ಮಂಗಳೂರು ನಗರದ ಆಗ್ನೇಯ ದಿಕ್ಕಿಗೆ ಸುಮಾರು 20 ಕಿ.ಮೀ. ದೂರದಲ್ಲಿದೆ. ಸುಮಾರು 333 ಎಕರೆಗಳಷ್ಟು ವಿಶಾಲವಾದ ಪ್ರದೇಶದಲ್ಲಿರುವ ಕ್ಯಾಂಪಸ್ ಅಧ್ಯಯನಕ್ಕೆ, ಸಂಶೋಧನೆಗೆ ಉತ್ತಮ ಪರಿಸರವಾಗಿದೆ. ಉನ್ನತ ಶಿಕ್ಷಣ ರಂಗದ ಪ್ರಾಚೀನ ಮತ್ತು ಪ್ರತಿಷ್ಠಿತವಾದ ಕೆಲವು ವಿದ್ಯಾ ಸಂಸ್ಥೆಗಳು ಮಂಗಳೂರು ವಿಶ್ವವಿದ್ಯಾನಿಲಯದ ಕಕ್ಷೆಯಲ್ಲಿ ಬರುತ್ತದೆ. ವಿಶ್ವವಿದ್ಯಾನಿಲಯದ ಕ್ಯಾಂಪಸ್ಸೊಳಗೆ ಒಟ್ಟು 25 ವಿಭಾಗಗಳಿದ್ದು, ಒಟ್ಟು 35 ಅಧ್ಯಯನ ವಿಷಯಗಳನ್ನು ಬೋಧಿಸಲಾಗುತ್ತದೆ. ಇದಲ್ಲದೆ ಮಡಿಕೇರಿ ಕ್ಯಾಂಪಸ್‌ನಲ್ಲಿ 2 ಸ್ನಾತಕೋತ್ತರ ವಿಭಾಗಗಳಿವೆ ಹಾಗೂ ವಿಶ್ವವಿದ್ಯಾನಿಲಯ ಕಾಲೇಜು ಮತ್ತು ಅಲ್ಲಿ ಮೂರು ಸ್ನಾತಕೋತ್ತರ ವಿಷಯಗಳನ್ನು ಬೋಧಿಸಲಾಗುತ್ತದೆ. ಮಂಗಳೂರು ವಿಶ್ವವಿದ್ಯಾನಿಲಯದ ನೇರ ಆಡಳಿತದ ಅಧೀನಕ್ಕೆ ಒಳಪಟ್ಟಿರುವ ಎರಡು ಕಾಲೇಜುಗಳು ಸೇರಿದಂತೆ ಒಟ್ಟು 190 ಕಾಲೇಜುಗಳು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತವಾಗಿದ್ದು ಅವು ಕಲೆ, ವಾಣಿಜ್ಯ, ವಿಜ್ಞಾನ, ಕಾನೂನು ಮತ್ತು ಶಿಕ್ಷಕ ಶಿಕ್ಷಣ ವಿಷಯಗಳಿಗೆ ಸಂಬಂಧಪಟ್ಟಂತೆ ಶಿಕ್ಷಣ, ಪದವಿಯನ್ನು ನೀಡುತ್ತಿದೆ. ಸರ್ಕಾರದ ಮೀಸಲಾತಿ ನಿಯಮಗಳು ವಿದ್ಯಾರ್ಥಿ ವೇತನ, ಯೋಜನೆಗಳು ವಿದ್ಯಾರ್ಥಿಗಳಿಗೆ ದೊರೆಯುತ್ತಿದೆ.

ವಿಶ್ವವಿದ್ಯಾನಿಲಯ ಆವರಣದಲ್ಲಿ ಹಲವು ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಪುರುಷರು ಮತ್ತು ಮಹಿಳೆಯರಿಗಾಗಿ ವಿದ್ಯಾರ್ಥಿ ನಿಲಯಗಳ ಸೌಲಭ್ಯವನ್ನು ವಿಶ್ವವಿದ್ಯಾನಿಲಯವು ಹೊಂದಿದೆ. ಜೊತೆಗೆ ಹತ್ತಿರದಲ್ಲಿ ಬಿ.ಸಿ.ಎಂ ವಿದ್ಯಾರ್ಥಿ ನಿಲಯಗಳು ಇದ್ದು ಪುರುಷ ಮತ್ತು ಮಹಿಳೆಯರಿಗೆ ಅವಕಾಶವಿರುತ್ತದೆ, ಸುಸಜ್ಜಿತವಾದ ಗ್ರಂಥಾಲಯ, ಗಣಕ ಕೇಂದ್ರ, ವಿಜ್ಞಾನ ಉಪಕರಣ ಕೇಂದ್ರ, ಮೈಕ್ರೋಟೋನ್ ಸೆಂಟರ್, ಆರೋಗ್ಯ ಕೇಂದ್ರ, ಯಕ್ಷಗಾನ ಕಲಾಕೇಂದ್ರ, ಮಂಗಳ ಸಭಾಂಗಣ, ಕ್ಯಾಂಟೀನ್, ಸುಸಜ್ಜಿತವಾದ ಅತಿಥಿ ಗೃಹಗಳನ್ನು ಹೊಂದಿದೆ. ಉಪಹಾರ ಗೃಹ, ಬ್ಯಾಂಕುಗಳು, ಅಂಚೆ ಕಚೇರಿ, ವಾಣಿಜ್ಯ ಸಂಕೀರ್ಣ ಹಾಗೂ ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಪತ್ತಿನ ಸಹಕಾರಿ ಸಂಘ ಇವು ವಿಶ್ವವಿದ್ಯಾನಿಲಯದ ಆವರಣದಲ್ಲಿದೆ. ಮಾತ್ರವಲ್ಲದೆ ಆಂಗ್ಲ ಮಾಧ್ಯಮದ ಪ್ರಾಥಮಿಕ, ಪ್ರೌಢಶಾಲೆ, ಪದವಿಪೂರ್ವ ಕಾಲೇಜುಗಳು, ವಿಶ್ವವಿದ್ಯಾನಿಲಯದ ಹತ್ತಿರವಿದೆ. ಇತರ ಆಧುನಿಕ ಸಂಪರ್ಕ ಸೌಕರ್ಯಗಳು ವಿಶ್ವವಿದ್ಯಾನಿಲಯದ ಆವರಣದಲ್ಲಿ ಲಭ್ಯವಿದೆ. ಉತ್ತಮ ಸಾರಿಗೆ ಸಂಪರ್ಕ ವ್ಯವಸ್ಥೆಯೂ ಇದೆ. ಕ್ರೀಡಾ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ ಉತ್ತಮ ಸೌಕರ್ಯಗಳು ಇಲ್ಲಿ ಲಭ್ಯವಿದೆ. ಸುಸಜ್ಜಿತವಾದ ಮೈದಾನ ಒಳಾಂಗಣ ಮತ್ತು ಹೊರಾಂಗಣ

➔➔➔

→→→

ಕ್ರೀಡೆಗೆ ಅವಕಾಶಗಳಿವೆ.

**ವಿಶ್ವವಿದ್ಯಾನಿಲಯುದಲ್ಲಿರುವ ಶಿಕ್ಷಣ ವಿಷಯಗಳು :**

**ಕಲಾ ನಿಕಾಯ :** ಕನ್ನಡ, ಇಂಗ್ಲೀಷ್, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ, ಸಮಾಜ ಕಾರ್ಯ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ.

**ವಾಣಿಜ್ಯ ನಿಕಾಯ :** ವಾಣಿಜ್ಯ ಶಾಸ್ತ್ರ (ಎಂ.ಕಾಂ.) ವ್ಯವಹಾರ ಆಡಳಿತ ಅಧ್ಯಯನ (ಎಂ.ಬಿ.ಎ), ಎಂ.ಎಚ್.ಆರ್.ಡಿ.

**ವಿಜ್ಞಾನ ನಿಕಾಯು :** ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವ ವಿಜ್ಞಾನ, ಸಂಖ್ಯಾಶಾಸ್ತ್ರ, ಮೈಕ್ರೋಬಯೋಲಜಿ, ಕಂಪ್ಯೂಟರ್ ಸೈನ್ಸ್, ಸಂಖ್ಯಾಶಾಸ್ತ್ರ, ಸಾಗರ ಭೂ ವಿಜ್ಞಾನ, ಮಾನವ ಪ್ರಜ್ಞೆ ಮತ್ತು ಯೋಗ ವಿಜ್ಞಾನ, ಇಂಡಸ್ಟ್ರೀಯಲ್ ಕೆಮೆಸ್ಟ್ರೀ, ಮೆಟೀರಿಯಲ್ ಸೈನ್ಸ್, ಎಲೆಕ್ಟ್ರಾನಿಕ್ಸ್, ಅನ್ವಯಿಕ ಸಸ್ಯಶಾಸ್ತ್ರ, ಅನ್ವಯಿಕ ಪ್ರಾಣಿಶಾಸ್ತ್ರ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ, ಗಣಿತಶಾಸ್ತ, ಎಂ.ಸಿ.ಎ ಎಂ.ಸಿ.ಜೆ. ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆಯುವ ಅವಕಾಶಗಳಿವೆ.

**ದೈಹಿಕ ಶಿಕ್ಷಣ :** ಎಂ.ಪಿ.ಎಡ್., ಬಿ.ಪಿ.ಎಡ್ ಹಾಗೂ ಸಮ್ಮರ್ ಕೋರ್ಸ್ ಪದವಿ ಪಡೆಯಲು ಅವಕಾಶಗಳಿವೆ. ಹಲವು ಕ್ರೀಡಾ ಸೌಲಭ್ಯಗಳು ಆವರಣದಲ್ಲಿದ್ದು ಜಿಮ್ನಾಸಿಸಂ, ಇನ್‌ಡೋರ್, ಟೆನಿಸ್ ಕೋರ್ಟ್, ಪುಟ್ಬಾಲ್ ಮೈದಾನ ಸೌಲಭ್ಯವಿದೆ. ಕ್ರಿಕೆಟ್ ಮೈದಾನ ಸ್ಟೇಡಿಯಂ ನಿರ್ಮಾಣಕ್ಕೆ ಈಗಾಗಲೇ ಶಿಲಾನ್ಯಾಸ ನಡೆದಿದೆ. ವಿಶ್ವವಿದ್ಯಾನಿಲಯ ಸಂಶೋಧನೆಗೆ ಪ್ರಾಮುಖ್ಯತೆ ಕೊಡುತ್ತಿದ್ದು ವಿವಿಧ ಅಧ್ಯಯನ ಪೀಠಗಳು ಮತ್ತು ಕೇಂದ್ರಗಳ ಮೂಲಕ ಉನ್ನತ ಜ್ಞಾನಾರ್ಜನೆಗೆ ಅವಕಾಶವಿದೆ.

**ಯೋಗಿಕ್ ಸೈನ್ಸ್ :** 1 ವರುಷದ 2 ಸೆಮಿಸ್ಟರಿನ ಡಿಪ್ಲೊಮಾ ಇನ್ ಯೋಗಿಕ್ ಸೈನ್ಸ್ * 3 ತಿಂಗಳ ಯೋಗಿಕ್ ಸೈನ್ಸ್ – ಸರ್ಟಿಫಿಕೇಟ್ ಕೋರ್ಸ್ * 1 ತಿಂಗಳ ಯೋಗಿಕ್ ಸೈನ್ಸ್ – ಸರ್ಟಿಫಿಕೇಟ್ ಕೋರ್ಸ್.

**ವಿಶ್ವವಿದ್ಯಾನಿಲಯದಲ್ಲಿರುವ ಪೀಠಗಳು :** ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳುಪೀಠ, ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ, ಕನಕದಾಸ ಸಂಶೋಧನಾ ಕೇಂದ್ರದ ದಯಾನಂದ ಪೈ ಮತ್ತು ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ ಅಂಬೇಡ್ಕರ್ ಅಧ್ಯಯನ ಪೀಠ, ಕೊಡವ ಅಧ್ಯಯನ ಪೀಠ, ಅಂಬಿಗರ ಚೌಡಯ್ಯ ಅಧ್ಯಯನ ಪೀಠ, ನೆಹರೂ ಅಧ್ಯಯನ ಪೀಠ, ಗಾಂಧಿ ಅಧ್ಯಯನ ಕೇಂದ್ರ ಬುದ್ಧ ಅಧ್ಯಯನ ಕೇಂದ್ರ ಧರ್ಮ ನಿಧಿ ಪೀಠ, ಪಾವಂಜೆ ಪೀಠ, ಶಿವರಾಮ ಕಾರಂತ ಪೀಠ, ವಿಜಯ ಬ್ಯಾಂಕ್ ಪರಿಸರ ಅಧ್ಯಯನ ಪೀಠ, ಮಹಿಳಾ ಅಧ್ಯಯನ ಕೇಂದ್ರ Social exclusion & inclusive policy

ಅಧ್ಯಯನ ಕೇಂದ್ರಗಳು, ಪೀಠಗಳು ಸಂಶೋಧನೆ ಹಾಗೂ ಸಂಸ್ಕೃತಿ ಪ್ರಸರಣ, ಪ್ರಚಾರೋಪನ್ಯಾಸ ಕಾರ್ಯಕ್ರಮಗಳ ಮೂಲಕ



ಕಾರ್ಯ ನಿರ್ವಹಿಸುತ್ತಿದೆ. ವಿಶ್ವವಿದ್ಯಾನಿಲಯ ಪ್ರಸಾರಾಂಗದ ಮೂಲಕ ಬೇರೆ ವಿಷಯಕ್ಕೆ ಸಂಬಂಧಿಸಿದಂತೆ ಉಪನ್ಯಾಸಗಳನ್ನು ನಡೆಸಿ ಪುಸ್ತಕ ಪ್ರಕಟಣೆಯ ಕೆಲಸ ನಡೆಸುತ್ತಾ ಬರುತ್ತಿದೆ. ಇದಲ್ಲದೆ ಕೆಲವು ವಿಭಾಗಗಳಲ್ಲಿ ಯು.ಜಿ.ಸಿ. ಪ್ರಾಯೋಜಿತ ಯೋಜನೆಗಳು ಸಂಶೋಧನಾ ಕಾರ್ಯಗಳನ್ನು ನಡೆಸುತ್ತಿವೆ, ರಾಜ್ಯ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅನುದಾನದೊಂದಿಗೆ ಕನ್ನಡ ವಿಭಾಗದಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆಯು ಸಮಗ್ರವಾದ ಸಂಶೋಧನಾ ಕಾರ್ಯವನ್ನು ನಿರ್ವಹಿಸುತ್ತಿದೆ. ಅಲ್ಲದೆ ವಿಜ್ಞಾನ ವಿಭಾಗದಲ್ಲೂ ವಿವಿಧ ಯೋಜನೆಗಳು ಕಾರ್ಯ ನಿರ್ವಹಿಸುತ್ತಿದೆ. USIC, CART ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಸಂಶೋಧನೆ ನಡೆಸುತ್ತಿದೆ. ವಿವಿಧ ವಿಭಾಗಗಳಲ್ಲಿ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದ ವಿಚಾರಗೋಷ್ಠಿಗಳು ಸಮ್ಮೇಳನ, ತರಬೇತಿಗಳು ವಿಶ್ವವಿದ್ಯಾನಿಲಯುದ ಆವರಣದಲ್ಲಿ ಸದಾ ನಡೆಯುತ್ತಿರುತ್ತದೆ. ವಿಶ್ವವಿದ್ಯಾನಿಲಯುದಲ್ಲಿ ಪಿ.ಎಚ್.ಡಿ. ಸಂಶೋಧನೆ ಮಾಡಲು ಅವಕಾಶವಿದ್ದು ಪ್ರತೀ ವರ್ಷಕ್ಕೊಮ್ಮೆ ಜೂನನಲ್ಲಿ ಪ್ರವೇಶಕ್ಕೆ ಅವಕಾಶವಿರುತ್ತದೆ. ವಿವಿಧ ವಿಷಯುಗಳಲ್ಲಿ ಸಂಶೋಧನೆ ಕೈಗೊಳ್ಳಬಹುದು.

ಆರ್ಥಿಕವಾಗಿ ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗದೆ ಮನೆಯಲ್ಲೆ ಉಳಿದ ಅನೇಕ ವಿದ್ಯಾರ್ಥಿಗಳಿಗೆ ಅಂಚೆ ತೆರಪಿನ ಶಿಕ್ಷಣದ ಕ್ರಮದ ಮೂಲಕ ಸ್ನಾತಕೋತ್ತರ ಪದವಿಯನ್ನು ಪಡೆಯಲು ಅವಕಾಶವಿದೆ.

**ಅಂಚೆ ತೆರಪಿನ ಶಿಕ್ಷಣ ವಿಷಯಗಳು :** ಕನ್ನಡ, ಅರ್ಥಶಾಸ್ತ್ರ, ಇಂಗ್ಲಿಷ್, ಇತಿಹಾಸ, ವಾಣಿಜ್ಯಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಬಿ.ಎ., ಬಿ.ಕಾಂ., ಬಿ.ಬಿ.ಎಂ., ಮೊದಲಾದ ವಿಷಯಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಪಡೆಯಲು ಅವಕಾಶಗಳಿವೆ.

**ವಿಶ್ವವಿದ್ಯಾನಿಲಯದಲ್ಲಿರುವ ಇತರ ಸೌಲಭ್ಯಗಳು :** ಯು. ಜಿ. ಸಿ. ಕೋಚಿಂಗ್ ಸೆಂಟರ್, I.A.S., I.P.S. ಪರೀಕ್ಷೆಗಳಿಗೆ ಕೋಚಿಂಗ್

ಪರಿಶಿಷ್ಟ ಜಾತಿ ಮತ್ತು ಅಲ್ಪಸಂಖ್ಯಾತರ ಘಟಕ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಘಟಕ, ಉದ್ಯೋಗ ಮಾಹಿತಿ ಮತ್ತು ವೃತ್ತಿ ಮಾರ್ಗದರ್ಶನ ವಿಭಾಗ, ಸುಸಜ್ಜಿತವಾದ ಗ್ರಂಥಾಲಯ, ಸೈಬರ್ ಇಂಟರ್ನೆಟ್ ವ್ಯವಸ್ಥೆ.

ವಿಶ್ವವಿದ್ಯಾನಿಲಯವು ಶಿಕ್ಷಣವನ್ನು ನೀಡುವುದರ ಜೊತೆಗೆ ವ್ಯಕ್ತಿತ್ವ ವಿಕಸನ, ಸಂಶೋಧನೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಿದೆ. ವಿದ್ಯಾರ್ಥಿಗಳ ಸೂಕ್ತ ಪ್ರತಿಭೆಯನ್ನು ಹೊರಹೊಮ್ಮಲು ಕ್ಯಾಂಪಸ್ ಫೆಸ್ಟ್, ಟ್ಯಾಲೆಂಟ್ಸ್ ಡೇ, ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯವು ತನ್ನ ಕಾರ್ಯ ನಿರ್ವಹಿಸುತ್ತದೆ. ಆಡಳಿತ ವರ್ಗದ ಮಾರ್ಗದರ್ಶನ, ಸಂಶೋಧನ ನಿರತ ಬೋಧಕ ವೃಂದ, ಕರ್ತವ್ಯ ನಿಷ್ಠ ಸಿಬ್ಬಂದಿ ವರ್ಗ ವಿದ್ಯಾರ್ಥಿಗಳ ಔನತ್ಯಕ್ಕೆ ಶ್ರಮಿಸುತ್ತಿದೆ. ಒಟ್ಟಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯವು ಕರಾವಳಿ, ದ.ಕ., ಉಡುಪಿ, ಕೊಡಗು ಭಾಗದ ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆಗೆ ವರದಾನವಾಗಿದೆ.

**ವಿಜ್ಞಾನ ನಿಕಾಯ**

1. ಅಪ್ಲ್ಯಾಡ್ ಕೆಮಿಸ್ಟ್ರಿ 2) ಬಯೋ ಕೆಮಿಸ್ಟ್ರಿ 3) ಬಯೋ ಟೆಕ್ನಾಲಜಿ 4) ಬಯೋ ಸ್ಯಾನ್ಸ್ 5) ಬಾಟನಿ 6) ಕೆಮಿಸ್ಟ್ರಿ 7) ಕಂಪ್ಯೂಟರ್ ಸ್ಯಾನ್ಸ್ 8) ಎಲೆಕ್ಟ್ರಾನಿಕ್ಸ್ 9) ಎನ್ವಿರಾನ್‌ಮೆಂಟಲ್ ಸ್ಯಾನ್ಸ್ 10) ಫುಡ್ ಸ್ಯಾನ್ಸ್ & ನ್ಯೂಟ್ರಿನಿಕ್ಸ್ 11) ಜಿಯೋ ಇನ್ಫಾರ್‌ಮೆಟಿಕ್ಸ್ 12) ಹ್ಯೂಮನ್ ಕನ್ಸ್ಯಾಸ್‌ನೆಸ್ & ಯೋಗಿಕ್ ಸ್ಯಾನ್13) ಇಂಡಸ್ಟ್ರಿಯಲ್ ಕೆಮಿಸ್ಟ್ರಿ 14) ಲೈಬ್ರರಿ & ಇನ್ಫಾರ್‌ಮೇಷನ್ ಸ್ಯಾನ್ಸ್ 15) ಮೆರಿನ್ ಜಿಯಾಲಜಿ 16) ಜಿಯೋಗ್ರಫಿ 17) ಮ್ಯಾಥ್‌ಮೆಟಿಕ್ಸ್ 18) ಮೆಟೀರಿಯಲ್ ಸ್ಯಾನ್ 19) ಮೈಕ್ರೋಬಯೋಲಜಿ 20) ಆರ್ಗಾನಿಕ್ ಮೆಮಿಸ್ಟ್ರಿ 21) ಪಿಸಿಕ್ಸ್ 22) ಸ್ಟಾಟಿಟಿಕ್ಸ್ 23) ಜುವಾಲಜಿ 24) ಅನಾಲಿಜಿಕಲ್ ಕೆಮಿಸ್ಟ್ರಿ 25) ಇನ್ಫಾರ್‌ಮೇಷನ್ ಸಿಸ್ಟಮ್ಸ್ 26) ರೇಡಿಯೋಷನ್ ಪಿಸಿಕ್ಸ್ 27) ಪಿಸಿಯಾಲಜಿ 28) ಕಾರ್ಪೊರೇಟ್ ಸೈಕಾಲಜಿ 29) ಕೌನ್ಸಿಲಿಂಗ್.

**ಕಲಾ ವಿಕಾಯ**

1) ಕನ್ನಡ 2) ಹಿಂದಿ 3) ಸಂಸ್ಕೃತ 4) ಇಂಗ್ಲೀಷ್ 5) ಇತಿಹಾಸ 6) ಅರ್ಥಶಾಸ್ತ್ರ 7) ರಾಜ್ಯಶಾಸ್ತ್ರ 8) ಸಮಾಜಶಾಸ್ತ್ರ 9) ಸಮಾಜ ಕಾರ್ಯ 10) ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ (ಎಂ.ಸಿ.ಜೆ) 11) ಭರತನಾಟ್ಯಮ್

**ವಾಣಿಜ್ಯ**

1 ಎಂ.ಬಿ.ಎ. 2) ಎಂ.ಕಾಂ

**ಶಿಕ್ಷಣ**

1. ಎಂ.ಎಡ್ 2) ಎಂ.ಪಿಎಡ್



# ಮಾಧ್ಯಮ ಬ್ರಹ್ಮಾಂಡಕ್ಕೆ ಶುದ್ಧೀಕರಣ ಅಗತ್ಯವಿದೆಯಾ?

✍ **ಡಾ. ಸದಾನಂದ ಪೆರ್ಲ,**
ಕಾರ್ಯಕ್ರಮ ನಿರ್ವಹಣಾಧಿಕಾರಿ

**ಮಾ**ಧ್ಯಮ ಲೋಕ ವೆಂಬ ಬ್ರಹ್ಮಾಂಡದಲ್ಲಿ ಎಲ್ಲರೂ ಸಿಲುಕಿಕೊಂಡಿದ್ದಾರೆ. ಪ್ರಜಾಪ್ರಭುತ್ವ ಸಮಾಜ ಮತ್ತು ಶ್ರೀಸಾಮಾನ್ಯರು ಮಾಧ್ಯಮಗಳ ಮೇಲೆ ಹೆಚ್ಚೆಚ್ಚು ಅವಲಂಬಿತರಾಗಿ ಜೀವನ ಸಾಗಿಸುವುದನ್ನು ನೋಡುತ್ತೇವೆ. ಮಾಧ್ಯಮದ ನೀತಿ ಪಾಲಿಸಿ ಸಾಮಾಜಿಕ ಜವಾಬ್ದಾರಿ ಕಾಪಾಡುವ ಹೊಣೆಗಾರಿಕೆ ಕೂಡಾ ಮಾಧ್ಯಮದ ಮೇಲಿದೆ. ನಾಗಾಲೋಟದ ಜೀವನಕ್ಕೆ ಅತ್ಯಂತ ಸುಲಭ ಮತ್ತು ಕೈಗೆಟಕುವ ಮಾಧ್ಯಮ (Media) ನಿರ್ಣಯದ ಮೂಲ ಸೂತ್ರವಾಗಿ ಬಿಟ್ಟಿದೆ.

ಮಾಧ್ಯಮ ರಂಗ ಯುವ ಸಮೂಹವನ್ನು ಆವರಿಸಿ ಬಿಟ್ಟಿದೆ. ಮಾಹಿತಿ ತಂತ್ರಜ್ಞಾನ ಮಾಧ್ಯಮದ ಸಾಧಕಗಳನ್ನು ವಿಸ್ತರಿಸಿದೆ. ಸೈಬರ್ ಪತ್ರಿಕೋದ್ಯಮ ಮತ್ತೊಂದು ಕವಲು. ಬಹು ಮಾಧ್ಯಮ ಅಥವಾ ನವಮಾಧ್ಯಮ ಯುಗದಲ್ಲಿ ಜಗತ್ತು ವಿಹರಿಸುತ್ತಿದೆ. ಈ ಸಂದರ್ಭದಲ್ಲಿ ಇಂಗ್ಲೆಂಡಿನ ಶ್ರೇಷ್ಠ ಪತ್ರಕರ್ತ ಜಾನ್ ಮಾರ್ತಿ ಅವರ ಮಾತೊಂದನ್ನು ಉಲ್ಲೇಖಿಸಬಹುದು. "ಮುದ್ರಣ ಯಂತ್ರವು ಪ್ರಚಾರಕ್ಕೆ ಬಂದ ಹೊಸತಿನಲ್ಲಿ ಅದನ್ನು ಮಹತ್ತಾದ ಜ್ಞಾನ ಪ್ರಸಾರ ಯಂತ್ರ ಎಂದು ಎಲ್ಲರೂ ಸ್ವಾಗತಿಸುತ್ತಾರೆ. ಆದರೆ ಈಗ ಅದು ಅಜ್ಞಾನ ಪ್ರಸಾರವಾಗಿದೆ ವಿವೇಕವನ್ನು ಹರಸುವುದಕ್ಕೆ ಬದಲಾಗಿ ಮೂರ್ಖತೆಯನ್ನು ಹರಡುವುದಾಗುತ್ತಿದೆ. ವೃತ್ತ ಪತ್ರಿಕೆಗಳು ಜನಸಮಸ್ತದ ದೃಷ್ಟಿಯಿಂದ ನಡೆಯುವುದಕ್ಕೆ ಬದಲಾಗಿ ಏಕಪಕ್ಷೀಯಗಳಾಗುತ್ತಿವೆ. ಪತ್ರಿಕೆಗಳು ತಮ್ಮಿಂದ ಆಗಬಲ್ಲ ಈ ಅಪಕಾರದ ವಿಷಯದಲ್ಲಿ ಎಚ್ಚರಿಕೆ ಯಿಂದಿರಬೇಕು (ವೃತ್ತ ಪತ್ರಿಕೆ – ಡಿ.ವಿ.ಜಿ) ವಿವೇಕ ಹರಡುವ ಬದಲು ಮೂರ್ಖತೆಯನ್ನು ಹರಡುತ್ತಿದೆ ಎನ್ನುವ ಮಾತು ಚಿಂತನಾರ್ಹ ವಿಷಯ. ಮಾಧ್ಯಮಗಳು ಪ್ರಜಾಪ್ರಭುತ್ವದ ನಾಲ್ಕನೆಯ ಅಂಗವೆಂದು ಒಪ್ಪಿಕೊಂಡ ನಡುವೆ ಈ ಆವಾಂತರ ಆತಂಕಕ್ಕೆ ಕಾರಣವಾಗುತ್ತಿದೆ. ಸಂಸತ್, ನ್ಯಾಯಾಂಗ ಹಾಗೂ ಕಾರ್ಯಾಂಗ ಪ್ರಜಾಪ್ರಭುತ್ವ ತಳಹದಿಯಾಗಿದ್ದು ಮಾಧ್ಯಮ ನಾಲ್ಕನೇಯ ಸ್ತಂಭವಾಗಿ ಗಟ್ಟಿ ಅಡಿಪಾಯ ನೀಡಬೇಕು. ಅದು ಜವಾಬ್ದಾರಿ ಕೂಡಾ. ಪತ್ರಿಕೋದ್ಯಮದ ನಿಷ್ಠೆ ಓದುಗ–ಕೇಳುಗ–ನೋಡುಗರಿಗಿರಬೇಕು. ಒಡೆಯರು ಅವರೇ ಎಂದು ಹೇಳಿದರೂ ಮಾಧ್ಯಮಗಳ ನಡೆ ಜನಪರ ಇಲ್ಲದಿರುವಾಗ ಜನರ ನಡುವೆ ಸಹಜ ಪ್ರಶ್ನೆ ಮೂಡುವುದು ಸತ್ಯ.

**ಟಿ.ಆರ್ ಪಿಯ ಹಿಂದೆ ಓಡುವ ಮಾಧ್ಯಮ, ಬ್ರೇಕಿಂಗ್ ನ್ಯೂಸ್‌ಗಳ ಬೆನ್ನು ಹಿಡಿದ ಮಾಧ್ಯಮ ನೆಗೆಟಿವ್ ಚಿಂತನೆ ಬಿಂಬಿಸುವ ಮಾಧ್ಯಮದಿಂದಾಗಿ ಮಾಧ್ಯಮ ಬ್ರಹ್ಮಾಂಡ ಕುಲಗೆಡುತ್ತಿದೆ. ಸ್ಪರ್ಧಾತ್ಮಕ ಜಗತ್ತಿನ ಮಾಧ್ಯಮದ ಪೈಪೋಟಿಯಿಂದಾಗಿ "ಸ್ವಚ್ಛಮೀಡಿಯಾ" ಆಗಿ ಉಳಿಯಲು ಕಷ್ಟವಾಗುತ್ತಿದೆ. ಸುಳ್ಳನ್ನು ನಿಜವಾಗಿಸುವ ವ್ಯರ್ಥಾಲಾಪ, ಜಡ್ಜ್‌ಮೆಂಟ್ ನೀಡುವ ಮಾಧ್ಯಮದ ಇದಮಿತ್ಥಂ ತೀರ್ಪು, ನಿರ್ಣಯ ಹೇರುವ ಡಾಂಭಿಕತನದಿಂದ ಮಾಧ್ಯಮ ಸಮಾಜದ ನಿರ್ಮಾಣ ಮಾಡುವುದರಲ್ಲಿ ವಿಫಲವಾಗಿ ನಿರ್ನಾಮದತ್ತ ಹೊರಳುತ್ತಿದೆ.**

ಸರ್ವರ ಕಲ್ಯಾಣಕ್ಕೆ ಮಾಧ್ಯಮ ಹೊಣೆಗಾರಿಕೆಯಿಂದ ವರ್ತಿಸಬೇಕು ಎಂಬ ನೀತಿ ತತ್ವಗಳು ಎಲ್ಲಿ ಮರೆಯಾಯಿತು? ಇಂದು ಬಹುಮಾಧ್ಯಮ ಯುಗ ಪತ್ರಿಕೆ, ರೇಡಿಯೋ ಚಲನಚಿತ್ರ, ಟಿ.ವಿ, ಅಂತರ್ಜಾಲ, ವಾಟ್ಸಪ್, ವೆಬ್‌ಮೀಡಿಯಾ, ಹೀಗೆ ಮಾಧ್ಯಮ ಬಹುರೂಪಿಯಾಗಿದೆ. ಹೀಗೆ ಬ್ರಹ್ಮಾಂಡ ವ್ಯಾಪಿಸಿದ ಬಹುರೂಪಿ ಮಾಧ್ಯಮದ ಮುಕ್ತ ಮಾಹಿತಿ ಸಂವಹನದ ಸ್ವಾತಂತ್ರದಿಂದಾಗಿ ಸಾಮಾಜಿಕ ಪರಿಣಾಮ ಗಂಭೀರ. ಇದು ನೇರ ತಟ್ಟುವುದು ಕಾರುಣ್ಯ ಮತ್ತು ಯೌವ್ವನದ ಮನಸ್ಸುಗಳನ್ನು ಮಾಧ್ಯಮಗಳ ಮುಖ ಬದಲಾಗಿರಬಹುದು, ಮಾಹಿತಿ ಡಂಪಿಂಗ್ ವಿಧಾನ ಅಂದಿನಿಂದ ಇಂದಿನವರೆಗೆ ಬದಲಾಗಿಲ್ಲ. ಬದಲಾಗಬಾರದು ಕೂಡಾ. ಸ್ಪೀಡ್, ಟೆಕ್ನಿಕ್ ಹಾಗೂ ಇನ್‌ಫಾರ್ಮೇಶನ್ ಡೆಲಿವರಿ ಮೆಕಾನಿಸಂನಲ್ಲಿ ಅಗಣಿತ ಬದಲಾವಣೆಗಳ ಹೊರತಾಗಿಯೂ ಮಾಧ್ಯಮರಂಗದ ಕಲ್ಪನೆ ಮತ್ತು ಶಾಸ್ತ್ರಗಳು ಈ ಬಗೆ ಸ್ಪಷ್ಟವಾಗಿಯೆ ಉಳಿದಿದೆ. ಉಳಿಸುವ ಪ್ರಯತ್ನಗಳು ನಿರಂತರ ನಡೆಯಬೇಕು. ಇನ್ನೊಂದು ಗ್ರಹದಿಂದ ಯಾವುದೋ ಶಕ್ತಿ ಬಂದು ನಕಾರಾತ್ಮಕ ಬದಲಾವಣೆಯನ್ನು ತಡೆಯಲಾರದು. ನಮ್ಮಿಂದಲೇ ಇದು ಹುಟ್ಟಿಕೊಳ್ಳಬೇಕಾದ ಅನಿವಾರ್ಯತೆ ಇದೆ. ನಮ್ಮಿಂದಲೇ ಅಂದಾಗ ಅದು ಓಗುಗರೆ, ಕೇಳುಗರೆ, ವೀಕ್ಷಕರೆ, ಗ್ರಾಹಕರೆ, ಆಸಕ್ತರೆ ಎನ್ನುವಂತೆ ಬೊಟ್ಟು ಮಾಡುವುದು ಸಹಜ.

ಸಾಂಪ್ರದಾಯಿಕ ಮಾಧ್ಯಮಗಳ ನಂತರ ಬೆಳೆದು ಬಂದು ಸಾಂಪ್ರದಾಯಿಕೇತರ ಮಾಧ್ಯಮ ಇಂದು ಜಗತ್ತನ್ನಾಳುತ್ತಿದೆ. 'ಡೆಮೋಸ್' ಮತ್ತು 'ಕ್ರಾಡೋಸ್' ಎಂಬ ಎರಡು ಗ್ರೀಕ್ ಪದಗಳ ಸಂಯೋಗವೇ 'ಡೆಮೋಕ್ರಸಿ' ಜನರಿಂದ ಜನರಿಗಾಗಿ ನಡೆಯುವ ಪ್ರಕ್ರಿಯೆ ಎಂಬ ಅಭಿದಾನ ನೀಡಿದೆ. ಈ ಪ್ರಕ್ರಿಯೆ ಮಾತ್ರ ನಡೆಸದೆ ಇಂದು ಮನಸ್ಸು ವಿಚಲಿತಗೊಳಿಸುವ ವಿಷಣ್ಣತೆಯೆಡೆಗೆ ನೂಕುವ, ಭಾವನಾರಹಿತ ಲೋಕ ಸೃಷ್ಟಿಯ ಕಡೆಗೆ ಒಯ್ಯುವ ಪ್ರಕ್ರಿಯೆ ಮಾಧ್ಯಮದಿಂದಾಗುವ ಅಪಾಯ ನಮ್ಮ ಮುಂದಿದೆ. ಕೈಯ ಮುಷ್ಠಿಯೊಳಗಣ ಮೊಬೈಲ್ ಫೋನಿನಲ್ಲಿ ಕಾಣುವ ಅವತಾರ ವಿಸ್ಮಯ ಹುಟ್ಟಿಸುತ್ತಿದೆ.

ಟ.ವಿ. ಮೊಬೈಲ್ ವೀಕ್ಷಣೆಯಿಂದ ಮನಸ್ಸು ಮತ್ತು ಆರೋಗ್ಯದ ಮೇಲೆ ಎಂತಹ ಕೆಟ್ಟ ಪರಿಣಾಮ ಬೀರುತ್ತದೆಂಬುದರ ಬಗ್ಗೆ

→→→


➔➔➔

ಮುಂದುವರಿದ ದೇಶಗಳು ಅಧ್ಯಯನ ಆತಂಕ ಹುಟ್ಟಿಸುತ್ತದೆ. ಬ್ರಿಟಿಷ್ ಮನಶ್ಶಾಸ್ತ್ರಜ್ಞ ಸಂಸ್ಥೆಯ ಅಧ್ಯಯನವು ದೀರ್ಘಕಾಲಿಕವಾಗಿ ಟೆಲಿವಿಷನ್ ನೋಡುವುದರಿಂದ ಹದಿನೈದು ಪ್ರಮುಖ ದೈಹಿಕ ಮಾನಸಿಕ ಪರಿಣಾಮಗಳನ್ನು ಗುರುತಿಸಿದೆ. ವರದಿ ಪ್ರಕಾರ ಮೊದಲ ತೊಂದರೆ ಬೊಜ್ಜು ಬೆಳೆಯುವುದು, ಟಿ.ವಿ. ಮುಂದೆ ಕೂತ ಮಕ್ಕಳು ಕುರುಕಲು ತಿಂಡಿಗಳನ್ನು ತಿನ್ನುತ್ತಾ ದೇಹದ ತೂಕ ಹೆಚ್ಚಿಸಿಕೊಳ್ಳುತ್ತಿದ್ದಾರೆಂದು ಪಾಲಕರಿಗೆ, ಹೆತ್ತವರಿಗೆ ಮನವರಿಕೆಯಾಗುತ್ತಿದೆ. ದೇಹದ ಆರೋಗ್ಯ ಕಾಪಾಡುವ ಮಕ್ಕಳ ಆಟ ನಿಂತು ಹೋಗಿರುವುದೇ ಮೂಲಕಾರಣ. ಟೆಲಿವಿಷನ್ ಹೊರಸೂಸುವ ಬೆಳಕು ಮೆಲಟೋನಿನ್ ಹಾರ್ಮೋನಿನ ಉತ್ಪಾದನೆಗೆ ಅಡಚಣೆ ಉಂಟುಮಾಡುತ್ತದೆ ಮತ್ತು ಇದರಿಂದ ಡಿ.ಎನ್.ಎ. ಕೋಶಗಳಲ್ಲಿ ದೋಷಗಳು ಕಂಡುಬಂದು ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ಕುಗ್ಗುವುದು ಸಾಮಾನ್ಯವಾಗಿದೆ. ಮೆಲಟೋನಿನ್ ಮಕ್ಕಳಲ್ಲಿ ವಯಸ್ಸಿಗೆ ಮುನ್ನವೇ ತಾರುಣ್ಯ ವಿಕಸನ ಮಾಡುವುದಕ್ಕೂ ಸಂಬಂಧಿಸಿದೆ ಎಂಬ ಅಂಶ ಗಮನೀಯ. ಜ್ಞಾನೇಂದ್ರಿಯಗಳು ಟೆಲಿವಿಷನ್‌ನಿಂದ ಅತಿಯಾಗಿ ಪ್ರಚೋದಿಸಲ್ಪಟ್ಟು ಕಡಿಮೆ ನಿದ್ರೆಗೆ ಕಾರಣವಾಗಿ ದೈಹಿಕ ಸಮಸ್ಯೆ ಎದುರಾಗುತ್ತದೆ. ಮಕ್ಕಳಲ್ಲಿ ಆಟದ ಆಸಕ್ತಿ ಕುಗ್ಗಿ ಆಟಿಸಮ್ ಕಂಡು ಬರುವುದೂ ಇದೆ. ಬುದ್ಧಿ ಮತ್ತೆ ಪ್ರಚೋದಿಸುವ ಬಾಹ್ಯ ಚಟುವಟಿಕೆ ಕಮ್ಮಿಯಾಗಿ ಓದುವ ಹವ್ಯಾಸ ಕುಗ್ಗುತ್ತದೆ. ಟಿ.ವಿ.ವೀಕ್ಷಣೆ ಕಾಲದಲ್ಲಿ ಮೆಟಬಾಲಿಸಂ ಕ್ಷೀಣವಾಗುವುದು. ನಿರಂತರ ಬೆಳಕಿನ ಪರದೆ ನೋಡುವುದರಿಂದ ದೃಷ್ಟಿದೋಷಕ್ಕೆ ಮೂಲವಾಗುವುದು. ಟಿ.ವಿ. ವೀಕ್ಷಣೆ ಅತಿಯಾದರೆ ಅಲ್‌ಝೈಮರ್ಸ್ ಕಾಯಿಲೆಗೂ ತುತ್ತಾಗುವ ಅಪಾಯವಿದೆ.

ಎಳವೆಯಲ್ಲಿ ಮಕ್ಕಳು ಆಟದಲ್ಲಿ ತೊಡಗಿ ಸಂವಹನ ಪ್ರಕ್ರಿಯೆಯಲ್ಲಿ ಭಾಗಿಯಾದರೆ ಮಾತ್ರ ಜ್ಞಾನ ವಿಕಾಸಗೊಳ್ಳುತ್ತದೆ. ರಾಷ್ಟ್ರದ ಆರೋಗ್ಯ ಪೂರ್ಣ ಪ್ರಜೆಯಾಗಬೇಕಾದರೆ ಕೌಟುಂಬಿಕವಾಗಿ ಸಾಮಾಜಿಕವಾಗಿ, ಭಾವನಾತ್ಮಕವಾಗಿ ಬೆಳವಣಿಗೆಗೆ ಮತ್ತು ಬಾಲ್ಯದ ಸಹಜ ಕಲಿಕೆಯ ಪ್ರಕ್ರಿಯೆಗಳು ಮಹತ್ವವಾದದು ಎಂಬುದನ್ನು ಭಾರತೀಯ ಹೆತ್ತವರು, ಪೋಷಕರು ಗಂಭೀರವಾಗಿ ಚಿಂತಿಸಬೇಕಾಗಿದೆ. ಮಾಧ್ಯಮಗಳು ಬದುಕಿನ ಜೀವಜಂತು. ಮಾಧ್ಯಮದ ವಿಷಯ, ವಸ್ತುಗಳು ಮತ್ತು ಬಹುರೂಪಿ ಮಾಧ್ಯಮದ ಅತಿ ಬಳಕೆಯಿಂದ ಮಕ್ಕಳು ಮತ್ತು ಯುವಕರ ಮನೋದೈಹಿಕತೆಯ ಮೇಲೆ ಬೀರುವ ಪರಿಣಾಮದ ಗಂಭೀರತೆ ಅರಿವಾಗಬೇಕಾಗಿದೆ. ಪುಸ್ತಕದಿಂದ ಮಾಹಿತಿ, ಮಾಹಿತಿಯಿಂದ ತಿಳುವಳಿಕೆ ತಿಳುವಳಿಕೆಯಿಂದ ವಿವೇಚನೆ, ವಿವೇಚನೆಯಿಂದ ಜ್ಞಾನ, ಜ್ಞಾನದಿಂದ ಆತ್ಮವಿಶ್ವಾಸ, ಅಲ್ಲಿಂದ ಆತ್ಮಸಾಕ್ಷಾತ್ಕಾರದತ್ತ ದಾರಿದೀಪ ಬೆಳಗುತ್ತದೆ ಎಂಬುದು ಬುಕ್‌ಚೈನ್ ಎಫೆಕ್ಟ್ ವಿಶ್ಲೇಷಣೆ. ಗಾಂಧೀಜಿಯವರಿಗೆ ಒಂದು ಪುಸ್ತಕ, ಒಂದು ನಾಟಕ ಮಾಡಿದ ಜ್ಞಾನೋದಯ ಇಂದಿನ ಯಾವ ಮಾಧ್ಯಮದಿಂದ ಸಾಧ್ಯ? 'ಕೆರಳಿಸುವ' ಮಾಧ್ಯಮಕ್ಕಿಂತ 'ಅರಳಿಸುವ' ಮಾಧ್ಯಮದ ಅಗತ್ಯವಿದೆ. ಟಿ.ಆರ್ ಪಿಯ ಹಿಂದೆ ಓಡುವ ಮಾಧ್ಯಮ, ಬ್ರೇಕಿಂಗ್ ನ್ಯೂಸ್‌ಗಳ ಬೆನ್ನು ಹಿಡಿದ ಮಾಧ್ಯಮ ನೆಗೆಟಿವ್ ಚಿಂತನೆ ಬಿಂಬಿಸುವ ಮಾಧ್ಯಮದಿಂದಾಗಿ ಮಾಧ್ಯಮ ಬ್ರಹ್ಮಾಂಡ ಕುಲಗೆಡುತ್ತಿದೆ. ಸ್ಪರ್ಧಾತ್ಮಕ ಜಗತ್ತಿನ ಮಾಧ್ಯಮದ ಪೈಪೋಟಿಯಿಂದಾಗಿ "ಸ್ವಚ್ಛಮೀಡಿಯಾ" ಆಗಿ ಉಳಿಯಲು ಕಷ್ಟವಾಗುತ್ತಿದೆ. ಸುಳ್ಳನ್ನು ನಿಜವಾಗಿಸುವ ವ್ಯರ್ಥಾಲಾಪ, ಜಡ್ಜ್‌ಮೆಂಟ್ ನೀಡುವ ಮಾಧ್ಯಮದ ಇದಮಿತ್ಥಂ ತೀರ್ಪು, ನಿರ್ಣಯ ಹೇರುವ ಡಾಂಭಿಕತನದಿಂದ ಮಾಧ್ಯಮ ಸಮಾಜದ ನಿರ್ಮಾಣ ಮಾಡುವುದರಲ್ಲಿ ವಿಫಲವಾಗಿ ನಿರ್ನಾಮದತ್ತ ಹೊರಳುತ್ತಿದೆ.

ವಿವೇಚನಾ ರಹಿತ ಸುದ್ದಿ, ಮಾಹಿತಿ ಡಂಪಿಂಗ್‌ನ ಅಪಾಯ ಸಮಾಜದಲ್ಲಿ ತಲ್ಲಣ ಸೃಷ್ಟಿಸಿದೆ ಸುದ್ದಿ ಅಥವಾ ಮಾಹಿತಿಯ ವಿಶ್ವಾಸಾರ್ಹತೆ, ವಾಲುವಿಕೆಯಿಲ್ಲದ ಇಂಪಾರ್ಶಿಯಲ್ ನಿಲುಮೆಗಳು, ಪ್ರಕಟಿತ ಸುದ್ದಿಯ ಹೊಣೆಗಾರಿಕೆ, ಪಾರದರ್ಶಕತೆ ಇವೆಲ್ಲವೂ ನೀತಿತತ್ವದ ಅಡಕವಾಗಿದ್ದರೂ ಪ್ರಾಕ್ಟಿಕಲ್‌ನಲ್ಲಿ ನಿಷ್ಕ್ರಿಯವಾಗಿಬಿಟ್ಟಿದೆ ಅದು ದೊಡ್ಡ ದುರಂತ ಪ್ರಜಾಪ್ರಭುತ್ವಕ್ಕೆ ಹೊಡೆತ. ಸಮಾಜದ ಒಗ್ಗಟ್ಟಿಗೆ ಆಘಾತ. ಬೆಳೆಯುತ್ತಿರುವ ಜನಾಂಗದ ಮೇಲೆ ಗಂಭೀರ ಪರಿಣಾಮ ಬೀರುವುದರಲ್ಲಿ ಎರಡು ಮಾತಿಲ್ಲ. ಬಹುಮಾಧ್ಯಮ ಅಥವಾ ನವಮಾಧ್ಯಮ ಎಂಬುದರ ಪ್ರವೇಶದಿಂದ ಸಂವಹನದ ವ್ಯಾಪ್ತಿ ವಿಸ್ತಾರಗೊಳ್ಳುತ್ತಾ ಸಾಗಿದೆ. ಪರಿವರ್ತನೆ ಹಾದಿಗೆ ಸುಗಮ ರಹದಾರಿ ಎಂದು ನಂಬಿದ ಶ್ರೀಸಾಮಾನ್ಯನಿಗೆ ಇದರಿಂದ ಉಂಟಾಗುವ ಗಂಭೀರ ಅಪಾಯ ನಿದಾನ ವಿಷದಂತಾಗಿದೆ. ವಮೌಲ್ಯ, ನೀತಿ, ಜೀವನಧರ್ಮವನ್ನು ಕಡೆಗಣಿಸುವ ನವ ಮಾಧ್ಯಮದ ಪ್ರಭಾವವನ್ನು 'ಪರಿವರ್ತನೆ' ಅಥವಾ ಪ್ರಗತಿ ಎಂದು ಕರೆಯಲು ಸಾಧ್ಯವೇ? ಹಳ್ಳಿಯ ಮುಗ್ಧತೆ ನಗರದಲ್ಲಿ ಕಣ್ಮರೆಯಾಗಿ ನಾಟಕೀಯ ಬದುಕಿನೆಡೆಗೆ ಮುಖಮಾಡುವಂತೆ ಬದುಕಿನಲ್ಲಿ ಬಹುಮಾಧ್ಯಮ ಪ್ರಭಾವದಿಂದ ಯಾಂತ್ರಿಕತೆಯ, ಕೃತಕತೆಯ ಜೀವನ ಸಾಗಿಸುವ ಪಥವನ್ನು ತುಳಿಯಬೇಕಾಗುವುದು. ಮಾಧ್ಯಮ ಬ್ರಹ್ಮಾಂಡದ ಮನಸ್ಸು ಒಳಿತಿನೆಡೆಗೆ ತುಡಿಯುವುದನ್ನು ಬಿಟ್ಟು ಕಾಪಟ್ಯತನದೆಡೆಗೆ ಮುನ್ನುಗ್ಗುವ ಅಪಾಯವಿದೆ. ಎಚ್ಚರಿಕೆ ಅಗತ್ಯ. ಎಚ್ಚರಿಕೆಯನ್ನು ಓದುಗ, ಕೇಳುಗ, ನೋಡುಗ, ಗ್ರಾಹಕ, ಆಸಕ್ತ ವಹಿಸುವುದು ಒಳಿತು. ಮಾಧ್ಯಮ ಬ್ರಹ್ಮಾಂಡದ ಶುದ್ಧೀಕರಣ ಈಗ ಆಗದಿದ್ದರೆ ಮುಂದೆ ಕಷ್ಟ. ಅಪಾಯದ ದಿನಗಳು ಎದುರಾಗುವುದಕ್ಕಿಂತ ಮುನ್ನ ಏಳಿ, ಎದ್ದೇಳಿ....




unlock
the
mysteries of
Beauty
International Certified
Beauty Cosmetologist and
Make-up Artist - Chetana S.
Advance Make-up & Hairstyle Course
Personal Make-up Course
Advance Beauty Course
CHETANA'S
Beauty Lounge
Aesthetic Spa | Make-up | Salon | Beauty Academy
'Jasmine' Opp. Coloco Hospital, Bendoorwell, Mangaluru - 575002
0824- 4250454
www.cb-lounge.com
/chetnasbeautylounge

With Best Compliments



**Smt Sugandi Shetty R. Kadam**
**Income Tax Officer,**
**Sri R.K. Kadam**
**Sri Pratik Kadam**
**A-1/1403, Hyde Park Regency**
**Hyde Park, Thane West**
**Maharastra State**



**Elizabeth Benjamin**
Income Tax Officer

A-601, Green Acces, S.C.S. Road,
Near Corporation Bank, Anand Nagar
Dahesar (E) Mumbai - 68

***Sharada Suresh***
**Proprietor**

**Cell : 9886097302**
**Ph.: 0824-2217122**



**Svelte & Stylish**

Ladies Herbal
BEAUTY PARLOUR

**203, Sathyajeeth Enclave, Alvares Road,**
**Kadri, Kaibattal, Mangalore - 575 002**

*With best wishes to the*
**Brahmashri Narayana Guruswami Prakashana & Charitable Trust for their Admirable Charitable Activities**




**Prof. Mohammed Harroon** M.Sc., M.Phil.
**Retired Principal**
**Mobile: 9900560086**
**Email: mohammed.harroon49@gmail.com**
**Former Principal, Anjuman Arts, Science & Commerce College, Bhatkal -581320**
**Former Principal, P. A. First Grade College, Nadupadav, Mangaluru – 574 153**
**Former Asst. Professor in Engg. Phys., Dr. M.V. Shetty Institute of Technology, Moodabidri.**

*With best compliments from*



**Pramila Poojary**
Pigmy Agent
Athmashakthi
Multipurpose Co-op Society
Bendoorwell, Mangalore

*With best compliments from*



**Sri Gopal Poojary**
Retd. Dy. Forest Officer
Hosamane, Naravi Post,
Belthangady Taluk
D.K. District - 574 109

*With Best Compliments From*

**Prop: Damodhar C. Kundar**

**Ph : 0820 - 2521792**
**2520352**




# SAI RESIDENCEY

# ಸಾಯಿ ರೆಸಿಡೆನ್ಸಿ

## Boarding & Loding

# SILVER COIN

## FAMILY RESTAURANT & BAR

# SAI SABHANGANA

## 500 SEATING CAPACITY

**Krishna Kripa Complex, Behind K.S.R.T.C Bus Stand, Udupi - 576 101.**

**(0820) 2530054, 9241377811**

**www.sairesidencyudupi.com Email: info@sairesidencyudupi.com**

# Happy Wedding



## Chi. Sou. Pranamya

D/o Sri Purushotham Poojary, Retd. Phy-Director
Shree Gokarnanatheshwara College &
Secretary D.K. Dist., Amateur Kabaddi Association
Smt. Poornima Purushotham, LIC of India, Mangalore
(Grand D/o, Late Sri Dasappa Poojary Badane and
Late Sri M.K.Giriyappa Malpe
N/o. Late Sri M.K. Madhawaraj Malpe)

**Married**



## Chi. Harshavardhan

S/o Sri Nagaraj Kumpala.
Grand, S/o Sri Eshwar Ullal,
N/o. Sri Vishwanath Mumbai)

*Wishing the Couple a happy married life*

*Best Wishes From Relatives & Friends*


Contact: 9594110536, 8971038909, 9731346456

ಪಿಂಗಾರ ಬಾರ್ & ಫ್ಯಾಮಿಲಿ ರೆಸ್ಟೋರೆಂಟ್

# Pingara

A/C & NON A/C

**BAR & FAMILY RESTAURANT**

Hotel Krishna Comfort, Udupi Malpe Road, Bannanje
pingarabarandrestaurant@gmail.com

Coastal Food (South India)
Chicken Sukka
South Chicken 65
Chicken Urval
Chicken Ghee Roast
Chicken Kurkura
Chicken Tawa Fry
Chicken Puli Munchi
Chicken Masala Fry

Chicken Pepper Dry (South)
Nati Sukka
Nati Uppukari
Nati Banna Manjol
Chicken Uppukari
Mutton Sukka
Mutton Uppkari
Tandoori Starters
Chicken Tikka

Chicken Kabab/Hariyali
Chicken Kabab
Malai Kabab
Chicken Reshmi Kabab
Chicken Banjara Kabab
Chicken Kalmi Kabab
Tandoori Chicken (Full)
Tandoori Chicken (Half)
Chicken Soner Kabab










*With best Compliments from ....*



# SILVER COIN
## FAMILY RESTAURANT & BAR



**The Fine Dining Family Restaurant & Bar**



**Tuesday Candlelight Dinner**

Wednesdays Quiz Night

Indoor & Out Door Party Orders Undertaken
Takeaway Discount For Takeaway Members.

SILVER VALUE MEAL AVAILABLE

(12 Noon to 3.00 p.m. except Sunday & Public Holidays)

**FREE HOME DELIVERY**

Nr. Corporation Bank, I.C. Colony,
Borivali - West, Mumbai - 400 103
Tel : 28939763/28922413/28951410/65280028

# Road towards building career in Humanities and Social Science

✍ **Mrs Meera Ramesh,**
**HOD of History,**
**St Agnes College (Autonomous), Mangalore**

A Significant number of students complete 10+2 / PUC with Arts stream annually and enquire for courses they can pursue to ensure a fruitful career ahead. College students have several options for choosing the type of degree to pursue, for some careers, only an under graduate degree is necessary while others may require a more advanced degree. It is essential for students to have a general understanding of each type of degree in order to choose the one that is best for their career goals. This article discusses various options for opting course after 10+2 / PUC Arts, one can open doors to innumerable Opportunities. Choosing the right course and college is the first step in chalking the career plan. It is crucial since after the choice is made there will be no turning back. Choosing a degree is an important process and can be overwhelming, seeking the help of a college advisor to help determine which type of degree is preferred or necessary in their desired field. It is also important to make sure that the degree is earned from an Accredited Institution. There is a misconception regarding the Arts stream among Indian students and parents. Many of them believe that Arts stream is only taken by students who are academically dull, well this fact is false.

> *Let us put rest to the popular myth that Arts student have limited career opportunities. Let us know become aware that an Arts student is also capable in pursuing a successful career and contributing to the social, economic, political and cultural progress and prosperity of the Nation.*

First of all many of you might believe that there are limited career opportunities for students who have completed 10+2/ PUC in Arts discipline. However the fact says something else. Arts stream is one of the most diverse fields among the trio viz Arts, Science and Commerce. There are innumerable courses after 10+2/PUC Arts in India. Be it Teaching, Law, Journalism. Management fashion or textile design. Animation aviation or any other professional course, an Arts student will have lot of career options to choose from.

**What can you do with a Bachelor of Arts degree with the traditional subjects -**History/ Economics/ Political science/ Psychology/ sociology?

**History/ Archaeology/Art & Architecture.**

Bachelor's Degree programme with History as a Major subject, prepares students for career advancement, while providing personal enrichment in doing so they develop a broad general knowledge of the traditional liberal arts discipline and developing a greater depth of knowledge in History.

Students can also appear for UPSC or the state PSC tests, almost 40% of the IAS exam questions are related to History. Those who like the teaching profession can pursue B.Ed. (after BA) and M.Ed. (after MA)

**Job options**: Apart from teaching profession a wide range of career options are available.

→→→

➔➔➔

Heritage manager, Art Historian, Archaeologist, Epigraphist, Archivist, Historic building inspector or conservation officer, Museum education officer. Museum or gallery curator, tour guide, Historical research assistant, publishing, Lawyer, Broadcast journalist, Editorial Assistant, Civil Service administrator, information officer/ public relation officer, diplomacy service.

**Economics:**

Students from all the streams can opt for Economics courses. As an Economics graduate one can get into entry level of options in banking, finance insurance, stock markets, sales & marketing as well as Corporations like consulting firms or Government Departments. Hence students often choose economics courses after 12th /PUC Arts to have a decent career growth.

**Political science:**

Political science is a field that studies the organization and functions of Government systems and political structures. Students can learn the administrative, legislative and social factors that impact the society- **Are you interested in knowing about the current affairs? Do you have initial concepts about the constitution of India?** Then you can join a graduation in political science Major. A bachelor's degree in political science can lead to employment in wide variety of governmental agencies and consulting firms for those who want to work as a budget analyst, Public relations expert or political scientist/researcher, Intelligence Analysis, Public affairs specialist, Diplomacy service.

**Psychology:** Psychology is a science of understanding the dynamics of human behaviour there is an increased demand for Physiological services in schools, hospitals, social service agencies, mental health centres, substance abuse treatment clinics, consulting firms and private companies.

**Sociology:** Sociology includes the study of social relations, social stratification, social interaction, culture etc. A Degree course in sociology studies various specialisation fields of sociology such as Applied sociology comparative sociology, cultural sociology collective behaviour etc, A career in sociology can lead you to pursue a successful career in social services, education, welfare services, criminal justice, counselling, communications, hospitals and clinics.

**Management:**

**Bachelor of Business administration (BBA)**

Management is one of the most sought after courses after 12th /PUC in India. The field of Management is open to students from all the stream a undergraduate degree in management which open doors to numerous branches of management. Human Resource Management (HRM) Retail management, Finance management, sales and marketing management, logistics, operations and supply chain management etc.

**Designing**

Fashion Designing, Textile Designing, Interior Designing

**Fashion/ Textile designing**

Fashion designing is the art of application of design and aesthetics or natural beauty to clothing and accessories. There are various degrees, certificates and diploma courses in fashion design and technology, fashion marketing, clothing production, fashion branding, etc. available to the students to make a choice from while pursuing a career in fashion design after 12th Arts.

**Interior design**

Interior designing is one of the most popular professional courses. Graduates from interior designing courses or fields can find employment with independent architects or in large architectural firms, with building contractors, or in hotels and resorts.

**Animation & Multimedia**

The animation is among the fast-emerging high-paying career options. As an animator, one must have a keen understanding of motion, movement, and acting to use their creativity and artistry to create moving images for video games, websites, movies, and television. Many institutes offer Degree, Diploma, Advance Diploma and Certificate courses in Animation after 12th Arts.

➔➔➔

➔➔➔

**Graphic Design**

Graphic Designing is the art of visual communication that combines pictures, words, and ideas to convey information to an audience. Graphic designers prepare sketches or layouts by hand or with the aid of a computer to illustrate the vision for the design.

**Web Design**

Web Design & Development is the process of planning and creating a website. Web designers produce pages as seen in a browser by using text, images, digital media and interactive elements to create a page as seen in the browser. As the world is thoroughly dominated by the web nowadays, the demand, as well as the growth of web designers is increasing rapidly. You need to have a sound knowledge of art and colour theory, understanding of web programming and the knowledge of web designing applications to have a lucrative career in web design after 12th.

**Aviation/ Travel /Hospitality / Hotel Management/ Event Management/Travel & Tourism**

**Hotel Management**

Hotel Management is growing as one of the promising career options in India. Hotel management courses make one aware of the operating sections of the hotel industry like front office, general operations, sales and marketing, food and beverage, service keeping and catering.

**Event Management**

Event management is about organising a professional and focused event for a target audience. It involves visualising concepts and planning, budgeting, organising and executing events such as fashion shows, musical concerts, corporate seminars, exhibitions, wedding celebrations, theme parties, product launches, etc.

**Travel & Tourism**

The field of Travel & Tourism is booming with its broad scope and career prospects. It is also a vast industry to look forward to the career in Travel Agencies (Inbound & Outbound), Tour Operating Companies, Business Houses, Airlines, Incentive Travel Companies, Travel & Tourism, BPO's, Tourist Information Offices, Tourism Education, etc.

**Media / Film/ Journalism**

**Journalism, Mass Communication, Media Management**

**Journalism & Mass Communication**

Journalism & Mass Communication is one of the most popular courses after 12th Arts among students nowadays. It is a collection and broadcasting of news through the print media and electronic media. There are a lot of career options in the field of Journalism and Mass Communication as one can make a career in Reporting, Editing, Advertising, Public Relations, Corporate Communications, Media Management, Television and Film Production, etc.

**Media Management**

Media Management program deals with account planning and management, brand management, media planning and market research. Bachelor of Media Management (BMM) provides a distinctive methodology to the study of media, combining theoretical study with the development of practical media and communications skills to provide employment to students in the mass communication industry.


**Other Courses**

**Many professional courses can be pursued after 12th / PUC Arts**

· Photography, Airport Operations Air Hostess, Cabin Crew, Acting/ Modelling ,Anchoring &Jockeying Jewellery and Accessories Designing, Leather an Footwear Design, Creative Arts, Literature, Foreign Languages , Fine Arts and many more.

**Let's us put rest to the popular myth that Arts student have limited career opportunities. Let us know become aware that an Arts student is also capable in pursuing a successful career and contributing to the social, economic, political and cultural progress and prosperity of the Nation.**

# ಮಾಧ್ಯಮ ಶಿಕ್ಷಣ ಮತ್ತು ಅವಕಾಶಗಳು



✍ ಮುದ್ದು ಮೂಡುಬೆಳ್ಳೆ

ಶಿಕ್ಷಣದ ಉದ್ದೇಶ ಜ್ಞಾನಾರ್ಜನೆ, ಮಾನವನ ದೈಹಿಕ, ಬೌದ್ಧಿಕ, ವಿಕಸನದೊಂದಿಗೆ ಸರ್ವಾಂಗೀಣ ಅಭಿವೃದ್ಧಿ, ಜೀವನದಲ್ಲಿ ಯಶಸ್ಸು ಸಂತೃಪ್ತಿ ಎಂದರೇನು ಮತ್ತು ಅದನ್ನು ಗಳಿಸಿಕೊಳ್ಳುವುದು ಹೇಗೆ ಎನ್ನುವುದರ ಮೂಲ ಆಶಯವೇ ಶಿಕ್ಷಣ ಆದರೆ ಬದುಕಿನ 'ಅಭಿವೃದ್ಧಿ' ಎನ್ನುವಂತೆ ತೋರುವ ಪಥಕ್ರಮಿಸುತ್ತ ಸಾಗಿದಂತೆಲ್ಲ, ಇಂದು ಶಿಕ್ಷಣದ ಮೂಲ ಉದ್ದೇಶಗಳು ಮಸಕಾಗುತ್ತಿವೆ. ವಿದ್ಯಾರ್ಥಿಗಳ ದೃಷ್ಟಿಯಲ್ಲೂ ಪೋಷಕರ ದೃಷ್ಟಿಯಲ್ಲೂ ಇಂದು ಶಿಕ್ಷಣವೆಂದರೆ ಉದ್ಯೋಗ, ಕೈತುಂಬ ಸಂಬಳ ಪಡೆಯುವುದಕ್ಕಾಗಿ ಕೆಲವು ವರ್ಷ ಉಸಿರು ಬಿಗಿಹಿಡಿದೋ ಅಥವಾ ಇನ್ನಾವುದೋ ವಿಧದಲ್ಲೋ ಓದು ಮುಗಿಸಿ ಪದವಿ ಗಳಿಸುವುದು ಎಂಬಂತಹ ಸರ್ವೇಸಾಮಾನ್ಯ ಉದ್ದೇಶವಿದೆ. ಇದನ್ನು ಪೂರ್ತಿಯಾಗಿ ಅಲ್ಲಗಳೆಯುವಂತಿಲ್ಲ. ಜೀವನೋಪಾಯಕ್ಕಾಗಿ ಆರ್ಥಿಕ ಸವಲತ್ತು ಬೇಕೇಬೇಕು. ಹಾಗಿದ್ದರೂ ಹೆಚ್ಚುಹೆಚ್ಚು ಸಂಬಳ, ಹಣ ಗಳಿಸಿದವರೆಲ್ಲರೂ ಸಂತೋಷವಾಗಿದ್ದಾರೆಯೇ, ಎಲ್ಲವನ್ನೂ ಕೊಂಡುಕೊಳ್ಳಬಲ್ಲ ಸಾಮರ್ಥ್ಯವಿದ್ದಾಕ್ಷಣ ಸುಖವಾಗಿದ್ದೇವೆಯೇ ಎಂಬ ಪ್ರಶ್ನೆಯನ್ನು ಹಾಕಿಕೊಂಡಾಗ ಏನನ್ನಿಸುತ್ತದೆ?

ಹೌದು, ವಿದ್ಯಾರ್ಥಿಗಳು ಕಲಿತು ಮುಂದೆ ಸ್ವಸಾಮರ್ಥ್ಯದಿಂದ ಎದ್ದುನಿಂತು ತಲೆಯೆತ್ತಿ ಬಾಳುವಂತಹ ಶಿಕ್ಷಣ ನಮಗಿಂದು ಬೇಕು. ಶಿಕ್ಷಣವೆಂದರೆ ಸಾಮಾನ್ಯವಾಗಿ ಮೂಲಶಿಕ್ಷಣ. ಹಿಂದೆ ಎಸ್ ಎಸ್ ಎಲ್ ಸಿ ವರೆಗಿನ ಬುನಾದಿ ಶಿಕ್ಷಣವೇ ಒಂದು ನಿರ್ಣಾಯಕ ಹಂತವಾಗಿದ್ದರೆ ಈಗಿನ ಯುಗದಲ್ಲಿ ಪಿಯುಸಿ ಎನ್ನುವ ಸಂಧಿಕಾಲವೊಂದನ್ನು ದಾಟಬೇಕು. ಆಮೇಲೆ ಈ ಹಂತದ ನಂತರ ಮುಂದೇನು, ಯಾವ ರೀತಿಯ ಉನ್ನತ ಶಿಕ್ಷಣದತ್ತ ಮುಖಮಾಡಬೇಕು ಎಂಬುದನ್ನು ಚಿಂತನೆ ನಡೆಸಿ ನಿರ್ಧಾರ ಕೈಗೊಳ್ಳಬೇಕಾದ ಹಂತವಿದು.

ವಿದ್ಯಾರ್ಥಿಯ ಅಭಿರುಚಿ ಏನು? ಆ ಅಭಿರುಚಿ ಅಭಿವೃದ್ಧಿಗೆ ಎಷ್ಟು ಪೂರಕ ಎಂಬುದನ್ನು ತಿಳಿದುಕೊಳ್ಳುವುದು. ಅವರವರ ನಿರ್ವಹಣಾ ಸಾಮರ್ಥ್ಯಕ್ಕೆ ಅನುಗುಣವಾಗಿ ವಿಜ್ಞಾನ, ಕಲೆ, ವಾಣಿಜ್ಯ, ತಾಂತ್ರಿಕ ಇವೇ ಮುಂತಾದ ವಿಷಯಗಳಲ್ಲಿ ಮುಂದುವರಿಯಬಹುದು. ಜೀವನದಲ್ಲಿ ಯಶಸ್ಸುಗಳಿಸಲು ಇಂಥದೇ ವಿಷಯ ಇಂಥದೇ ಭಾಷಾ ಮಾಧ್ಯಮ ಅನಿವಾರ್ಯ ಎಂದೇನೂ ಇಲ್ಲ. ತಾನು ಹಿಡಿದ ದಾರಿಯಲ್ಲಿ ಶ್ರಮ, ನಿಷ್ಠೆಯಿಂದ ಮುಂದುವರಿದರೆ ಯಾವುದೇ ವಿಷಯದ ಕಲಿಕೆಯಲ್ಲಾದರೂ ಯಶಸ್ಸುಗಳಿಸಬಹುದು. ಸಮಾಜದಲ್ಲಿ ಗಣ್ಯವ್ಯಕ್ತಿಯಾಗಿ ಒಳ್ಳೆಯ ಸ್ಥಾನಮಾನದೊಂದಿಗೆ ಜೀವಿಸಬಹುದು.

**ಮಾಧ್ಯಮ ಶಿಕ್ಷಣ ಮತ್ತು ಅವಕಾಶಗಳು:**

ದಶಕಗಳ ಹಿಂದಿನ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯಿಂದ ಇಂದು ನಾವು ಅದೆಷ್ಟೋ ಮುಂದೆ ಸಾಗಿ ಬಂದಿದ್ದೇವೆ. ಇಂದು ಜಗತ್ತು ಮುಂದುವರಿದಿದೆ. ಶಿಕ್ಷಣಾವಕಾಶಗಳೂ ಕಲಿಕೆಯ ವಿಷಯಗಳೂ ಹೊಸಹೊಸದಾಗಿವೆ. ಇವುಗಳಲ್ಲಿ ಹಲವು ವಿಷಯದ ಕಲಿಕೆ–ಶಿಕ್ಷಣವು ಮುಂದಿನ ಜೀವನಕ್ಕೆ ತುಂಬ ಉಪಯುಕ್ತವೆನಿಸಿದವು. ಇವುಗಳಲ್ಲಿ ಮಾಧ್ಯಮ ಶಿಕ್ಷಣವೂ ಒಂದು.




ಸಮೂಹ ಮಾಧ್ಯಮಗಳು: ಪತ್ರಿಕೆ, ಟಿ.ವಿ. ರೇಡಿಯೋ ಚಲನಚಿತ್ರ ಮತ್ತು ತತ್ಸಂಬಂಧಿ ಮಾಧ್ಯಮಗಳ ಬಗ್ಗೆ ಕಲಿಯಲಿಚ್ಛಿಸುವಿರಾದರೆ ಪಿಯುಸಿಯ ಬಳಿಕ ಪತ್ರಿಕೋದ್ಯಮದಲ್ಲಿ ಬಿ.ಎ. ತರಗತಿಗೆ ಸೇರಿಕೊಳ್ಳಬಹುದು. ಇದು ಮೂರು ವರ್ಷದ ಅವಧಿ. ಇದೇ ವಿಷಯದಲ್ಲಿ ಒಂದು ವರ್ಷ ಅವಧಿಯ ಇತರೇ ತರಬೇತಿಗಳೂ ಇವೆ. ಪತ್ರಿಕೆ ಮತ್ತು ಇಲೆಕ್ಟ್ರಾನಿಕ್ ಮಾಧ್ಯಮ ರಂಗದಲ್ಲಿ ಇದಕ್ಕೆ ಉದ್ಯೋಗಾವಕಾಶಗಳು ವ್ಯಾಪಕವಾಗಿ ಇವೆ.

ಪತ್ರಿಕೋದ್ಯಮದಲ್ಲಿ ಬಿ.ಎ. ಪದವಿ ಮುಗಿಸಿದವರು ಎಂ.ಸಿ.ಜೆ. (Mass Communication & Journalism) ಸ್ನಾತಕೋತ್ತರ ಪದವಿ ಶಿಕ್ಷಣ ಪಡೆಯಬಹುದು. ಇಂದು ಬಹಳಷ್ಟು ಬೇಡಿಕೆಯಿರುವ ಪದವಿಯಿದು. ಇದನ್ನು ಕಲಿಯುತ್ತಿರುವಾಗಲೇ ಬರವಣಿಗೆ, ಭಾಷಾ ನೈಪುಣ್ಯ ವಾಕ್ಚಾತುರ್ಯ ಬೆಳೆಸಿಕೊಂಡಲ್ಲಿ ಅವಕಾಶಗಳು ಕೈಬೀಸಿ ಕರೆಯುತ್ತವೆ.

ಕೇಂದ್ರ ಸರಕಾರದ ಪ್ರಸಾರ ಇಲಾಖೆಯ ಅಧೀನದಲ್ಲಿದ್ದು ಪ್ರಸ್ತುತ ಪ್ರಸಾರ ಭಾರತಿ ಎನ್ನುವ ಸ್ವಾಯತ್ತ ನೆಲೆಯಲ್ಲಿರುವ ಆಕಾಶವಾಣಿ, ದೂರದರ್ಶನ ಸಂಸ್ಥೆಗಳ ದೇಶಾದ್ಯಂತದ ಕೇಂದ್ರಗಳಲ್ಲಿ ಕಾರ್ಯಕ್ರಮ ಪ್ರಸಾರ ವಿಭಾಗಗಳಲ್ಲಿ ಮೊದಲೆಲ್ಲ ವಿಜ್ಞಾನ ಅಥವಾ ಕಲಾವಿಭಾಗದಲ್ಲಿ ಸ್ನಾತಕ/ಸ್ನಾತಕೋತ್ತರ ಪದವೀಧರರಿಗೆ ಯಾವುದೇ ಭಾಷಾ ವಿಷಯದಲ್ಲಿ ಅಥವಾ ಸಮಾಜ ವಿಜ್ಞಾನ, ಇತಿಹಾಸ, ಮನಶ್ಶಾಸ್ತ್ರ ವಿಜ್ಞಾನ ಮುಂತಾದ ವಿಷಯಗಳ ಸ್ನಾತಕೋತ್ತರ ಪದವೀಧರರಿಗೆ) ಉದ್ಯೋಗಾವಕಾಶಗಳಿದ್ದರೆ ಪತ್ರಿಕೋದ್ಯಮ ವಿಷಯದ ಕಲಿಕೆ ವ್ಯಾಪಕವಾದ ಬಳಿಕ ಈ ವಿಷಯದ ಪದವಿಹೊಂದಿದವರಿಗೆ

→→→

→→→

ಹೆಚ್ಚು ಅವಕಾಶಗಳಿವೆ.

ಸರಕಾರಿ ಮಾಧ್ಯಮಕ್ಕಿಂತ ಹೆಚ್ಚು ನೂರಾರು ಖಾಸಗಿ ದೃಶ್ಯ ಮತ್ತು ಶ್ರವ್ಯ ವಾಹಿನಿಗಳು ಇಂದು ವ್ಯಾಪಕಪ್ರಸಾರದಲ್ಲಿವೆ. ಸಾವಿರಾರು ಪತ್ರಿಕೆಗಳ ಮುದ್ರಣ ಮಾಧ್ಯಮವಾಗಿರುವಂತೆಯೇ ಹಲವಾರು ಪತ್ರಿಕೆಗಳು ಡಿಜಿಟಲ್ ಮಾಧ್ಯಮದಲ್ಲೂ ಪ್ರಸಾರ ಮಾಡುತ್ತವೆ. ಪತ್ರಿಕೆಗಳಲ್ಲಿ ಸಂಪಾದಕರು, ವರದಿಗಾರರು, ಮುಂತಾದ ಹುದ್ದೆಗಳಿಗೆ ಪತ್ರಿಕೋದ್ಯಮ ಶಿಕ್ಷಣವು ಉಪಯುಕ್ತ ರಹದಾರಿಯಾಗಿದೆ.

ಪತ್ರಿಕೆಗಳಾಗಲೀ ಇಲೆಕ್ಟ್ರಾನಿಕ್ ಮಾಧ್ಯಮಗಳಾಗಲೀ ಇಲ್ಲಿ ಬೇರೆಬೇರೆ ವಿಭಾಗಗಳಲ್ಲಿ ಬೇರೆಬೇರೆ ಉದ್ಯೋಗಾವಕಾಶಗಳಿವೆ. ಇಂದು ಮಾಧ್ಯಮ ಶಿಕ್ಷಣದ ವಿವಿಧ ಅಂಗಗಳಾಗಿ ಬ್ಯಾಚುಲರ್ ಡಿಗ್ರಿ ಇನ್‌ಮಾಸ್‌ಮೀಡಿಯಾ (B.M.M.) ಮಾಸ್ಟರ್ ಆಫ್ ವಿಶುವಲ್ ಆರ್ಟ್ಸ್, ಮಾಸ್ಟರ್ ಆಫ್ ಅಡ್ವರ್ಟೈಸಿಂಗ್ ಅಂಡ್ ಪಬ್ಲಿಕ್ ರಿಲೇಶನ್ (M.A.P.R.M.) ಮಾಸ್ಟರ್ ಆಫ್ ಕಮ್ಯೂನಿಕೇಶನ್ (M.C.Ed.) ಮಾಸ್ಟರ್ ಆಫ್ ಮಾರ್ಕೆಟಿಂಗ್ ಎಡ್ಮಿನಿಸ್ಟ್ರೇಶನ್ (MMA) ಮುಂತಾದ ವೈವಿದ್ಯಮಯ ಕೋರ್ಸ್‌ಗಳು, ವಿವಿಧ ವಿಶ್ವವಿದ್ಯಾನಿಲಯಗಳ ಕೆಲವೊಂದು ಕಾಲೇಜುಗಳಲ್ಲಿ ಲಭ್ಯವಿದೆ. ಗ್ರಾಜುಯೇಟ್ ಡಿಪ್ಲೊಮಾ ಇನ್ ಬ್ರಾಡ್‌ಕಾಸ್ಟಿಂಗ್ (G.D.P.), ಮಲ್ಟಿಮೀಡಿಯಾ, ಜರ್ನಲಿಸಂ, ಎಡ್ವಾನ್ಸ್‌ಡ್ ಡಿಪ್ಲೊಮಾ ಇನ್ ಮಲ್ಟಿಮೀಡಿಯಾ ಆ್ಯಂಕರಿಂಗ್, ಎಡ್ವಾನ್ಸ್‌ಡ್ ಫಿಲಂ ಮೇಕಿಂಗ್ ಮುಂತಾದ ಪದವಿ/ಸ್ನಾತಕೋತ್ತರ ಡಿಪ್ಲೊಮಾ ಶಿಕ್ಷಣಾವಕಾಶಗಳಿವೆ.

ಕಂಪ್ಯೂಟರ್ ಪರಿಣತರಿಗೆ ಎಡ್ವಾನ್ಸ್‌ಡ್ ಡಿಪ್ಲೊಮಾ ಇನ್ ಡಿಜಿಟಲ್ ಎನಿಮೇಶನ್ ಎನ್ನುವ ತರಬೇತಿ ಅವಕಾಶಗಳಿದ್ದು ಇದರಲ್ಲಿ ಪರಿಣತರಾದವರವನ್ನು ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳು ಕೈಬೀಸಿ ಕರೆಯುತ್ತವೆ.

ಮಾಧ್ಯಮಗಳ ತಾಂತ್ರಿಕ ವಿಭಾಗದ ಕಾರ್ಯ ನಿರ್ವಹಣೆಯೂ ಅಷ್ಟೇ ಪ್ರಮುಖವಾದುದರಿಂದ ತಾಂತ್ರಿಕ ಆಸಕ್ತಿ ಮತ್ತು ಅರ್ಹತೆಯುಳ್ಳವರಲ್ಲಿ ಪಾಲಿಟೆಕ್ನಿಕ್ ಮತ್ತು ತಾಂತ್ರಿಕ ಸಂಸ್ಥೆಗಳಲ್ಲಿ ಮೂರುವರ್ಷಗಳ ಅವಧಿಯ ಡಿಪ್ಲೊಮಾ ಇನ್ ಸೌಂಡ್ ರೆಕಾರ್ಡಿಂಗ್ ಎಂಡ್ ಇಂಜಿನಿಯರಿಂಗ್ ಮುಂತಾದ ವೃತ್ತಿಪರ ಕೋರ್ಸ್‌ಗಳನ್ನು ಕಲಿತರೆ ವಿಪುಲ ಅವಕಾಶಗಳಿವೆ.

ಮಾಧ್ಯಮ ಶಿಕ್ಷಣದ ಆಸಕ್ತ ವಿಷಯಗಳಲ್ಲಿ ಅಭ್ಯಸಿಸಿ ಅರ್ಹತೆಗಳಿಸಿಕೊಂಡರೆ ಬೇಕೆನಿಸಿದರೆ ಉದ್ಯೋಗಕ್ಕೆ ಸೇರಿ ದೇಶವಿದೇಶಗಳಲ್ಲಿ ಉತ್ತಮ ಅವಕಾಶ ಪಡೆಯಬಹುದು. ಉದ್ಯೋಗಕ್ಕೆ ಹೋಗುವ ಇಚ್ಛೆಯಿಲ್ಲದಿದ್ದರೆ ಸ್ವಂತವಾದ ಉದ್ಯಮವನ್ನು ಸ್ಥಾಪಿಸಿ ಜೀವನದಲ್ಲಿ ಯಶಸ್ಸು ಪಡೆಯಬಹುದು.

ಎಲ್ಲರಿಗೂ ಅವರವರ ಆಸಕ್ತಿಯದೇ ಶಿಕ್ಷಣ, ಉದ್ಯೋಗಕ್ಕಾಗಿ ಬೇರಾವುದೋ ಕ್ಷೇತ್ರವನ್ನು ಅನಿವಾರ್ಯವಾಗಿ ಆಯ್ಕೆ ಮಾಡಿಕೊಳ್ಳಬೇಕಾಗಲೂಬಹುದು. ಆದರೂ ಅದರಲ್ಲಿ ಪರಿಪೂರ್ಣ ಶ್ರದ್ಧೆಯಿಟ್ಟು ಕಲಿತು, ಜೊತೆಗೆ ಸ್ವಂತ ಅಭಿರುಚಿಯ ಓದು ಸಾಹಿತ್ಯ, ಸಂಗೀತ, ಕಲೆ, ಕ್ರೀಡೆ ಮುಂತಾದ ಅಭಿರುಚಿಗಳನ್ನು ಜತೆಗೇ ಇರಿಸಿಕೊಂಡು ಯಶಸ್ವಿ ವ್ಯಕ್ತಿಗಳಾಗಬಹುದು.

●

ಮ್ಹಾಲಕರು:
ಸದಾನಂದ ಕೆ.ಎನ್.

Car Club
Multi Brand Auto Solutions

ಕಾರ್ ಕ್ಲಬ್

Right Place, Prompt Service...
Our Services
* Tinkering * Spray Painting
* Wheel Elignment & Balancing
* Mechanical Repairs * Car Accessories
* Tyres * Spare Parts * Polishing
* Washing

NH-75, 34 Nekkiladi
Near Santhekatte, Uppinangady
+ 91 9448216316, 08251-251682

With Best Compliments From
Dr. Shinaj Kumar
B.D.S. FAGE Oral Implantologist
Dr. Navya S. Poojary
B.D.S. FAGE Dental Surgeon
"Adyah Dental Clinic
Sahana Complex, Near Police Station
Venur - 574 242 Belthangady
Mob: 9038199025, 9731207023

With Best Compliments from
Sri Devaraj S. Amin
Sri Durga Credit & Investments (R)
Poojary Complex,
Urva Store, Mangalore - 6

# ವಿದ್ಯಾರ್ಥಿ ವೇತನ ಮಾಹಿತಿ



✍ **ಕೆ. ನಾರಾಯಣ ನಾಯಕ್,**
ನಿವೃತ್ತ ಶಿಕ್ಷಕ, ದೂರವಾಣಿ : 08255 – 269427 (ರಾತ್ರಿ 8 ರಿಂದ 10) ಮೊ : 9483903627

**ನಮ್ಮ ದೇಶದಲ್ಲಿ ಬಡತನದ ಬೇಗೆಯಿಂದ ಅನೇಕ ಮಕ್ಕಳು ಶಿಕ್ಷಣವನ್ನು ಅರ್ಧದಲ್ಲೇ ಮೊಟಕುಗೊಳಿಸಿ ಕೂಲಿ ನಾಲಿ ಮಾಡಿ ಜೀವನ ತೆಗೆಯುವ ದೃಶ್ಯ ನಮ್ಮ ಕಣ್ಣ ಮುಂದೆ ಕಾಣುತ್ತಿದೆ. ಆರ್ಥಿಕ ದುಸ್ಥಿತಿಯಲ್ಲಿರುವ ಬಡ ಮಕ್ಕಳ ಶಿಕ್ಷಣ ಮುಂದುವರಿಕೆಗಾಗಿ ಅನೇಕ ಸಂಘ ಸಂಸ್ಥೆಗಳು ಭಾರತದ ಮೂಲೆ ಮೂಲೆಗಳಲ್ಲಿ ವಿದ್ಯಾರ್ಥಿ ವೇತನ ನೀಡುವ ಸೇವೆಯನ್ನು ಸಲ್ಲಿಸುತ್ತಿವೆ. ಅಂತವುಗಳನ್ನು ಹಾಗೂ ಸರಕಾರದ ಸಂಸ್ಥೆಗಳನ್ನು ಆಯ್ದುಕೊಂಡು ವಿದ್ಯಾರ್ಥಿ ವೇತನ ಬಡ ಮಕ್ಕಳಿಗೆ ಸಂದಾಯವಾಗುವ ನಿಟ್ಟಿನಲ್ಲಿ ಈ ಲೇಖನ ತಯಾರಿಸಲಾಗಿದೆ.**

**ಹಿಂದುಳಿದ ವರ್ಗ: ವಿದ್ಯಾಸಿರಿ ಯಾ E pass ಯಾ Food and Accomodation**

1. 1ನೇ ತರಗತಿಯಿಂದ ಮೇಲ್ಪಟ್ಟು ಪ್ರವರ್ಗ 1, 2ಎ, 3ಎ, 3ಬಿ (ಅಲ್ಪಸಂಖ್ಯಾತರನ್ನು ಹೊರತುಪಡಿಸಿ ಮುಸ್ಲಿಂ, ಕ್ರೈಸ್ತ ಜೈನ ಇತ್ಯಾದಿ)
2. ಆದಾಯ ಮಿತಿ ವಾರ್ಷಿಕ 1 ಲಕ್ಷ (ಪ್ರವರ್ಗ 1 ರವರಿಗೆ 2.50 ಲಕ್ಷ) ಆದಾಯ ಪ್ರಮಾಣ ಪತ್ರದ ಅವಧಿ 5 ವರ್ಷಗಳು.
3. ಅಂಕಗಳ ಮಿತಿ ಇಲ್ಲ. ಕಡಿಮೆ ಅಂಕದವರಿಗೆ ಸಿಗುವ ಸಾಧ್ಯತೆ ಕಡಿಮೆ.
4. ONLINE ಮೂಲಕ ಅರ್ಜಿ ಸಲ್ಲಿಸುವುದು.
5. ಶುಲ್ಕ ವಿನಾಯಿತಿಗೆ ಎಲ್ಲಾ ವಿದ್ಯಾರ್ಥಿಗಳು ಅರ್ಹರು.
6. Food and Accomodation ಸರಕಾರಿ ವಸತಿ ನಿಲಯದವರು ಹಾಗೂ 5. ಕಿ.ಮೀ. ವ್ಯಾಪ್ತಿಯೊಳಗಿನವರು ಅರ್ಹರಲ್ಲ. ಪಿಯುಸಿ ಮತ್ತು ಮೇಲ್ಪಟ್ಟವರಿಗೆ ತಿಂಗಳಿಗೆ 1500 ರಂತೆ 10 ತಿಂಗಳಿಗೆ 15000ರೂ. ವರೆಗೆ ವಿದ್ಯಾರ್ಥಿ ವೇತನ ನೀಡಬಹುದು.

   **ವ್ಯವಹರಿಸಬೇಕಾದ ವಿಳಾಸ:** ಆಯಾ ತಾಲೂಕಿನ ವಿಸ್ತರಣಾಧಿಕಾರಿ ತಾಲೂಕು ಪಂಚಾಯತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ www.backwardclasses.kar.nic.in

**ದೇವರಾಜ ಅರಸು ಪ್ರತಿಭಾ ಪುರಸ್ಕಾರ:**

SSLC, PUC, Degree, ಪರೀಕ್ಷೆಗಳಲ್ಲಿ ಅತ್ಯಧಿಕ (ಶೇಕಡಾ 90ಕ್ಕಿಂತ ಅಧಿಕ) ಅಂಕ ಪಡೆದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

**ಮೌಲನಾ ಅಝಾದ್ ಎಜುಕೇಶನ್ ಫೌಂಡೇಷನ್:**

8, 9th, (S.S.L.C) ಉತ್ತೀರ್ಣರಾದ ಅಲ್ಪಸಂಖ್ಯಾತ ಹೆಣ್ಣು ಮಕ್ಕಳಿಗೆ ಮಾತ್ರ. ಆದಾಯ ಮಿತಿ 1 ಲಕ್ಷ, ಅಂಕಗಳ ಮಿತಿ ಶೇಕಡಾ 55. Online ನಲ್ಲಿ ಅರ್ಜಿ ಸಲ್ಲಿಸುವುದು. ಆದಾಯ ಪ್ರಮಾಣ ಪತ್ರ ಇಂಗ್ಲೀಷ್ ಅಥವಾ ಹಿಂದಿಯಲ್ಲಿರಬೇಕು.

**ವ್ಯವಹರಿಸಬೇಕಾದ ವಿಳಾಸ:–** www.maef.nic.in, Maulana Azad Education Foundation, Ministry of Minority Affairs Govt of India, Maulana azad campus, Chemsford Road, New Delhi - 110055.

ಕೆಲವು ಕಡೆ ಇವರ 6ನೇ ತರಗತಿಯಿಂದ ಆಂಗ್ಲ ಮಾಧ್ಯಮ ಉಚಿತ ಶಿಕ್ಷಣ ಶಾಲೆಗಳು ಇವೆ.

**ಅಲ್ಪಸಂಖ್ಯಾತರ (ಮುಸ್ಲಿಂ, ಕ್ರೈಸ್ತ, ಜೈನ ಇತ್ಯಾದಿ) ವಿದ್ಯಾರ್ಥಿ ವೇತನ** (ಫ್ರೀ ಮೆಟ್ರಿಕ್ 1 ರಿಂದ 10ನೇ ತರಗತಿಯವರೆಗೆ)

1. ಅಂಕಗಳ ಮಿತಿ ಶೇಕಡಾ 50 ಕ್ಕಿಂತ ಮೇಲ್ಪಟ್ಟು
2. ವಾರ್ಷಿಕ ಆದಾಯದ ಮಿತಿ ಒಂದು ಲಕ್ಷ
3. Online ಮೂಲಕ ಅರ್ಜಿ www.scholarship.gov.in

   **ಪೋಸ್ಟ್ ಮೆಟ್ರಿಕ್:** PUC ವೃತ್ತಿಪರ ಕೋರ್ಸ್ ಗಳಾದ ITI, ITC,JOC, Diploma (Technical & Paramedical) D.Ed, B.A, B.Com, B.Sc., BBM B.Ed, BPED,BSW, Post Graduate (MSW, MA, M.Sc., M.Com) M.Pill & Phd ಅಂಕಗಳ ಮಿತಿ ಶೇಕಡಾ 50ಕ್ಕಿಂತ ಮೇಲ್ಪಟ್ಟು, ವಾರ್ಷಿಕ ಆದಾಯದ ಮಿತಿ 2 ಲಕ್ಷ Online ಮೂಲಕ ಅರ್ಜಿ ಸಲ್ಲಿಸುವುದು. www.scholarship.gov.in

   **ಮೆರಿಟ್ ಕಂ ಮೀನ್ಸ್ ಸ್ಕಾಲರ್‌ಶಿಪ್:** (Engineering & Technology Courses (B.E, B.Tech, M.E, M.Tech, M.C.A) Medicines & Paramedical (MBBS, BUMS,BAMS, MD, BPT, MPT, BOT, MOI, B.Sc Nursing, M.Sc. Nursing, BDS,MDS) Fashion Technology (B.F.Tech, M.F.Tech) Management (MBA, PGDM, PGCM, Excel- PGDM), Pharmacy (B.Pharma, M.pharma) Architecture & Design (B.Arch, ID,BCT, PL PGD) Hotel Management (BHM & CT) Applied Arts & Craft (APD, FA, FAD) Veternay Science, (B.V.Sc., A.H., P.G) Charted Accountancy, Company Secretary, Law (L.L.B, L.L.M. ಅಂಕಗಳ ಮಿತಿ ಶೇಕಡಾ 50ಕ್ಕಿಂತ ಮೇಲ್ಪಟ್ಟು, ವಾರ್ಷಿಕ ಆದಾಯದ ಮಿತಿ 2.5 ಲಕ್ಷ. Online ನಲ್ಲಿ ಅರ್ಜಿ ಸಲ್ಲಿಸುವುದು. www.scholarship.gov.in

   **ವಿದ್ಯಾಸಿರಿ: ಅಲ್ಪಸಂಖ್ಯಾತರಿಗೆ :** ವಿದ್ಯಾಸಿರಿ (ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಕ್ಕೆ ಬರುವವರಿಗೆ) ಅರ್ಜಿ ನಮೂನೆಯನ್ನು ಭರ್ತಿಮಾಡಿ ಈ ಕೆಳಗಿನ ವಿಳಾಸಕ್ಕೆ ಕಳುಹಿಸುವುದು. www.scholarship.gov.in

→→→

➔➔➔
**ವಿಳಾಸ:** (ಆಯಾ ಜಿಲ್ಲೆಯ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, **ದ.ಕ. ಜಿಲ್ಲೆಗೆ:** ಮೌಲಾನ ಅಝಾದ್ ಭವನ, ಓಲ್ಡ್ ಕೆಂಟ್ ರೋಡ್ ಪಾಂಡೇಶ್ವರ ಮಂಗಳೂರು, 0824–2211078.

**ಇಲಾಖಾ ವೆಬ್‌ಸೈಟ್:** www.gokdom.kar.nic.in

ಪ್ರತಿಷ್ಠಿತ ರಾಷ್ಟ್ರೀಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಮಾಡುವ ಅಲ್ಪಸಂಖ್ಯಾತರಿಗೆ 2 ಲಕ್ಷದವರೆಗೆ ಪ್ರೋತ್ಸಾಹಧನ ಸೌಲಭ್ಯವಿದೆ, ಆದಾಯದ ಮಿತಿ ವಾರ್ಷಿಕ 6 ಲಕ್ಷ ರೂ.

**ಅಲ್ಪಸಂಖ್ಯಾತರು ಹೆಚ್ಚಿನ ಮಾಹಿತಿಗಾಗಿ :** ಟ್ಯಾಲೆಂಟ್ ರಿಸರ್ಚ್ ಫೌಂಡೇಷನ್ (ರಿ) ಮಂಗಳೂರು.

ವಿಶ್ವಾಸ್ ಕ್ರೌನ್, ಯೆನಪೋಯ ನರ್ಸಿಂಗ್ ಹೋಂ, ಹತ್ತಿರ (ಹಳೆಯ ಮಿನ್ಸ ಆಸ್ಪತ್ರೆ), ಕಂಕನಾಡಿ, ಮಂಗಳೂರು.

ದೂರವಾಣಿ: 0824 – 4267883, 9844773906, 9972283365

website: www.trfmangalore.org.

Email:trfmangalore@gmail.com

**ಸಮಾಜ ಕಲ್ಯಾಣ ಇಲಾಖೆ:** ಪರಿಶಿಷ್ಟ ಜಾತಿ (ಎಸ್.ಸಿ) ಪರಿಶಿಷ್ಟ ಪಂಗಡ (ಎಸ್.ಟಿ) ಜಾತಿ ಹಾಗೂ ಆದಾಯ ಪ್ರಮಾಣ ಪತ್ರದ ಅವಶ್ಯಕತೆ ಇದೆ. ಆದಾಯದ ಮಿತಿ ರೂ. 2.50 ಲಕ್ಷ.

ತಾಲೂಕು ಸಮಾಜ ಕಲ್ಯಾಣ ಇಲಾಖೆಯಲ್ಲಿ ವಿದ್ಯಾರ್ಥಿಗಳು ನೋಂದಣಿ ಮಾಡಿಸಿಕೊಳ್ಳುವುದು. online ಮೂಲಕ ಅರ್ಜಿ ಸಲ್ಲಿಸುವುದು. ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಯಲ್ಲಿ 60 ಶೇಕಡಾಕ್ಕಿಂತ ಹೆಚ್ಚು ಅಂಕ ಪಡೆದವರಿಗೆ ವಿಶೇಷ ಬಹುಮಾನ ಯೋಜನೆ ಇದೆ. Online ಮೂಲಕ ಅರ್ಜಿ ಸಲ್ಲಿಸಬೇಕು. ಶೈಕ್ಷಣಿಕ ಪ್ರವಾಸಕ್ಕೆ ಧನ ಸಹಾಯ ನೀಡಲಾಗುವುದು.

**ವ್ಯವಹರಿಸುವ ವಿಳಾಸ :** ಸಂಬಂಧಪಟ್ಟ ತಾಲೂಕಿನ ಸಮಾಜ ಕಲ್ಯಾಣ ಅಧಿಕಾರಿಗಳು.

ಪರಿಶಿಷ್ಟ ಪಂಗಡ ST : www.scholarship.gov.in
ಪರಿಶಿಷ್ಟ ಜಾತಿ SC : www.sw.kar.nic.in

**ವಿಕಲಚೇತನ:** 1ನೇ ತರಗತಿಯಿಂದ ಮೇಲ್ಪಟ್ಟು, 40% ಅಂಗವಿಕಲತೆ ಪ್ರಮಾಣ ಪತ್ರ ಜಿಲ್ಲಾ ಆಸ್ಪತ್ರೆಯಿಂದ ಪಡೆದಿರಬೇಕು. ಆದಾಯ ಪ್ರಮಾಣ ಪತ್ರದ ಅಗತ್ಯವಿಲ್ಲ. ಅಂಗವಿಕಲತೆಯನ್ನು ಸೂಚಿಸುವ ಭಾವಚಿತ್ರವಿರಬೇಕು.

ನಿಗದಿತ ಅರ್ಜಿ ನಮೂನೆ ಭರ್ತಿಗೊಳಿಸಿ ಮುಖ್ಯಸ್ಥರ ಮೂಲಕ ಕಳುಹಿಸುವುದು (ನೇರವಾಗಿಯೂ ಕಳುಹಿಸಬಹುದು) 60% ಯಾ ವಿಶೇಷ ಶ್ರೇಣಿಯಲ್ಲಿ ಸರಕಾರಿ ಪಬ್ಲಿಕ್ ಪರೀಕ್ಷೆ ಪಾಸಾದವರಿಗೆ ವಿಶೇಷ ಬಹುಮಾನವಿದೆ. ಅದಕ್ಕೆ ಪ್ರತ್ಯೇಕ ಅರ್ಜಿ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕು.

ಎಸ್‌ಎಸ್ ಎಲ್‌ಸಿ ನಂತರ ಶುಲ್ಕ ಮರುಪಾವತಿ ವ್ಯವಸ್ಥೆ ಇದೆ. ಎಸ್‌ಎಸ್‌ಎಲ್‌ಸಿ ಹಾಗೂ ನಂತರದ ಅಂಧ ವಿದ್ಯಾರ್ಥಿಗಳಿಗೆ ಟ್ಯಾಕಿಂಗ್ ಲ್ಯಾಪ್‌ಟಾಪ್ ಸೌಲಭ್ಯವಿದೆ. ರಾಜ್ಯದ ಕೆಲವು ಕಡೆಗಳಲ್ಲಿ ಉಚಿತ ಶಿಕ್ಷಣದ ವ್ಯವಸ್ಥೆ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಸೌಲಭ್ಯವಿದೆ. ಕಾಲಿನ ಅಂಗವಿಕಲತೆಯುಳ್ಳವರಿಗೆ (ಶೇಕಡ 75 ಅಥವಾ ಅಧಿಕ) 20 ರಿಂದ 60 ವರ್ಷದ ಒಳಗಿನವರಿಗೆ 2 ಲಕ್ಷದ ಆದಾಯದ ಒಳಗಿನವರಿಗೆ ಯಂತ್ರಚಾಲಿತ ದ್ವಿಚಕ್ರವಾಹನದ ಸೌಲಭ್ಯವಿದೆ. ಕೊರಗ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ಧನ ಹಾಗೂ ನಿರುದ್ಯೋಗ ಭತ್ಯೆಯ ಸೌಲಭ್ಯವಿದೆ. (10ನೇ ತರಗತಿ ಹಾಗೂ ಮೇಲ್ಪಟ್ಟು)

**ವ್ಯವಹರಿಸಬೇಕಾದ ವಿಳಾಸ:** ಆಯಾ ಜಿಲ್ಲಾ ಉಪನಿರ್ದೇಶಕರು, ಮಹಿಳಾ ಮತ್ತು ಅಭಿವೃದ್ಧಿ ಇಲಾಖೆ (ದ.ಕ.ಜಿಲ್ಲೆಯವರಿಗೆ) ಜಿಲ್ಲಾ ಪಂಚಾಯತ್ ಕಟ್ಟಡ, ಅಶೋಕನಗರ, ಮಂಗಳೂರು. ಅಥವಾ ತಾಲೂಕು ಮಟ್ಟದ ಅಧಿಕಾರಿ.

ಪಿಯುಸಿ ಮತ್ತು ಮೇಲ್ಪಟ್ಟ ತರಗತಿಗಳಿಗೆ ಭಾರತ ಸರ್ಕಾರದ ವಿದ್ಯಾರ್ಥಿವೇತನ : www.scholarship.gov.in

**ವೃತ್ತಿಪರ ಶಿಕ್ಷಣ ಪಡೆಯುವ ಅಂಗವಿಕಲ ವಿದ್ಯಾರ್ಥಿಗಳಿಗೆ:**

**ವ್ಯವಹರಿಸಬೇಕಾದ ವಿಳಾಸ:** National Handicapped Finance and Development Corporation (Ministry of Social Justice & Empowerment Govt of India) Red Cross Bhawan Sector-12, Fandabad-121007, Phone: 0129-2287513, Tele/Fax: 0129-2284371, Email: nhfdc97@gmail.com Website: www.ohfdc.org.

ಮೂಡಬಿದ್ರೆಯ ಆದರ್ಶ ಗ್ರಾಮಾಭಿವೃದ್ಧಿ ಮತ್ತು ಸೇವಾ ಸಂಸ್ಥೆ ಇವರ ಸಹಯೋಗದಿಂದ ಆಸುಪಾಸಿನ ವಿಕಲಚೇತನರಿಗೆ ಆರೋಗ್ಯ ಮತ್ತು ಶಿಕ್ಷಣಕ್ಕೆ ಸಹಾಯಧನವನ್ನು 3 ರಿಂದ 20 ವರ್ಷದವರಿಗೆ ಒದಗಿಸಿಕೊಡುವ ಸೌಲಭ್ಯವಿದೆ. ಸಂಪರ್ಕಿಸಬೇಕಾದ ವಿಳಾಸ: 0824–2458173, ಗಣೇಶ ಬಾರ್ದಿಲ : 8971161826 ಅಥವಾ ಜಯಶ್ರೀ 7348896690.

**ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ:**

ಕಾರ್ಮಿಕರು ಅಂದರೆ ಈ ಕೆಳಗಿನ ಕೈಗಾರಿಕೆಗಳಲ್ಲಿ ದುಡಿಯುತ್ತಿರುವವರು– ಅಗರಬತ್ತಿ, ಅಟೋಮೊಬೈಲ್, ರಸ್ತೆ ನಿರ್ಮಾಣ, ಹತ್ತಿ ಹಿಂಜುವ ಉದ್ಯೋಗ, ಗೋಡಂಬಿ, ಏಲಕ್ಕಿ, ಕಾಫಿ ಸಂಸ್ಕರಣ, ಸಿನಿಮಾ, ಹೋಟೇಲ್, ಕೈಮಗ್ಗ, ಯಾಂತ್ರಿಕ ಮಗ್ಗ, ತೆಂಗಿನ ನಾರಿನ ಕೈಗಾರಿಕೆ, ಬಡಗಿ, ಪ್ಲೈವುಡ್, ಮರದ ಡಿಪೋ, ಎಂಜಿನಿಯರಿಂಗ್ ವರ್ಕ್ ಶಾಪ್, ಫೌಂಡ್ರಿ, ಕಾಫಿ, ಟೀ, ರಬ್ಬರ್ ತೋಟ, ಅಕ್ಕಿ, ಬೇಳೆ, ಹಿಟ್ಟು, ಎಣ್ಣೆ ಗಿರಣಿ, ಚರ್ಮ ಕೈಗಾರಿಕೆ, ಸಾರ್ವಜನಿಕ ಮೋಟಾರು ಸಾರಿಗೆ, ಮುದ್ರಣಾಲಯ, ಕಲ್ಲುಪುಡಿ ಮಾಡುವ ಕೈಗಾರಿಕೆ, ಕುಂಬಾರಿಕೆ, ಗುಡಿ ಕೈಗಾರಿಕೆ, ದರ್ಜಿ, ಹೆಂಚು, ಇಟ್ಟಿಗೆ, ಬಣ್ಣ ಉಪ್ಪು ಕೈಗಾರಿಕೆ, ಅಂಗಡಿ, ವಾಣಿಜ್ಯ ಸಂಸ್ಥೆಗಳು, ಖಂಡಸಾರಿ ಕಾರ್ಖಾನೆ, ರೇಷ್ಮೆ ಕೈಗಾರಿಕೆ ಇತ್ಯಾದಿ ಕಾರ್ಮಿಕ ಸಂಸ್ಥೆಗಳು ಕಲ್ಯಾಣ ನಿಧಿಗೆ ವಂತಿಗೆ ನೀಡಿರಬೇಕು. ಹೆತ್ತವರ ತಿಂಗಳ ಆದಾಯ ರೂ.15000/– ಮೀರಿರಬಾರದು. ಕನಿಷ್ಟ ಅಂಕಗಳು ಪರಿಶಿಷ್ಟ ಜಾತಿ, ಪಂಗಡ 45% ಇತರರಿಗೆ 50%, ಎಂಟನೇ ತರಗತಿಯಿಂದ ಮುಂದಿನ ಎಲ್ಲಾ ತರಗತಿಗಳಲ್ಲಿ ಅಧ್ಯಯನ ಮಾಡುವವರು ಅರ್ಹರು. ಬೀಡಿ ಕಾರ್ಮಿಕರ ಮಕ್ಕಳಿಗೆ ಅವಕಾಶವಿಲ್ಲ. ನಿಗದಿತ ಅರ್ಜಿ ನಮೂನೆ ವೆಬ್‌ಸೈಟಿನಿಂದ ಪಡೆದು ಭರ್ತಿ ಮಾಡಿ ಮುಖ್ಯಸ್ಥರ ದೃಢ ಪತ್ರದೊಂದಿಗೆ ನಿಗದಿತ ಅವಧಿಯೊಳಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡುವುದು. ಕಲ್ಯಾಣ ಆಯುಕ್ತರು, ಕರ್ನಾಟಕ ಸರಕಾರ, ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, 2ನೇ ಮಹಡಿ, ಮತ್ತಿಕೆರೆ ಮುಖ್ಯರಸ್ತೆ, ಯಶವಂತಪುರ, ಬೆಂಗಳೂರು–22.

http://www.klwb.kar.com.

Email:welfarecommissiner123@gmail.com ➔➔➔

➔➔➔

**ಬೀಡಿ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿವೇತನ:**

ಒಂದರಿಂದ ಮೇಲ್ಪಟ್ಟು ಎಲ್ಲಾ ತರಗತಿಗಳಿಗೆ ಕಾರ್ಮಿಕರಿಗೆ ಬೀಡಿ ಪಾಸು ಪುಸ್ತಕ ಬೇಕು. ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಅಂಕಗಳ ಮಿತಿ ಇಲ್ಲ. ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಒಂದು ಸಂಸ್ಥೆಯಲ್ಲಿ ಒಮ್ಮೆ ಅರ್ಜಿ ಸಲ್ಲಿಸಿದರೆ ಉಳಿದ ಅವಧಿಗೆ ಆ ಸಂಸ್ಥೆಯಲ್ಲಿ ನವೀಕರಣ. ರಾಷ್ಟ್ರೀಕೃತ ಬ್ಯಾಂಕಿನಲ್ಲಿ ವಿದ್ಯಾರ್ಥಿಗಳ ಉಳಿತಾಯ ಖಾತೆ ತೆರೆದಿರಬೇಕು.

ಆನ್‌ಲೈನ್ ಮೂಲಕ website: http/.www. scholarship. gov.in

ಬೀಡಿ ಕಟ್ಟುವವರ ಸಂಖ್ಯೆ ಕಡಿಮೆಯಾಗಿ ಕಲ್ಯಾಣ ನಿಧಿಗೆ ಹಣ ಭರ್ತಿಯಾಗುತ್ತಾ ಇಲ್ಲ. ಆದುದರಿಂದ ವಿದ್ಯಾರ್ಥಿವೇತನ ಬರುವುದು ಕಡಿಮೆಯಾಗಿದೆ.

**ಕಟ್ಟಡ ಕಾರ್ಮಿಕರ ಮಕ್ಕಳಿಗೆ:** ಕಟ್ಟಡ ಕಾರ್ಮಿಕ ನೋಂದಣಿಯಾಗಿರಬೇಕು. ಸವಲತ್ತುಗಳು: ನಿವೃತ್ತಿ ವೇತನ, ಜೀವವಿಮೆ, ಖಾಯಿಲೆಗೆ ಧನಸಹಾಯ, ಮರಣ ಹೊಂದಿದರೆ, ಮದುವೆ ಆಗದವರಿಗೆ ಮದುವೆಗೆ, ಮನೆಕಟ್ಟಲು ಧನಸಹಾಯ, 2 ಮಕ್ಕಳ ಮದುವೆಗೆ ಹಾಗೂ ಶಿಕ್ಷಣಕ್ಕೆ ಧನಸಹಾಯ, 2ನೇ ತರಗತಿ ಮತ್ತು ಮೇಲ್ಪಟ್ಟ ಗುರುತಿನ ಚೀಟಿ ಪ್ರತೀ ವರ್ಷ ನವೀಕರಣ ಹೊಂದಿರಬೇಕು.

**ವ್ಯವಹರಿಸಬೇಕಾದ ವಿಳಾಸ:** ನಿಮ್ಮ ತಾಲೂಕಿನ ಕಾರ್ಮಿಕ ನಿರೀಕ್ಷಕರು ಅಥವಾ ನಿಮ್ಮ ಜಿಲ್ಲೆಯ ಕಾರ್ಮಿಕ ಅಧಿಕಾರಿ, ಮಂಗಳೂರು (ದ.ಕ.ಜಿಲ್ಲಾ ಕಛೇರಿ, ಪ್ರಕೃತಿ ಕಟ್ಟಡ, ಸಿ.ವಿ.ನಾಯಕ್ ಹಾಲ್ ಪಕ್ಕ ಮಂಗಳೂರು–3, ಬಂಟ್ಸ್ ಹಾಸ್ಟೆಲ್ ರೋಡ್.

**ರಬ್ಬರ್ ತೋಟದ ಕಾರ್ಮಿಕರ ಮಕ್ಕಳಿಗೆ ಹಾಗೂ ಅವಲಂಬಿತರಿಗೆ:** ಪಿ.ಯು.ಸಿ. ಮತ್ತು ಮೇಲ್ಪಟ್ಟ ತರಗತಿಗಳಿಗೆ, ವಿದ್ಯಾರ್ಥಿ ವೇತನ ಮತ್ತು ವಸತಿ ಗೃಹ ಶುಲ್ಕ. ಮಾಸಿಕ ಆದಾಯ ಏಳು ಸಾವಿರ ಮೀರಿರಬಾರದು. ಕನಿಷ್ಟ 150 ವಾರಗಳಾದರೂ ಟ್ಯಾಪಿಂಗ್ ಮಾಡಬೇಕು.

ಎಸ್.ಎಸ್.ಎಲ್.ಸಿ ಯಲ್ಲಿ 80% ಇತರ ತರಗತಿಗಳಲ್ಲಿ ಶೇಕಡಾ 60 ಅಂಕ ಪಡೆದವರಿಗೆ ಮೆರಿಟ್ ವಿದ್ಯಾರ್ಥಿವೇತನ ಇದೆ. ಆಟೋಟ, ಕಲೆಗಳಲ್ಲಿ ಅಸಾಮಾನ್ಯ ಪ್ರೌಢಿಮೆ ಉಳ್ಳವರಿಗೆ ಪಾರಿತೋಷಕ.

**ವ್ಯವಹರಿಸಬೇಕಾದ ವಿಳಾಸ:** ಆಯುಕ್ತರು, ಪ್ರಾದೇಶಿಕ ಕಛೇರಿ ರಬ್ಬರು ಮಂಡಳಿ, ಕುಮುದಾವತಿ ಕಟ್ಟಡ, 2ನೇ ಮಹಡಿ, ಬಲ್ಮಠ, ಮಂಗಳೂರು–575001, ದೂರವಾಣಿ ಸಂಖ್ಯೆ: 0824–2429229, ಮಂಗಳೂರು ವಿಭಾಗದವರಿಗೆ ಮಾತ್ರ (ಪುತ್ತೂರು ವಿಭಾಗದವರಿಗೆ ಪುತ್ತೂರು ಕಛೇರಿ).

**ಉನ್ನತ ಶಿಕ್ಷಣಕ್ಕೆ ಕೇಂದ್ರ ಸಂಪನ್ಮೂಲ ಇಲಾಖೆಯಿಂದ ವಿದ್ಯಾರ್ಥಿ ವೇತನ MHRD**

ಪಿಯುಸಿಯಲ್ಲಿ ಶೇಕಡಾ 80 ಯಾ ಅಧಿಕ ಅಂಕ ಪಡೆದಿರಬೇಕು. ಮೂರು ವರ್ಷದ ಪದವಿ ಯಾ ವೃತ್ತಿಪರ ಶಿಕ್ಷಣ ಮುಂದುವರಿಸಿರಬೇಕು. ಎರಡು ವರ್ಷದ ಡಿಪ್ಲೋಮ ವಿದ್ಯಾರ್ಥಿಗಳು ಅರ್ಹರಲ್ಲ. (ಡಿಪ್ಲೋಮಾ ಇನ್ ಎಜುಕೇಶನ್, ಡಿಪ್ಲೋಮ ಇನ್ ಟೆಕ್ನಿಕಲ್ ಕೋರ್ಸು, ಡಿಪ್ಲೋಮ ಇನ್ ಫಾರ್ಮಸಿ, ಡಿಪ್ಲೋಮ ಇನ್ ಹೋಟೇಲ್ ಮ್ಯಾನೇಜ್‌ಮೆಂಟ್, ಚಾರ್ಟರ್ಡ್ ಅಕೌಂಟೆಂಟ್ ಇತ್ಯಾದಿ) ಹೆತ್ತವರ ವಾರ್ಷಿಕ ಆದಾಯ 4.5 ಲಕ್ಷ ಮೀರಬಾರದು. ವಿದ್ಯಾರ್ಥಿ ವೇತನ ವರ್ಷಕ್ಕೆ 10,000/– ರೂ. ಎಂಜಿನಿಯರಿಂಗ್ ಮತ್ತು ವೈದ್ಯಕೀಯ ವಿದ್ಯಾರ್ಥಿಗಳಿಗೆ 4ನೇ ಮತ್ತು 5ನೇ ವರ್ಷಕ್ಕೆ ತಲಾ ರೂ.20,000/– ನವೀಕರಣಕ್ಕೆ ಶೇಕಡಾ 60 ಅಂಕ ಇರಬೇಕು. ಅರ್ಜಿಯನ್ನು ಆನ್‌ಲೈನ್ ಮುಖೇನ ಕಳುಹಿಸುವುದು.

**ಅರ್ಜಿ ಕಳುಹಿಸಬೇಕಾದ ವಿಳಾಸ:** Account Officer, Dept of Pre University Education, Department, 18th Cross, Sampige Road, Malleshwaram, Bangalore- 560012

M.H.R.D. : www.kar.nic.in/puc

**ಸರ್ ಸಿ. ವಿ. ರಾಮನ್ ವಿದ್ಯಾರ್ಥಿವೇತನ:**

1. ಸಾಮಾನ್ಯ ಗುಂಪಿನ ವಿದ್ಯಾರ್ಥಿಗಳಿಗೆ 65% ಅಂಕಗಳು, ಪ.ಜಾತಿ, ಪ.ಪಂಗಡ ವಿದ್ಯಾರ್ಥಿಗಳಿಗೆ 60%
2. ದ್ವಿತೀಯ ಪಿ.ಯು.ಸಿ ಉತ್ತೀರ್ಣರಾಗಿ ಬಿ.ಎಸ್ಸಿ ಅಧ್ಯಯನ ಮಾಡುತ್ತಿರಬೇಕು.
3. ಈ ವಿಷಯಗಳಲ್ಲಿ ಕನಿಷ್ಟ ಎರಡು ವಿಷಯಗಳನ್ನು ಅಧ್ಯಯನ ಮಾಡುತ್ತಿರಬೇಕು. ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಭೂಗರ್ಭಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿ ಶಾಸ್ತ್ರ.
4. ಒಮ್ಮೆ ಮಂಜೂರಾದರೆ ಉಳಿದ ಅವಧಿಗೆ ನವೀಕರಣ – ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಿರಬೇಕು.
5. ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಪ್ರಾಂಶುಪಾಲರ ದೃಢಪತ್ರದೊಂದಿಗೆ ಸಿಡಿ ಮೂಲಕ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡುವುದು. ಪ್ರಥಮ ವರ್ಷದವರಿಗೆ ಮಾತ್ರ) ಆಯಾ ಜಿಲ್ಲಾ ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ

**ಸಂಚಿಯ ಹೊನ್ನಮ್ಮ ವಿದ್ಯಾರ್ಥಿವೇತನ:**

1. ಪದವಿ ತರಗತಿಗಳಲ್ಲಿ ಅಧ್ಯಯನ ಮಾಡುತ್ತಿರುವ ಬಾಲಕಿಯರಿಗೆ ಮಾತ್ರ.
2. ಪಿ.ಯು.ಸಿ 50%, ಎಸ್.ಸಿ.ಎಸ್.ಟಿ 45%
3. ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ನಿಗದಿತ ಅವಧಿಯೊಳಗೆ ಪ್ರಾಂಶುಪಾಲರ ಮೂಲಕ ಸಿಡಿ ಸಹಿತ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡುವುದು. (ಪ್ರಥಮ ವರ್ಷದವರಿಗೆ ಮಾತ್ರ) ಆಯಾ ಜಿಲ್ಲೆಯ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ
4. ಒಮ್ಮೆ ಮಂಜೂರಾದರೆ ಮುಂದೆ ಅರ್ಜಿ ಸಲ್ಲಿಸಬೇಕಾಗಿ ಇಲ್ಲ.

**ವಿಜ್ಞಾನ ಕಲಿಕೆಗೆ:**

ಪದವಿ ತರಗತಿಗಳಲ್ಲಿ ಮೂಲ ವಿಜ್ಞಾನ ಅಧ್ಯಯನ ಮಾಡುವವರಿಗೆ (PCM, CBZ ಮಾತ್ರ) 70% ಕ್ಕಿಂತ ಹೆಚ್ಚು ಅಂಕ ಪಡೆದಿರಬೇಕು. ಇತರ ಯಾವುದೇ ನಿಬಂಧನೆಗಳಿಲ್ಲ.

**ವ್ಯವಹರಿಸಬೇಕಾದ ವಿಳಾಸ :** ಡಿ.ಹೆಚ್.ಹೊನ್ನೆಗೌಡ ಸದಸ್ಯ/ ಕಾರ್ಯದರ್ಶಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು.

➔➔➔

→→→

**ವಿಜ್ಞಾನ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಕಿಶೋರ ವೈಜ್ಞಾನಿಕ ಪ್ರೋತ್ಸಾಹದ ಯೋಜನೆ** (ಕೆ.ವಿ.ಪಿಳ್ಳೈ)

ಪಿ.ಯು.ಸಿ ವಿಜ್ಞಾನ ವಿಭಾಗದಿಂದ PHD ವರೆಗೆ ವಿಜ್ಞಾನ ಅಧ್ಯಯನ

**ವ್ಯವಹರಿಸಬೇಕಾದ ವಿಳಾಸ:** ಸಂಚಾಲಕರು ಕೆವಿ ಪಿಲ್ಲೆ ಭಾರತೀಯ ವಿಜ್ಞಾನ ಸಂಸ್ಥೆ ಅವರಣ, ಯಶವಂತಪುರ, ಬೆಂಗಳೂರು– 560012.

http://www.kvpy.org.in, http/www.inspire.dst.gov.in. scholarship.in

ವಿಜ್ಞಾನ ಮತ್ತು ಬಿಸಿಎ ಅಧ್ಯಯನ ಮಾಡುವ ಪ.ಪಂಗಡ/ ಜಾತಿಯವರಿಗೆ ವಿಶೇಷ ಧನಸಹಾಯ ಸಿಗುವುದು. ಪ್ರಾಂಶುಪಾಲರನ್ನು ವಿಚಾರಿಸಿರಿ.

**ಜನಶ್ರೀ ವಿಮಾ ಯೋಜನೆ:**

1. ಭಾರತೀಯ ಜೀವ ವಿಮಾ ನಿಗಮದ ಪಿಂಚಣಿ ಹಾಗೂ ಗುಂಪು ಘಟಕದ ಮೂಲಕ.
2. ಸಂಘ, ಒಕ್ಕೂಟಗಳ ಮೂಲಕ ವಿಮೆ ಮಾಡಿಕೊಂಡವರ ಮಕ್ಕಳಿಗೆ ಮಾತ್ರ (ಉದಾ: ಹಾಲು ಉತ್ಪಾದಕರ, ಬೀಡಿ ಕಾರ್ಮಿಕರ ಸಂಘ ಇತ್ಯಾದಿ)
3. ವಿಮೆ ಮಾಡುವವರಿಗೆ ಈ ಅರ್ಹತೆ ಇರಬೇಕು. ವಯಸ್ಸು 18 ರಿಂದ 59 ವರ್ಷ. ಒಕ್ಕೂಟದ ಯಾ ಸಂಘದ ಸದಸ್ಯನಾಗಿರಬೇಕು.
4. ವಿಮೆಯ ಅವಧಿ ಒಂದು ವರ್ಷ ಮಾತ್ರ ವಾರ್ಷಿಕ ಕಂತು ರೂ.120/– ವಿಮಾದಾರನಿಗೆ ಮರಣ, ಅಪಘಾತದ ಸೌಲಭ್ಯದ ಜೊತೆಗೆ ಮಕ್ಕಳಿಗೆ ವಿದ್ಯಾರ್ಥಿವೇತನ (9,10 ಪ್ರಥಮ ಪಿ.ಯು.ಸಿ. ಮಕ್ಕಳಿಗೆ ಮಾತ್ರ) (ಮುಂದಿನ ವರ್ಷದಲ್ಲಿ ಸೀಮಿತ ಮಕ್ಕಳಿಗೆ ಮಾತ್ರ ನೀಡುವ ಸಾಧ್ಯತೆ ಇದೆ).

**ವ್ಯವಹರಿಸಬೇಕಾದ ವಿಳಾಸ:** ಸದಸ್ಯತನ ಇರುವ ಹಾಲು ಉತ್ಪಾದಕರ, ಬೀಡಿ ಯಾ ಇತರ ಕಾರ್ಖಾನೆಗಳ ಮುಖ್ಯಸ್ಥರು ಐವಾ ಜೀವ ವಿವಾ ನಿಗವು ಪಾಪ್ಯುಲರ್ ಕಟ್ಟಡ, ಕೆ.ಎಸ್.ರಾವ್.ರಸ್ತೆ, ಮಂಗಳೂರು.

**ಸೈನಿಕರ ಆಶ್ರಯದಾತರಿಗೆ:**

1. ಸೈನ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಕ್ಕಳಿಗೆ ಸಹೋದರ ಸಹೋದರಿಯರಿಗೆ ಸೈನಿಕರು ತಮ್ಮ ಮೇಲಾಧಿಕಾರಿಯ ಶಿಫಾರಸ್ಸಿನೊಂದಿಗೆ ಸಂಬಂಧಪಟ್ಟ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಿಗೆ ಅರ್ಜಿ ನೀಡುವುದು.
2. ನಿವೃತ್ತ ಸೈನಿಕರ ಮಕ್ಕಳಿಗೆ, ಈ ಕೆಳಗಿನ ವಿಳಾಸದಿಂದ ಅರ್ಜಿ ನಮೂನೆಯನ್ನು ಪಡೆದು ಶಿಕ್ಷಣ ಸಂಸ್ಥೆಯ ಶಿಪಾರಸ್ಸಿನೊಂದಿಗೆ ಅವರಿಗೆಯೇ ಕಳುಹಿಸಿಕೊಡುವುದು.

ವಿಳಾಸ: ಉಪನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಜಿಲ್ಲಾ ಪಂಚಾಯತ್ ಕಟ್ಟಡ, ಅಶೋಕನಗರ, ಮಂಗಳೂರು.

**NTSE: National Talent Search Examination**

**NMMS: National Means Cum Merit Scholarship**

ಇವೆರಡು 8ನೇ ತರಗತಿಯಲ್ಲಿ ಅಧ್ಯಯನ ಮಾಡುವವರಿಗೆ (7ನೇಯಲ್ಲಿ 55% ಅಂಕ ಪಡೆದಿರಬೇಕು)

1. ಪರೀಕ್ಷೆ ನವೆಂಬರ್ ತಿಂಗಳಲ್ಲಿ ನಡೆಯುವುದು.
2. **NTSE** ರಾಷ್ಟ್ರಮಟ್ಟದಲ್ಲಿ ಉತ್ತೀರ್ಣರಾದರೆ ಮುಂದಿನ ಶಿಕ್ಷಣಕ್ಕೆ ರೂ.500/– ರಂತೆ ಪ್ರತಿ ತಿಂಗಳು
3. **NMMS** ಉತ್ತೀರ್ಣರಾದರೆ ಮುಂದಿನ 4 ವರ್ಷಕ್ಕೆ ತಿಂಗಳಿಗೆ ರೂ.500/– ರಂತೆ. ಪರೀಕ್ಷಾ ಸಿದ್ದತೆ ಜೂನ್‌ನಲ್ಲೇ ಮಾಡಿಕೊಳ್ಳುವುದು.

**ವ್ಯವಹರಿಸಬೇಕಾದ ವಿಳಾಸ:** ಸಂಬಂಧಪಟ್ಟ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ (BEO)

**ಮಂಗಳೂರು ಮಹಾನಗರ ಪಾಲಿಕೆಯ ಶೈಕ್ಷಣಿಕ ಧನಸಹಾಯ:**

1. 10ನೇ ತರಗತಿಯಿಂದ ಮೇಲ್ಪಟ್ಟ ಎಲ್ಲಾ ತರಗತಿಗಳಿಗೆ, ಎಲ್ಲಾ ವಿದ್ಯಾರ್ಥಿಗಳಿಗೆ.
2. ನಗರಪಾಲಿಕೆ ವ್ಯಾಪ್ತಿಯಲ್ಲಿ ವಾಸ್ತವ್ಯವಿದ್ದು ಪಡಿತರ ಚೀಟಿ ಹೊಂದಿರಬೇಕು.
3. ಆದಾಯದ ಮಿತಿ 39,600/– ಇತರರಿಗೆ, 2 ಲಕ್ಷ ಎಸ್.ಎಟಿ.ಗಳಿಗೆ.
4. ಮನೆ ತೆರಿಗೆ ಕಟ್ಟಡ ರಶೀದಿ ಯಾ ಒಪ್ಪಂದ ಪತ್ರ ಹೊಂದಿರಬೇಕು.
5. ರೂ.2,000/– ದಿಂದ 6,000/– ದ ವರೆಗೆ ಧನಸಹಾಯ
6. ವೈದ್ಯಕೀಯ ಇಂಜಿನಿಯರಿಂಗ್ ಪ್ರತಿಭಾವಂತರಿಗೆ ಡೆಸ್ಕ್‌ಟಾಪ್/ ಲ್ಯಾಪ್‌ಟಾಪ್ ಖರೀದಿಗೆ ತಲಾ ರೂ.25,000/–
7. ಸರಕಾರಿ ಕೋಟದಲ್ಲಿ ಸೀಟು ಪಡೆದ ಎಮ್.ಬಿ.ಬಿ.ಎಸ್, ಬಿ.ಇ. ಯವರಿಗೆ ಫೀ ಪಾವತಿ.
8. ಸ್ವಂತ ಉದ್ಯೋಗ ಪ್ರಾರಂಭಿಸುವ ವೈದ್ಯರಿಗೆ ಸಲಕರಣೆಗೆ, ವಕೀಲರಿಗೆ ಪುಸ್ತಕ ಖರೀದಿಗೆ ಸಹಾಯಧನ.
9. ಅಂಗವಿಕಲರಿಗೆ ತಾಲೂಕು ಮಟ್ಟದಿಂದ ಅಂತರಾಷ್ಟ್ರೀಯ ಮಟ್ಟದವರೆಗೆ ಸ್ಪರ್ಧೆಗಳಲ್ಲಿ ಭಾಗವಹಿಸುವವರಿಗೆ ರೂ. 2,000/ –ದಿಂದ ರೂ.50,000/–ದವರೆಗೆ ಪ್ರೋತ್ಸಾಹಧನ.

**ವ್ಯವಹರಿಸಬೇಕಾದ ವಿಳಾಸ:** ಜಂಟಿ ಆಯುಕ್ತರು, ಮಹಾನಗರ ಪಾಲಿಕೆ, ಮಂಗಳೂರು, ದ.ಕ.

**ಸಾಲಯೋಜನೆ:**

ಆರ್ಥಿಕ ಕೊರತೆಯಿಂದ ಉನ್ನತ ಶಿಕ್ಷಣವನ್ನು ಮುಂದುವರಿಸಲಾಗದ ವಿದ್ಯಾರ್ಥಿಗಳಿಗೆ ಬ್ಯಾಂಕುಗಳ ಮೂಲಕ Education Loan ರಾಜೀವಗಾಂಧಿ ಸಾಲ ಯೋಜನೆ ಹಾಗೂ ಅಲ್ಪಸಂಖ್ಯಾತರಿಗಾಗಿ ಅರಿವು ಯೋಜನೆಯ ಮೂಲಕ ಸಾಲದ ಸೌಲಭ್ಯಗಳಿವೆ. ರಾಜೀವ ಗಾಂಧೀ ಸಾಲ ಯೋಜನೆಗೆ ಅಧ್ಯಯನ ಪೂರ್ತಿಯಾಗುವವರೆಗೆ ಬಡ್ಡಿ ಇರುವುದಿಲ್ಲ.

ಅರಿವು ಯೋಜನೆ ವೆಬ್‌ಸೈಟ್ : The Karnataka Minorities Development Corporatio LTD

www.kmdc.kar.nic.in, Phone: 22864782

**ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಸಾಲ ಯೋಜನೆ:**

ಆದಾಯದ ಮಿತಿ ವಾರ್ಷಿಕ 3.50 ಲಕ್ಷ

ವಾರ್ಷಿಕ ಗರಿಷ್ಠ ಸಾಲದ ಮೊತ್ತ 1 ಲಕ್ಷ

ವೃತ್ತಿಪರ ಶಿಕ್ಷಣ ಪಡೆಯುವವರಿಗೆ

**ಕೊಂಕಣಿ ಭಾಷಾ ಮಾತನಾಡುವ ವಿದ್ಯಾರ್ಥಿಗಳಿಗೆ (ವೃತ್ತಿಪರ ಶಿಕ್ಷಣ):**

**ವ್ಯವಹರಿಸಬೇಕಾದ ವಿಳಾಸ :** ವಿಶ್ವ ಕೊಂಕಣಿ ಅಕಾಡಮೆ, ಶಕ್ತಿ ನಗರ, ಮಂಗಳೂರು

**ಸಂಘ–ಸಂಸ್ಥೆಗಳು**

**ವಿಶ್ವಕರ್ಮ:** (ಜೂನ್ ಪ್ರಥಮ ಯಾ ದ್ವಿತೀಯ ವಾರ) →→→

→→→

ಸ್ವಜಾತಿ ಬಾಂಧವರಿಗೆ 8ರಿಂದ ಪಿಯುಸಿ ಅಂಕಗಳ ಮಿತಿ 60%ಕ್ಕೆ ಮೇಲ್ಪಟ್ಟು

ವಿಳಾಸ: 1. ದ.ಕ.ಜಿಲ್ಲಾ ಚಿನ್ನದ ಕೆಲಸಗಾರರ ಸಂಘ, ರಥಬೀದಿ, ಮಂಗಳೂರು 2.ದೇವಿಪ್ರಸಾದ್ ಜುವೆಲ್ಲರ್ಸ್, ಕಾರ್‌ಸ್ಟ್ರೀಟ್, ಮಂಗಳೂರು, ದ.ಕ.

**ಕ್ಷೌರಿಕ ಕಚ್ಚೂರಿ ವಿದ್ಯಾನಿಧಿ:** ಸ್ವಜಾತಿ ವಿದ್ಯಾರ್ಥಿಗಳಿಗೆ ಪಿಯುಸಿ ಮತ್ತು ಮೇಲ್ಪಟ್ಟು ಒಂದು ಕುಟುಂಬದಿಂದ ಒಂದು ಮಗುವಿಗೆ ಮಾತ್ರ.

**ವಿಳಾಸ :** ಕಾರ್ಯದರ್ಶಿ: ಕಚ್ಚೂರು ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿ (ರಿ) 414, ಕುನಿಲ್ ಕಾಂಪ್ಲೆಕ್ಸ್, ಬೆಂದೂರ್‌ವೆಲ್, ಮಂಗಳೂರು– 575002.

**ಮಡಿವಾಳ ಸಂಘ:** ಸ್ವಜಾತಿ ವಿದ್ಯಾರ್ಥಿಗಳಿಗೆ 8ನೇ ತರಗತಿ ಮೇಲ್ಪಟ್ಟು
**ವಿಳಾಸ:** ದಕ್ಷಿಣ ಕನ್ನಡ ಮಡಿವಾಳರ ಸಂಘ (ರಿ) ಮಂಗಳೂರು. ಶ್ರೀ ನಾರಾಯಣ ಇಲೆಕ್ಟ್ರಿಕಲ್ಸ್, ಹಂಪನಕಟ್ಟಾ, ಮಂಗಳೂರು– 575001.

**ಕುಲಾಲ:** ಸ್ವಜಾತಿ ವಿದ್ಯಾರ್ಥಿಗಳಿಗೆ 8ನೇ ತರಗತಿಯಿಂದ ಮೇಲ್ಪಟ್ಟು,

**ವಿಳಾಸ:** ಬಂಟ್ವಾಳ ಮಯ್ಯರಬೈಲು, ಬಂಟ್ವಾಳ, ಯಾ ಗುರುಕೃಪಾ, ಬಿ.ಸಿ.ರೋಡು, ಅಥವಾ ಆಯಾ ತಾಲೂಕು ಸಂಘ.

**ಜಿಲ್ಲಾ ಮಟ್ಟದಲ್ಲಿ** ಪಿಯುಸಿ ಮತ್ತು ಮೇಲ್ಪಟ್ಟು – ಕುಲಾಲ ಜಾತಿಗೆ ಮಾತ್ರ ವಿಳಾಸ: ಮೂಲ್ಯರ ಯಾನೆ ಕುಲಾಲರ ಸಂಘ (ರಿ), ಓಲ್ಡ್ ಕೆಂಟ್ ರಸ್ತೆ, ಪೋಲೀಸ್ ಲೈನ್, ಮಂಗಳೂರು – 575001

**ಬಂಟರ ಸಂಘ :** 1. ಎಂಟರಿಂದ ಪಿಯುಸಿ ಹಾಗೂ ಮೇಲ್ಪಟ್ಟು
2. ಆದಾಯ ಪ್ರಮಾಣ ಪತ್ರದ ಅವಶ್ಯಕತೆ ಇದೆ.
3. ಅಂಗವಿಕಲರಿಗೆ 1ನೇ ತರಗತಿಯಿಂದಲೇ ಯಾವ ನಿರ್ಬಂಧವೂ ಇಲ್ಲ.
4. ಅಂಕಗಳ ಮಿತಿ ಇರುತ್ತದೆ (60% ಕ್ಕಿಂತ ಮೇಲ್ಪಟ್ಟು)
**ವ್ಯವಹರಿಸಬೇಕಾದ ವಿಳಾಸ:** ಬಂಟರ ಯಾನೆ ನಾಡವರ ಸಂಘ, ಮಂಗಳೂರು ದ.ಕ, ಬಂಟರ ಜಾತಿಯವರಿಗೆ ಮಾತ್ರ

**ಕರ್ನಾಟಕ ರಾಜ್ಯ ಬಂಟರ ಸಂಘ ಬೆಂಗಳೂರು:** ಪದವಿ ಮತ್ತು ವೃತ್ತಿಪರ ಶಿಕ್ಷಣ (ಬಂಟರ ಜಾತಿಯವರಿಗೆ ಮಾತ್ರ)

**ದಾಮೋದರ ಸುವರ್ಣ ಸ್ಮಾರಕ ವಿದ್ಯಾರ್ಥಿವೇತನ:** ಪದವಿ ಹಾಗೂ ವೃತ್ತಿ ಶಿಕ್ಷಣ ವಿದ್ಯಾರ್ಥಿಗಳಿಗೆ (ಬಿಲ್ಲವರಿಗೆ ಮಾತ್ರ)

ವಿಳಾಸ: ಜ್ಯೋತಿ ಕನ್‌ಸ್ಟ್ರಕ್ಷನ್, ಲೇಡಿಗೋಷನ್ ಆಸ್ಪತ್ರೆ ಬಳಿ, ಮಂಗಳೂರು.

**ಬಿಲ್ಲವ ಅಸೋಸಿಯೇಶನ್:** ಪಿಯುಸಿ ಮತ್ತು ಮೇಲ್ಪಟ್ಟು (ಕೈ ಬರಹದ ಅರ್ಜಿ ಮೂಲಕ ನಿಗದಿತ ಅರ್ಜಿ ನಮೂನೆಗೆ ಮನವಿ ಸಲ್ಲಿಸುವುದು)

**ವಿಳಾಸ:** Billava Association, Billava Bhavan, Guru Narayana Marga, Ananda Nagar, Santha Cruz East, Mumbai.

**ಎಂಟನೇ ತರಗತಿಯಿಂದ ಮೇಲ್ಪಟ್ಟು ವಿಳಾಸ:** ಬಿಲ್ಲವ ಅಸೋಸಿಯೇಶನ್, ನಂ.24, ಕೇಶವ ನಿವಾಸ, ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು– 560003.

**ಗಾಣಿಗರ ಸೇವಾ ಸಂಘ:** ಎಂಟನೇ ತರಗತಿಯಿಂದ ಮೇಲ್ಪಟ್ಟು (ಗಾಣಿಗರಿಗೆ ಮಾತ್ರ)

**ವ್ಯವಹರಿಸಬೇಕಾದ ವಿಳಾಸ:** ಬಂಟ್ವಾಳ ತಾಲೂಕು ಗಾಣಿಗರ ಸೇವಾ ಸಂಘ (ರಿ) ಪಾಣೆಮಂಗಳೂರು– 574231, ಬಂಟ್ವಾಳ ತಾಲೂಕು ಅಥವಾ ಆಯಾ ತಾಲೂಕು ಸಂಘ.

**ಹೆಗ್ಗಡೆ ಸಮಾಜ:** ಎಂಟನೇ ತರಗತಿಯಿಂದ ಮೇಲ್ಪಟ್ಟು (ಹೆಗ್ಗಡೆಯವರಿಗೆ ಮಾತ್ರ

**ವ್ಯವಹರಿಸಬೇಕಾದ ವಿಳಾಸ :** ದಕ್ಷಿಣ ಕನ್ನಡ ಜಿಲ್ಲಾ ಹೆಗ್ಗಡೆ ಸಮಾಜ ಸೇವಾ ಸಂಘ (ರಿ), ಕೋಟೆಬಾಗಿಲು, ಮೂಡುಬಿದ್ರೆ, ದ.ಕ.

**ಮಾತಾ ಅಮೃತಾನಂದಮಯಿ ಮಠ :** ಪಿಯುಸಿ ಮತ್ತು ಮೇಲ್ಪಟ್ಟು (ಎಲ್ಲಾ ಜಾತಿಯವರಿಗೂ)

**ವ್ಯವಹರಿಸಬೇಕಾದ ವಿಳಾಸ :** ಮಾತಾ ಅಮೃತಾನಂದಮಯಿ ಮಠ, ಸುಲ್ತಾನ್ ಬತ್ತೇರಿ, ಮಂಗಳೂರು–3

**ಕುಡಾಲ ದೇಶಸ್ಥ ಗೌಡ ಬ್ರಾಹ್ಮಣ ವಿದ್ಯಾವೃದ್ಧಿ ಸಮಾಜ:** ಎಂಟನೇ ತರಗತಿಯಿಂದ ಮೇಲ್ಪಟ್ಟು ಸ್ವಜಾತಿ ವಿದ್ಯಾರ್ಥಿಗಳಿಗೆ,) ಕುಡಾಲ ದೇಶಸ್ಥ ಗೌಡ ಬ್ರಾಹ್ಮಣರಿಗೆ ಮಾತ್ರ) ಕೆಳಗಿನ ವಿಳಾಸದಿಂದ ಅರ್ಜಿ ನಮೂನೆ ತರಿಸಿಕೊಳ್ಳಬೇಕು

ವಿಳಾಸ: Kudal Deshastha Gauda Brahmana Vidyavriddi Samaja 30, Kudal Deshkar Brahman Nivas, JSS Road, Girigon, Mumbai - 400004.

**ಪೂರ್ಣಾನಂದ ಸ್ವಾಮಿ ಸ್ಮಾರಕ ವಿದ್ಯಾರ್ಥಿ ವೇತನ,** ಬಂಟ್ವಾಳ, ದ.ಕ. (ಕುಡಾಲ ದೇಶಸ್ಥ ಗೌಡ ಬ್ರಾಹ್ಮಣರಿಗೆ ಮಾತ್ರ)

ಎಂಟನೇ ತರಗತಿಯಿಂದ ಪಿಯುಸಿ ಮೇಲ್ಪಟ್ಟು

**ವಿಳಾಸ:** ಅಧ್ಯಕ್ಷರು ಶ್ರೀ ಪೂರ್ಣಾನಂದ ಸೇವಾ ಪ್ರತಿಷ್ಠಾನ, ರತ್ನಾ ಎಂಟರ್‌ಪ್ರೈಸಸ್ 3ನೇ ಮಹಡಿ, ಒಬೆಕ್ಲಿ ಟವರ್, ಬಲ್ಮಠ ಮಂಗಳೂರು – 575000

**ಜಮಾಯ್ಯತುಲ್ ಫಲಾಹ್ ಪ್ರಥಮ ಪಿಯುಸಿಯಿಂದ ಮೇಲ್ಪಟ್ಟು ಮುಸ್ಲಿಂ ವಿದ್ಯಾರ್ಥಿಗಳಿಗೆ** ತಾವು ವಾಸ್ತವ್ಯವಿರುವ ತಾಲೂಕಿನಲ್ಲೇ ಅರ್ಜಿ ಸಲ್ಲಿಸಬೇಕು. ಆಯಾ ತಾಲೂಕು ಸಂಸ್ಥೆಯನ್ನು ಸಂಪರ್ಕಿಸುವುದು.

**ಯೆನಪೋಯ ಟ್ರಸ್ಟ್:** ದ.ಕ. ಮತು ಕಾಸರಗೋಡು ಜಿಲ್ಲೆಗಳಿಗೆ ಮಾತ್ರ ಎಸ್.ಎಸ್.ಎಲ್.ಸಿ ಯಲ್ಲಿ 75% ಪಿಯುಸಿಯಲ್ಲಿ 70%, ಅರ್ಹ ವಿದ್ಯಾರ್ಥಿಗಳು ಖಾಲಿ ಹಾಳೆಯಲ್ಲಿ ತಮ್ಮ ಸಂಪೂರ್ಣ ಮಾಹಿತಿ ಹಾಗೂ ಅಂಕಪಟ್ಟಿಯ ದೃಢೀಕರಣದೊಂದಿಗೆ ಅರ್ಜಿ ಸಲ್ಲಿಸುವುದು.

**ವಿಳಾಸ:** ಸಂಚಾಲಕರು, ಯೆನಪೋಯ ಮೆಡಿಕಲ್ ಕಾಲೇಜು, ನಿತ್ಯಾನಂದ ನಗರ, ಅಂಚೆ: ದೇರಳಕಟ್ಟೆ, ಮಂಗಳೂರು, ದ.ಕ.

**ಮೌಲಾನಾ ಅಫ್ಜಲ್ ಹುಸೇನ್ ಪ್ರಶಸ್ತಿ:** ಎಸ್.ಎಸ್.ಎಲ್,ಸಿ ಯಲ್ಲಿ 90%ಕ್ಕಿಂತ ಹೆಚ್ಚು ಅಂಕ ಪಡೆದ ಮುಸ್ಲಿಂ ವಿದ್ಯಾರ್ಥಿಗಳು ಖಾಲಿ ಹಾಳೆಯಲ್ಲಿ ತಮ್ಮ ಮಾಹಿತಿ ಅಂಕಪಟ್ಟಿ ದೃಢೀಕರಣದೊಂದಿಗೆ ಅರ್ಜಿ ಸಲ್ಲಿಸುವುದು.

**ವಿಳಾಸ:** ವ್ಯವಸ್ಥಾಪಕರು, ಎಸ್.ಐ.ಓ. ಆಫ್ ಇಂಡಿಯಾ, ಹಿದಾಯತ್ ಸೆಂಟರ್, ಬೇಬಿ ಅಲಾಬಿ ರಸ್ತೆ, ಮಂಗಳೂರು.

**ಬ್ಯಾರೀಸ್ ಸ್ಕಾಲರ್‌ಶಿಪ್** (ಬ್ಯಾರಿ ವಿದ್ಯಾರ್ಥಿಗಳಿಗೆ ಮಾತ್ರ) ಪಿಯುಸಿಗಿಂತ ಮೇಲ್ಪಟ್ಟು,ಸಂಬಂಧಪಟ್ಟ ಮಸೀದಿಯ ದೃಢಪತ್ರವನ್ನು ಲಗ್ತೀಕರಿಸುವುದು.

ವಿಳಾಸ: ಬ್ಯಾರೀಸ್ ವೆಲ್ ಫೇರ್ ಅಸೋಸಿಯೇಶನ್, ಎಫ್.ಎಫ್. 4, ಶುಭೋದಯ ರೆಸಿಡೆನ್ಸಿ, ವಿಜಯಾಬ್ಯಾಂಕ್ ಹತ್ತಿರ, ಬೆಂಗಳೂರು– 94.

→→→

→→→

**ದುಬೈ ಕಲ್ಚರಲ್ ಫಾರಂ ವಿದ್ಯಾರ್ಥಿ ವೇತನ:** ಮುಸ್ಲಿಂ ವಿದ್ಯಾರ್ಥಿಗಳಿಗೆ ಮಾತ್ರ ಪಿಯುಸಿಗಿಂತ ಮೇಲ್ಪಟ್ಟು, ಅರ್ಜಿ, ಫೋಟೋ, ಆದಾಯ ಪ್ರಮಾಣ ಪತ್ರ

**ಸಾಮಾನ್ಯ ಅಂಚೆ ಮೂಲಕ ಈ ವಿಳಾಸಕ್ಕೆ ಕಳುಹಿಸಿ:** M.E. Moolur, P.O.Box No.39474 Dubai, UAE.

**ಕರ್ನಾಟಕ ಝುಕಾತ್ ಚಾರಿಟೆಬಲ್ ಟ್ರಸ್ಟ್ ಸ್ಕಾಲರ್‌ಶಿಪ್ :** (ಮುಸ್ಲಿಂ ಬಡ ವಿದ್ಯಾರ್ಥಿಗಳಿಗೆ ಮಾತ್ರ)

ವಿಳಾಸ: ಕರ್ನಾಟಕ ಝುಕಾತ್ ಚಾರಿಟೆಬಲ್ ಟ್ರಸ್ಟ್, 20–03–252/87, ಎರಡನೇ ಮಹಡಿ, ಮಿಶನ್ ಸ್ಟ್ರೀಟ್, ಜ್ಯೋತಿ ಸೈಕಲ್ ಅಂಗಡಿಯ ಎದುರು, ಬಂದರ್, ಮಂಗಳೂರು.

**ಸಾರಸ್ವತ:** 1) ಹೈಸ್ಕೂಲಿನ ಹಾಗೂ ಪಿಯುಸಿ ಮತ್ತು ಮೇಲ್ಪಟ್ಟು–ಜಿ.ಎಸ್.ಬಿ ಯವರಿಗೆ

ಅರ್ಜಿ ನಮೂನೆಗಾಗಿ: President/Secretary, Mumbai GSB Scholarship, P.B.No. 7115, Wadala, Mumbai – 400031.

2) ಶ್ರೀಮದ್ ಸುಧೀಂದ್ರತೀರ್ಥ ಶ್ರೀಪಾದಂಗಳವರು, ಶ್ರೀಮದ್ ಕೇಶವೇಂದ್ರ ತೀರ್ಥ ಸ್ವಾಮಿ ಚಾರಿಟೇಬಲ್ ಟ್ರಸ್ಟ್, ಶ್ರೀ ಲಕ್ಷ್ಮೀ ವೆಂಕಟರವಣ ದೇವಸ್ಥಾನ, ಉಡುಪಿ – 576101, ಜಿ.ಎಸ್.ಬಿ.ಯವರಿಗೆ

3. Gowda Saraswath Samaj (R) Saraswath Samskrithi Bhavan, Geetha Mandir Marga Double Storay, New Rajendra Nagar New Delhi 110030, G.S.B. ಯವರಿಗೆ ಇನ್ನೂ ಹೆಚ್ಚಿನ ವಿದ್ಯಾರ್ಥಿವೇತನ ಮಾಹಿತಿಗಾಗಿ ಕೆ.ನಾರಾಯಣ ನಾಯಕ್‌ರವರನ್ನು ಸಂಪರ್ಕಿಸಿ 9483903627 ಹಾಗೂ ಇದಕ್ಕೆ ಸಂಬಂಧಿಸಿದ ಬೇರೆಯೇ ಪಟ್ಟಿ ಇದೆ.

**ಸೀತಾರಾಮ ಜಿಂದಾಲ್ ಫೌಂಡೇಶನ್–** ಪಿಯುಸಿ ಮತ್ತು ಮೇಲ್ಪಟ್ಟ ವ್ಯಕ್ತಿಗಳಿಗೆ – ಬಿಪಿಎಲ್ ಕಾರ್ಡುದಾರರಿಗೆ ಮತ್ತು ಅಂಗವಿಕಲರಿಗೆ ಆದಾಯದ ಮಿತಿ ಇಲ್ಲ. ಉಳಿದವರಿಗೆ 2.5ಲಕ್ಷದ ಮಿತಿ. ಆದಾಯ ಪ್ರಮಾಣ ಪತ್ರ 2 ವರ್ಷದೊಳಗಿನದಾಗಿದ್ದು ಇಂಗ್ಲೀಷ್ ಯಾ ಹಿಂದಿಯಲ್ಲಿರಬೇಕು. ಅಂಗವಿಕಲರು ಅವರ ಅಂಗವಿಕಲ ಪ್ರಮಾಣ ಪತ್ರ ಲಗ್ತೀಕರಿಸಬೇಕು. ಅರ್ಜಿ ನಮೂನೆಯನ್ನು www.sitaramajindalfoundation.org ನಿಂದ ಪಡೆದು ಅದರಲ್ಲಿರುವ ಸಲಹೆ ಸೂಚನೆಯಂತೆ ನೀಡುವುದು. ಅಂಕಗಳ ಮಿತಿ ಕೋರ್ಸಿಗೆ ಅನುಗುಣವಾಗಿ ಇದೆ. ಆದರೆ 50% ಗಿಂತ ಕಡಿಮೆಗೆ ಅವಕಾಶವಿಲ್ಲ. ಒಮ್ಮೆ ಮಂಜೂರಾದರೆ ಉಳಿದ ಅವಧಿಗೆ ನವೀಕರಣ. ಅರ್ಜಿ ಸಲ್ಲಿಸುವ ವಿಳಾಸ: ಸೀತಾರಾಮ ಜಿಂದಾಲ್ ಫೌಂಡೇಶನ್, ಜಿಂದಾಲ್ ನಗರ, ತುಮಕೂರು, ಬೆಂಗಳೂರು–560073.

**ಸಂತೂರ್ ವಿದ್ಯಾರ್ಥಿವೇತನ:** ವಿದ್ಯಾರ್ಥಿನಿಯರಿಗೆ ಮಾತ್ರ, 10ನೇ ತರಗತಿ ಮತ್ತು ಪಿಯುಸಿಯನ್ನು ಸರಕಾರಿ ಸಂಸ್ಥೆಗಳಲ್ಲಿ ಅಧ್ಯಯನ ಮಾಡಿ 3 ವರ್ಷ ಯ ಹೆಚ್ಚಿನ ಅವಧಿಯ ಕೋರ್ಸ್‌ನಲ್ಲಿ ಅಧ್ಯಯನ ಮಾಡುತ್ತಿರಬೇಕು. ಅರ್ಜಿ ನಮೂನೆಗಾಗಿ santoor.scholarship@wipro.com

ವಿಳಾಸ: Wipro cares, Santoor Scholarship Doddakanelli, Sarjapur Road, Bangalore-560035, Karnataka, Phone: 7337835166.

ಡಾ. ಶ್ಯಾಮನೂರ್ ಶಿವಶಂಕರಪ್ಪ ಜನಕಲ್ಯಾಣ ಟ್ರಸ್ಟ್ – ಪಿಯುಸಿಯಿಂದ ಮೇಲ್ಪಟ್ಟು

MBBS - Above 90% (in puc)

Diploma, Bsc, Bcom, BE, BVSC - Above 85%

BCA, BBA, BA, BDS, BPHARMA, MA, MSC, BED-Above 80%

CA, MCA, MBA, MPHIL, MPED, MTECH- 75%

Online ಅರ್ಜಿ ಸಲ್ಲಿಸಿ ಅದರ ನಕಲು ತೆಗೆದು ಸಂಬಂಧಪಟ್ಟವರ ಸಹಿ ಹಾಗೂ ದಾಖಲೆಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡುವುದು.

Dr. Shamanur Shivashankarappa Janakalyana Trust, C/o RL Law College, Behind Bapuji Educational Association Head Office, P J Extension, Davanagere - 577002, Telephone: 08192250237, Website: www.ssjanakalyanatrust.org

Diploma Students - www.kamet.org (ಅರ್ಜಿ ನಮೂನೆಗಾಗಿ)

ಶ್ರೀ ಸುರೇಶ್, ಮಹೇಂದ್ರ ಆಂಡ್ ಮಹೇಂದ್ರ ಲಿಮಿಟೆಡ್, ರಹೇಜ್ ಚೇಂಬರ್ಸ್, 1ನೇ ಮಹಡಿ 12 ಮ್ಯೂಜಿಯಂ ರೋಡ್ ಬೆಂಗಳೂರು 560001

**ಶಿಕ್ಷಕರ ಸೇವಾ ಪ್ರತಿಷ್ಠಾನ:** ಹೈಸ್ಕೂಲಿನ ಹಾಗೂ ಪಿಯುಸಿ ತೀರಾ ಬಡ ವಿದ್ಯಾರ್ಥಿಗಳಿಗೆ ವ್ಯವಹರಿಸಬೇಕಾದ ತಿಂಗಳು ಜೂನ್.

**ವಿಳಾಸ:** ಶಿಕ್ಷಕರ ಸೇವಾ ಪ್ರತಿಷ್ಠಾನ, ಲೈಟ್ ಹೌಸ್ ರಸ್ತೆ, ಬಾವುಟಗುಡ್ಡೆ, ಮಂಗಳೂರು. ದ.ಕ.

**ದೃತಿ ಪೌಂಡೇಶನ್ ಮಂಗಳೂರು ಮತ್ತು ಪ್ರೇರಣಾ ಪ್ರತಿಭಾ ಪೋಷಕ, ಬೆಂಗಳೂರು**

1. ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಉತ್ತೀರ್ಣರಾಗಿ ಶಿಕ್ಷಣ ಮುಂದುವರಿಸುವ ಪ್ರತಿಭಾವಂತ ಬಡ ವಿದ್ಯಾರ್ಥಿಗಳು ಅರ್ಹರು.

2. ಅಂಕಗಳು 75% ಆದಾಯ 36,000/–

**ವ್ಯವಹರಿಸಬೇಕಾದ ವಿಳಾಸ:** ದೃತಿ ಪೌಂಡೇಶನ್, ಲೈಟ್ ಹೌಸ್ ಹಿಲ್ ರಸ್ತೆ, ಪಾಲಿ ಕ್ಲಿನಿಕ್, ಮಂಗಳೂರು– 575001.

**ಪ್ರಜಾವಾಣಿ ಡೆಕ್ಕನ್ ಹೆರಾಲ್ಡ್ ನ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು)**

1. ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ಹಾಗೂ ಹೆತ್ತವರ ಸಂಪೂರ್ಣ ಮಾಹಿತಿ ಜೊತೆಗೆ ಅಂಕ ಪಟ್ಟಿ, ಜಾತಿ ಆದಾಯ ಪ್ರಮಾಣಪತ್ರದೊಂದಿಗೆ ಶಾಲಾ ಮುಖ್ಯಸ್ಥರ ಶಿಫಾರಸ್ಸು ಪತ್ರದೊಂದಿಗೆ ಅರ್ಜಿ ಸಲ್ಲಿಸಬಹುದು. (ಕೈ ಬರಹ) ವ್ಯವಹರಿಸಬೇಕಾದ ವಿಳಾಸ: ಡಿ.ಜಿ.ಎಂ. (ಎಚ್.ಆರ್) ನಂ.75, ಎಂ. ಜಿ. ರಸ್ತೆ, ಬೆಂಗಳೂರು– 560001

**ಪದ್ಮಶಾಲಿ:** ಎಸ್.ಎಸ್.ಎಲ್.ಸಿ.ಉತ್ತೀರ್ಣ ಹಾಗೂ ಮೇಲ್ಪಟ್ಟವರಿಗೆ.

**ವಿಳಾಸ:** ಪದ್ಮಶಾಲಿ ಸುವರ್ಣ ಮಹೋತ್ಸವ ಭವನ, ಆದಿ ಉಡುಪಿ ಯಾ ಕೆನರಾ ಟೆಕ್ಸ್‌ಟೈಲ್ಸ್, ಸಿಟಿ ಬಸ್ಸು ನಿಲ್ದಾಣ, ಉಡುಪಿ, ಯಾ ಮೈಸೂರು ಫ್ಯಾಶನ್ ಹೌಸ್, ಮಾರ್ಕೆಟ್ ರಸ್ತೆ, ಮಂಗಳೂರು.

→→→

→→→

**ದೇವಾಡಿಗ ಸಂಘ:** ಎಸ್.ಎಸ್.ಎಲ್.ಸಿ.ಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ

**ವಿಳಾಸ:** ಪ್ರಧಾನ ಕಾರ್ಯದರ್ಶಿ, ರಾಜ್ಯ ದೇವಾಡಿಗ ಸಂಘ, ಮಣ್ಣಗುಡ್ಡೆ, ಮಂಗಳೂರು.

**PG ಮಾಡುವ ಏಕಮಾತ್ರ ಪುತ್ರಿಗೆ ಇಂದಿರಾ ಗಾಂಧಿ ವಿದ್ಯಾರ್ಥಿ ವೇತನ**

ವಿಳಾಸ: Selection Officer Schoolarship, C.B.S.E Education Centre Z

**ಶಶಿಕಿರಣ್ ಶೆಟ್ಟಿ, ಬಂಟ್ವಾಳ ಇವರ ಮಾಲಕತ್ವದ**

**All Cargo Logistic Ltd, Mumbai**

ಬಡ ಅಂಗವಿಕಲ, ಅನಾಥ ಪ್ರತಿಭಾವಂತ ವಿದ್ಯಾರ್ಥಿಗಳಿಗೆ (8ನೇ ತರಗತಿಯಿಂದ ಪದವಿಯವರೆಗೆ)

All Cargo Logistic Ltd, Koustuba, Ground Floor, Kulur-Ferry Road. Kottara, Mangalore- 575006
Phone: ನಕ್ರೆ ಸುರೇಂದ್ರ ಶೆಟ್ಟಿ– 9448495712

**ಶಶಿರೇಖಾ– ಹರ್ಷಿಣಿ ಫೌಂಡೇಶನ್ ವಿದ್ಯಾರ್ಥಿವೇತನ:** ಪ್ರತಿಭಾವಂತ ಬಡ ಬಾಲಕಿಯರಿಗೆ

**ವಿಳಾಸ:** ಸೃಷ್ಟಿ ನಿಲಯ, ಮುನ್ನೂರು, ಪಂಡಿತ್ ಹೌಸ್, ಮಂಗಳೂರು, ದ.ಕ, ಡಾ॥ ಜಯಸಿಂಹ ಶೆಟ್ಟಿ – 9448214328 ಆನಂದ ಶೆಟ್ಟಿ 9620564722.

ಸುಪ್ರಜಿತ್ ಫೌಂಡೇಶನ್ ಬೆಂಗಳೂರು – ಅಧ್ಯಕ್ಷರು: ಕೆ. ಅಜಿತ್ ಕುಮಾರ್ ರೈ

ದ.ಕ.ಜಿಲ್ಲೆಯ ಬಂಟ್ವಾಳ ತಾಲೂಕಿನ ಕನ್ನಡ ಮಾಧ್ಯಮದ ಎಸ್ಎಸ್ಎಲ್ಸಿಯಲ್ಲಿ ಶೇಕಡಾ 80ಕ್ಕಿಂತ ಅಧಿಕ ಅಂಕ ಪಡೆದ ಪ್ರತಿಭಾವಂತ ಬಡ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಕುಟುಂಬದ ಆದಾಯ 1 ಲಕ್ಷ ಮೀರಿರಬಾರದು. ಎಸ್ಎಸ್ಎಲ್ಸಿ ಫಲಿತಾಂಶ ಬಂದ ಮೂರು ವಾರದೊಳಗೆ ಅರ್ಜಿ ಸಲ್ಲಿಸಬೇಕು.

**ಸಂಪರ್ಕ ವಿಳಾಸ:** ಎಂ. ಅನಂತ ಕೃಷ್ಣ ಹೆಬ್ಬಾರ್, ಸಾರಂಗ, ದೇವಸ್ಥಾನ ರಸ್ತೆ, ವಿಟ್ಲ ದ.ಕ. 08255–239192, 9449642175

ಹೆಚ್ಚಿನ ಸಂಘ ಸಂಸ್ಥೆಗಳು ಅರ್ಜಿ ಸಲ್ಲಿಸುವ ದಿನಾಂಕವನ್ನು ಪತ್ರಿಕೆಯಲ್ಲಿ ಪ್ರಕಟಿಸುತ್ತದೆ. ನಿಯಮಗಳು ಕಾಲಕಾಲಕ್ಕೆ ಬದಲಾಗುತ್ತ ಇರುತ್ತದೆ.

---

ಕೃತಿ ಬಿಡುಗಡೆ

**ಶತಮಾನ ಕಂಡ ತುಳುರಂಗಭೂಮಿ:**


# ‘ತುಳುನಾಟಕ ಪರಂಪರೆ’ ಗ್ರಂಥ ಲೋಕಾರ್ಪಣೆ

ಕಳೆದ ಶತಮಾನದ ಆರಂಭ ಕಾಲದಲ್ಲಿ ಹುಟ್ಟಿಕೊಂಡು ಮುಂದೆ ತಿಂಗಳಾಯ, ಕೆಮ್ತೂರು ಮುಂತಾದವರಿಂದ ಬೆಳೆದು ಈ ಕಾಲದ ನೂರಾರು ನಾಟಕಕಾರರಿಂದ ಸಾವಿರಾರು ನಾಟಕ ಪ್ರದರ್ಶನಗಳವರೆಗೆ ಬೆಳೆದುನಿಂತ ತುಳುರಂಗ ಭೂಮಿಯು ಇತಿಹಾಸ ವೈವಿಧ್ಯಮಯವಾಗಿದೆ. ಈ ಇತಿಹಾಸವನ್ನು ಸುಮಾರು 35 ವರ್ಷಗಳಿಂದ ಶೋಧನೆ ಮಾಡುತ್ತಾ ಮುದ್ದುಮೂಡು ಬೆಳ್ಳೆಯವರು ಸಿದ್ಧಪಡಿಸಿದ ಗ್ರಂಥ ‘ತುಳುನಾಟಕ ಪರಂಪರೆ’ ಇಂತಹ ಅಸಾಧಾರಣ ಸಚಿತ್ರ ಇತಿಹಾಸ ಗ್ರಂಥವನ್ನು ರಚಿಸಿದ ಲೇಖಕರನ್ನೂ, ಪ್ರಕಟಿಸಿದ ತುಳುಸಾಹಿತ್ಯ ಅಕಾಡೆಮಿಯನ್ನೂ ಅಭಿನಂದಿಸುತ್ತೇನೆ’ ಎಂದು ವಿಮರ್ಶಕ ಪ್ರೊ. ಮುರಳೀಧರ ಉಪಾಧ್ಯ ಹಿರಿಯಡಕ ನುಡಿದರು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಚಾವಡಿಯಲ್ಲಿ ಇತ್ತೀಚೆಗೆ (ಏಪ್ರಿಲ್ 27ರಂದು) ಜರಗಿದ ಕೃತಿ ಬಿಡುಗಡೆ ಸಂದರ್ಭ ಅವರು ಮಾತನಾಡುತ್ತಿದ್ದರು. ಅಧ್ಯಕ್ಷತೆ ವಹಿಸಿದ ಅಕಾಡೆಮಿ ಅಧ್ಯಕ್ಷ ಶ್ರೀ ಎಂ.ಸಿ. ಭಂಡಾರಿಯವರು ‘ಈ ತುಳುರಂಗಭೂಮಿ ಇತಿಹಾಸದ ಗ್ರಂಥ ಪ್ರಕಟಣೆಯು ತುಳು ಅಕಾಡೆಮಿಗೆ ಹೆಮ್ಮೆ ಅಭಿಮಾನದ ವಿಷಯವಾಗಿದೆ’ ಎಂದರು.

ಇದೇ ಸಂದರ್ಭದಲ್ಲಿ ಕೆ. ಲಲಿತಾ ರೈಯವರ ‘ಬೋಂಟೆ ದೇರೂಂಡು’ ತುಳು ಕಾದಂಬರಿಯ ಕನ್ನಡಾನುವಾದ ‘ಶಿಕಾರಿ’ (ಅನುವಾದಕಿ ಪೂರ್ಣಿಮಾ ಮಾಧವ)ಇದನ್ನು ಡಾ. ಜ್ಯೋತಿ ಚೇಳ್ಯಾರು ಪರಿಚಯಿಸಿದರು.

ಗ್ರಂಥಕರ್ತ ಮುದ್ದು ಮೂಡುಬೆಳ್ಳೆ, ಲಲಿತಾ ರೈ, ಪೂರ್ಣಿಮಾ ಮಾಧವ, ಅಕಾಡೆಮಿ ರಿಜಿಸ್ಟ್ರಾರ್ ಕೆ ಚಂದ್ರಹಾಸ ರೈ ಉಪಸ್ಥಿತರಿದ್ದರು. ಮಲ್ಲಿಕಾ ರಂಗಗೀತೆಗಳನ್ನು ಹಾಡಿದರು. ಪ್ರಭಾಕರ ನೀರುಮಾರ್ಗ ಸ್ವಾಗತಿಸಿದರು. ಸುಧಾ ನಾಗೇಶ್ ಕಾರ್ಯಕ್ರಮ ನಿರ್ವಹಿಸಿದರು.



**ಲೇಖಕರು :** ಮುದ್ದು ಮೂಡುಬೆಳ್ಳೆ
**ಪ್ರಕಾಶಕರು:** ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
**ಪುಟಗಳು :** 308, ಪ್ರಕಟಣೆ: 2019, ಬೆಲೆ: ರೂ 400/–

‘ತುಳುನಾಟಕ ಪರಂಪರೆ ಗ್ರಂಥ’ವು ಆಕಾಶವಾಣಿಯ ‘ಸ್ವರಮಂಟಮೆ’ ಕಾರ್ಯಕ್ರಮದಲ್ಲೂ ಮೇ 4 ಶನವಾರದಂದು ಪರಿಚಯಿಸಲ್ಪಟ್ಟಿತು. ಪ್ರೊ. ಬಿ.ಎ. ವಿವೇಕ ರೈ, ರಘು ಇಡ್ಕಿದು, ತುಳು ನಾಟಕರಂಗದ ವಿಜಯಕುಮಾರ್ ಕೊಡಿಯಾಲ್‌ಬೈಲ್, ರೋಹಿದಾಸ್ ಕದ್ರಿ, ಸರೋಜಿನಿ ಶೆಟ್ಟಿ, ವಿ.ಜಿ.ಪಾಲ್, ಸಾ.ದಯಾ ಮತ್ತಿತರರು ಪಾಲ್ಗೊಂಡರು. ಡಾ. ಸದಾನಂದ ಪೆರ್ಲ ನಿರ್ವಹಿಸಿದರು. ಆತ್ಮಶಕ್ತಿ ಬಳಗದ ಪತ್ರಿಕೆಯ ಉಪಸಂಪಾದಕರೂ ಆಗಿರುವ ಮುದ್ದುಮೂಡುಬೆಳ್ಳೆ ಇತ್ತೀಚೆಗೆ ಜರಗಿದ ಕಾಪು ತಾಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು.

# ಪರೀಕ್ಷೆಗೊಂದು ಹೊಸ ರೂಪ ಹುಡುಕಬೇಕು

✍ ಬಿ.ಎಂ.ರೋಹಿಣಿ,
ನಿವೃತ್ತ ಶಿಕ್ಷಕಿ, ಸಾಹಿತಿ



**ಕ**ಳೆದ ವಾರ ಪತ್ರಿಕೆಯಲ್ಲಿ ಬಂದ ಸುದ್ದಿಯನ್ನು ಕೇಳಿ ಶಿಕ್ಷಣಾಸಕ್ತರು, ಶಿಕ್ಷಣ ತಜ್ಞರು ನಮ್ಮ ವ್ಯವಸ್ಥೆಯ ಬಗ್ಗೆ ವಿಮರ್ಶೆ ಮಾಡುತ್ತಾ ಒಂದಷ್ಟು ಸಲಹೆಗಳನ್ನು ನೀಡಿದ್ದನ್ನು ಗಮನಿಸಿರಬಹುದು ಎಂದು ನಾನು ಭಾವಿಸಿದ್ದೇನೆ. ಎಸ್.ಎಸ್.ಎಲ್.ಸಿ.ಪರೀಕ್ಷೆ ನಡೆಯುತ್ತಿರುವಾಗ ಸಾಮೂಹಿಕ ನಕಲು ಹೊಡೆಯುವುದಕ್ಕೆ ಶಾಲೆಯ ಶಿಕ್ಷಕರೇ ಪ್ರೋತ್ಸಾಹ ನೀಡಿದ್ದಲ್ಲದೆ ಅದನ್ನು ತಡೆಯಲು ಬಂದವರಿಗೆ ಬೆದರಿಕೆ ಹಾಕಿ ಹೊರಗಟ್ಟಿದ್ದು 'ಬ್ರೇಕಿಂಗ್ ನ್ಯೂಸ್' ಆಗಿ ಪ್ರಚಾರ ಪಡೆಯಿತು. ನಕಲು ಹೊಡೆಯುವುದು ಹೊಸ ಸುದ್ದಿಯೇನಲ್ಲ. ಪರೀಕ್ಷೆ ಎಂಬ ವ್ಯವಸ್ಥೆ ಪ್ರಾರಂಭವಾದಂದಿನಿಂದಲೂ ನಕಲು ಹೊಡೆಯುವ ನಾನಾ ತಂತ್ರಗಳನ್ನು ಜಾಣರಾದ ಮಕ್ಕಳೇ ಆವಿಷ್ಕಾರ ಮಾಡಿದ್ದಾರೆ. ಯಾವಾಗ ಈ ಸಾರ್ವಜನಿಕ ಶಿಕ್ಷಣ ಇಲಾಖೆ ಪರೀಕ್ಷೆ ಎಂಬ ಮಾಪನದ ಮೂಲಕ ಕಲಿಕೆಯನ್ನು ಅಳೆಯಲು ಪ್ರಾರಂಭ ಮಾಡಿತೋ ಅಂದಿನಿಂದಲೇ ಇದು ಮಕ್ಕಳನ್ನೂ ಶಿಕ್ಷಕರನ್ನೂ ಸಮಾನವಾಗಿ ಕಾಡುವ ಪೆಡಂಭೂತವಾಗಿ ಕಾಣಿಸಿಕೊಂಡಿದೆ. ಮಕ್ಕಳ ಬುದ್ಧಿವಂತಿಕೆಯನ್ನು ಮೂರು

> **ಸ್ಮರಣ ಶಕ್ತಿಯೊಂದೇ ಪರೀಕ್ಷೆಯ ಮಾಪನವಾಗಬಾರದು ಎಂಬ ಸತ್ಯದ ಅರಿವಾಗಿದೆ. ವಿದ್ಯಾರ್ಥಿಯ ಕೌಶಲಗಳು ಸಮಯಸ್ಫೂರ್ತಿ ಸೃಷ್ಟಿ ಶೀಲ ಗುಣಗಳೂ ಪ್ರತಿಭೆಗಳೂ ಮಾಪನಗಳಾಗಬೇಕು ಎಂಬುದು ಶಿಕ್ಷಣ ತಜ್ಞರ ಮನವಿಯಾಗಿದೆ.**

ಗಂಟೆಯಲ್ಲಿ ಕಕ್ಕಿದ ಉತ್ತರಗಳು ತೂಕ ಮಾಡುತ್ತದೆಂಬುದೇ ಅವಾಸ್ತವ. ಮಾತ್ರವಲ್ಲ ಉತ್ತಮ ಅಂಕ ಪಡೆದವನೇ ಸರ್ವಶ್ರೇಷ್ಠನೆಂಬ ತೀರ್ಮಾನವೂ ಅಸಮರ್ಪಕ ಎಂಬುದಕ್ಕೆ ನನ್ನ ಶಿಕ್ಷಕ ವೃತ್ತಿಯಲ್ಲಿ ಕಂಡಿದ್ದೇನೆ. ಮಾತ್ರವಲ್ಲ ನಮ್ಮ ಸುತ್ತು ಮುತ್ತಲ ಸಮಾಜದಲ್ಲೂ ಕನಿಷ್ಠ ಅಂಕ ಪಡೆದ ಪ್ರತಿಭಾವಂತರು ಶ್ರೇಷ್ಠ ವ್ಯಕ್ತಿಗಳಾಗಿ ಮೆರೆದುದನ್ನು ಕಂಡಿದ್ದೇನೆ. ಹತ್ತನೆಯ ತರಗತಿಯವರೆಗಿನ ವಿದ್ಯಾಭ್ಯಾಸದಲ್ಲಿ ಬಾಗಿಲುಗಳೇ ಇಲ್ಲದ ತರಗತಿಗಳಲ್ಲಿ ಕಲಿತ ಮಕ್ಕಳು ದಿಢೀರೆಂದು ಈ ಪರೀಕ್ಷೆಯ ಕಟ್ಟುನಿಟ್ಟಿಗೆ ಒಳಗಾಗುವಾಗ ಒತ್ತಡಕ್ಕೊಳಗಾಗುತ್ತಾರೆ. ತಮ್ಮ ಶಾಲೆಯ ಮಕ್ಕಳು ಹೆಚ್ಚು ಸಂಖ್ಯೆಯಲ್ಲಿ ಉತ್ತೀರ್ಣರಾಗಬೇಕೆಂಬ ಒತ್ತಡ ಶಿಕ್ಷಕರಿಗೂ ಇದೆ. ಪರೀಕ್ಷೆಗೆ ಚೆನ್ನಾಗಿ ತಯಾರಿ ಮಾಡದ ಮಕ್ಕಳು ಮಾಡಿಸದ ಶಿಕ್ಷಕರು ಇಂತಹ ನಕಲು ಕೆಲಸಕ್ಕೆ ಪ್ರಯತ್ನಿಸುತ್ತಾರೆ. ಇಷ್ಟೇ ಅಲ್ಲ ಒಬ್ಬನ ಹೆಸರಿನಲ್ಲಿ ಇನ್ನೊಬ್ಬನು ಪರೀಕ್ಷೆಗೆ ಬರೆದ ಘಟನೆಯೂ ನನ್ನ ಕಾಲದಲ್ಲಿ ನಡೆದದ್ದು ನೆನಪಿದೆ. ಪರೀಕ್ಷೆ ಎಂದರೇನೇ ಮಕ್ಕಳಿಗೆ, ಹೆತ್ತವರಿಗೆ ಚಳಿಜ್ವರ ಬರುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದನ್ನೆಲ್ಲಾ ಗಮನಿಸಿದಾಗ ನಮಗೆ ಇಂತಹ ವ್ಯವಸ್ಥೆ ಬೇಕೇ? ಪರೀಕ್ಷೆ ಎಂಬ ವ್ಯವಸ್ಥೆಗೆ ಬೇರೆ ಏನಾದರೂ ಪರ್ಯಾಯ ವ್ಯವಸ್ಥೆ ಮಾಡಲು ಸಾಧ್ಯವೇ? ಎಂಬ ಬಗ್ಗೆಯೂ ಶಿಕ್ಷಣ ತಜ್ಞರಲ್ಲಿ ಚರ್ಚೆಗಳಾಗುತ್ತಿವೆ. ಇದೇ ವ್ಯವಸ್ಥೆ ಮುಂದುವರಿದು ಕೆಲವು ಕಡೆಗಳಲ್ಲಿ ಇಂತಹ ಅಡ್ಡದಾರಿಯಿಂದ ಸಾಗುವವರ ಸಂಖ್ಯೆ ಹೆಚ್ಚಾದಾಗ ಪ್ರಾಮಾಣಿಕವಾಗಿ ಪ್ರಯತ್ನಿಸಿ, ಉತ್ತರಿಸಿದ ಮಕ್ಕಳಿಗೆ ನಾವು ಅನ್ಯಾಯ ಮಾಡಿದಂತೆ ಆಗುತ್ತದಲ್ಲವೇ? ಮೊನ್ನೆಯ ಘಟನೆಯಲ್ಲಿ ಶಿಕ್ಷಕರು ತಾವು ಮಾಡಿದ ಈ ಅಧರ್ಮವು ದಾಖಲಾಗಬಾರದೆಂದು ಸಿ.ಸಿ.ಕೆಮರಾಗಳನ್ನು ನಿಷ್ಕ್ರಿಯಗೊಳಿಸಿದ ಸುದ್ದಿ ಓದಿ ದಂಗಾಗುವ ಸರದಿ ನಮ್ಮದು. ಮುಂದಿನ ವರ್ಷಗಳಲ್ಲಿ ಪರೀಕ್ಷೆ ಎಂಬ ವ್ಯವಸ್ಥೆಗೆ ಏನಾದರೂ ಅರ್ಥವಿದೆಯೇ?

ಹಿಂದೆಯೂ ಕೆಲವು ಶಾಲೆಗಳಲ್ಲಿ ಪರೀಕ್ಷೆ ಬರೆಯುವ ಮಕ್ಕಳಿಗೆ ನಕಲು ಹೊಡೆಯಲು ಪ್ರೋತ್ಸಾಹಿಸಿದ್ದಾರೆಂಬುದು ಉತ್ತರ ಪತ್ರಿಕೆ ತಿದ್ದುವಾಗ ಗಮನಕ್ಕೆ ಬರುತ್ತಿತ್ತು. ಹೇಳಿ ಕೊಡುವವರು ನೀಡಿದ ತಪ್ಪು ಉತ್ತರಗಳು ಸಾಮೂಹಿಕವಾಗಿ ಎಲ್ಲರ ಉತ್ತರ ಪತ್ರಿಕೆಗಳಲ್ಲಿ ಇರುತ್ತಿದ್ದುದು ಅದಕ್ಕೆ ಸಾಕ್ಷಿಯಾಗಿತ್ತು. ನಕಲು ಹೊಡೆಯಲು ಪ್ರೋತ್ಸಾಹಿಸುವುದಾದರೆ ಕ್ಲಾಸಿನಲ್ಲಿ ಪಾಠ ಮಾಡುವ ಅಗತ್ಯ ಶಿಕ್ಷಕನಿಗೂ ಇಲ್ಲ. ಕಲಿಯಬೇಕೆಂಬ ಅಗತ್ಯ ಮಕ್ಕಳಿಗೂ ಇಲ್ಲ. ಅಡ್ಡ



ದಾರಿಯಿಂದ ದೊಡ್ಡ ದೊಡ್ಡ ಪದವಿಗಳನ್ನೂ ಡಾಕ್ಟರೇಟ್‌ಗಳನ್ನೂ ಗಳಿಸಬಹುದಾದ ಒಳದಾರಿಗಳಿರುವಾಗ ಈ ಪರೀಕ್ಷೆ ಎಂಬ ವ್ಯವಸ್ಥೆಯನ್ನು ಉಳಿಸಬೇಕೆ ಎಂಬ ಪ್ರಶ್ನೆ ಏಳುತ್ತದೆ. ಶಿಕ್ಷಕರು ನಕಲು ತೆಗೆಯಲಿಕ್ಕೆ ಪ್ರೋತ್ಸಾಹಿಸುವುದಕ್ಕೆ ಪುರಾತನ ಚರಿತ್ರೆಯೇ ಇದೆ. ಶಾಲಾ ಇನ್ಸ್‌ಪೆಕ್ಟರ್‌ನಿಂದ ಮೆಚ್ಚುಗೆ ಪಡೆಯಲು ಬಾಲಕ

→→→

➔➔➔

ಮೋಹನದಾಸ ಕರಮಚಂದ ಗಾಂಧೀಜಿಗೋ ಶಿಕ್ಷಕರು ಪ್ರೋತ್ಸಾಹಿಸಿದಂತೆ ಶಿಕ್ಷಕರ ಮಾತನ್ನು ಪಾಲನೆ ಮಾಡದ ಗಾಂಧೀಜಿ ಈಗಿನವರಿಗೆ ನಾಲಾಯಕ್ಕು ಹುಡುಗನಾಗಿ ಕಂಡು ಬಂದರೆ ಆಶ್ಚರ್ಯವಿಲ್ಲ. ಎರಡು ಶತಮಾನಗಳ ಹಿಂದೆ ಈಸ್ಟ್ ಇಂಡಿಯಾ ಕಂಪೆನಿಯವರು ಇಲ್ಲಿ ಶಾಲೆಗಳನ್ನು ಸ್ಥಾಪಿಸಿ ತಮ್ಮ ಆಡಳಿತಕ್ಕೆ ಸಹಾಯಕರಾಗುವ ಗುಮಾಸ್ತರನ್ನು ನಿರ್ಮಾಣ ಮಾಡಿದ್ದು ಹಳೆಯ ಕತೆ. ಆ ಕಾಲದಲ್ಲಿ ಮೊತ್ತ ಮೊದಲು ಶಾಲೆಗಳಿಗೆ ಪ್ರವೇಶ ಪಡೆದವರು ಮೇಲ್ ವರ್ಗದವರು. ಅವರಿಗೂ ಪ್ರಾರಂಭದಲ್ಲಿ ಇಂಗ್ಲೀಷ್ ಕಬ್ಬಿಣದ ಕಡಲೆಯೇ ಆಗಿತ್ತು. ಆಗ ಕಂಪನಿ ಸರಕಾರ ಅವರಿಗೆ ಗ್ರೇಸ್ ಮಾರ್ಕ್ಸ್ ಹಾಕಿ ಪಾಸ್ ಮಾಡಿ ಕೆಲಸ ಕೊಡಿಸುತ್ತಿದ್ದರೆಂದು ಆ ಕಾಲದ ದಾಖಲೆಗಳು ತಿಳಿಸುತ್ತವೆ. ಒಂದಿಪ್ಪತ್ತು ಮೂವತ್ತು ವರ್ಷಗಳ ಹಿಂದೆ ನನ್ನ ಕಾಲದಲ್ಲೂ ಮಕ್ಕಳನ್ನು ವಾರ್ಷಿಕ ಪರೀಕ್ಷೆಯಲ್ಲಿ ಪಾಸು ಮಾಡಲು ನಾವೂ ಏನೇನೋ ತಂತ್ರಗಳನ್ನು ಅನುಸರಿಸುತ್ತಿದ್ದುದು ನೆನಪಾಗುತ್ತದೆ. ಲೆಕ್ಕ, ಇಂಗ್ಲೀಷ್, ವಿಜ್ಞಾನ ಪಾಠಗಳಲ್ಲಿ ಮಕ್ಕಳು ಕಡಿಮೆ ಅಂಕ ಪಡೆಯುತ್ತಿದ್ದುದು ಸಾಮಾನ್ಯ. ಕೊನೆಯ ಪರೀಕ್ಷೆಯಲ್ಲಿ ಎಲ್ಲಾ ಪಾಠಗಳಲ್ಲಿ ಪಾಸ್ ಮಾರ್ಕ್ಸ್ ಪಡೆಯಲೇಬೇಕೆಂಬ ನಿಯಮವಿದೆ. ಉಳಿದ ಪಾಠಗಳಲ್ಲಿ ಪಾಸಾದ ಮಕ್ಕಳನ್ನು ಈ ಪಾಠಗಳಲ್ಲಿ ಮೇಲೆತ್ತಿ ಹಾಕಬೇಕಾದರೆ ನಾವು ಏನೇನೋ ಕಸರತ್ತುಗಳನ್ನು ಮಾಡಬೇಕಿತ್ತು. ಇಲ್ಲಿ ಮಕ್ಕಳಿಗೆ ಅನ್ಯಾಯವಾಗದಿರಲಿ ಎಂಬ ಕಾಳಜಿ ಪ್ರಧಾನವಾಗಿತ್ತು. ನಾನು ಸೇವೆ ಸಲ್ಲಿಸುತ್ತಿದ್ದ ಕಾನ್ವೆಂಟ್ ಶಾಲೆಯಲ್ಲಿ ಆ ಹಿಂದುಳಿದ ಮಕ್ಕಳು ಯಾವ ಪಾಠಗಳಲ್ಲಿ ಸೋತಿದ್ದರೋ ಆ ಪಾಠದಲ್ಲಿ ಹೆಚ್ಚಿನ ತರಬೇತಿ ನೀಡಿ ಅವರನ್ನು ಪ್ರೋತ್ಸಾಹಿಸುವ ಕೆಲಸ ಮಾಡಿದ್ದು ನೆನಪಾಗುತ್ತದೆ. ಈಗಲೂ ಅಂತಹ ಅನಿವಾರ್ಯತೆ ಶಿಕ್ಷಕರಿಗೆ ಉಂಟಾಗಬಹುದು ಎಂದು ನನ್ನ ಭಾವನೆ. ಇದು ಮಕ್ಕಳ ದೃಷ್ಟಿಯಿಂದ ಒಳ್ಳೆಯದೇ ಆದರೂ ಜಾಣ ಮಕ್ಕಳ ದೃಷ್ಟಿಯಿಂದ ನೋಡಿದರೆ ನಮ್ಮದು ಅಡ್ಡದಾರಿಯಲ್ಲವೇ? ಇದನ್ನೆಲ್ಲಾ ಯೋಚಿಸಿದಾಗ ಈ ಪರೀಕ್ಷೆ ಎಂಬ ವ್ಯವಸ್ಥೆ ಬಾಲ್ಯದಿಂದಲೇ ಮಕ್ಕಳನ್ನು ಭಯ ಭೀತರನ್ನಾಗಿ ಮಾಡುತ್ತಿದೆ. ವಿಚಿತ್ರವೆಂದರೆ ಇಂಗ್ಲೀಸ್ ಮಾಧ್ಯಮದಲ್ಲಿ ಕಲಿಯುತ್ತಿರುವ ಕೆ.ಜಿ.ಕ್ಲಾಸಿನ ಮಗುವಿನ ತಾಯಿಯೊಬ್ಬರು ಮಗುವಿಗೆ ಪರೀಕ್ಷೆ ಎಂದು ತಾನೂ ಹೆದರಿ ಮಗುವನ್ನೂ ಹೆದರಿಸಿ ವಿಚಿತ್ರವಾದ ಮಾನಸಿಕ ತಲ್ಲಣಗಳಿಂದ ನರಳುವಂತ ಸ್ಥಿತಿಯನ್ನು ಕಂಡು ಬೆರಗಾಗಿದ್ದೇನೆ. ಈಗ ಪ್ರತೀ ಕುಟುಂಬಗಳಲ್ಲಿ ಪರೀಕ್ಷೆಗೆ ಬರೆಯುವ ಮಕ್ಕಳಿದ್ದರೆ ಆ ವಠಾರದಲ್ಲೇ 'ಕರ್ಫ್ಯೂ' ಜಾರಿಯಾದಂತೆ ಅಘೋಷಿತ ಶಾಸನಗಳು ಜಾರಿಗೊಂಡಿರುತ್ತದೆ. ಮಕ್ಕಳೂ, ಶಿಕ್ಷಕರೂ, ಹೆತ್ತವರೂ ಮಾನಸಿಕ ಏರು ಪೇರುಗಳಿಗೊಳಗಾಗಿ ಯಾತನೆ ಪಡುವುದನ್ನು ಕಂಡಾಗ ಇಂತಹ ಪರೀಕ್ಷೆಗೆ ಪರ್ಯಾಯ ವ್ಯವಸ್ಥೆ ಹುಡುಕುವ ಅವಶ್ಯಕತೆ ಇದೆ ಎಂದು ಅನಿಸುತ್ತಿಲ್ಲವೇ?

ಕಳೆದ ವರ್ಷ ಪರೀಕ್ಷೆಯನ್ನು ಪುಸ್ತಕ ನೋಡಿಯೇ ಬರೆಯುವ ವ್ಯವಸ್ಥೆಯನ್ನು ಜಾರಿಗೊಳಿಸಿದರೆ ಹೇಗೆ ಎಂಬ ಮಾತು ಶಿಕ್ಷಣ ಮಂತ್ರಿಗಳಿಂದ ಘೋಷಣೆಯಾಗಿತ್ತು. ಪುಸ್ತಕ ನೋಡಿ ಉತ್ತರಿಸುವುದಕ್ಕೆ ಈಗಿನ ಪಠ್ಯ ಪುಸ್ತಕಗಳು, ಪಾಠ ಮಾಡುವ ಕ್ರಮಗಳೂ ಬದಲಾಗಬೇಕಾದ ಅಗತ್ಯವಿದೆ. ಒಂದಷ್ಟು ಪೂರ್ವ ತಯಾರಿ ಮಾಡಬೇಕಾಗಿದೆ. ಪ್ರಯೋಗಾತ್ಮಕವಾಗಿ ವಿಮರ್ಶೆ ಮಾಡಬೇಕಾಗಿದೆ. ಸರಕಾರಿ ನೌಕರರು ತೆರೆದ ಪುಸ್ತಕದ ಪರೀಕ್ಷೆಗೆ ಹಾಜರಾಗಿ ಉತ್ತಮ ಅಂಕಗಳಿಸುವುದಕ್ಕೆ ಪುಸ್ತಕದ ಪ್ರತೀ ಪುಟಪುಟಗಳ ಓದು ಮತ್ತು ಸ್ಮರಣ ಶಕ್ತಿಯೇ ಆಧಾರವಾಗಿದೆ. ಹಾಗೆಂದು ಮಕ್ಕಳಿಗೆ ಈ ಕ್ರಮ ಅಳವಡಿಸುವುದಕ್ಕೆ ಶಿಕ್ಷಣ ತಜ್ಞರು ಹಸಿರು ನಿಶಾನೆ ತೋರಿಸಿಲ್ಲ. ಪ್ರಪಂಚದಾದ್ಯಂತ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಪರೀಕ್ಷೆಯ ಒತ್ತಡಗಳನ್ನು ಕಡಿಮೆ ಮಾಡುವ ಬಗ್ಗೆ ಹೊಸ ಹೊಸ ತಂತ್ರಗಳನ್ನು ಸಂಶೋಧನೆ ಮಾಡುತ್ತಿದ್ದಾರೆ. ಸ್ಮರಣ ಶಕ್ತಿಯೊಂದೇ ಪರೀಕ್ಷೆಯ ಮಾಪನವಾಗಬಾರದು ಎಂಬ ಸತ್ಯದ ಅರಿವಾಗಿದೆ. ವಿದ್ಯಾರ್ಥಿಯ ಕೌಶಲಗಳು ಸಮಯಸ್ಫೂರ್ತಿ ಸೃಷ್ಟಿ ಶೀಲ ಗುಣಗಳೂ ಪ್ರತಿಭೆಗಳೂ ಮಾಪನಗಳಾಗಬೇಕು ಎಂಬುದು ಶಿಕ್ಷಣ ತಜ್ಞರ ಮನವರಿಯಾಗಿದೆ. ಅದನ್ನು ಒತ್ತಡರಹಿತವಾಗಿ ಮಾಪನ ಮಾಡುವಂತಹ ವ್ಯವಸ್ಥೆ ಮುಂದಿನ ವರ್ಷಗಳಲ್ಲಿ ಜಾರಿಯಾಗಬಹುದೆಂದು ನಾನು ನಿರೀಕ್ಷಿಸುತ್ತೇನೆ. ●

T.B. Karkera
Cell: 98450 85577
Ph : 0824-24922050
RTTC
Rishikesh
Travel & Transport Corporation
Transport Contractors & Water Suppliers
B-1/2, Om Nagar, Pipe Line Road,
off. Sahar Road
Andheri (East), Mumbai - 400 099

ಮಾಹಿತಿ

## ಕರ್ನಾಟಕಕ್ಕೆ ಎರಡು ಕೇಂದ್ರೀಯ ವಿದ್ಯಾಲಯಗಳು

ಕರ್ನಾಟಕದಲ್ಲಿ ಎರಡು ಕೇಂದ್ರೀಯ ವಿದ್ಯಾಲಯಗಳನ್ನು ಆರಂಭಿಸಲು ಕೇಂದ್ರ ಸರಕಾರ ನಿರ್ಧರಿಸಿದೆ.

1. ಬೆಂಗಳೂರಿನ ಯಶವಂತಪುರ.
2. ಬೆಳಗಾವಿಯ ಸವಲಂಗಾ

# ಪರೀಕ್ಷೆ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಸರಳ ಯೋಗ ಮುದ್ರೆಗಳು



✍ 'ಯೋಗರತ್ನ' ಗೋಪಾಲಕೃಷ್ಣ ದೇಲಂಪಾಡಿ
ನಿವೃತ್ತ ಸೀನಿಯರ್ ಹೆಲ್ತ್ ಇನ್ಸ್‌ಪೆಕ್ಟರ್,
ಅಂತರರಾಷ್ಟ್ರೀಯ ತೀರ್ಪುಗಾರರು
ಮೊ: 9448394987

**ಸಮಯವನ್ನು ಯೋಗಕ್ಕಾಗಿ ವಿನಿಯೋಗಿಸಿದಲ್ಲಿ ಆರೋಗ್ಯ ರಕ್ಷಣೆಯ ಜೊತೆಗೆ ದೃಢತೆ, ನೆಮ್ಮದಿ ಲಭಿಸಿ ಲವಲವಿಕೆಯಿಂದ ಇರಬಹುದು. ಯೋಗವನ್ನು ಶಿಸ್ತುಬದ್ಧವಾಗಿ, ಕ್ರಮವತ್ತಾಗಿ ಉಸಿರಿನ ಗತಿಯೊಂದಿಗೆ ಗುರು ಮುಖೇನನೇ ಕಲಿತು ಅಭ್ಯಾಸ ಮಾಡಬೇಕು.**



ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರುವ ಸಂದರ್ಭದಲ್ಲಿ ಮನಸ್ಸಿಗೆ ಒತ್ತಡ ಆಗುತ್ತಿರುವುದು ಕಂಡು ಬರುತ್ತದೆ. ಪರೀಕ್ಷೆಗೆ ತುಂಬಾ ತಯಾರಿ ನಡೆಸಬೇಕಾಗುತ್ತದೆ. ಎಲ್ಲಾ ಸಾಧನೆಗೆ ಸಾಕಷ್ಟು ಸಿದ್ಧತೆ, ತಯಾರಿ ನಡೆಸಬೇಕಾಗುತ್ತದೆ. ಹೆಚ್ಚಿನ ಅಂಕ ಗಳಿಸಬೇಕಾದರೆ ತುಂಬಾ ಸಾಧನೆ ಮಾಡಬೇಕಾಗುತ್ತದೆ. ಇದಕ್ಕೆ ಏಕಾಗ್ರತೆಯ ಅಗತ್ಯತೆ ಇದೆ. ಕೆಲವೊಮ್ಮೆ ಪರೀಕ್ಷೆ ಸಂದರ್ಭದಲ್ಲಿ ಸಹಜವಾಗಿ ನಿದ್ರೆ, ಶಕ್ತಿಯ ನಷ್ಟ, ಏಕಾಗ್ರತೆಯ ಕೊರತೆ, ಒತ್ತಡ, ಕೆಲವರಿಗೆ ಭಯ ಇತ್ಯಾದಿ ಉಂಟಾಗುತ್ತದೆ. ಈಗಿನ ಮುಂದುವರಿದ ಸ್ಪರ್ಧಾತ್ಮಕ ಯುಗದಲ್ಲಿ ಸಾಮಾನ್ಯವಾಗಿ ವಿದ್ಯಾರ್ಥಿಗಳು 95 ರಿಂದ 99 ಪರ್ಸಂಟ್ ಅಂಕಗಳಿಸಿದರೆ ಮಾತ್ರ ಮುಂದಿನ ಕೋರ್ಸುಗಳಿಗೆ ಸುಲಭವಾಗುತ್ತದೆ.

ಈಗಿನ ಆಧುನಿಕ ವೇಗದ ಒತ್ತಡ ಯುಗದಲ್ಲಿ ಮನಸ್ಸಿಗೆ ಗೊಂದಲವಾಗುವ ಪರಿಸರ ಕೆಲವೊಮ್ಮೆ ಸೃಷ್ಟಿಯಾಗುತ್ತದೆ. ಹಾಗೂ ಸದ್ವಿಚಾರಗಳ ಕೊರತೆಯು ಕಂಡುಬರುತ್ತದೆ. ಚಿತ್ತಾಕರ್ಷಕ ಆಹಾರ ಕ್ರಮಗಳು ಹೆಚ್ಚಾಗಿವೆ. ಇದರಿಂದ ಓದಿನ ಸಾಧನೆಗೆ ತೊಡಕಾಗುತ್ತದೆ. **ವಿದ್ಯಾರ್ಥಿಗಳ ಮುಖ್ಯ ಕರ್ತವ್ಯ ವಿದ್ಯಾರ್ಜನೆ, ಜ್ಞಾನ ಸಂಪಾದನೆ, ಮತ್ತು ಉತ್ತಮ ಆರೋಗ್ಯ ಕಾಪಾಡಿಕೊಳ್ಳುವುದು.**

ವಿದ್ಯಾರ್ಥಿಗಳ ಜೀವನದಲ್ಲಿ ಎಷ್ಟು ಜ್ಞಾನ ಸಂಪಾದನೆಯಾಗುತ್ತದೋ ಅಷ್ಟು ಲಾಭದಾಯಕ. ವಿದ್ಯಾರ್ಥಿಗಳಿಗೆ ಏಕಾಗ್ರತೆ ಸಾಧಿಸಲು ಯೋಗ ಬಹಳ ಸಹಕಾರಿಯಾಗುತ್ತದೆ ಎಂದು ವೈಜ್ಞಾನಿಕವಾಗಿ ದೃಢಪಟ್ಟಿದೆ. ಈಗಿನ ದಿನಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಬಂದಾಗ ಮಾತ್ರ ಹೆಚ್ಚು ಓದುತ್ತಾರೆ. ಸಾಮಾನ್ಯವಾಗಿ ರಾತ್ರಿ 8 ಗಂಟೆಯಿಂದ ಬೆಳಗಿನ ಜಾವ 2 ಗಂಟೆ ತನಕ ಓದುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದೆ. ಬದಲಾಗಿ 10 ರಿಂದ 4 ಗಂಟೆಯವರೆಗೆ ನಿದ್ರಿಸಿ ಅನಂತರ ಬ್ರಾಹ್ಮೀ ಮುಹೂರ್ತದಲ್ಲಿ ಬೆಳಿಗ್ಗೆ 4 ರಿಂದ 8 ಗಂಟೆಯ ತನಕ ಓದುವುದು ಉತ್ತಮ. ನಿದ್ರೆ ಬಿಟ್ಟು ಓದುವಾಗ ವಿದ್ಯಾರ್ಥಿಗಳಿಗೆ ಆಯಾಸ, ಬಳಲಿಕೆಯಿಂದಾಗಿ ಓದಿಗೆ ಏಕಾಗ್ರತೆ ಲಭಿಸುವುದು.



ಪರೀಕ್ಷೆಯ ಸಮಯದಲ್ಲಿ ಹೆಚ್ಚಿನ ವಿದ್ಯಾರ್ಥಿಗಳಿಗೆ ಮೊದಲು ಅಧ್ಯಯನ ಮಾಡಿದ್ದನ್ನು ನೆನಪಿಟ್ಟುಕೊಳ್ಳುವುದು ಯಾ ನೆನಪಿಸಿಕೊಳ್ಳುವುದು ಕಷ್ಟಕರವೆಂದು ಕಂಡು ಬರುತ್ತದೆ. ಇದಕ್ಕೆಲ್ಲಾ ಪರಿಹಾರ ಯೋಗ, ಮುದ್ರೆಗಳು. ಅಧ್ಯಯನ ಮಾಡಿದ ಎಲ್ಲವನ್ನೂ ನೆನಪಿನಲ್ಲಿಡಲು ಯೋಗ, ಧ್ಯಾನ, ಮುದ್ರೆಗಳು ಸಹಕಾರಿ. ಮುದ್ರ ತೆರಪಿ (ಚಿಕಿತ್ಸೆ' ಎನ್ನುವುದು ಮತ್ತೊಂದು ಅನೌಷಧೀಯ ಚಿಕಿತ್ಸೆಯಾಗಿದ್ದು ಯಾವುದೇ ತೊಂದರೆಯಿಲ್ಲದೆ ಸಹಾಯಮಾಡುತ್ತದೆ. ಮುದ್ರೆಗಳು (ಸರಿಯಾಗಿ ಹಸ್ತಮುದ್ರೆ) ಬೆರಳಿನ ಹಾಗೂ ಹೆಬ್ಬೆರಳಿನ ವಿವಿಧ ಭಂಗಿಗಳು. ಮುದ್ರ ಚಿಕಿತ್ಸೆಯಲ್ಲಿ, ಬೆರಳುಗಳನ್ನು ಹಾಗೂ ಹೆಬ್ಬೆರಳನ್ನು ವಿವಿಧ ರೀತಿಯಲ್ಲಿ ಹಿಡಿದುಕೊಂಡು ಹಾಗು ಧಾರಣೆಮಾಡಿ ಹಲವು ರೋಗಗಳಿಗೆ ಚಿಕಿತ್ಸೆಯನ್ನು ನೀಡಬಹುದು. ಕೈ ಬೆರಳುಗಳನ್ನು ವ್ಯವಸ್ಥಿತ ಭಂಗಿಯಲ್ಲಿ ಜೋಡಿಸುವ ಕ್ರಿಯೆಯೇ "ಮುದ್ರೆ". ನಮ್ಮ ದೇಹವು ಪಂಚಭೂತಗಳಿಂದ ರಚನೆಯಾಗಿದೆ. ಕೈಯಲ್ಲಿನ ಐದು ಬೆರಳುಗಳು ಪಂಚಭೂತಗಳನ್ನು ಪ್ರತಿನಿಧಿಸುತ್ತವೆ, ಹಾಗೂ ಪ್ರತಿಯೊಂದು ಬೆರಳು ತನ್ನದೇ ಆದ ಶಕ್ತಿ ಚೈತನ್ಯವನ್ನು ಹೊಂದಿದೆ. ಎಲ್ಲಾ ಬೆರಳುಗಳೂ ಚೇತನದಾಯಕ ಹಾಗೂ ಅವು ದೇಹಕ್ಕೆ ಹೊಸ ಚೈತನ್ಯವನ್ನು ತುಂಬುತ್ತವೆ. ಹೆಬ್ಬೆರಳು ಅಗ್ನಿ ತತ್ವ; ತೋರು ಬೆರಳು ವಾಯು, ಮಧ್ಯದ ಬೆರಳು ಆಕಾಶ; ಉಂಗುರದ ಬೆರಳು ಪೃಥ್ವಿ (ಭೂಮಿ); ಕಿರುಬೆರಳು ವರುಣನನ್ನು (ಜಲತತ್ವ) ಪ್ರತಿನಿಧಿಸುತ್ತವೆ. ಪಂಚಭೂತಗಳನ್ನು ಪ್ರತಿನಿಧಿಸುವ ಹೆಬ್ಬೆರಳಿನ ತುದಿಯನ್ನು ಆಯಾ ಬೆರಳುಗಳ ತುದಿಗೆ ಸ್ಪರ್ಶಿಸಿದಾಗ ಪಂಚತತ್ವಗಳು ಸಮತೋಲನ ಸ್ಥಿತಿಗೆ ಬರುತ್ತವೆ.

→→→

→→→



**ವಿದ್ಯಾರ್ಥಿಗಳು ಹೆಚ್ಚು ಹೊತ್ತು ಓದುವ ಸಂದರ್ಭದಲ್ಲಿ ಆಚರಿಸಬೇಕಾದ ಯೋಗ, ಮುದ್ರೆಗಳ ಸರಳ ಸೂತ್ರಗಳು:–**

ಮುಂಜಾನೆ 4 ರಿಂದ 6ರ ತನಕ ಓದುವ ಸಮಯ ಉತ್ತಮ. ಈ ಹೊತ್ತು ಮಿದುಳು ಹೆಚ್ಚು ಗ್ರಹಿಸುತ್ತದೆ ಎಂದು ವೈಜ್ಞಾನಿಕವಾಗಿ ದೃಢ ಪಟ್ಟಿದೆ.

ಬೆಳಿಗ್ಗೆ ಎದ್ದ ಕೂಡಲೇ ಶೌಚ ಮುಗಿಸಿ ಒಂದು ಲೋಟ ನೀರನ್ನು ಸೇವಿಸಿ. ಖಾಲಿ ಹೊಟ್ಟೆಯಲ್ಲಿ ಉಸಿರನ್ನು ಗಮನಿಸುವ ಯಾ ಸಾಮಾನ್ಯ ಉಸಿರಾಟವನ್ನು ಲೆಕ್ಕ ಹಾಕುವ ಧ್ಯಾನ ಮಾಡಿ (ಸುಮಾರು 1–200 ಸಾಮಾನ್ಯ ಉಸಿರನ್ನು ಲೆಕ್ಕ ಹಾಕಿ) ಇದರಿಂದ ಬಲು ಬೇಗನೆ ಶಾಂತಿಗೊಂಡು ಏಕಾಗ್ರತೆ ದೊರಕುತ್ತದೆ. ಯಾವುದಾದರೊಂದು ಆಸನವನ್ನು ಆಯ್ಕೆ ಮಾಡಿ ಬೆನ್ನು, ಕುತ್ತಿಗೆ ಶಿರಸ್ಸು ನೇರವಾಗಿಸಿ ಚಿನ್‌ಮುದ್ರೆಯಲ್ಲಿ ಧ್ಯಾನ ಮಾಡಿ.

ಚಿಕ್ಕ ಧ್ಯಾನ ಆದ ಮೇಲೆ ಸುಖಪ್ರಾಣಾಯಾಮವನ್ನು ಆರರಿಂದ ಒಂಬತ್ತು ಬಾರಿ ಅಭ್ಯಾಸ ನಡೆಸಿ (ಎರಡು ಮೂಗಿನ ಹೊಳ್ಳೆಗಳಿಂದ ದೀರ್ಘವಾಗಿ, ನಿಧಾನವಾಗಿ, ನಿರಂತರವಾಗಿ ಉಸಿರನ್ನು ತೆಗೆದುಕೊಂಡು ಹಾಗೇ ಅದೇ ಉಸಿರನ್ನು ಬಿಡಿ) ಅನಂತರ ಓದಲು ಶುರು ಮಾಡಿ. ಸಹಜವಾಗಿ ಏಕಾಗ್ರತೆ ದೊರಕುತ್ತದೆ.

ಬಿಡುವಿನ ವೇಳೆಯಲ್ಲಿ ದಿನದ ಯಾವುದೇ ಹೊತ್ತಿನಲ್ಲಿ ಅಭ್ಯಾಸ ನಡೆಸಬಹುದಾದ ಚಿನ್‌ಮುದ್ರೆ, ಹಕಿನಿಮುದ್ರೆ, ಪ್ರಾಣಮುದ್ರೆ ತಲಾ ಹತ್ತು ನಿಮಿಷ ಅಭ್ಯಾಸ ಮಾಡಿ, ಸಾಧ್ಯವಾದರೆ ಮುದ್ರೆಯೊಂದಿಗೆ ಮಂತ್ರವನ್ನು ಯಾ ಇಷ್ಟ ದೇವರನ್ನು ನೆನೆಸಿ. ಮುದ್ರೆಗಳನ್ನು ಯಾವುದೇ ಸ್ಥಿತಿಯಲ್ಲೂ ಮಾಡಬಹುದಾದರೂ ವಿಶೇಷವಾಗಿ ಪದ್ಮಾಸನ, ಸ್ವಸ್ತಿಕಾಸನ, ಸುಖಾಸನ ಅಥವಾ ವಜ್ರಾಸನ ಹಾಕಿ ಧ್ಯಾನಾವಸ್ಥೆಯಲ್ಲಿ ಕುಳಿತು ಮಾಡುವುದರಿಂದ ದೇಹಕ್ಕೆ ಹೆಚ್ಚಿನ ಚೈತನ್ಯ ಹಾಗೂ ಮನಸ್ಸಿಗೆ ನೆಮ್ಮದಿ ದೊರಕುತ್ತದೆ.

**ಮುದ್ರೆಗಳ ವಿವರಗಳು**

**ಚಿನ್‌ಮುದ್ರೆ ಯಾ ಜ್ಞಾನ ಮುದ್ರೆ:–** ಚಿನ್ ಎಂದರೆ ಸಂಸ್ಕೃತದಲ್ಲಿ ಪ್ರಜ್ಞೆ ಎಂಬ ಅರ್ಥ. ಮುದ್ರೆ ಎಂದರೆ ಮೊಹರು (Seal) ಎಂದರ್ಥ. ಮುದ್ರೆಗಳನ್ನು ವಿಶೇಷವಾಗಿ ಮನಸ್ಸಿನ ಭಾವನೆಗಳನ್ನು ಪ್ರಕಟಿಸಲು ಉಪಯೋಗಿಸಲಾಗುತ್ತದೆ. ಈ ಮುದ್ರೆ ದೇಹದಲ್ಲಿನ ಶಕ್ತಿಯ ಹರಿವನ್ನು ನಿಯಂತ್ರಿಸುತ್ತದೆ. ಇದು ಆಧ್ಯಾತ್ಮಿಕ ಸಂಕೇತ. ಕೆಲವು ಸಾಧಕರು ಬರೆಯುವಾಗ ತೋರು ಬೆರಳು ಮತ್ತು ಹೆಬ್ಬೆರಳಿನಲ್ಲಿ ಮಾತ್ರ ಪೆನ್ನು ಯಾ ಸೀಸದ ಕಡ್ಡಿಯಲ್ಲಿ ಬರೆಯುತ್ತಾರೆ. ದೇವರ ಚಿತ್ರಗಳಲ್ಲಿ ಚಿತ್ರಿತ ದೈವವು ಚಿನ್ಮುದ್ರೆಯಲ್ಲಿ ಇರುವುದನ್ನು ಗಮನಿಸಬಹುದು. ಈ ಮುದ್ರೆಯನ್ನು ಸತತವಾಗಿ ಅಭ್ಯಾಸ ಮಾಡಿದರೆ ಹಸ್ತ ಸಾಮುದ್ರಿಕೆ ಶಾಸ್ತ್ರದಲ್ಲಿ ತಿಳಿಸುವಂತೆ ಹಸ್ತ ರೇಖೆಯಲ್ಲಿನ ದೋಷವನ್ನು ನಿವಾರಿಸಬಹುದು.



**ಮಾಡುವ ವಿಧಾನ:–** ಎರಡೂ ಕೈಗಳನ್ನು ಮೇಲ್ಮುಖವಾಗಿ ಇಟ್ಟು ಆಯಾ ಕೈಗಳ ತೋರು ಬೆರಳಿಗೆ ಹೆಬ್ಬೆರಳಿನ ತುದಿಯನ್ನು ತಾಗಿಸಿ, ಉಳಿದ ಮೂರು ಬೆರಳುಗಳು ನೇರವಾಗಿರಲಿ. ಒತ್ತಡ ನೀಡಬೇಕಾದ ಅವಶ್ಯಕತೆಯಿಲ್ಲ. ಮುದ್ರೆಗಳ ರಾಜ ಎಂದು ಜ್ಞಾನ ಮುದ್ರೆಯನ್ನು ಕರೆಯುತ್ತಾರೆ.

**ಮಂತ್ರ:– ಐಂ ಹ್ರೀಂ ಐಂ ಹ್ರೀಂ ಓಂ ಸರಸ್ವತ್ಯೈ ನಮಃ** [ಯಾ **ಓಂ ಸರಸ್ವತ್ಯೈ ನಮಃ**] ಎಂದು 108 ಬಾರಿ ಪಠಿಸಿ ಯಾ ಇಷ್ಟ ದೇವರನ್ನು ನೆನೆಸಿ.



**ಪ್ರಯೋಜನಗಳು:** ಈ ಮುದ್ರೆಯಿಂದ ಅಗಾಧವಾದ ನೆನಪು ಶಕ್ತಿ ಮತ್ತು ಏಕಾಗ್ರತೆ ದೊರಕಿ ಒತ್ತಡವನ್ನು ನಿಯಂತ್ರಿಸುತ್ತದೆ. ಧ್ಯಾನ ಮಾಡುವಾಗ ಈ ಜ್ಞಾನ ಮುದ್ರೆಯನ್ನು ಹಾಕಿದಾಗ ಹೊರಸೂಸುವ ಚೈತನ್ಯಶಕ್ತಿಯನ್ನು ಮಿದುಳಿನತ್ತ ಚಲಿಸುವಂತೆ ಮಾಡುತ್ತದೆ.

**ಗಮನಿಸಿ :** ಇಲ್ಲಿ ತೋರು ಬೆರಳು ಮತ್ತು ಹೆಬ್ಬೆರಳ ತುದಿಗಳು ಸ್ಪರ್ಶಿಸಿದಾಗ ಚಕ್ರದ ಆಕಾರ ಉಂಟಾಗುತ್ತದೆ. ಇದರ ಅಭ್ಯಾಸ ಕಷ್ಟವೆನಿಸಿದರೂ ಅನಂತರ ಮನಸ್ಸಿಗೆ ಹೊಸತನದ ಅನುಭವ ಉಂಟಾಗುತ್ತದೆ. ಯೋಗಾಸನಗಳಲ್ಲಿ ಪದ್ಮಾಸನ, ವಜ್ರಾಸನ, ವೀರಾಸನ, ಸುಖಾಸನ ಇತ್ಯಾದಿ ಆಸನಗಳಲ್ಲಿ ಈ ಮುದ್ರೆ ಬಳಸುತ್ತಾರೆ. ಎಷ್ಟು ಹೊತ್ತು ಬೇಕಾದರೂ ಮಾಡಬಹುದು.

**ಹಕಿನಿ ಯಾ ಭದ್ರಕಾಳಿ ಮುದ್ರೆ:–** ಅಗಾಧವಾದ ಸ್ಮರಣ ಶಕ್ತಿಗೆ ಹಾಗೂ ಚೈತನ್ಯ ಶಕ್ತಿ ತುಂಬಲು ಸಹಕಾರಿ.

**ಮಾಡುವ ವಿಧಾನ :–**ಎರಡು ಕೈಗಳ ಎಲ್ಲಾ ಬೆರಳುಗಳ ಅಗ್ರ ಭಾಗ **ಒಟ್ಟಿಗೆ ಮೃದುವಾಗಿ** ಸ್ಪರ್ಶಿಸಿ. **ಈ ಮುದ್ರೆಯನ್ನು ಸುಮಾರು 5 ರಿಂದ 10 ನಿಮಿಷದಂತೆ ದಿನಕ್ಕೆ 4 ರಿಂದ 8 ಬಾರಿ ವರೆಗೆ ಅಭ್ಯಾಸಮಾಡಬಹುದು.**

**ಪ್ರಯೋಜನಗಳು: ನೆನಪು ಶಕ್ತಿಯನ್ನು ವೃದ್ಧಿಪಡಿಸಲು ಈ ಹಕಿನಿ ಮುದ್ರೆ ತುಂಬಾ ಸಹಕಾರಿ ಇದರಲ್ಲಿ ಎಲ್ಲಾ ಪಂಚ ತತ್ವಗಳು ಜೊತೆಗೂಡುತ್ತದೆ. ಆಜ್ಞಾ ಚಕ್ರ ಬಲಗೊಳ್ಳುತ್ತದೆ. ಮರೆಯುವಿಕೆಯ ಸಮಸ್ಯೆಯನ್ನು ನಿವಾರಿಸುತ್ತದೆ. ಏಕಾಗ್ರತೆ, ನೆನಪು ಶಕ್ತಿಯನ್ನು ಹೆಚ್ಚಿಸಲು ಈ ಮುದ್ರೆ ಸಹಾಯವಾಗುತ್ತದೆ. ಮನಸ್ಸು ಶಾಂತವಾಗುತ್ತದೆ. ಚಿತ್ತ ಶುದ್ಧಿಯಾಗುತ್ತದೆ. ಮನಸ್ಸಿನಲ್ಲಿ ಒಳ್ಳೆಯ ವಿಚಾರಗಳನ್ನು ತುಂಬಲು ಸಹಾಯಮಾಡುತ್ತದೆ. ಮಂತ್ರ: 'ಓಂ ಭದ್ರಕಾಳಿಯ್ಯೆ ನಮಃ'** 108 ಬಾರಿ ಯಾ ಇಷ್ಟ ದೇವರನ್ನು ನೆನೆಸಿ.

**ಪ್ರಾಣ ಮುದ್ರೆ:–** ಹೆಸರೇ ಹೇಳುವಂತೆ ಈ ಮುದ್ರೆ ಶರೀರಕ್ಕೆ ಪ್ರಾಣ ಶಕ್ತಿಯನ್ನು, ಚೈತನ್ಯವನ್ನು ತಂದು ಕೊಡುತ್ತದೆ.

→→→

→→→



**ಮಾಡುವ ವಿಧಾನ** : ಕಿರುಬೆರಳು ಮತ್ತು ಉಂಗುರ ಬೆರಳಿನ ತುದಿಗಳನ್ನು ಹೆಬ್ಬೆರಳಿನ ತುದಿಗೆ ಜೋಡಿಸಬೇಕು. ಉಳಿದ ಬೆರಳುಗಳು ನೇರವಾಗಿರಲಿ. ಚಿಕಿತ್ಸಾ ರೂಪದಲ್ಲಿ ಮಾಡಿದ ಮುದ್ರೆಯ ನಂತರ ಕೊನೆಯಲ್ಲಿ ಪ್ರಾಣ ಮುದ್ರೆಯನ್ನು ಹತ್ತು ನಿಮಿಷ ಮಾಡಲೇ ಬೇಕು (ಆದರೆ ಪ್ರಥಮವಾಗಿ ಆರಂಭದಲ್ಲಿ ಪ್ರಾಣ ಮುದ್ರೆಯನ್ನು 20ರಿಂದ 30 ನಿಮಿಷ ಅಭ್ಯಾಸ ಮಾಡಲೇ ಬೇಕು). ಈ ಮುದ್ರೆಯನ್ನು ಸುಮಾರು 20 ರಿಂದ 40 ನಿಮಿಷಗಳ ಕಾಲ ಮಾಡಬಹುದು.

**ಮಂತ್ರ: 'ಓಂ ಹಿರಣ್ಯ ಗರ್ಭಾಯ ನಮಃ'** 108 ಬಾರಿ ಪಠಿಸಿ ಯಾ ಇಷ್ಟ ದೇವರನ್ನು ನೆನೆಸಿ.

**ಪ್ರಯೋಜನಗಳು:** :– ಚೈತನ್ಯ ಶಕ್ತಿ ಹೆಚ್ಚಲು, ನಿತ್ರಾಣ ಆಯಾಸ ತುಂಬಲು ಹಾಗೂ ಕಣ್ಣಿನ ಆರೋಗ್ಯಕ್ಕೆ ಸಹಕಾರಿ. ದೇಹವನ್ನು ದೈಹಿಕವಾಗಿ ಹಾಗೂ ಮಾನಸಿಕವಾಗಿ ಸುದೃಢಗೊಳಿಸುತ್ತದೆ. ಹುರುಪು, ಉಲ್ಲಾಸ ಮತ್ತು ಶಕ್ತಿ ವೃದ್ಧಿಸುತ್ತದೆ. ದುರ್ಬಲತೆ ನಿವಾರಣೆಗೆ ಪ್ರಾಣ ಮುದ್ರೆ ಸಹಕಾರಿ.

ಹಸಿವೆಯಾದಾಗ ಉತ್ತಮ ಪೋಷಕಾಂಶಗಳನ್ನು ಸೇವಿಸಿ.

**ಸಾಮಾನ್ಯವಾಗಿ ವಿದ್ಯಾರ್ಥಿಗಳು ದಿನ ನಿತ್ಯ ಆಚರಿಸಬೇಕಾದ ಅಗತ್ಯದ ಯೋಗದ ಸಂಕ್ಷಿಪ್ತ ಪಟ್ಟಿ:**

- ಇಷ್ಟ ದೇವರ ಪ್ರಾರ್ಥನೆ, ಓಂಕಾರ ಧ್ಯಾನ.
- ಕ್ರಿಯೆಗಳಾದ ತ್ರಾಟಕ, ಕಪಾಲಭಾತಿ.
- ಬೆಳಿಗ್ಗೆ ದೇಹದ ಜಡತ್ವ ಹೋಗಲಾಡಿಸಲು ಸರಳ ವ್ಯಾಯಾಮಗಳು ಹಾಗೂ ಸೂರ್ಯ ನಮಸ್ಕಾರ.


**ಯೋಗಾಸನಗಳ ಸಂಕ್ಷಿಪ್ತ ಪಟ್ಟಿ :**

ತಾಡಾಸನ, ವೃಕ್ಷಾಸನ, ಅರ್ಧ ಚಕ್ರಾಸನ, ಪಾದ ಹಸ್ತಾಸನ, ಕುಳಿತುಕೊಂಡು ವಿಶ್ರಾಂತಿ, ಪದ್ಮಾಸನ, ವಜ್ರಾಸನ, ಶಶಾಂಕಾಸನ, ಉಷ್ಟ್ರಾಸನ, ವಕ್ರಾಸನ, ಸರ್ವಾಂಗಾಸನ, ಹಲಾಸನ, ಶೀರ್ಷಾಸನ, ಮಕರಾಸನ, ಭುಜಂಗಾಸನ, ಅದೋಮುಖ ಶ್ವಾನಾಶನ, ಶವಾಸನ ಇವುಗಳಲ್ಲಿ ಶೀರ್ಷಾಸನ ಮತ್ತು ಸೂರ್ಯ ನಮಸ್ಕಾರ ಅತ್ಯಂತ ಪ್ರಾಮುಖ್ಯ. ಸರಳ ಪ್ರಾಣಯಾಮ ನಾಡಿಶುದ್ಧಿ ಪ್ರಾಣಯಾಮ. ಭ್ರಮರೀ ಪ್ರಾಣಯಾಮ, ಸರಳ ಧ್ಯಾನ. ಯೋಗ ಮಂತ್ರ ಮತ್ತು ಶಾಂತಿ ಮಂತ್ರ.

ಈ ಮೇಲೆ ತಿಳಿಸಿರುವಂತೆ ಶಿಸ್ತುಬದ್ಧವಾಗಿ ಕ್ರಮವತ್ತಾಗಿ, ಗುರುಮುಖೇನ ಯೋಗ ಅಭ್ಯಾಸ ಮಾಡುವುದರಿಂದ ವಿದ್ಯಾರ್ಥಿಗಳಿಗೆ ಪಾಠ ಪ್ರವಚನ ಜ್ಞಾನ ಸಂಪಾದಿಸಲು ಏಕಾಗ್ರತೆ ಬರುತ್ತದೆ, ಜ್ಞಾಪಕ ಶಕ್ತಿ ವೃದ್ಧಿಯಾಗುತ್ತದೆ ಹಾಗೂ ಆರೋಗ್ಯ–ಭಾಗ್ಯ ಒದಗಿ ಬರುತ್ತದೆ.

ಮೇಲೆ ಹೇಳಿದ ಯೋಗವನ್ನು ಮಾಡಲು 45 ನಿಮಿಷದಿಂದ 1 ಗಂಟೆ ಸಾಕು. ನಿತ್ಯ ನಿರಂತರ ಈ ಸಮಯವನ್ನು ಯೋಗಕ್ಕಾಗಿ ವಿನಿಯೋಗಿಸಿದಲ್ಲಿ ಆರೋಗ್ಯ ರಕ್ಷಣೆಯ ಜೊತೆಗೆ ದೃಢತೆ, ನೆಮ್ಮದಿ ಲಭಿಸಿ ಲವಲವಿಕೆಯಿಂದ ಇರಬಹುದು. ಯೋಗವನ್ನು ಶಿಸ್ತುಬದ್ಧವಾಗಿ, ಕ್ರಮವತ್ತಾಗಿ ಉಸಿರಿನ ಗತಿಯೊಂದಿಗೆ ಗುರುಮುಖೇನನೇ ಕಲಿತು ಅಭ್ಯಾಸ ಮಾಡಬೇಕು. ●







# ಕಟ್ಟಡ ಕಾರ್ಮಿಕರಿಗೆ ಸಿಗುವ ಸೌಲಭ್ಯಗಳು

1. **ಪಿಂಚಣಿ ಸೌಲಭ್ಯ:** ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗಳಿಗೆ ಮಾಸಿಕ ರೂ.1000/–
2. **ದುರ್ಬಲತೆ ಪಿಂಚಣಿ:** ಫಲಾನುಭವಿಗೆ ಖಾಯಿಲೆಗಳಿಂದ ಅಥವಾ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ ಭಾಗಶಃ ಅಂಗವಿಕಲತೆ ಹೊಂದಿದ್ದರೆ ಮಾಸಿಕ ರೂ.1000/– ಪಿಂಚಣಿ ಹಾಗೂ ಶೇಕಡಾವಾರು ದುರ್ಬಲತೆಯನ್ನಾದರಿಸಿ ರೂ.2,00,000/– ದವರೆಗೆ ಅನುಗ್ರಹ ರಾಶಿ ಸಹಾಧನ.
3. **ಟ್ರೈನಿಂಗ್–ಕಮ್–ಟೂಲ್‌ಕಿಟ್ ಸೌಲಭ್ಯ (ಶ್ರಮ ಸಾಮರ್ಥ್ಯ):** ರೂ20,000/–ವರೆಗೆ
4. **ಮನೆ ಖರೀದಿ/ಕಟ್ಟಲು ಸಹಾಯಧನ (ಕಾರ್ಮಿಕ ಗೃಹ ಭಾಗ್ಯ):** ರೂ. 2,00,000/–ದವರೆಗೆ
5. **ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮಿ ಬಾಂಡ್):** ಮಹಿಳಾ ಫಲಾನುಭವಿಯ ಮೊದಲ ಎರಡು ಮಕ್ಕಳಿಗೆ ಹೆಣ್ಣು ಮಗುವಿನ ಜನನಕ್ಕೆ ರೂ.30,000/– ಮತ್ತು ಗಂಡು ಮಗುವಿನ ಜನನಕ್ಕೆ ರೂ.20,000/–
6. **ಅಂತ್ಯಕ್ರಿಯೆ ವೆಚ್ಚ:** ರೂ.4000/– ಹಾಗೂ ಎಕ್ಸ್‌ಗ್ರೇಷಿಯಾ ರೂ.50000/– ಸಹಾಯಧನ
7. **ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ):** ಫಲಾನುಭವಿಯ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ
   1. 4, 5 ಹಾಗೂ 6ನೇ ತರಗತಿಯಲ್ಲಿ ಉತ್ತೀರ್ಣರಾದವರಿಗೆ ರೂ.3000/– 1,2,3 ಉತ್ತೀರ್ಣ ರೂ.2000/–
   2. 7 ಹಾಗೂ 8ನೇ ತರಗತಿ ಉತ್ತೀರ್ಣರಾದವರಿಗೆ ರೂ.4000.00
   3. 9,10ನೇ ತರಗತಿ ಹಾಗೂ ಪ್ರಥಮ ಪಿಯುಸಿ ಉತ್ತೀರ್ಣರಾದವರಿಗೆ ರೂ.6000/–
   4. ದ್ವಿತೀಯ ಪಿಯುಸಿ ಉತ್ತೀರ್ಣರಾದವರಿಗೆ ರೂ.8000/–
   5. ಐಟಿಐ ಮತ್ತು ಡಿಪ್ಲೋಮಾ ಉತ್ತೀರ್ಣರಾದವರಿಗೆ ಪ್ರತಿ ವರ್ಷಕ್ಕೆ ರೂ.7000/–
   6. ಪದವಿ ಉತ್ತೀರ್ಣರಾದವರಿಗೆ ಪ್ರತಿ ವರ್ಷಕ್ಕೆ ರೂ.10,000/–
   7. ಸ್ನಾತಕೋತ್ತರ ಪದವಿ ಸೇರ್ಪಡೆಗೆ ರೂ.20,000/– ಹಾಗೂ ಪ್ರತೀ ವರ್ಷ 10,000/– ಗಳಂತೆ (ಎರಡು ವರ್ಷಗಳಿಗೆ)
   8. ಇಂಜಿನಿಯರಿಂಗ್ ಕೋರ್ಸ್ ಸೇರ್ಪಡೆಗೆ ರೂ.25,000/– ಹಾಗೂ ಪ್ರತಿ ವರ್ಷ ತೇರ್ಗಡೆಗೆ ರೂ.20,000/–
   9. ವೈದ್ಯಕೀಯ ಕೋರ್ಸ್ ಸೇರ್ಪಡೆಗೆ ರೂ.30,000/– ಹಾಗೂ ಪ್ರತಿ ವರ್ಷ ತೇರ್ಗಡೆಗೆ ರೂ.25,000/–
   10. ಪಿಹೆಚ್‌ಡಿ ಕೋರ್ಸ್ ಪ್ರತಿ ವರ್ಷಕ್ಕೆ ರೂ.20,000/– (ಗರಿಷ್ಟ ಎರಡು ವರ್ಷಗಳು) ಮತ್ತು ಪಿಹೆಚ್‌ಡಿ ಪ್ರಬಂಧ ಸ್ವೀಕಾರದ ನಂತರ ಹೆಚ್ಚುವರಿಯಾಗಿ ರೂ. 20,000/–

**ಪ್ರತಿಭಾವಂತ ಮಕ್ಕಳಿಗಾಗಿ**

1. ಎಸ್.ಎಸ್‌ಎಲ್‌ಸಿ ಅಥವಾ ತತ್ಸಮಾನ ತರಗತಿಯಲ್ಲಿ ಶೇ.75 ಅಂಕ ಪಡೆದವರಿಗೆ ರೂ.5000/–
2. ಪಿಯುಸಿ ಅಥವಾ ತತ್ಸಮಾನ ತರಗತಿಯಲ್ಲಿ ಶೇ.75 ಅಂಕ ಪಡೆದವರಿಗೆ ರೂ.7000/–
3. ಪದವಿ ಅಥವಾ ತತ್ಸಮಾನ ಕೋರ್ಸ್‌ನಲ್ಲಿ ಶೇ75 ಅಂಕ ಪಡೆದವರಿಗೆ ರೂ.10,000/–
4. ಸ್ನಾತಕೋತ್ತರ ಪದವಿ ಅಥವಾ ತತ್ಸಮಾನ ಕೋರ್ಸ್‌ನಲ್ಲಿ ಶೇ.75 ಅಂಕ ಪಡೆದವರಿಗೆ ರೂ.15,000/–




8. **ವೈದ್ಯಕೀಯ ಸಹಾಯಧನ (ಕಾರ್ಮಿಕ ಆರೋಗ್ಯ ಭಾಗ್ಯ):** ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಭಿತರಿಗೆ ರೂ.300/– ರಿಂದ ರೂ.10,000/– ವರೆಗೆ
9. **ಅಪಘಾತ ಪರಿಹಾರ:** ಮರಣ ಹೊಂದಿದ್ದಲ್ಲಿ ರೂ.5,00,000/– ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ ರೂ.2,00,000/– ಮತ್ತು ಭಾಗಶಃ ಶಾಶ್ವತ ದುರ್ಬಲತೆಯಾದಲ್ಲಿ ರೂ.1,00,000/–
10. **ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ):** ಹೃದ್ರೋಗ, ಕಿಡ್ನಿ ಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರ ಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ

→→→

→→→

ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತ ಚಿಕಿತ್ಸೆ, ಮೂತ್ರ ಪಿಂಡದಲ್ಲಿನ ಕಲ್ಲು ತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ ಚಿಕಿತ್ಸೆ ಮತ್ತು ಶಸ್ತ್ರ ಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರ ಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್ ಚಿಕಿತ್ಸೆ, ಸಾಮಾನ್ಯ ಶಸ್ತ್ರಚಿಕಿತ್ಸೆಗಳಿಗೆ ರೂ.2,00,000/–ವರೆಗೆ


11.**ಮದುವೆ ಸಹಾಯಧನ (ಗೃಹಲಕ್ಷ್ಮಿ ಬಾಂಡ್) :** ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ ತಲಾ ರೂ.50,000/–

12.**ಕಾರ್ಮಿಕ ಅನಿಲ ಭಾಗ್ಯ–(ಎಲ್‌ಪಿಜಿ) ಸಂಪರ್ಕ ಸೌಲಭ್ಯ:** ಅನಿಲ ಸಂಪರ್ಕದೊಂದಿಗೆ ಎರಡು ಬರ್ನರ್ ಸ್ಟೌವ್ ಮತ್ತು ಪ್ರತಿ ಮೂರು ತಿಂಗಳಿಗೆ ಒಮ್ಮೆ ಸಿಲಿಂಡರ್ ರೀಫಿಲ್

13.**ಬಿಎಂಟಿಸಿ ಬಸ್ ಪಾಸ್ ಸೌಲಭ್ಯ:** ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತಹ/ ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ

14.**ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ:** ರಾಜ್ಯಾದ್ಯಂತ ವಿದ್ಯಾಭ್ಯಾಸದಲ್ಲಿ ತೊಡಗಿರುವ ನೋಂದಾಯಿತ ಕಾರ್ಮಿಕರ ಇಬ್ಬರು ಮಕ್ಕಳಿಗೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಶ್ರೀ ನಾರಾಯಣ ನಾಯಕ್, ದೂರವಾಣಿ ಸಂಖ್ಯೆ : 94839 03627**



# ಸರ್ಕಾರಿ ಶಾಲಾ ವಿದ್ಯಾರ್ಥಿಗಳ ಆತ್ಮವಿಶ್ವಾಸ ಹೆಚ್ಚಿಸಲು ಸ್ಪೋಕನ್ ಇಂಗ್ಲಿಷ್ ಕೋರ್ಸು

ಉಡುಪಿ: ಜಿಲ್ಲೆಯ ಕಾರ್ಕಳ ತಾಲೂಕಿನ ಸರ್ಕಾರಿ ಶಾಲೆಯಲ್ಲಿ ಸ್ಪೋಕನ್ ಇಂಗ್ಲಿಷ್ ಕೋರ್ಸು ಆರಂಭಿಸುವ ಚಿಂತನೆ ನಡೆಯುತ್ತಿದೆ. ವಿದ್ಯಾರ್ಥಿಗಳು ಇಂಗ್ಲಿಷ್ ಮಾತನಾಡುವ ಕೌಶಲ್ಯವನ್ನು ಹೆಚ್ಚಿಸಿಕೊಳ್ಳುವ ಕಾರ್ಯಕ್ರಮವನ್ನು ಜಾರಿಗೊಳಿಸಲು ಶಿಕ್ಷಣ ಇಲಾಖೆಯ ಅನುಮತಿ ನೀಡಿರುವುದೇ ಈ ಬೆಳವಣಿಗೆಗೆ ಕಾರಣವಾಗಿದೆ.

ಈ ಕೋರ್ಸನ್ನು ಕಾರ್ಕಳ ತಾಲೂಕಿನ ನಂದಳಿಕೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜಾರಿಗೊಳಿಸಲು ನಿರ್ಧರಿಸಲಾಗಿದೆ. ಈ ಕೋರ್ಸು 2019 ಜೂನ್ ತಿಂಗಳಿಂದ ಆರಂಭವಾಗಲಿದೆ. ಸ್ಪೋಕನ್ ಇಂಗ್ಲಿಷ್ ಕೋರ್ಸು ವಿದ್ಯಾರ್ಥಿಗಳನ್ನು ಇಂಗ್ಲಿಷ್ ಮಾತನಾಡುವ ಭಯದಿಂದ ಕೋರ್ಸು ವಿದ್ಯಾರ್ಥಿಗಳನ್ನು ಇಂಗ್ಲಿಷ್ ಮಾತನಾಡುವ ಭಯದಿಂದ ಹೊರತರಲು ನೆರವಾಗುತ್ತದೆ ಮತ್ತು ಖಾಸಗಿ ಶಾಲೆಗಳಿಗೆ ಇದೊಂದು ಸವಾಲಾಗಿ ಪರಿಣಮಿಸಲಿದೆ.

ಇತರ ಸರ್ಕಾರಿ ಶಾಲೆಗಳು ಕೂಡ ಇಂತಹ ಕೋರ್ಸುಗಳನ್ನು ಜಾರಿಗೊಳಿಸಲು ನಂದಳಿಕೆ ಸರ್ಕಾರಿ ಶಾಲೆ ಮಾದರಿಯಾಗಲಿದೆ.

2017ರಲ್ಲಿ ಶಾಲೆಯಲ್ಲಿ ಒಂದರಿಂದ 7ನೇ ತರಗತಿಯವರೆಗೆ ಸುಮಾರು 70 ವಿದ್ಯಾರ್ಥಿಗಳಿದ್ದರು. ಕಳೆದ ವರ್ಷ ವಿದ್ಯಾರ್ಥಿಗಳ ಸಂಖ್ಯೆ 60ಕ್ಕೆ ಇಳಿದಿದೆ. ಇದು ಹೆತ್ತವರಿಗೆ ತಮ್ಮ ಮಕ್ಕಳು ಇಂಗ್ಲಿಷ್ ಮಾತನಾಡುವ ಕೌಶಲ್ಯ ಹೆಚ್ಚಿಸಿಕೊಳ್ಳಬೇಕೆಂಬ ಇಂಗಿತವಿರುವುದು ವ್ಯಕ್ತಪಡಿಸುತ್ತದೆ. ನಾವು ನಮ್ಮ ಶಾಲೆಯ ಹಳೆಯ ವಿದ್ಯಾರ್ಥಿಗಳನ್ನು ಒಳಗೊಂಡಿರುವ ವಿದ್ಯಾವಿಕಾಸ ಸಮಿತಿಯನ್ನು ಹೊಂದಿದ್ದು, ಈ ಸಮಿತಿಯು ನಮ್ಮ ಸ್ಪೋಕನ್ ಇಂಗ್ಲಿಷ್ ಕೋರ್ಸು ಆರಂಭದ ಉದ್ದೇಶಕ್ಕೆ ಬೆಂಬಲ ಸೂಚಿಸಿದ್ದಾರೆ. 2019ರ ಶೈಕ್ಷಣಿಕ ವರ್ಷದಿಂದ ಸ್ಪೋಕನ್ ಇಂಗ್ಲಿಷ್ ತರಗತಿಗಳು ಆರಂಭವಾಗಲಿದ್ದು, ವಿದ್ಯಾರ್ಥಿಗಳು ಮತ್ತು ಹೆತ್ತವರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ಶಾಲಾ ಮುಖ್ಯೋಪಾಧ್ಯಾಯರಾದ ಸದಾನಂದ ಶೆಟ್ಟಿ ಹೇಳಿದ್ದಾರೆ. ಶಾಲಾ ಹಳೆ ವಿದ್ಯಾರ್ಥಿಯಾದ ಸಚ್ಚಿದಾನಂದ ಶೆಟ್ಟಿ ಕಳೆದ 14 ವರ್ಷಗಳಿಂದ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಬುಕ್ ಮತ್ತು ಸಮವಸ್ತ್ರಗಳನ್ನು ವಿತರಿಸುತ್ತಿದ್ದಾರೆ. ವಿದ್ಯಾರ್ಥಿಗಳು ಉತ್ತಮವಾಗಿ ಇಂಗ್ಲಿಷ್ ಮಾತನಾಡುವ ಕೌಶಲ್ಯವನ್ನು ಬೆಳೆಸಿಕೊಳ್ಳಲು ಹಳೆ ವಿದ್ಯಾರ್ಥಿಗಳು ನೀಡಿದ ನಿಧಿಯನ್ನು ಬಳಸಿಕೊಂಡು ಉತ್ತಮವಾದ ಅತಿಥಿ ಶಿಕ್ಷಕರನ್ನು ನೇಮಿಸಲಾಗುವುದು. ಸ್ಪೋಕನ್ ಇಂಗ್ಲಿಷ್ ಕೋರ್ಸುಗಳು ದೈನಂದಿನ ತರಗತಿಗಳಂತೆ ಪ್ರತಿದಿನ ನಡೆಯಲಿದೆ ಎಂದು ಅವರು ತಿಳಿದಿದ್ದಾರೆ. ಸುಮಾರು 98 ವರ್ಷ ಹಳೆಯ ಶಾಲೆ ಇನ್ನು ಎರಡೇ ವರ್ಷಗಳಲ್ಲಿ ನೂರನೇ ವರ್ಷಾಚರಣೆಗೆ ಸಿದ್ಧಗೊಳ್ಳಲಿದೆ.

ಸ್ಪೋಕನ್ ಇಂಗ್ಲಿಷ್ ಕೋರ್ಸು ಮಕ್ಕಳ ಆತ್ಮವಿಶ್ವಾಸ ಹೆಚ್ಚಿಸುವುದು ಎಂದು ಕಾರ್ಕಳ ಕ್ಷೇತ್ರ ಶಿಕ್ಷಣ ಅಧಿಕಾರಿ ಜಿ. ಎಸ್ ಶಶಿಧರ್ ಹೇಳಿದ್ದಾರೆ. ಅವರು ಹಿಂದೆ ಪುತ್ತೂರಿನಲ್ಲಿ ಬಿಇಒ ಆಗಿದ್ದಾಗ ಸುಮಾರು 52ಕ್ಕೂ ಅಧಿಕ ಸರ್ಕಾರಿ ಶಾಲೆಗಳಲ್ಲಿ ಸ್ಪೋಕನ್ ಇಂಗ್ಲಿಷ್ ಕೋರ್ಸು ಆರಂಭಿಸಿದ್ದರು.

# ಶ್ರೀ ಯಾದವ ಕೋಟ್ಯಾನ್ ಜಿಲ್ಲಾ ನ್ಯಾಯಾಧೀಶರಾಗಿ ನೇಮಕ



ಸಾಧಿಸುವ ಛಲವೊಂದಿದ್ದರೆ ಯಶಸ್ಸು ಸದಾ ಬೆನ್ನಿಗಂಟಿ ಕೊಂಡಿರುತ್ತದೆನ್ನುವ ಹಿರಿಯರ ಮಾತು ಪ್ರಯತ್ನ ಪಡುವವರಿಗೆ ಯಾವತ್ತೂ ಸ್ಫೂರ್ತಿದಾಯಕವೇ ಆಗಿದೆ. ಈ ಮಾತು ಶ್ರೀ ಯಾದವ ಕೋಟ್ಯಾನ್ ಇವರಿಗೆ ಅಕ್ಷರಶಃ ಅನ್ವಯಿಸುತ್ತದೆ ಎನ್ನುವುದಕ್ಕೆ ಅವರು ಜಿಲ್ಲಾ ನ್ಯಾಯಾಧೀಶರಾಗಿ ನೇಮಕಗೊಳ್ಳುವವರೆಗಿನ ಅವರ ದೀರ್ಘ ನಡೆ ಸುದೀರ್ಘ ಪ್ರಯತ್ನ ಸಾಕ್ಷಿ ನುಡಿಯುತ್ತದೆ.

ಬಂಟ್ವಾಳ ತಾಲೂಕಿನ ಅರಳ ಗ್ರಾಮದ ಕಾಯರ್ದಡಿ ಮನೆಯ ಈ ಕುಗ್ರಾಮದಲ್ಲಿ ಶ್ರೀ ಕೃಷ್ಣ ಪೂಜಾರಿ ಮತ್ತು ಶ್ರೀಮತಿ ಕಲ್ಯಾಣಿ ಇವರ ಸುಪುತ್ರರಾಗಿ ಜನಿಸಿದ ಇವರು ಎಳವೆಯಲ್ಲಿಯೇ. ತಂದೆಯನ್ನು ಕಳೆದುಕೊಂಡರು. ತನ್ನ ಪ್ರಾಥಮಿಕ ಶಿಕ್ಷಣವನ್ನು 4 ಕಿ.ಲೋ. ಮೀಟರ್ ನಡೆದುಕೊಂಡೆ ಹೋಗಿ ಸ್ಥಳೀಯವಾಗಿ ಪೂರೈಸಿ ಮುಂದಕ್ಕೆ ಪ್ರಾಢಶಾಲೆಯನ್ನು ಸುಂಕದಕಟ್ಟೆ ಶ್ರೀ ನಿರಂಜನ ಸ್ವಾಮಿ ಪ್ರಾಢಶಾಲೆಯಲ್ಲಿ ಪೂರೈಸಿ, ಶ್ರೀ ಗೋಕರ್ಣನಾಥೇಶ್ವರ ಪದವಿ ಪೂರ್ವ ಕಾಲೇಜಿನಲ್ಲಿ ಪಿ.ಯು ಶಿಕ್ಷಣವನ್ನು ಸಂಪಾದಸಿ, ಮಂಗಳೂರಿನ ಎಸ್.ಡಿ.ಎಂ ಕಾಲೇಜಿನಲ್ಲಿ ಕಾನೂನು ಪದವಿಯನ್ನು ಗಳಿಸಿಕೊಂಡು ಇಲ್ಲಿನ ಹಿರಿಯ ವಕೀಲರಾದ ಶ್ರೀ ಯಶವಂತ ಮರೋಳಿಯವರ ಕೈ ಕೆಳಗೆ ಪಳಗಿ ಮುಂದಕ್ಕೆ ಬೆಂಗಳೂರಿಗೆ ತನ್ನ ವೃತ್ತಿ ಬದುಕನ್ನ ವರ್ಗಾಯಿಸಿಕೊಂಡು ಸ್ವಂತ ಕಛೇರಿಯನ್ನು ತೆರೆದು ವಕಾಲತನ್ನ ಮುಂದುವರೆಸಿದರು.

ಈ ನಡುವೆ ಸರಕಾರಿ ಸೇವೆ ಸಲ್ಲಿಸಬೇಕೆಂಬ ಮಹದಾಸೆಯನ್ನು ಹೊತ್ತು 2018ರ ಕರ್ನಾಟಕ ಉಚ್ಚ ನ್ಯಾಯಾಲಯವು ನಡೆಸಿದ ಜಿಲ್ಲಾ ನ್ಯಾಯಾಧೀಶರ ಆಯ್ಕೆ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದರು. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ 35 ಮಂದಿಯಲ್ಲಿ ಅಂತಿಮವಾಗಿ ನಾಲ್ಕು ಮಂದಿ ಜಿಲ್ಲಾ ನ್ಯಾಯಾಧೀಶರಾಗಿ ಆಯ್ಕೆಯಾದವರಲ್ಲಿ ಶ್ರೀ ಯಾದವ ಕೋಟ್ಯಾನ್ ಇವರು ಕೂಡಾ ಒಬ್ಬರಾಗಿದ್ದಾರೆ. ತನ್ನ ಈ ಉತ್ತುಂಗದ ಸಾಧನೆಗೆ ಕಡುಬಡತನ ಮತ್ತು ತಾಯಿಯ ಪ್ರೋತ್ಸಾಹ ಪ್ರಮುಖವೆಂದು ಸದಾ ನೆನೆಯುವ ಇವರು ಪ್ರಸ್ತುತ ಕರ್ನಾಟಕ ನ್ಯಾಯಾಂಗ ಅಕಾಡೆಮಿ ಬೆಂಗಳೂರು ಇಲ್ಲಿ ತರಬೇತಿಯಲ್ಲಿದ್ದಾರೆ.

ಬಿಲ್ಲವ ಸಮುದಾಯದಿಂದ ಸರಕಾರಿ ವಕೀಲರಾಗಿ ಹಿರಿ ಹೆಜ್ಜೆಯ ಗುರುತನ್ನ ಪ್ರಥಮವಾಗಿ ಸೃಷ್ಟಿಸಿದ ಇವರು ಸಹಧರ್ಮಿಣಿ ಶ್ರೀಮತಿ ಪುಷ್ಪರಾಣಿ ಗಂಡು ಮಕ್ಕಳಾದ ಮನ್ವಿತ್ ರಾಜ್ ದತ್ತಾತ್ರೇಯ ಮತ್ತು ವಿಶೃತ್‌ರಾಜ್ ಪೂಜಾರಿ ಇವರೊಂದಿಗೆ ಪ್ರಸ್ತುತ ಬೆಂಗಳೂರಿನ ಗೋವಿಂದರಾಜ ನಗರದಲ್ಲಿ ವಾಸಿಸುತ್ತಿದ್ದಾರೆ. ಶ್ರೀ ಯಾದವ ಕೋಟ್ಯಾನ್ ಇವರು ತನ್ನ ಕ್ಷೇತ್ರದಲ್ಲಿ ನ್ಯಾಯದಾನದ ಶ್ರೇಷ್ಠತೆಯ ಮೂಲಕ ಇನ್ನೂ ಎತ್ತರಕ್ಕೇರಲಿ ಎಂದು ಆಶಿಸುತ್ತಾ ಅಭಿನಂದಿಸುತ್ತಾ ಆತ್ಮಶಕ್ತಿ ಅವರಿಗೆ ಶುಭವನ್ನು ಬಯಸುತ್ತಿದೆ.

---

ಮಾಹಿತಿ

# ಮಗುವಿಗೆ ಹೇಳಲೇಬಾರದು

ನೀವು ನಿಮ್ಮ ಮಕ್ಕಳಿಗೆ ಏನನ್ನಾದರೂ ಪದೇಪದೇ ಹೇಳುವಾಗ ಯೋಚಿಸಬೇಕು. ಏಕೆಂದರೆ ನೀವಾಡುವ ಮಾತು ಮಕ್ಕಳ ಮೇಲೆ ನಕಾರಾತ್ಮಕ ಪ್ರಭಾವ ಬೀರಬಹುದು. ಆದ್ದರಿಂದ ಕೆಲವು ಸಂಗತಿಗಳನ್ನು ಹೇಳಲೇಬಾರದು ಎನ್ನುತ್ತಾರೆ. ಸಂಬಂಧಗಳ ತಜ್ಞರು. ನೀವು ಒಳ್ಳೆಯದನ್ನು ಅಥವಾ ಕೆಟ್ಟದ್ದನ್ನೇ ಹೇಳಬಹುದು. ಏನೇ ಹೇಳಿದರೂ ಅದು ಮಗುವಿನ ಮನಸ್ಸಿನ ಮೇಲೆ ಪ್ರಭಾವ ಬೀರುತ್ತದೆ.

ಮನಸ್ಸಿಗೆ ಘಾಸಿ ಮಾಡಿದ ನಕಾರಾತ್ಮಕ ಮಾತುಗಳು ಮಗುವಿನ ಮನಸ್ಸಿನಲ್ಲಿ ಉಳಿದು ಹೋಗುತ್ತದೆ ಎಂಬುದು ನೆನಪಿರಲಿ. ಅಷ್ಟೇ ಅಲ್ಲ ಅದು ನಿಮ್ಮ ಮಗುವಿನ ವ್ಯಕ್ತಿತ್ವ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

**ನೀನು ದಡ್ಡ:** ಮಾತುಮಾತಿಗೆ ಮಗುವನ್ನು ದಡ್ಡ ಎಂದು ಕರೆಯುತ್ತಿದ್ದರೆ ನೀವು ಪ್ರಯೋಗಿಸಿದ ಪದ ಮಗುವಿನ ಮನಸ್ಸಿನಲ್ಲಿ ಉಳಿಯುತ್ತದೆ. ಅದು ಮಗುವಿನ ಆತ್ಮವಿಶ್ವಾಸ ಕುಸಿಯುವಂತೆ ಮಾಡುತ್ತದೆ. ಬುದ್ಧಿ ಮತ್ತೆಗೆ ಸಂಬಂಧಿಸಿದಂತೆ ಹಿಂಜರಿಕೆಗೆ ಒಳಗಾಗುವ ಸಾಧ್ಯತೆ ಇರುತ್ತದೆ.

**ಹೋಲಿಕೆ :** ಅಕ್ಕಪಕ್ಕದ ಮನೆಯವರ ಅಥವಾ ಅವರದ್ದೇ ವಾರಿಗೆಯವರ ಮಕ್ಕಳಿಗೆ ಊಟ ಮಾಡುವ ವಿಷಯದಿಂದ ಹಿಡಿದು ಅಂಕ ಗಳಿಕೆಯವರೆಗೂ ಹೋಲಿಸಬೇಡಿ. ಪ್ರತಿ ಮಗು ಬೇರೆಯೇ ಎಂಬುದರತ್ತ ಗಮನ ಇರಲಿ.

**ಹೀಗೆ ಮಾಡು :** ನಿಮ್ಮ ಮಗುವಿಗೆ ಹೀಗೆ ಮಾಡು, ಹಾಗೆ ಮಾಡು ಎಂದು ಹೇಳಬೇಡಿ. ಮಗು ಮಾಡಿದ ಪ್ರತಿ ಕೆಲಸಕ್ಕೆ ಖ್ಯಾತೆ ತೆಗೆಯುವ ಮನಸ್ಥಿತಿ ಬೇಡ. ಅದು ಮಗುವಿಗೆ ಕಿರಿಕಿರಿ ಆಗಬಹುದು. ಅಷ್ಟೇ ಅಲ್ಲ ಹಠ ಹಿಡಿಯಬಹುದು ಅಥವಾ ಮೊಂಡು ಸ್ವಭಾವ ಬೆಳೆಸಿಕೊಳ್ಳಬಹುದು.

**ನಾಚಿಕೆ ಬಿಡು :** ಕೆಲವು ಮಕ್ಕಳು ನಾಚಿಕೆ ಸ್ವಭಾವವನ್ನು ಹೊಂದಿರುತ್ತಾರೆ. ಹಾಗಂತ ಜನರೆದುರು ನಿಮ್ಮ ಮಗುವಿಗೆ ನಾಚಿಕೆ ಬಿಡು ಎಂದು ಹೇಳಬೇಡಿ. ಜನರೊಂದಿಗೆ ಬೆರೆಯುವುದಿಲ್ಲ. ಎನ್ನುವುದು ಅಪರಾಧವಲ್ಲ. ಸಮಸ್ಯೆಯೂ ಅಲ್ಲ. ಅದೊಂದು ಸ್ವಭಾವ ಅಷ್ಟೇ. ಮಗು ಇತರರೊಂದಿಗೆ ಬೆರೆಯುವಂಥ ವಾತಾವರಣ ಸೃಷ್ಟಿಸಿ, ನಿಧಾನವಾಗಿ ತನ್ನ ಸ್ವಭಾವವನ್ನು ಬದಲಿಸಿಕೊಳ್ಳುತ್ತದೆ.

**ಸೌಂದರ್ಯದ ಮಾತು:** ನಿಮ್ಮ ಮಗು ಹೇಗಿದ್ದರೂ ನಿಮಗೆ ಮುದ್ದು, ಅದರ ಬದಲು ಬಣ್ಣ, ಗಾತ್ರದ ಬಗ್ಗೆ ಒಟ್ಟಾರೆ ಸೌಂದರ್ಯದ ಬಗ್ಗೆಯೆಲ್ಲ ಕೀಳಾಗಿ ಮಾತನಾಡಬೇಡಿ. ಹರೆಯಕ್ಕೆ ಬಂದಾಗ ಮಗು ತನ್ನ ದೇಹ ಸೌಂದರ್ಯದ ಬಗ್ಗೆ ಕೀಳರಿಮೆ ಬೆಳೆಸಿಕೊಂಡು ಇತರರೊಂದಿಗೆ ಬೆರೆಯಲು ಹಿಂಜರಿಯಬಹುದು.


Tulasidas



(M) 94482 40030

**SITADAS & CO.**

**Dealers in : Dental Materials, Equipments & X-Ray Films**

Opp. Motimahal, Hotel Blue Star Complex, Falnir Road, Mangalore - 575 001

Tel: 0824-2429955, 2429242 (0) 0824-2412668 (R) 08255-275265

E-mail: sitadasdent@yahoo.co.in



ವಾರ್ಷಿಕ 500 ಕೋಟಿಗೂ ಅಧಿಕ ವ್ಯವಹಾರ
"ಎಕ್ಸಲೆನ್ಸ್ ಇನ್ ಬೆಸ್ಟ್ ಕೋ-ಅಪರೇಟೀವ್ ಸೊಸೈಟಿ" ರಾಷ್ಟ್ರೀಯ ಪ್ರಶಸ್ತಿ
ಯುವ ವಾಹಿನಿ (ರಿ) ಇವರಿಂದ "ಸಾಧನ ಶ್ರೇಷ್ಠ ಪ್ರಶಸ್ತಿ"
ಇ-ಸ್ಟ್ಯಾಂಪಿಂಗ್ ಸೇವೆಗೆ ಸತತ 6 ವರ್ಷದಿಂದ ರಾಜ್ಯ ಪ್ರಶಸ್ತಿ ಮತ್ತು ಜಿಲ್ಲಾ ಪ್ರಶಸ್ತಿ
ಜಿಲ್ಲೆಯಾದ್ಯಂತ 16 ಶಾಖೆಗಳು
63 ಮತ್ತು 65ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ "ಉತ್ತಮ ಸಹಕಾರಿ ಸಂಘ" ಪುರಸ್ಕೃತ ಹಾಗೂ
ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನಿಂದ ಸತತ 3 ವರ್ಷದಿಂದ "ಸಾಧನಾ ಪ್ರಶಸ್ತಿ" ಪಡೆದಿರುವ ಸಂಸ್ಥೆ
ಆತ್ಮಶಕ್ತಿ
ATHMASHAKTHI
ವಿವಿಧೋದ್ದೇಶ ಸಹಕಾರಿ ಸಂಘ (ನಿ.)
MULTIPURPOSE CO-OPERATIVE SOCIETY LTD.,
H.O. : ಶ್ರೀ ಆರ್ಕೇಡ್, ಬಲ್ಮಠ ರಸ್ತೆ, ಬೆಂದೂರ್‌ವೆಲ್, ಮಂಗಳೂರು – 575002.
Email : athmashakthisociety@gmail.com
Website: www.athmashakthi.com
✆: 2430555, 4273555, 8150063555
NEFT/RTGS ಭಾರತದಾದ್ಯಂತ ಡಿ.ಡಿ.
ಗಣಕೀಕೃತ ಬ್ಯಾಂಕಿಂಗ್ ಸೇವೆ
ಠೇವಣಿ ಮೇಲಿನ ಆಕರ್ಷಕ ಬಡ್ಡಿ ದರಗಳು
ನಿರಖು ಠೇವಣಿ ಇತರರಿಗೆ
1 ವರ್ಷ ಮೇಲ್ಪಟ್ಟು 9.00%
2 ವರ್ಷ ಮೇಲ್ಪಟ್ಟು 9.50 %
3 ವರ್ಷ ಮೇಲ್ಪಟ್ಟು 10.00%
ಹಿರಿಯ ನಾಗರಿಕರಿಗೆ 10.50% ಸಂಘ ಸಂಸ್ಥೆಗಳಿಗೆ
ಉಳಿತಾಯ ಖಾತೆ - (S.B.) 4%
ಆವರ್ತನ ಖಾತೆ - (R.D.) 9%*
E-Stamp ಠಸೆ ಪೇಪರ್
ONLINE BUS TICKETS
WESTERN UNION WU
moving money for better
XPRESS MONEY
GLOBAL MONEY TRANSFER
RELIGARE Health Insurance
ಆತ್ಮಲಕ್ಷ್ಮಿ ನಗದು ಪತ್ರ
7½ ವರ್ಷಗಳಲ್ಲಿ ದ್ವಿಗುಣ
*ಬಡ್ಡಿದರಗಳು ಕಾಲಕಾಲಕ್ಕೆ ನಿರ್ಧರಿಸಲಾಗುವುದು.
ವಿಮಾ ಸೌಲಭ್ಯ
LIC
भारतीय जीवन बीमा निगम
LIFE INSURANCE CORPORATION OF INDIA
Manipal ArogyaCard
ಗುರುಶ್ರೀ ಸ್ವ-ಸಹಾಯ ಸಂಘಗಳ ಪ್ರಾಯೋಜಕತ್ವ
ವಿವಿಧ ಸಾಲ ಸೌಲಭ್ಯಗಳು
EXPRESS GOLD LOAN
ಚಿನ್ನಾಭರಣ ಸಾಲ
₹ 2,400/-* ರ ವರೆಗೆ
ಪ್ರತಿ ಗ್ರಾಂ.ಗೆ
ಬಡ್ಡಿದರ ತಿಂಗಳಿಗೆ ₹ 100/-ಕ್ಕೆ 1
ವಾಹನ ಸಾಲ
ಆಸ್ತಿ ಅಡವು ಸಾಲ
ಗೃಹೋಪಯೋಗಿ
ವ್ಯಾಪಾರ ಸಾಲ
ಹೆಚ್ಚಿನ ಮಾಹಿತಿಗಾಗಿ ಸಮೀಪದ ಶಾಖೆಯನ್ನು ಸಂಪರ್ಕಿಸಿ.
ಬೆಂದೂರ್‌ವೆಲ್ 2430555
ಮೂಡೂರು 2989999
ಸ್ಟೇಟ್‌ಬ್ಯಾಂಕ್ 2449111
ಮೂಲ್ಕಿ 22935555
ಸುರತ್ಕಲ್ 2475555
ಬಿ.ಸಿ.ರೋಡ್ 08255-230000
ಬಜ್ಪೆ 2253777
ಲಾಲ್‌ಭಾಗ್ 4258555
ಕರಂಗಲ್ಪಾಡಿ 4282999
ಹಂಪನಕಟ್ಟೆ 4250555
ಉಳ್ಳಾಲ 2469555
ಡಿ.ಸಿ. ಆಫೀಸ್ ಬಳಿ 4251888
ಮುಡಿಪು 08255-261111
ಪಂಜಿಮೊಗರು 0824-2983555
ಉಪ್ಪಿನಂಗಡಿ 08251-298899
ಪುತ್ತೂರು 08251-298998
ಆಯ್ದ ಸರಕಾರಿ ರಜಾದಿನಗಳಲ್ಲಿ ಬ್ಯಾಂಕಿಂಗ್, ಚಿನ್ನಾಭರಣ ಸಾಲ ಹಾಗೂ ಇ-ಸ್ಟಾಂಪ್ ಸೇವೆಗಳು ಲಭ್ಯ

# Joint Liability Group



✍ – ಕಿರಣ್ ಉರ್ವ
ಮೊ: 9980137418

**Joint Liability Group started with the success story from the project located in Dharmastala in Dhakshina Kannada District of Karnataka State established in 1982 with the objective of rural development.**

continued from the last issue

### 3. Who can form JLG

* Business facilitators, NGO's Farmers' Cubs, Farmers Associations, Panchayat Raj Institutions (PRIs,) Krishi Vikas Kendras (KVKs), State Agriculture Universities (SAUs), Agriculture Technology Managmeent Agency (ATMA) Bank branches, PACS, other Co-operatives, Government Departments, Individuals, input dealers, MFIs/MFOs etc.

### 4. Selection of JLG members

* JLGs can be formed primarily consisting of tenant famers and small farmers cultivating land without possessing proper title of their land
* Members should be of similar socio economic status, background and environment carrying out farming and allied activities agreeing to form JLG so that the group would be homogeneous and organised and to develop mutual trust and respect.
* The members should be residing in the same locality and should know & trust each other
* The members should be engaged in agricultural activity for a continuous period of not less than 1 year within the area of operations of the Branch
* None of the group member should be a defaulter to any formal financial institution.
* A JLG should not have more than one person from a family
* JLG should select a good / able / active leader for the JLG to ensure leadership role for the benefit of all the JLG members. However, care should be taken to ensure that benami loans are not cornered by the group leader.

### 5. Size of the JLG

* The group should be ideally of 4 to 10 members to enable the group members to offer mutual guarantee
* While informal group of upto 20 members could also be considered, such large groups are found to be not effective in fulfilling mutual guarantee obligations in the case of farmers. Therefore smaller groups of farmers (4-10 members) are recommended for effective functioning of JLG.

### 6. Group Approach

* All members of JLG should be active enough to essume leadership role. The leader should foster a sense of unity, maintain discipline, share information and facilitate repayments. For the Bank, he is the focal point for group activities. Regular meetings should be held and attended by all members to discuss issues of mutual interest and to emphasize on the roles and expectations from the members and the benefits of group dynamics.
* JLG can act as a conduit for facilitating training and technology and disseminating market information.
* The JLGs for specific activity, e.g. production of pulses / vegetables / fruits or weaving may be federated at village / block level for development of the product.
* On stabilisation JLGs could come together in the form of cluster federation forming an entire value chain, thereby achieving economics of scale in procurement, processing and marketing

### 7. Saving by JLG

* Primarily JLG is intended to be accredit group therefore, savings by the members is voluntary and the members should be encouraged to save.
* All the JLG members may be encouraged to open an individual "No Frills" account
· In case JLG chooses to undertake savings along with credit operations then they should open a savings accounts in the name of JLG with atleast two members authorised to operate the account on behalf of the group. →→→

· The quantum of loan to be given to the group should be related to the credit needs and not to the quantum of savings.

8. JLG Models Model A – Financing Individuals in the Group:

* Each member of the JLG should be provided an individual UGC. The financing branch should assess the credit requirement, based on the crop to be cultivated, available cultivable land and the credit absorption capacity of the individual.
* All members would jointly execute one inter-se document (making each one jointly and severally liable for repayment of all loans taken by all individuals in the group)
* There has to be mutual agreement and consensus among all members about the amount of individual debt liability that will be created. Any member opting out of group or joining the group will necessitate a new loan agreement

**Model B – Financing the JLG as a Group:**

* The group would be eligible for accessing one loan, which could be combined credit requirement of all its members
* The credit assessment of the groups should be based on the available cultivable area of each member of the JLG/activity to be undertaken.
* All members would jointly execute the document and own the debt liability jointly and severally
* The mutual agreement needs to ensure consensus among all members about the amount of individual debt liability that will be created. Any change in composition of the group, will lead to a new document being registered by the bank branch
* JLGs that undertake savings apart from credit are required to maintain books of accounts
* Members may also be graded by branch on the basis of performance parameters
* The credit requirements for the group may be worked out based on combined credit planed and needs of individual members and need not be linked to group's savings.

**Branches can finance JLGs by adopting any of the two models: purposes of credit**

The finance to JLG is to be a flexible credit product addressing the various credit requirements of its members including crop production, consumption, marketing and other productive purposes.

**Type of loan** Cash credit, short-term loan or term loan depending upon the purpose and tenor loan.

Loan Limit As loan to be granted is against the mutual guarantee offered by the group, maximum amount of loan may be restricted to Rs.1.00 lac per individual without margin / security for agricultural loans and up to 50000/- per borrower for composite loans.

**Margin**

| Loan Limit | Margin (in %) |
|---|---|
| Up to Rs.1.00 lac | Nil |
| Above Rs. 1.00 lac | 10-15% |

**Collateral security No collaterals**

**Model B: Documents as applicable to SHGs are to be obtained.**

**Rate of interest**

* Rate of interest as applicable to agriculture advances.
* Short term loans sanctioned to a JLG, the per member cap of Rs.3.00 lacs be considered while determining ROI under the interest subvention scheme and not the aggregate amount sanctioned to a JLG

Personal Accident Insurance Branches should cover individual members of JLG under Personal Accident insurance, applicable for Union Green Card.

**Crop Insurance**

* National Agricultural insurance Scheme (NAIS), i.e. Rashtriya Krishi Bima Yojana extends crop insurance cover to all farmers including tenant farmers, sharecroppers growing notified crops.
* Branches to work out the premium payable by the JLG members availing of crop loan and pay the same to the insurance company

Joint liability Group is emerged similar to the concept of SHG where savings of members were not given importance it is voluntary. This was supported by NABARD and banks and they have to decide on the success by conducting survey and some track on loans should be done. I see that members of JLG who avail loan most of them is the member of SHG also.

**ಹಿತನುಡಿ**

ನಾಲ್ಕು ಜನ ಸೇರಿ ಈ ಜಗತ್ತನ್ನು ಬದಲಿಸಬಹುದೆಂದು ಯಾರಾದರೂ ಹೇಳಿದರೆ ಉಪೇಕ್ಷಿಸಬೇಡಿ ಹಿಂದೆಲ್ಲ ಬದಲಾವಣೆ ಆಗಿರುವುದು ಹಾಗೆ. ಈ ನಾಲ್ವರಲ್ಲಿ ನಾನೂ ಒಬ್ಬನಾಗೋದು ಹೇಗೆಂದು ಯೋಚಿಸಿ.

Restolex
Mattresses • Pillows • Cushions
ISO 9001 : 2000 COMPANY • EXPORT AWARD WINNER



Sole Distributors for
UDUPI District

Sole Distributor for
UDUPI & D. K. Districts



Nilkamal®
India's Favourite Furniture.

# Disha Marketing

KRISHNA PRASAD APARTMENTS, KINNIMULKY, UDUPI - 1. Ph.: 0820 - 2525141, 2534941, 2534942, 2525201



# ನಾರಾಯಣ ಗುರು ಕಾಲೇಜು

ಕುದ್ರೋಳಿ, ಮಂಗಳೂರು, ಫೋನ್ : 2493517

'ವಿದ್ಯೆಯಿಂದ ಸ್ವತಂತ್ರರಾಗಿರಿ' ಎಂಬ ನಾರಾಯಣ ಗುರುಗಳ ತತ್ವದಿಂದ ಪ್ರೇರಿತರಾದ
ನಾರಾಯಣ ಗುರು ಕಾಲೇಜು, ಪಿಯುಸಿ ಮತ್ತು ಪದವಿ ತರಗತಿಗಳಿಗೆ
ಈ ಸಾಲಿನ ಪ್ರವೇಶವನ್ನು ಆರಂಭಿಸಿದೆ.

ಪಿ.ಯು.ಸಿ. – ಆರ್ಟ್ಸ್ ಮತ್ತು ಕಾಮರ್ಸ್ ಪದವಿ – ಬಿ.ಕಾಂ.

ಶುಲ್ಕದಲ್ಲಿ ವಿನಾಯಿತಿ ಹಾಗೂ ಸ್ಕಾಲರ್‌ಶಿಪ್ ಸೌಲಭ್ಯ
ಬಡ ವಿದ್ಯಾರ್ಥಿಗಳಿಗಾಗಿ ಮಧ್ಯಾಹ್ನದ ಉಚಿತ ಊಟ ಸೌಲಭ್ಯವ ಇದೆ.



ಪರೀಕ್ಷೆಯಲ್ಲಿ 60% ಮತ್ತು ಅದಕ್ಕಿಂತ
ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ
ನೀಡಲಾಗುವುದು. ಫಲಿತಾಂಶ ಬಂದ ತಕ್ಷಣ ಸಂಪರ್ಕಿಸಿ.

## ಡೊನೇಶನ್ ಇಲ್ಲ – ಅತ್ಯಂತ ಕಡಿಮೆ ಶುಲ್ಕ

# ಶ್ರೀ ವೆಂಕಟೇಶ ಶಿವಭಕ್ತಿ ಯೋಗ ಸಂಘದ ಅಧ್ಯಕ್ಷ,

## ಮಾನವತಾವಾದಿ, ಸಮಾಜಮುಖಿ ಚಿಂತಕ ಕಂಟ್ರಾಕ್ಟರ್ ಬಿ. ದೇವದಾಸ್

**ಕುದ್ರೋಳಿ ಶ್ರೀ ಗೋಕರ್ಣನಾಥನ ಹಾಗೂ ಶ್ರೀ ನಾರಾಯಣ ಗುರುಗಳ ವಿನಮ್ರ ಭಕ್ತನಾಗಿ, ಬ್ರಹ್ಮ ಶ್ರೀ ನಾರಾಯಣ ಗುರುಗಳು ಸ್ಥಾಪನೆ ಮಾಡಿದ ಶ್ರೀ ವೆಂಕಟೇಶ ಶಿವಭಕ್ತಿ ಯೋಗ ಸಂಘದ ಅಧ್ಯಕ್ಷನಾಗಿ, ಶ್ರೀ ಗೋಕರ್ಣನಾಥೇಶ್ವರ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರಾಗಿ, ಆತ್ಮಶಕ್ತಿ ಪತ್ರಿಕೆ ಪೋಷಕರಾಗಿ ಕಳೆದ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಗುರುವರ್ಯರ ತತ್ವಾದರ್ಶಗಳ ಚಿಂತನೆಯೊಂದಿಗೆ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸೇವೆಯಲ್ಲಿ ತೊಡಗಿಕೊಂಡಿರುವ ಬಿ ದೇವದಾಸ್‌ರವರ ಆದರ್ಶ ಜೀವನ ಸಮಾಜದ ಸರ್ವರಿಗೂ ಮಾರ್ಗದರ್ಶಿಯಾಗಿದೆ.**

ನಿಷ್ಕಾಮ ಕರ್ಮಯೋಗಿ, ಶಿಕ್ಷಣ ಸಂಸ್ಥೆ, ಸಂಘದ ಅಭಿವೃದ್ಧಿಯಲ್ಲಿ ಅಪ್ರತಿಮ ಸೇವೆ ಸಲ್ಲಿಸಿದ ಅಪೂರ್ವ ವ್ಯಕ್ತಿತ್ವ, ಶ್ರೀ ವೆಂಕಟೇಶ ಶಿವಭಕ್ತಿ ಯೋಗ ಸಂಘದ ಅಧ್ಯಕ್ಷರಾಗಿ, ಶ್ರೀ ಗೋಕರ್ಣನಾಥೇಶ್ವರ ಶಿಕ್ಷಣ ಸಂಸ್ಥೆಗಳ ಸರ್ವತೋಮುಖ ಏಳಿಗೆಗೆ ಅವಿರತವಾಗಿ ಶ್ರಮಿಸಿರುವ, ನಾಡಿನ ಪ್ರಸಿದ್ಧ ಕಂಟ್ರಾಕ್ಟರ್‌ರಾಗಿ ಶ್ರೀ ಗೋಕರ್ಣನಾಥ ದೇವಸ್ಥಾನ, ಬೆಂಗಳೂರು ವಿಧಾನ ಸೌಧ, ಶ್ರೀ ಗೋಕರ್ಣನಾಥೇಶ್ವರ ಕಾಲೇಜು ಸೇರಿದಂತೆ ಉತ್ಕೃಷ್ಟ ಗುಣಮಟ್ಟದ ವಿವಿಧ ಕಟ್ಟಡಗಳನ್ನು ನಿರ್ಮಿಸಿರುವ, ಆದರ್ಶ ಸಮಾಜ ಸೇವಕರಾಗಿ, ಸಾಹಿತಿಯಾಗಿ ರಾಷ್ಟ್ರ, ರಾಜ್ಯ ಪ್ರಶಸ್ತಿಗಳಿಂದ ಗೌರವಿಸಲ್ಪಟ್ಟ ಮಾನವತಾವಾದಿ, ಸಮಾಜಮುಖಿ ಚಿಂತಕ, ರಾಷ್ಟ್ರೀಯ ರತ್ನ ಕಂಟ್ರಾಕ್ಟರ್ ಶ್ರೀ ಬಿ. ದೇವದಾಸ್‌ರವರು ದಿನಾಂಕ 26-03-2019 ರಂದು ವಿಧಿವಶರಾದರು. ಇವರು ಪತ್ನಿ ಮಾಲತಿ ದೇವದಾಸ್, ಪುತ್ರ ಕಂಟ್ರಾಕ್ಟರು ಚಂದನ್‌ದಾಸ್ ಸೇರಿದಂತೆ ಇಬ್ಬರು ಪುತ್ರರು, ಒರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಸನ್ಮಾನ್ಯ ಶ್ರೀ ಬಿ. ಜನಾರ್ದನ ಪೂಜಾರಿಯವರಲ್ಲಿ ಅತ್ಯಂತ ಅಭಿಮಾನ, ಪ್ರೀತಿ ವಿಶ್ವಾಸ ಇಟ್ಟುಕೊಂಡು ಅವರ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದ ಬಿ.ದೇವದಾಸ್‌ರವರು ಜನಾರ್ದನ ಪೂಜಾರಿಯವರ ನೇತೃತ್ವದಲ್ಲಿ ನಡೆದ ಶ್ರೀ ಗೋಕರ್ಣನಾಥ ಕ್ಷೇತ್ರದ ಪುನರ್ನಿರ್ಮಾಣ ಕಾಮಗಾರಿಯಲ್ಲಿ ತೊಡಗಿಸಿಕೊಂಡು ಪೂಜಾರಿಯವರ ಪ್ರಶಂಸೆಗೊಳಪಟ್ಟರು. ಇಳಿ ವಯಸ್ಸಿನಲ್ಲೂ ಅನಾರೋಗ್ಯವಿದ್ದರೂ ಈ ಸಲ ನಡೆದ ಶ್ರೀ ಕ್ಷೇತ್ರದ ನೂತನ ಧ್ವಜ ಸ್ತಂಭ ನಿರ್ಮಾಣದ ಹಾಗೂ ಬ್ರಹ್ಮ ಕಲಶೋತ್ಸವದ ಚಟುವಟಿಕೆಯಲ್ಲಿ ಬಹಳ ಉತ್ಸಾಹದಿಂದ ಭಾಗವಹಿಸಿ ಕ್ಷೇತ್ರದ ಕಾಮಗಾರಿಗಳನ್ನು ತಾನೇ ನಿಂತು ಪರಿಶೀಲಿಸಿ ಮಗ ಚಂದನ್‌ರವರಿಗೆ ಸೂಕ್ತ ಮಾರ್ಗದರ್ಶನ ನೀಡಿ ಅದನ್ನು ಕ್ಲಪ್ತ ಸಮಯದಲ್ಲಿ ಮುಗಿಸಿಕೊಟ್ಟಿರುವುದು ಅವರ ಕರ್ತವ್ಯ ನಿಷ್ಠೆಗೆ ಸೇವಾ ಬಧ್ಧತೆಗೊಂದು ನಿದರ್ಶನ.

80ನೇಪುಟಕ್ಕೆ


With Best Compliments



**S.R.Mohod**
**Asst. Commissioner,**
**Income Tax Dept.**
**Mumbai**

*With best compliments from*



**Smt Anasuya,**

Teacher,
Beedinagudde, Udupi

*Happy Wedding*



**Chi. Hareesha M**

S/o Vasantha Bangera, N/o Kusappa Poojary
Maindala Navoor, Bantwal

**Married**

**Chi. Sou. Shwetha T**

D/o Late Divakar Poojary, N/o Late jarappa Poojary
Derebail, Konchady, Mangalore

*Best Wishes From*
**Relatives & Friends**

# ಯುರೋಪ್ ಪ್ರವಾಸ



✍ ಗೋಪಾಲಕೃಷ್ಣ ಸೋಮೇಶ್ವರ್
ಕೊಲ್ಯ, ಮಂಗಳೂರು

... ಹಿಂದಿನ ಸಂಚಿಕೆಯಿಂದ ಮುಂದುವರೆದಿದೆ

**ಮೌ**ಂಟ್ ಟೈಟ್ಲೀಸ್‌ನಲ್ಲಿ ಕೇಬಲ್ ಕಾರ್‌ನಲ್ಲಿ ಪ್ರಯಾಣ ಮಾಡಿದೆವು. ಅದೊಂದು ಅತ್ಯದ್ಭುತ ಅನುಭವ. ತುತ್ತತುದಿಯಿಂದ ಕೆಳಗೆ ಬರುವಾಗ ಪಾತಾಳ ಲೋಕಕ್ಕೆ ಹೋದ ಹಾಗೆ ಅನುಭವ ಆಗುತ್ತದೆ. ಸುತ್ತಲೂ ಇಬ್ಬನಿ ಹೊಗೆಯಿಂದ ಕೂಡಿದ್ದು, ಯಾವುದೇ




ಚಿತ್ರ ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ಒಂದು ಕಡೆ ನಮ್ಮ ಗುಂಪನ್ನು ನಿಲ್ಲಿಸಿ ಅಲ್ಲಿ ಮತ್ತೊಂದು ಸಾಹಸ ಕ್ರೀಡೆ ನಡೆಸಬೇಕಾಗಿತ್ತು. ಅದು ಹಿಮದಲ್ಲಿ ಜಾರುವುದಾಗಿತ್ತು. ಆಸಕ್ತರಿಗೆ ಕುಳಿತುಕೊಳ್ಳುವಲ್ಲಿ ಒಂದು ಗಟ್ಟಿಯಾದ ಹೊದಿಕೆಯನ್ನು ಕೊಟ್ಟು ಹಿಮದಲ್ಲಿಯೇ ಕುಳಿತು ಜಾರುವಂತೆ ಮಾಡುತ್ತಿದ್ದರು. ಕೆಲವು ಪ್ರವಾಸಿಗರಂತೂ ಪುನಃ ಪುನಃ ಬಂದು ಜಾರುತ್ತಿದ್ದರು. ಹಿಂತಿರುಗಿ ಪುನಃ ಕೇಬ್ಲ್ ಕಾರ್‌ನಲ್ಲಿ ಕುಳಿತು, ಹಿಮ ಸೇತುವೆಯಲ್ಲಿ ಕಾಲ್ನಡಿಗೆ ಮಾಡಿ ನಮ್ಮ ಪ್ರವಾಸಿಗರ ಜೊತೆ ಒಟ್ಟಾಗಿ ಪೋಟೋ ತೆಗೆದುಕೊಂಡೆವು.

ಅನಂತರ ಲಿಫ್ಟ್‌ನಲ್ಲಿ ಕೆಳಗಿಳಿದು ಊಟದ ಸೇವೆಯನ್ನು ಮುಗಿಸಿ, ಸ್ವಿರ್ಜಲೆಂಡ್ ಮೌಂಟೇನ್ ಟೈಟ್ಲೀಸ್‌ನಿಂದ, ನಮ್ಮ ನಗರ ಸಂಚಾರ ಹಾಗೂ ಶೋಪಿಂಗ್ ಆಗಿತ್ತು. ಅಲ್ಲಿ ಕೆಲವರೆಲ್ಲಾ ಬೇಕಾದ ವಸ್ತುಗಳನ್ನು ಖರೀದಿಸಿದರು. ಅಲ್ಲಿಯ ಐಸ್‌ಕ್ರೀಂ ತುಂಬಾ ಪ್ರಸಿದ್ದಿ ಪಡೆದುದರಿಂದ ಕ್ಯೂನಲ್ಲಿ ನಿಂತು ಐಸ್‌ಕ್ರೀಂ ಪಡೆದು ನಾವೆಲ್ಲಾ ರುಚಿ ನೋಡುದೆವು.

ಇಲ್ಲಿನ ನಗರದಲ್ಲಿ ಜನ ಕಿಕ್ಕಿರಿದು ತುಂಬಿರುತ್ತಾರೆ. ಮಿನಿ ಸ್ಕರ್ಟಿನ ಲಲನೆಯರು ಸಾಕಷ್ಟು ಕಾಣುತ್ತಿದ್ದರು. ಸಿಗರೇಟು ಸೇವನೆಗೆ ಅಲ್ಲಿ ನಿರ್ಬಂಧ ವಿರಲಿಲ್ಲ. ಅಲ್ಲಿ ಒಂದು ಪ್ರಸಿದ್ದ ಸರೋವರವೂ ಇತ್ತು. ಅದನ್ನು ನೋಡುವುದೇ ಒಂದು ಖುಷಿ. ಮುಂದೆ ಕಪ್ಪು ಕಲ್ಲಿನಲ್ಲಿ ಕೆತ್ತಿದ ಸಿಂಹದ ವಿಗ್ರಹವನ್ನು ನೋಡಲು ಹೋದೆವು. ಅದೊಂದು ಅಪೂರ್ವ ದೃಶ್ಯವಾಗಿತ್ತು. ಸಿಂಹವು ತುಂಬಾ ಬೇಸರ ಹಾಗೂ ದುಃಖದಿಂದ ಮಲಗಿರುವ ಕೆತ್ತನೆಯ ರೂಪ ಅತಿ ಅತ್ಯದ್ಭುತವಾಗಿತ್ತು. ತನ್ನ ಬಳಗದವರೆ ತನಗೆ ಹಿಂದಿನಿಂದ ಚೂರಿಯಿಂದ ಇರಿದ ಬಗೆಗಿನ ದುಃಖ ಸಿಂಹದ ಮುಖದಲ್ಲಿ ತೋರುತ್ತಿತ್ತು.

ಅಂದು ರಾತ್ರಿ ಸ್ವಿರ್ಜಲೆಂಡ್‌ನ ಝೂರಿಚ್‌ನಲ್ಲಿ ಉಳಿದು ಮರುದಿನ ಲೀಚೆಸ್ಟೈನ್ ಸಣ್ಣ ದೇಶದ ಕಡೆಗೆ ಪ್ರಯಾಣ ಹೊರಟೆವು. ಲೀಚೆಸ್ಟೈನ್ ಎಂಬುದು ಜಗತ್ತಿನಲ್ಲಿಯೇ ಒಂದು ಸಣ್ಣ ದೇಶ ಇದು ಸ್ವಿರ್ಜಲೆಂಡ್ ಹಾಗೂ ಆಸ್ಟ್ರೀಯ ದೇಶಗಳ ಮಧ್ಯ ಇರುವ ಒಂದು ದೇಶ. ಇದು ಬೆಟ್ಟ ಕಣಿವೆ, ಪರ್ವತಗಳಿಂದ ಕೂಡಿದ ಒಂದು ಸಣ್ಣ ದೇಶವಾಗಿದೆ. ಇಲ್ಲಿಯ ಮಾತೃಭಾಷೆ ಜರ್ಮನ್. ಇದರ ರಾಜಧಾನಿ ವಾಡುಜ್ ನಗರವಾಗಿದೆ. ಈ ದೇಶದ ಮುಖ್ಯನಗರದಲ್ಲಿ ನಾವು ಪ್ರವಾಸಿ ಟ್ರೈನ್‌ನಲ್ಲಿ ಒಂದು ಸುತ್ತು ನಗರ ಪ್ರದಕ್ಷಿಣೆ ಮಾಡಿದೆವು. ವಿವಿಧ ರೀತಿಯ ಮರಗಳು, ವಿದೇಶಿ ಹಣ್ಣು, ಹಣ್ಣು ಹಂಪಲುಗಳ ಗಿಡಗಳು, ಸೇಬು ಹಣ್ಣಿನ ಮರಗಳನ್ನು ಸೇಬು ಸಮೇತ ನೋಡಿದೆವು. ಈ ದೇಶದ ವಿಸ್ತೀರ್ಣ 62 ಚ. ಮೈಲುಗಳಾಗಿದೆ ಎಂಬುದನ್ನು ತಿಳಿದೆವು.

ಮುಂದೆ ನಮ್ಮ ಪ್ರಯಾಣ ವಾಡುಜ್ ಇನ್ಸ್‌ಬ್ರಕ್ ನಗರ ಆಸ್ಟ್ರೀಯ ದೇಶದ ಮುಂಚೂಣಿಯಲ್ಲಿರುವ ಇನ್ಸ್‌ಬ್ರಕ್ ಜಗತ್ತಿನಲ್ಲಿ ಅತೀ ಹೆಚ್ಚು ಕಲಾವಿದರನ್ನು ಕೊಟ್ಟ ದೇಶವಾಗಿದೆ. ಅಸ್ಟ್ರೀಯಾ ದೇಶದ ತೈರೋಲಿಯನ್ ಜಾನಪದ ನೃತ್ಯವನ್ನು ಅಲ್ಲಿ ವೀಕ್ಷಿಸಿದೆವು. ಅಪೂರ್ವ ನೃತ್ಯ, ಸಂಗೀತ, ವಾದ್ಯಗಳ ರಜಮಂಜರಿಯೇ ನಡೆದಿತ್ತು. ಎಲ್ಲಾ ದೇಶಗಳ ಪ್ರವಾಸಿಗಳು ದೇಶಭಕ್ತಿ ಹಾಡುಗಳನ್ನು ಹಾಡಿ ಮೈಮನ ಪುಳಕಿತಗೊಳಿಸಿದರು. ನಮ್ಮ ದೇಶದ "ಸಾರಾ ಜಹಾ ಸೆ ಅಚ್ಛಾ" ನಾವು ಹಾಡಿದ್ದು ಕೇಳಿ ಎಲ್ಲರೂ ಕರತಾಡನದೊಂದಿಗೆ ಜತೆ ಗೂಡಿದರು ರಾತ್ರಿ ಊಟ ಅಲ್ಲಿಯೇ ಮುಗಿಸಿ ಮರುದಿನ ಆಸ್ಟ್ರೀಯಾ ದೇಶ ವೇಟನ್ ಸ್ವರೋವ್‌ಸ್ಕಿಗೆ ಭೇಟಿನೀಡಿದೆವು. ಇದರ ಪ್ರವೇಶದ್ವಾರದ ನೀರಿನಿಂದ ಹರಿಯುವ ಮುಖ ಮಂಟಪ ಅತ್ಯಂತ ಸುಂದರವಾಗಿತ್ತು.



ಒಳಗೆ ಝಗಝಗಿಸುವ ವಜ್ರ ಆಭರಣಗಳಿಂದ ವಿವಿಧ ವಿನ್ಯಾಸದ ಕ್ರಿಸ್ಟಲ್ ವಿವಿಧ ಭಂಗಿಗಳಲ್ಲಿ ಸುಂದರವಾದ ಸರಮಾಲೆಗಳು ಡಿಸೈನ್‌ಗಳು, ಧರಿಸುವ ಆಭರಣಗಳು, ಬಗೆ ಬಗೆಯ ಅಲಂಕಾರಿಕ ಡಿಸೈನ್‌ಗಳು, ಮನಸ್ಸಿಗೆ ತುಂಬಾ ಮುದಕೊಟ್ಟಿತು. ಒಂದೊಂದು ಸಭಾಂಗಣದಲ್ಲಿ ಬೇರೆ ಬೇರೆ ವಿನ್ಯಾಸದಲ್ಲಿ ಮುದ ನೀಡುವ ಅಲಂಕಾರಿಕೆಗಳು ತುಂಬಾ

→→→

→→→



ಖುಷಿಯನ್ನು ತಂದುಕೊಟ್ಟಿತು. ಹೊರಗೆ ಗಾರ್ಡನ್‌ನಲ್ಲಿ ಚುಮುಕಿಸುವ ಕಾರಂಜಿಗಳು, ವಿವಿಧ ರೀತಿಯ ಕಾರಂಜಿಗಳ ನರ್ತನಗಳನ್ನು ನಾವು ವೀಕ್ಷಿಸಿ ಸಂತೋಷ ಪಟ್ಟೆವು.

ಅಲ್ಲಿ ಇನ್ಸ್‌ಬ್ರಕ್‌ನಿಂದ ಪಡೋವ ಸಿಟಿ ತಲುಪಿದೆವು. ಪಡೋವ ನಗರವು ಉತ್ತರ ಪೂರ್ವ ಇಟೆಲಿಯ ರಾಜಧಾನಿಯಾಗಿದೆ. ಆ ದಿನ ರಾತ್ರಿ ಪಡೋವದಲ್ಲಿ ವಾಸ್ತವ್ಯ ಇದ್ದು, ಮರುದಿನ ನಾವು ವ್ಯಾನಿಶ್ ನಗರಕ್ಕೆ ಹೋಗಲು ಸಜ್ಜಾದೆವು. ವ್ಯಾನಿಶ್ ನಗರಕ್ಕೆ ಹೋಗಬೇಕಾದರೆ ಸುಮಾರು ಒಂದು ಗಂಟೆ ನದಿಯಲ್ಲಿ ಬೋಟಿನಲ್ಲಿ ಹೋಗಬೇಕಾಗಿತ್ತು.

ವ್ಯಾನಿಶ್ ನಗರವೆಂದರೆ ಹಲವು ಕಾಲುವೆಗಳ ನಗರ. ಅಲ್ಲಿ ಸಿಟಿಯಲ್ಲಿ ಪ್ರಯಾಣಿಸಬೇಕಾದರೆ ಕಾಲುವೆಯ ದೋಣಿಯಲ್ಲೆ ಪ್ರಯಾಣಿಸಬೇಕು. ಸಾಧಾರಣ 50 ಮೀ ಹೋದಂತೆ ನೀರಿನ ಕಾಲುವೆ ಕಾಣಸಿಗುತ್ತದೆ. ಮಧ್ಯೆ ಮಧ್ಯೆ ದೊಡ್ಡ ದೊಡ್ಡ ಕಟ್ಟಡಗಳು, ರೆಸಿಡೆನ್ಸಿಗಳೂ ಇರುತ್ತದೆ. ಕಾಲುವೆಗಳಿಗೆ ಸೇತುವೆಗಳು ಜೋಡಣೆಯಾಗುತ್ತದೆ. ಹಲವು ಕಾಲುವೆಗಳನ್ನು ದಾಟಿದರೆ ಪ್ರಧಾನವಾದ ಸುಂದರವಾದ ವ್ಯಾನಿಸ್ ಕ್ಯಾಥೆಡ್ರಾಲ್ ಸಿಗುತ್ತದೆ. ಅದರ ಪಕ್ಕದಲ್ಲೇ ಪಾರಿವಾಳ ಗಡಾಣವೇ ಇದೆ. ಪಾರಿವಾಳಗಳು ಮಕ್ಕಳ, ಪುರುಷರ, ಮಹಿಳೆಯರ ಮೇಲೆ ಯಾವುದೇ ತೊಂದರೆ ಕೊಡದೆ ಕುಳಿತುಕೊಳ್ಳುತ್ತದೆ. ಸಾವಿರಾರು ಪಾರಿವಾಳಗಳು ನಮ್ಮ ಅಕ್ಕಪಕ್ಕದಲ್ಲಿಯೇ ಕುಳಿತುಕೊಳ್ಳುತ್ತದೆ. ಪ್ರವಾಸಿಗರು ಖುಷಿಯಿಂದ ಅದಕ್ಕೆ ತಿನ್ನಲು ಕೊಡುತ್ತಾರೆ. ಮುಂದೆ ಅಲ್ಲಿಯೇ ನಾವು ಡಿಸೈನ್ ಗ್ಲಾಸ್ ಮಾಡುವಲ್ಲಿ ಹೋದೆವು. ಅಲ್ಲಿ ತಯಾರಿ ಮಾಡುವ ಕ್ರಮವನ್ನು, ಗ್ಲಾಸ್ ಕರಗಿಸಿ ವಿಧವಿಧದ ವಿನ್ಯಾಸ ಮಾಡುವ ಪ್ರಾತ್ಯಕ್ಷತೆಯನ್ನು ನಮಗೆ ತೋರಿಸಿದರು.

ನಮ್ಮ ಪ್ರಯಾಣ ಪ್ಲಾರೆನ್ಸ್‌ನ ಪವಿತ್ರ ಕಥೆಡ್ರಲ್‌ಗೆ. ಇಲ್ಲಿಗೆ ಬರುವುದಿದ್ದರೆ 3 ಕಿ.ಮೀ ದೂರದಲ್ಲಿ ನಮ್ಮ ಬಸ್ಸನ್ನು ನಿಲ್ಲಿಸಬೇಕಾಗುತ್ತದೆ. ಅಲ್ಲಿಂದ ನಡೆದುಕೊಂಡು ಪ್ರಧಾನ ಸ್ಥಳ ಪವಿತ್ರ ಕ್ಷೇತ್ರ ಪ್ಲಾರೆನ್ಸ್ ಕ್ಯಾಥೆಡ್ರಲ್‌ಗೆ ಬರಬೇಕು. ಅಲ್ಲಿ ವಿವಿಧ ರೀತಿಯಲ್ಲಿ, ವಿವಿಧ ಭಂಗಿಗಳಲ್ಲಿ, ಅಲ್ಲಿಯ ದೇವರುಗಳ ವಿಗ್ರಹಗಳು, ಪ್ರಕೃತಿಗೆ ಸಂಬಂಧಪಟ್ಟ ವಿವಿಧ ರೀತಿಯ ವಿನ್ಯಾಸಗಳು ಕೆಲವು ನಗ್ನತೆಯಿಂದ ಕೂಡಿದ ಸುಂದರ ವಿಗ್ರಹಗಳು ಅವರ ಇತಿಹಾಸಕ್ಕೆ ಪ್ರಕೃತಿಗೆ ಸಂಬಂಧಪಟ್ಟವುಗಳಾಗಿದ್ದು ಮನಸ್ಸಿಗೆ ಮುದ ನೀಡುತ್ತಿತ್ತು.

ಜಗತ್ತಿನ ಸುಪ್ರಸಿದ್ಧ ಕಲಾಕಾರ ಮೈಕಲಾಂಜೆಲೊ ನಿರ್ಮಿಸಿದ ಇತಿಹಾಸಕ್ಕೆ ಸಂಬಂಧಪಟ್ಟ ಹಲವಾರು ವಿಗ್ರಹಗಳು ಅಲ್ಲಿ ರಾರಾಜಿಸುತ್ತಿತ್ತು. ಮೈಕಲಾಂಜೆಲೊ ಹೆಸರಿನ ಎತ್ತರದ ಬೆಟ್ಟದಲ್ಲಿ ಹೋಗಿ ನೋಡಿದರೆ ಇಡೀ ಪ್ಲಾರೆನ್ಸ್ ನಗರವೇ ಅಲ್ಲಿ ಸುಂದರವಾಗಿ ಕಾಣುತ್ತಿತ್ತು. ಇಲ್ಲಿ ಫೋಟೋ ಕ್ಲಿಕ್ಕಿಸುವವರಿಗೆ ಅದು ಸುಂದರ ತಾಣವಾಗಿದೆ. ನಾವು ಅಲ್ಲಿ ಹೋಗುವುದಕ್ಕೂ, ಸೂರ್ಯಾಸ್ತಮಾನವಾಗುದಕ್ಕೂ ಸರಿಯಾಗಿದ್ದುದರಿಂದ, ಬಾನಂಗಳದಲ್ಲಿ ಬಂಗಾರದಂಥ ಮೋಡದಲ್ಲಿ ಮರೆಯಾಗುವ ಸೂರ್ಯನು ಇಣುಕುವಂತಿತ್ತು.

ಯೂರೋಪಿನ ಯಾವುದೇ ದೇಶಕ್ಕೆ ಹೋದರೂ, ಪೆಟ್ರೋಲ್ ಪಂಪುಗಳಲ್ಲಿ ಕೆಲಸಕ್ಕೆ ಜನ ಇರುವುದಿಲ್ಲ. ವಾಹನಗಳಿಗೆ ಇಂಧನ ತುಂಬಿಸಲು ಮಾಲಕರೇ ಇಳಿದು, ಗುಂಡಿ ಒತ್ತಿ ಇಂಧನ ತುಂಬಿಸಿ ಹೋಗುತ್ತಾರೆ. ಸಾಮಾನ್ಯವಾಗಿ ಇಲ್ಲಿನ ಕೆಲವು ನಗರ ಪ್ರವಾಸಿ ಕೇಂದ್ರಗಳನ್ನು ಬಿಟ್ಟರೆ, ಜನದಟ್ಟನೆ ತುಂಬಾ ಇರುವುದಿಲ್ಲ. ಹೆದ್ದಾರಿಗಳು ಅಗಲವಾಗಿದ್ದು ಕೃಷಿ ಚಟುವಟಿಕೆಗಳು ಹೆದ್ದಾರಿ ಬದಿಗಳಲ್ಲಿ ಕಂಡು ಬರುತ್ತದೆ. ಪಾದಾಚಾರಿಗಳಿಗೆ ರಸ್ತೆದಾಟುವುದಿದ್ದರೆ ದೂರದಿಂದಲೆ ತಮ್ಮ ವಾಹನವನ್ನು ನಿಧಾನಗೊಳಿಸುತ್ತಾರೆ. ಇಲ್ಲಿ ವಾಹನ ಚಾಲಕರು ಜಾಗರೂಕರಾಗಿರುತ್ತಾರೆ. ಇಲ್ಲಿ ಬೈಕ್, ಸ್ಕೂಟರ್‌ಗಳು ತುಂಬಾ ಕಮ್ಮಿ. ರಿಕ್ಷಾ ವಾಹನಗಳು ಕಾಣುವುದಿಲ್ಲ. ಮುಂದೆ ಪ್ಲಾರೆನ್ಸ್‌ನಿಂದ ನಮ್ಮ ಪ್ರಯಾಣ ಪೀಸಾ ಲೀನಿಂಗ್ ಟವರ್‌ನತ್ತ. ಜಗತ್ತಿನ ಏಳು ಅದ್ಭುತಗಳಲ್ಲಿ ಒಂದಾದ ಲೀನಿಂಗ್ ಟವರ್ ನಿಜವಾಗಿಯೂ ಸುಂದರವಾಗಿತ್ತು. ಗೋಪುರ ವಾಲಿಕೊಂಡು ಇರುವುದು ನಿಜವಾಗಿಯೂ ಅದ್ಭುತವಾಗಿತ್ತು. ಇದರ ಉದ್ದ 185 ಅಡಿ. ಇದನ್ನು ಬಿಳಿ ಅಮೃತ ಶಿಲೆಯಿಂದ ಕಟ್ಟಲಾಗಿದೆ. ಇಟಲಿಯ ಲೀನಿಂಗ್ ಗೋಪುರ ವೀಕ್ಷಿಸಿ, ಮುಂದೆ ನಮ್ಮ ಪ್ರಯಾಣ ರೋಮ್‌ನತ್ತ ಸಾಗಿತು. ಸುಮಾರು 300 ಕಿ.ಮೀ ದೂರವನ್ನು ನಾವು ಕ್ರಮಿಸಬೇಕಾಗಿತ್ತು ಅಲ್ಲಿಂದ ಸಾಯಂಕಾಲ ನಾವು ಟ್ರೇವಿ ಕಾರಂಜಿಗೆ ಭೇಟಿ ನೀಡಿದೆವು. ರೋಮಿಗೆ ಹೋದವರು ಟ್ರೇವಿ ಕಾರಂಜಿಗೆ ಹೋಗದೆ ಬರಲಾರರು. ಟ್ರೇವಿ ಕಾರಂಜಿಯಲ್ಲಿ ದೇವರುಗಳ ಸುಂದರವಾದ ದೇವರ ಮೂರ್ತಿಗಳು ನಿರ್ಮಾಣಗೊಂಡಿದೆ. ಅದಕ್ಕೆ ಹೊಂದಿಕೊಂಡು ಸುಂದರವಾದ ಇತರ ದೇವರ ಮೂರ್ತಿಗಳೂ ಇದೆ. ಈ ಟ್ರೇವಿ ಕಾರಂಜಿಯಲ್ಲಿ ಪ್ರವಾಸಿಗರು ರೋಮ್‌ನ 3 ನಾಣ್ಯಗಳನ್ನು ಎಸೆಯುತ್ತಾರೆ. ಮೊದಲನೆಯ ಒಂದು ನಾಣ್ಯ ಹಾಕಿದರೆ, ಪ್ರವಾಸಿಗರು ಅವರ ದೇಶಕ್ಕೆ ಸುರಕ್ಷಿತವಾಗಿ ತಲುಪುತ್ತಾರೆ ಎಂದು ಪ್ರತೀತಿ, ಅಥವಾ ರೋಮ್ ದೇಶಕ್ಕೆ ಇನ್ನೊಮ್ಮೆ ಬರುತ್ತಾರೆಂದು ಪ್ರತೀತಿ. ಎರಡನೆಯ ನಾಣ್ಯ ಹಾಕಿದರೆ, ಹಾಕಿದವನಿಗೆ ಜೀವನದಲ್ಲಿ ಪ್ರೇಮಾಂಕುರವಾಗುತ್ತದೆ ಅಥವಾ ರೋಮೇನ್ಸ್ ನಲ್ಲಿ ಇರುತ್ತಾರೆಂದು ಪ್ರತೀತಿ. ಮೂರನೇಯ ನಾಣ್ಯ ಹಾಕಿದರೆ ಮದುವೆ ಆಗುತ್ತಾರೆಂದು ಪ್ರತೀತಿ. ಪ್ರವಾಸಿಗರೆಲ್ಲಾ ಈ ಕಾರಂಜಿಯನ್ನು ಕಂಡು ತನ್ನ ಮನದಿಚ್ಛೆಯನ್ನು ಸಂಕಲ್ಪಿಸಿ ನಾಣ್ಯ ಹಾಕುತ್ತಾರೆ. ಆ ದಿನ ರಾತ್ರಿ ರೋಮ್ ಪಿಸಾನಾದಲ್ಲಿ (ಹೋಟೆಲ್ ಹೆಸರು) ವಾಸ್ತವ್ಯ.

ನಮ್ಮ ಕೊನೆಯ ಕ್ಲೈಮೇಕ್ಸ್ ಪ್ರವಾಸ ವೇಟಿಕನ್ ನಗರ, ವೇಟಿಕನ್ ಕ್ಯಾಥೆಡ್ರಲ್‌ಗೆ ಭೇಟಿ ಕೊಡಬೇಕಾಗಿರುವುದರಿಂದ ಮೊದಲೇ ಟಿಕೇಟು ಬುಕ್ ಮಾಡಿರಬೇಕು ಮತ್ತು ಸಮಯ ನಿಗದಿ ಮಾಡಿರಬೇಕು. ಅದೇ ಸಮಯಕ್ಕೆ ಸರಿಯಾಗಿ ಬಂದರೆ ಒಳಗೆ ಹೋಗಲು ವ್ಯವಸ್ಥೆ ಇದೆ.

..... **ಮುಂದಿನ ಸಂಚಿಕೆಯಲ್ಲಿ ಮುಂದುವರೆಯುತ್ತದೆ.**

# ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಆತ್ಮಶಕ್ತಿ ಬಳಗದ ಶುಭಾಶಯಗಳು

## ಶ್ರೇಯಾ



ಕಾರ್ಕಳದ ಕಾಲೇಜಿನ ವಿದ್ಯಾರ್ಥಿನಿ ಶ್ರೇಯಾ ಇವರು ಈ ಬಾರಿಯ ಪಿ.ಯು. ಪರೀಕ್ಷೆಯಲ್ಲಿ 97.83% ಅಂಕಗಳಿಸಿ ಶಾಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಇವರು ಕಾರ್ಕಳದ ರವಿರಾಜ್ ಪೂಜಾರಿ ಮತ್ತು ಶೈಲಜಾ ಇವರ ಹೆಮ್ಮೆಯ ಸುಪುತ್ರಿಯಾಗಿದ್ದಾರೆ.

## ನಿಸರ್ಗ



ಕಾರ್ಕಳ ಜ್ಞಾನಸುಧ ಪಿ.ಯು. ಕಾಲೇಜಿನ ವಿದ್ಯಾರ್ಥಿನಿ ನಿಸರ್ಗ ಎಂ. ಕುಮಾರಿ ಇವರು ಈ ಬಾರಿಯ ಪಿ.ಯು. ಪರೀಕ್ಷೆಯಲ್ಲಿ 96.66% ಅಂಕಗಳಿಸಿ ಶಾಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಇವರು ಕುಂಟಲಪಾಡಿ ಕಾರ್ಕಳ ತಾಲೂಕು ಉಡುಪಿ ಜಿಲ್ಲೆಯ ಮೋಹನ ಸಾಲಿಯಾನ್ ಮತ್ತು ವನಿತ ಇವರ ಹೆಮ್ಮೆಯ ಪುತ್ರಿಯಾಗಿದ್ದಾರೆ.

## ವಿನುತಾ



ಬಜ್ಪೆ ಸುಂಕದಕಟ್ಟೆಯ ಶ್ರೀ ನಿರಂಜನ ಸ್ವಾಮಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿ ಕು। ವಿನುತಾ ಇವರು ಈ ಬಾರಿಯ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 92.33% ಅಂಕಗಳಿಸಿ ಕಾಲೇಜಿಗೆ ಪ್ರಥಮ ಸ್ಥಾನಿಯಾಗಿ ಮೂಡಿಬಂದಿದ್ದಾರೆ. ಇವರು ಸುಂಕದಕಟ್ಟೆ ಕೊಳಂಬೆಯ ಶ್ರೀ ರಮೇಶ್ ಆಚಾರ್ಯ ಮತ್ತು ಶ್ರೀಮತಿ ಶೋಭಾ ಇವರುಗಳ ಹೆಮ್ಮೆಯ ಸುಪುತ್ರಿಯಾಗಿದ್ದಾರೆ.

## ಶ್ರಾವ್ಯ



ಬಜ್ಪೆಯ ಗುರುಪುರ ಸರ್ಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ ಶ್ರಾವ್ಯ ಇವರು ಈ ಬಾರಿಯ ಪಿ.ಯು. ಪರೀಕ್ಷೆಯಲ್ಲಿ 537 ಅಂಕಗಳಿಸಿ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಇವರು ಎಡಪದವಿನ ಜಯರಾಮ ಮತ್ತು ಮಮತಾ ಅವರ ಪುತ್ರಿಯಾಗಿದ್ದಾರೆ.

## ನಾಗಾಂಜಲಿ ಪರಮೇಶ್ವರ ನಾಯ್ಕ



ಕುಮಟಾ ಕೊಂಕಣ ಎಜ್ಯುಕೇಶನ್‌ನ ಸಿವಿಎಸ್‌ಕೆ ಪ್ರೌಢಶಾಲೆಯ ವಿದ್ಯಾರ್ಥಿನಿ ನಾಗಾಂಜಲಿ ಪರಮೇಶ್ವರ ನಾಯ್ಕ ಇವರು ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕಗಳಿಸಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿರುತ್ತಾರೆ. ಇವರು ಪರಮೇಶ್ವರ ನಾಯ್ಕ ಮತ್ತು ಚೇತನಾ ನಾಯ್ಕ ದಂಪತಿಗಳ ಹೆಮ್ಮೆಯ ಪುತ್ರಿಯಾಗಿದ್ದಾರೆ.

## ಹರ್ಷಿತಾ



ಬಜ್ಪೆ ಹೋಲಿ ಫ್ಯಾಮಿಲಿ ಪ್ರೌಢಶಾಲೆಯ ವಿದ್ಯಾರ್ಥಿನಿ ಕು। ಹರ್ಷಿತ ಇವರು ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 92.5% ಅಂಕಗಳಿಸಿ ಶಾಲೆಗೆ ಪ್ರಥಮ ಸ್ಥಾನಿಯಾಗಿ ಮೂಡಿಬಂದಿದ್ದಾರೆ. ಬಜ್ಪೆ ಯುವವಾಹಿನಿ ಘಟಕದ ಸಕ್ರಿಯ ಸದಸ್ಯರುಗಳಾದ ಶ್ರೀಮತಿ ಮೀನಾಕ್ಷಿ ಪೂಜಾರ್ತಿ ಮತ್ತು ಶ್ರೀ ಕೇಶವ ಇವರ ಹೆಮ್ಮೆಯ ಸುಪುತ್ರಿಯಾಗಿದ್ದಾರೆ.


With Best Compliments from



ಎಸ್ ಪ್ರವೀಣ್ ಕುಮಾರ್

ನ್ಯಾಯವಾದಿ ಹಾಗೂ ಸಹಾಯಕ ಸರ್ಕಾರಿ ವಕೀಲರು

ಪುತ್ತೂರು



PROFICIENT

COACHING CLASSES

Near Bikarnakatte Bus Stop,
Mangalore -575 005

V to X STD., (STATE/CBSE)

PUC, B.Com, BBM,CET,

SPOKEN ENGLISH & DRAWING

@ BIKARNAKATTE

Contact: 9686903631

# ಊರ್ಮಿಳಾ ರಮೇಶ್ ಕುಮಾರ್ ಅವರಿಗೆ "ವೀರ ರಾಣಿ ಅಬ್ಬಕ್ಕ ಪ್ರಶಸ್ತಿ"

## ಶೈಕ್ಷಣಿಕ, ಸಾಮಾಜಿಕ ಧಾರ್ಮಿಕ ಕ್ಷೇತ್ರದ ಅಪೂರ್ವ ಸಾಧಕಿ



ಮಂಗಳೂರು : ಓರ್ವ ಯಶಸ್ವಿ ಉದ್ಯಮಿಯಾಗಿ ಆ ಮೂಲಕ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕ್ಷೇತ್ರಕ್ಕೆ ಅಪೂರ್ವ ಕೊಡುಗೆಗಳ ಮೂಲಕ ಸಮಾಜದ ಸೇವೆಯಲ್ಲಿ ನಿರತರಾಗಿ, ಮಹಿಳೆಯರಿಗೆ ಆದರ್ಶರಾಗಿ, ವಿವಿಧ ಕ್ಷೇತ್ರದ ಸಾಧನೆಯಿಂದ ಶ್ರೇಷ್ಠತೆಯನ್ನು ಪಡೆದಿರುವ ಶ್ರೀಮತಿ ಊರ್ಮಿಳಾ ರಮೇಶ್ ಕುಮಾರ್ ಅವರಿಗೆ ದ.ಕ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಂಯೋಗದಲ್ಲಿ ಇತ್ತೀಚೆಗೆ ಉಳ್ಳಾಲದಲ್ಲಿ ನಡೆದ ವೀರ ರಾಣಿ ಅಬ್ಬಕ್ಕ ಉತ್ಸವದಲ್ಲಿ ಪ್ರತಿಷ್ಠಿತ 2018–19 ನೇ ಸಾಲಿನ "ವೀರ ರಾಣಿ ಅಬ್ಬಕ್ಕ ಪ್ರಶಸ್ತಿ" ಪ್ರದಾನಿಸಿ ಗೌರವಿಸಲಾಗಿದೆ.

ಮಂಗಳೂರಿನ ಬರ್ಕೆ ಕಂಬಳ ಪರಿಸರದಲ್ಲಿ ಹುಟ್ಟಿದ ಊರ್ಮಿಳಾ ಅವರು, ಶಿಕ್ಷಣ ಮುಗಿಸಿದ ಬಳಿಕ ವಿಜಯಾ ಬ್ಯಾಂಕಿನಲಿ ಉದ್ಯೋಗಕ್ಕೆ ಸೇರ್ಪಡೆಯಾಗಿ 22 ವರ್ಷ ಸೇವೆ ಸಲ್ಲಿಸಿದರು. 1979 ರಲ್ಲಿ ನಿರ್ಮಾಣ ಕ್ಷೇತ್ರದ ಪ್ರಖ್ಯಾತ ಉದ್ಯಮಿ ರಮೇಶ್ ಕುಮಾರ್ ಅವರನ್ನು ವಿವಾಹವಾದ ಬಳಿಕ ಊರ್ಮಿಳಾ ಅವರು ಉದ್ಯಮ ಕ್ಷೇತ್ರದಲ್ಲಿ ಪತಿಯ ಜತೆಗೆ ಬೆಂಗಾವಲಾಗಿ ನಿಂತು ಅವಿರತ ಶ್ರಮಿಸಿದರು. ಇದರ ಫಲವಾಗಿ ಜನತಾ ಕನ್‌ಸ್ಟ್ರಕ್ಷನ್ ಅತ್ಯಂತ ಯಶಸ್ವಿ ಸಂಸ್ಥೆಯಾಗಿ ಬೆಳವಣಿಗೆ ಹೊಂದಿ ಪ್ರಖ್ಯಾತಿಯಾಯಿತು. ಹೋಟೇಲ್ ಉದ್ಯಮದಲ್ಲೂ ತೊಡಗಿಸಿಕೊಂಡ ಅವರು ದೀಪಾ ಕಂಫರ್ಟ್ಸ್‌ನ ಆಡಳಿತ ನಿರ್ದೇಶಕರಾಗಿಯೂ ಅವರು ಕರ್ತವ್ಯ ನಿರ್ವಹಿಸಿ ಬೇಷ್ ಎನಿಸಿಕೊಂಡರು.

ಉದ್ಯಮದ ಜತೆ ಜತೆಗೆ ಸಾಮಾಜಿಕ ಸೇವಾ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡ ಊರ್ಮಿಳಾ ರಮೇಶ್ ಕುಮಾರ್ ಅವರು ಪ್ರತೀವರ್ಷ ನೂರಾರು ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ನೀಡುತ್ತಿದ್ದಾರೆ. ಅದಲ್ಲದೆ ಬಡಕುಟುಂಬದ ಕೆಲವು ವಿದ್ಯಾರ್ಥಿಗಳನ್ನು ದತ್ತು ತೆಗೆದುಕೊಂಡು ಅವರ ಶಿಕ್ಷಣದ ಜವಾಬ್ದಾರಿಯನ್ನೂ ತಾವೇ ನಿರ್ವಹಿಸಿಕೊಂಡು ಅವರ ಬಾಳಲ್ಲಿ ಬೆಳಕಾಗಿದ್ದಾರೆ. ಸಮಾಜದ ಎಲ್ಲಾ ವರ್ಗದವರಿಗೂ ಉಚಿತ ಫಿಸಿಯೋಥೆರಫಿ ತಪಾಸಣೆ, ಚಿಕಿತ್ಸೆಯ ವ್ಯವಸ್ಥೆ ಮಾಡಿದ್ದಾರೆ. ಅದಲ್ಲದೆ ಕಿಡ್ನಿ, ಕ್ಯಾನ್ಸರ್, ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವವರಿಗೆ ಅರ್ಥಿಕವಾಗಿ ಸಹಾಯ ಹಸ್ತ ಚಾಚಿದ್ದಾರೆ. ಸಾಮೂಹಿಕ ವಿವಾಹ ಕಾರ್ಯಕ್ರಮ ಆಯೋಜಿಸುವ ಮೂಲಕ ಕಡುಬಡ ಕುಟುಂಬದ ವಧು-ವರರಿಗೆ ದಾಂಪತ್ಯದ ಭಾಗ್ಯ ಕರುಣಿಸಿದ್ದಾರೆ.

ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದ ನವೀಕರಣ ಹಾಗೂ ಅಭಿವೃದ್ಧಿಯ ರೂವಾರಿ ಕೇಂದ್ರದ ಮಾಜಿ ಸಚಿವರಾದ ಸನ್ಮಾನ್ಯ ಶ್ರೀ ಜನಾರ್ದನ ಪೂಜಾರಿ ಅವರ ಸಲಹೆ, ಮಾರ್ಗದರ್ಶನದಂತೆ ಕ್ಷೇತ್ರದ ಅಭಿವೃದ್ಧಿ ಸಮಿತಿಯ ಉಪಾಧ್ಯಾಕ್ಷರಾಗಿ ಶ್ರೀ ಕ್ಷೇತ್ರದ ಸರ್ವಾಂಗಿಣ ಅಭಿವೃದ್ಧಿಯಲ್ಲಿ ನಿರಂತರವಾಗಿ ಕೈಜೋಡಿಸುತ್ತಿದ್ದಾರೆ. ಶ್ರೀ ಕ್ಷೇತ್ರದಲ್ಲಿ ಗಿರಿಜಾ ಕಲ್ಯಾಣ, ಶ್ರೀನಿವಾಸ ಕಲ್ಯಾಣ ಅತ್ಯಂತ ಯಶಸ್ವಿಯಾಗಿ ಇವರ ನೇತೃತ್ವದಲ್ಲಿ ನೆರವೇರಿದೆ. ಲಲಿತಾ ಭಜನಾ ಮಂಡಳಿಯ ಮುಖ್ಯಸ್ಥೆಯಾಗಿ ಪ್ರತಿವರ್ಷ ವರಮಹಾಲಕ್ಷ್ಮೀ ಪೂಜೆ ಆಯೋಜಿಸಿ 5,000 ಕ್ಕೂ ಅಧಿಕ ಮಹಿಳೆಯರಿಗೆ, ಮಾತೆಯರಿಗೆ ಬಾಗಿನ ಅರ್ಪಿಸುತ್ತಿದ್ದಾರೆ.

ಶ್ರೀಮತಿ ಊರ್ಮಿಳಾ ರಮೇಶ್ ಕುಮಾರ್ ಅವರ ಅಪೂರ್ವ ಸೇವೆಗೆ ಸಂದ ಗೌರವ ಸಮಾಜಕ್ಕೆ ಹೆಮ್ಮೆಯನ್ನು ಉಂಟು ಮಾಡಿದೆ. ಶ್ರೀ ಗೋಕರ್ಣನಾಥೇಶ್ವರ ಶಿಕ್ಷಣ ಸಂಸ್ಥೆಯ ಅಭಿವೃದ್ಧಿಯಲ್ಲೂ ಭಾಗಿಯಾಗುತ್ತಿರುವ ಊರ್ಮಿಳಾ ರಮೇಶ್ ಕುಮಾರ್ ಅವರಿಗೆ ಹೃದಯಪೂರ್ವಕ ಅಭಿನಂದನೆಗಳು. ಸಮಾಜಕ್ಕೆ ಅವರಿಂದ ಇನ್ನಷ್ಟು ಸೇವೆ ದೊರೆಯುವಲ್ಲಿ ಶ್ರೀ ಗೋಕರ್ಣನಾಥ ಕ್ಷೇತ್ರದ ಸರ್ವಶಕ್ತಿಗಳೂ ಹಾಗೂ ಗುರುವರ್ಯರ ಕೃಪೆ ಸದಾ ಅವರಿಗೆ ದೊರೆಯಲೆಂದು ಆತ್ಮಶಕ್ತಿ ಬಳಗದ ಹಾರೈಕೆಗಳು.

# ಬಲ್ಯೊಟ್ಟು ಕ್ಷೇತ್ರದಲ್ಲಿ ಚಂಡಿಕಾಯಾಗ

ಕಾರ್ಕಳ: ತಾಲ್ಲೂಕಿನ ಕ್ಷೇತ್ರ ಬಲ್ಯೊಟ್ಟುವಿನಲ್ಲಿ ಕ್ಷೇತ್ರದ ವಿಖ್ಯಾತಾನಂದ ಸ್ವಾಮೀಜಿ ನೇತೃತ್ವದಲ್ಲಿ ಲೋಕಕಲ್ಯಾಣಾರ್ಥವಾಗಿ ನಡೆದ ಚಂಡಿಕಾಯಾಗ ಸಂಪನ್ನಗೊಂಡಿತು. ಕೇರಳದ ಶಿವಗಿರಿ ಮಠದ ಯತಿ ವಿಶುದ್ಧಾನಂದ ಸ್ವಾಮೀಜಿ ಉಪಸ್ಥಿತಿಯಲ್ಲಿ ಆದಿಚುಂಚನಗಿರಿ ಮಂಗಳೂರು ಶಾಖಾಮಠದ ಧರ್ಮಪಾಲನಾಥ ಸ್ವಾಮೀಜಿ, ಶ್ರೀಧಾಮ ಮಾಣಿಲದ ಮೋಹನದಾಸ ಸ್ವಾಮೀಜಿ ಯಾಗದಲ್ಲಿ ಆಶೀರ್ವಚನ ನೀಡಿದರು.

ಬೆಳಿಗ್ಗೆ 6ಗಂಟೆಗೆ ಆರಂಭಗೊಂಡ ಯಾಗದ ಧಾರ್ಮಿಕ ವಿಧಿ, ವಿಧಾನಗಳು ಶಿವಗಿರಿಯ ನಾರಾಯಣ ಪ್ರಸಾದ್ ಅವರ ನೇತೃತ್ವದಲ್ಲಿ ಹಾಗೂ ಮಂಗಳೂರು ನಾರಾಯಣ ವೈದಿಕ ಗುರುಪೀಠದ ಅಧ್ಯಕ್ಷ ಸೋಮನಾಥ ಶಾಂತಿ ಹಾಗೂ ತಂಡದ ಸಹಕಾರದಲ್ಲಿ ಮಧ್ಯಾಹ್ನ ಪೂರ್ಣಾಹುತಿ ನಡೆಯಿತು. ನಂತರ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ವಿಶುದ್ಧಾನಂದಜೀ ಅವರನ್ನು ಬಲ್ಯೊಟ್ಟು ಚಂಡಿಕಾಯಾಗ ಸಮಿತಿ ಗುರುಕೃಪಾ ವಿದ್ಯಾಸಂಸ್ಥೆ, ಹೊಸ್ಮಾರಿನ ಸಾರ್ವಜನಿಕರು, ಮೂಡಬಿದಿರೆ, ಬೆಳ್ತಂಗಡಿ, ಬಜಗೋಳಿ ಹಾಗೂ ಹೊಸ್ಮಾರಿನ ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಂಸ್ಥೆಗಳ ವತಿಯಿಂದ ಅಭಿನಂದಿಸಲಾಯಿತು. ಕ್ಷೇತ್ರದ ವಿಖ್ಯಾತಾನಂದ ಸ್ವಾಮಿಜಿ ಪ್ರಾಸ್ತಾವಿಕವಾಗಿ



ಮಾತನಾಡಿದರು. ಚಂಡಿಕಾಯಾಗ ಸಮಿತಿಯ ಅಧ್ಯಕ್ಷ ಭಾಸ್ಕರ ಎಸ್.ಕೋಟ್ಯಾನ್ ಅಧ್ಯಕ್ಷತೆ ವಹಿಸಿದ್ದರು. ಸಮಿತಿಯ ಗೌರವಾಧ್ಯಕ್ಷ ಸತ್ಯಜಿತ್ ಸುರತ್ಕಲ್ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಕೃಷ್ಣ ಕುಮಾರ್ ಕಾರ್ಯಕ್ರಮ ನಿರ್ವಹಿಸಿದರು. ಸಾರ್ವಜನಿಕ ಅನ್ನ ಸಂತರ್ಪಣೆಯಲ್ಲಿ ಸಾವಿರಾರು ಭಕ್ತರು ಭಾಗವಹಿಸಿದ್ದರು.


**Jaya Poojary**

**"Bhuvi"**

Pioneer Complex, Nellikai Road,
Near State Bank of India
Mangalore



**JAYA K. KOTIAN**

**Menaka J. Kotian**
**Lohith J. Kotian ,**
**Tilakraj J. Kotian**
**Thikshna J. Kotian**

**THANNIRBAVI, KULOOR,
MANGALORE**

# NCCT ಯಿಂದ ಸಹಕಾರ ನಿರ್ವಹಣೆಯಲ್ಲಿ ಉನ್ನತ ಡಿಪ್ಲೋಮಾ (HDCM) ದೂರ ಶಿಕ್ಷಣ ಕೋರ್ಸ್

## ಆತ್ಮಶಕ್ತಿ ವಿವಿದೊದ್ದೇಶ ಸಹಕಾರಿ ಸಂಘದಿಂದ ನಿರ್ವಹಣೆ

ಸಹಕಾರ ಕಾಯ್ದೆ ಮತ್ತು ನಿಯಮಗಳಲ್ಲಿ ಪತ್ತಿನ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ನೇಮಕಾತಿ ಮತ್ತು ಒಬ್ಬ ನೌಕರನ ಯಾವುದೇ ಉನ್ನತ ಹುದ್ದೆಗೆ ಪದೋನ್ನತಿ ನೀಡುವಾಗ ಅರ್ಹತೆಯಲ್ಲಿ Higher Diploma in Co-Operative Management (HDCM) ಕೋರ್ಸ್‌ನ್ನು ನಿಗದಿಪಡಿಸಿರುವುದರಿಂದ ಮುಂದಿನ ದಿನಗಳಲ್ಲಿ ಈ ಶಿಕ್ಷಣದ ಅಗತ್ಯವಿರುತ್ತದೆ. ಆತ್ಮಶಕ್ತಿ ವಿವಿಧೋದ್ಧೇಶ ಸಹಕಾರಿ ಸಂಘವು ಈ ಕೋರ್ಸನ್ನು ನಡೆಸುತ್ತಾ ಬಂದಿದ್ದು ಜಿಲ್ಲೆಯ ಸಹಕಾರ ಸಂಘಗಳ ಹಿರಿಯ ಸಿಬ್ಬಂದಿಗಳು ಸೇರಿದಂತೆ ಎಲ್ಲಾ ಸಿಬ್ಬಂದಿಗಳಿಗೆ ದೂರ ಶಿಕ್ಷಣ ಮಾದರಿಯಲ್ಲಿ ಮಂಗಳೂರು ಕೇಂದ್ರಿಕೃತವಾಗಿ ತರಗತಿಗಳು, ಮೌಖಿಕ ಪರೀಕ್ಷೆ ಮತ್ತು ಮುಖ್ಯ ಪರೀಕ್ಷೆಗಳು ನಡೆಯುತ್ತಿದ್ದು HDCM ಶಿಕ್ಷಣವನ್ನು ಪಡೆಯಲು ಅನುಕೂಲವಾಗಿದೆ. ತರಗತಿಗಳು ಮತ್ತು ಎಲ್ಲಾ ಪರೀಕ್ಷೆಗಳು ರಜಾದಿನಗಳಂದು ನಡೆಯಲಿರುವುದರಿಂದ ಸಹಕಾರ ಸಂಘಗಳ ಸಿಬ್ಬಂದಿಗಳಿಗೆ ಪೂರಕವಾಗಲಿದೆ. ಆರು ತಿಂಗಳ ಅವಧಿಯ ಕೋರ್ಸಿನಲ್ಲಿ 13 ವಿಷಯ ಹೊಂದಿದ್ದು ಎರಡು ಸೆಮಿಸ್ಟರ್‌ನಲ್ಲಿ ಈ ತರಬೇತಿ ನಡೆಯಲಿದೆ. ವಿವಿಧ ಸಹಕಾರಿ ಸಂಘಗಳು ತಮ್ಮ ಸಿಬ್ಬಂದಿ ನೇಮಕದಲ್ಲಿ ಈ ಕೋರ್ಸಿಗೆ ಆದ್ಯತೆ ನೀಡುತ್ತಿರುವುದು ತಮ್ಮ ಗಮನಕ್ಕೆ ತರುತ್ತಿದ್ದೇವೆ.

ಭಾರತೀಯ ಕೃಷಿ ಸಚಿವಾಲಯದ ಅಧೀನದಲ್ಲಿರುವ ನ್ಯಾಶನಲ್ ಕೌನ್ಸಿಲ್ ಫಾರ್ ಕೋಪರೇಟಿವ್ ಟ್ರೈನಿಂಗ್, ನವದೆಹಲಿ ಇವರು ಪಾದೇಶಿಕ ಸಹಕಾರ ನಿರ್ವಹಣಾ ಕೇಂದ್ರ ಬೆಂಗಳೂರು, ಇವರಿಂದ ನಡೆಸಲ್ಪಡುವ Higher Diploma in Co-Operative Management (HDCM) ದೂರ ಶಿಕ್ಷಣ ಕೋರ್ಸ್‌ನ್ನು ಮಂಗಳೂರು ಕೇಂದ್ರಿಕೃತವಾಗಿ ಆತ್ಮಶಕ್ತಿ ವಿವಿಧೋದ್ಧೇಶ ಸಹಕಾರಿ ಸಂಘ (ನಿ.) ಮಂಗಳೂರು ಇವರಿಗೆ ನೀಡಿದುದು ಸಂಘದ ಹಿರಿಮೆಯಾಗಿದೆ. ಇವರ ಸಹಭಾಗಿತ್ವದಲ್ಲಿ ಈಗಾಗಲೇ ಪ್ರಥಮ ಬ್ಯಾಚಿನಲ್ಲಿ 77 ಮಂದಿ ಸಹಕಾರಿ ಸಂಘದ ಹಾಗೂ ಪದವೀದರರು ಪರೀಕ್ಷೆ ಬರೆದಿರುತ್ತಾರೆ. ಮುಂದಿನ ಬ್ಯಾಚ್‌ಗೆ ಈಗಾಗಲೇ 78 ಮಂದಿ ನೋಂದಣಿ ಮಾಡಿದ್ದಾರೆ.ಈಗಾಗಲೇ 100 ಶೇಕಡಾ ಫಲಿತಾಂಶ ಮೊದಲನೆಯ ಪರೀಕ್ಷೆಯಲ್ಲಿ ಪಡೆದಿರುವುದು ಇಲ್ಲಿ ಉಲ್ಲೇಖನೀಯ. ಸಹಕಾರಿ ಸಂಘಗಳ ಸಿಬ್ಬಂದಿಗಳಿಗೆ ಈ ಕೋರ್ಸಿನ ಪರೀಕ್ಷೆಗೆ ಹಾಜರಾಗಲು ಅನುಕೂಲವಾಗುವಂತೆ ನಗರದ ಕೇಂದ್ರ ಭಾಗದಲ್ಲಿರುವ ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜು (ಹಳೆಯ ಸರಕಾರಿ ಕಾಲೇಜು) ಇಲ್ಲಿ ನಡೆಯುತ್ತಿದೆ. ವಿವಿಧ ಪ್ರದೇಶಗಳಿಂದ ಬರುವ ಸಿಬ್ಬಂದಿಗಳಿಗೆ ಇದು ತುಂಬಾ ಅನುಕೂಲವಾಗಿದೆ.

ಸಹಕಾರಿ ಸಂಘಗಳ ಸಿಬ್ಬಂದಿಗಳು ಹಾಗೂ ಪದವೀದರರು ಹೆಚ್ಚಿನ ಮಾಹಿತಿಗಾಗಿ ಆತ್ಮಶಕ್ತಿ ವಿವಿಧೋದ್ಧೇಶ ಸಹಕಾರಿ ಸಂಘದ ಯಾವುದೇ ಶಾಖೆಯನ್ನು ಸಂಪರ್ಕಿಸಬಹುದೆಂದು ಸಂಘದ ಅಧ್ಯಕ್ಷರಾದ ಶ್ರೀ ಚಿತ್ತರಂಜನ್ ಬೋಳಾರ್ ತಮ್ಮ ಪ್ರಕಟನೆಯಲ್ಲಿ ತಿಳಿಸಿರುತ್ತಾರೆ.

**ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0824– 2430555, 4273555**

---

75ನೇ ಪುಟದಿಂದ

**ಶ್ರೀ ವೆಂಕಟೇಶ ಶಿವಭಕ್ತಿ ಯೋಗ ಸಂಘದ ಅಧ್ಯಕ್ಷ, ಮಾನವತಾವಾದಿ, ಸಮಾಜಮುಖಿ ಚಿಂತಕ ಕಂಟ್ರಾಕ್ಟರ್ ಬಿ. ದೇವದಾಸ್.**

ಸಮಾಜ ಹೆಮ್ಮೆ ಪಡುವ ರಾಷ್ಟ್ರೀಯ ರತ್ನ ಪ್ರಶಸ್ತಿ, ಕರ್ನಾಟಕ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಸುವರ್ಣ ಕರ್ನಾಟಕ ಏಕೀಕರಣ ರಾಜ್ಯ ಪ್ರಶಸ್ತಿ, ವಿಶ್ವೇಶ್ವರ ಪ್ರಶಸ್ತಿ, ರಾಷ್ಟ್ರೀಯ ರಾಜೀವ್ ಗಾಂಧಿ ಸಧ್ಭಾವನ ಪ್ರಶಸ್ತಿ, ರಾಷ್ಟ್ರೀಯ ಸಿವಿಲ್ ಇಂಜಿನಿಯರ್ ಅಲ್ಟ್ರಾಟೆಕ್ ಪ್ರಶಸ್ತಿ, ಬಸವ ಜ್ಯೋತಿ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿ, ಗೌರವಗಳು ಕಂಟ್ರಾಕ್ಟರ್ ದೇವದಾಸ್‌ರವರನ್ನು ಹುಡುಕಿಕೊಂಡು ಬಂದವು. ತನ್ನ ಸಾಧನೆ, ಸರಳತೆ ಸಜ್ಜನಿಕೆಯ ಆದರ್ಶ ಬದುಕು, ನಿಸ್ವಾರ್ಥ ಸಾಮಾಜಿಕ ಸೇವೆ, ಬಡವರು ಅಸಹಾಯಕರಿಗೆ ನಿರಂತರ ಆರ್ಥಿಕ ಸಹಾಯ, ವ್ಯವಹಾರದಲ್ಲಿ ಪ್ರಾಮಾಣಿಕತೆ, ಗುಣಮಟ್ಟದ ಸೇವಾ ಬದ್ಧತೆಯಿಂದ ಸಮಾಜ ಹೆಮ್ಮೆ ಪಡುವ ರೀತಿಯಲ್ಲಿ ಬದುಕಿದ ಅವರು ನಿಜಾರ್ಥದಲ್ಲಿ ಓರ್ವ ದೇವತಾ ಮನುಷ್ಯನಾಗಿ ಸಮಾಜಕ್ಕೆ ಮಾದರಿಯಾದರು.

ಕಂಟ್ರಾಕ್ಟರ್ ದೇವದಾಸ್‌ರವರ ನಿಧನದಿಂದ ಸಮಾಜಕ್ಕೆ ಭರಿಸಲಾರದ ನಷ್ಟವುಂಟಾಗಿದೆ. ಸಮಾಜದ ಸಂಘಸಂಸ್ಥೆ ಹಾಗೂ ಬಡವರ ಸರ್ವತೋಮುಖ ಏಳಿಗೆಗೆ ಅವಿರತವಾಗಿ ಶ್ರಮಿಸಿರುವ ಅವರ ದಿವ್ಯಾತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ದುಖಿತಪ್ತ ಅವರ ಕುಟುಂಬ ವರ್ಗಕ್ಕೆ ದು:ಖ ಸಹಿಸುವ ಶಕ್ತಿಯನ್ನು ಭಗವಂತ ನೀಡಲೆಂದು ಆತ್ಮಶಕ್ತಿ ಬಳಗದ ಪ್ರಾರ್ಥನೆ.

*With best compliments from*

**Jagadish**
Contact No.9742968587

**ARYAN ASSOCIATES**
6-88/2, Melmane House,
Tannirbhavi, Panambur Post,
Mangalore, D.K
GSTIN/UIN : 29JYMPS7362Q12V
Email: jagadish136@gmail.com

**Buyer :**
**Sunpavers Industries**
Shakthinagar, Mangalore
GSTIN/UIN : 29BCFPS7042L34Z


# ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಜ್ಞಾನ ದೇಗುಲಗಳ ಸರಮಾಲೆ



ಸಮಾಜವನ್ನು ಉದ್ಧರಿಸಲು ಏನೆಲ್ಲಾ ಮಾಡಬಹುದು ಹೇಗೆ ಮಾಡಬಹುದು ಎಂಬುದನ್ನು ಅರಿಯಲು ನಾವು ದೂರಹೋಗಬೇಕಾದ ಅನಿವಾರ್ಯತೆ ಇಲ್ಲ. ಸಮಾಜದ ಏಳಿಗೆಯ ಹಿತ ಚಿಂತನೆಯನ್ನು ಸದಾ ಮಾಡುತ್ತಿರುವ ಪೂಜ್ಯ ಡಾ। ಡಿ. ವೀರೇಂದ್ರ ಹೆಗ್ಗಡೆಯವರ ದೂರದರ್ಶಿತ್ವದ ಸಾಫಲ್ಯತೆಯನ್ನು ಕಂಡುಕೊಂಡರೆ ಸಾಕು. ಇಂದಿನ ಯಾವುದೇ ಆಡಳಿತಾತ್ಮಕವಾದ ವ್ಯವಸ್ಥೆಗೆ ಮಾರ್ಗದರ್ಶಿಯಾಗಿ ಕಾರ್ಯ ನಿರ್ವಹಿಸುವ ಅವರ ಸಾಧನೆ ನಮ್ಮ ಕಣ್ಣ ಮುಂದೆ ತೆರೆದುಕೊಳ್ಳುತ್ತದೆ. ಅಭಿವೃದ್ಧಿಗೆ ಪೂರಕವಾದ ವಿವಿಧ ಕ್ಷೇತ್ರಗಳ ಮೂಲಕ ಸಾಧ್ಯತೆಗಳನ್ನು ಪರಿಚಯಿಸಿದ ಪೂಜ್ಯರು ಶಿಕ್ಷಣರಂಗಕ್ಕೆ ನೀಡಿದ ಒತ್ತು ಅವಿಸ್ಮರಣೀಯವೇ ಆಗಿದೆ. ನಿರಂತರವಾಗಿ ಮೀನು ಹಿಡಿದುಕೊಡುವುದು ಅಸಾಧ್ಯವಾದ ಮಾತು, ಅದರ ಬದಲಿಗೆ ಮೀನು ಹಿಡಿಯುವುದು ಹೇಗೆ ಎಂಬುದನ್ನು ಕಲಿಸಿಕೊಡಬೇಕಾದ ಅನಿವಾರ್ಯತೆ ಇಂದು ಎಂದಿಗಿಂತಲೂ ಹೆಚ್ಚಾಗಿದೆ' ಅನ್ನುವ ಅವರ ಮಾತಿನ ಭಾವದ ಹಿಂದೆ ಜನರನ್ನು ಶಿಕ್ಷಿತರನ್ನಾಗಿಸುವ ಸ್ವಾವಲಂಬಿಗಳನ್ನಾಗಿಸುವ ಚಿಂತನೆ ಎದ್ದು ಕಾಣುತ್ತದೆ. ಇಂತಹ ಸ್ವಾವಲಂಬನೆಗಳಿಗೆ ಜನ ಒಗ್ಗಿಕೊಳ್ಳಬೇಕಾದರೆ ಮೊದಲು ಅವರೆಲ್ಲಾ ವಿದ್ಯವಂತರಾಗಬೇಕೆನ್ನುವ ಅವರ ತುಡಿತದ ಪ್ರತೀಕಗಳು "ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಎಜುಕೇಶನಲ್ ಸೊಸೈಟಿ (ರಿ) ಮೂಲಕ ಅನಾವರಣಗೊಳ್ಳುತ್ತಿರುವುದನ್ನು ನೋಡುವುದೇ ಕಣ್ಣಿಗೊಂದು ಹಬ್ಬ.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಎಜ್ಯುಕೇಶನಲ್ ಸೊಸೈಟಿ (ರಿ) ಇದರಿಂದ ಪ್ರವರ್ತಿತಗೊಂಡಿರುವ ಶಿಕ್ಷಣ ಸಂಸ್ಥೆಗಳು ಮತ್ತು ಕೋರ್ಸುಗಳ ವಿವರ ಈ ರೀತಿ ಇದೆ.

ಎಸ್.ಡಿ.ಎಮ್. ಕಾಲೇಜ್ ಆಫ್ ಇಂಜಿನಿಯರಿಂಗ್ & ಟೆಕ್ನಾಲಜಿ ಧಾರವಾಡ, ಉಜಿರೆ ಇಲ್ಲಿ ಬಿ. ಇ. ಶಿಕ್ಷಣ ಲಭ್ಯವಿದ್ದು ಈ ಸಂಸ್ಥೆಯಲ್ಲಿ ಸಿವಿಲ್ ಮೆಕ್ಯಾನಿಕಲ್; ಇ&ಇ, ಇ&ಸಿ, ಸಿ.ಎಸ್.ಇ., ಐಎಸ್ಇ ಕೆಮಿಕಲ್, ಎಂ.ಟೆಕ್., ಎಸ್‌ಡಿಎಮ್ ಕಾಲೇಜ್ ಆಫ್ ಮೆಡಿಕಲ್ ಸೈನ್ಸ್, ಡೆಂಟಲ್ ಸೈನ್ಸ್ & ಹಾಸ್ಪಿಟಲ್ ಧಾರವಾಡ ಇಲ್ಲಿ ಎಂ.ಬಿ.ಬಿ.ಎಸ್., ಬಿ.ಡಿ.ಎಸ್., ಎಸ್.ಡಿ.ಎಸ್. ಡಿ.ಎಮ್.ಸಿ., ಎಸ್.ಡಿ.ಎಮ್. ಕಾಲೇಜ್ ಆಫ್ ಫಿಸಿಯೋಥೆರಪಿ ಧಾರವಾಡ – ಬಿ.ಪಿ.ಟಿ. & ಎಂ.ಪಿ.ಟಿ., ಎಸ್.ಡಿ.ಎಮ್. ಕಾಲೇಜ್ ಆಫ್ ನರ್ಸಿಂಗ್ ಧಾರವಾಡ – ಬಿ.ಎಸ್ಸಿ. ನರ್ಸಿಂಗ್, ಎಸ್.ಡಿ.ಎಮ್. ಕಾಲೇಜ್ ಆಫ್ ಆಯುರ್ವೇದ ಹಾಸ್ಪಿಟಲ್, ಉಡುಪಿ & ಹಾಸನ – ಬಿ.ಎ.ಎಂ.ಎಸ್, ಎಂ.ಡಿ., ಎಂ.ಎಸ್., ಎಸ್.ಡಿ.ಎಮ್. ಕಾಲೇಜ್ ಆಫ್ ನ್ಯಾಚುರೋಪತಿ & ಯೋಗಿಕ್ ಸೈನ್ಸ್ – ಉಜಿರೆ, ಬಿ.ಎನ್.ವೈ.ಎಸ್., ಎಸ್.ಡಿ.ಎಮ್. ಇನ್ಸಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್, ಮೈಸೂರ್ – ಪಿ.ಜಿ.ಡಿ.ಎಮ್., ಎಸ್.ಡಿ.ಎಮ್. ಲಾ ಕಾಲೇಜ್, ಮಂಗಳೂರು – ಎಲ್.ಎಲ್.ಬಿ. &ಎಲ್.ಎಲ್.ಎಮ್., ಎಸ್.ಡಿ.ಎಮ್. ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್ & ಪಿ.ಜಿ. ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್ & ರೀಸರ್ಚ್, ಮಂಗಳೂರು – ಬಿ.ಬಿ.ಎಮ್., ಬಿ.ಸಿ.ಎ., ಬಿ.ಎಚ್.ಆರ್.ಡಿ., ಪಿ.ಜಿ.ಡಿ.ಎಮ್, ಎಂ.ಬಿ.ಎ., ಎಸ್.ಡಿ.ಎಮ್. ಕಾಲೇಜ್ ಉಜಿರೆ – ಪಿ.ಯು.ಸಿ., ಬಿ.ಎ., ಬಿ.ಕಾಂ., ಬಿ.ಎಸ್ಸಿ, ಬಿ.ಬಿ.ಎಸ್., ಬಿ.ಸಿ.ಎ., ಬಿ.ಎಸ್ಸಿ. (ಬಯೋಟೆಕ್) ಎಂ.ಎ., ಎಸ್.ಡಿ.ಎಮ್. ಕಾಲೇಜ್ & ಎಜ್ಯುಕೇಶನ್ ಉಜಿರೆ – ಬಿ.ಎಡ್, ಎಸ್.ಡಿ.ಎಮ್. ಇನ್ಸಿಟ್ಯೂಟ್ ಆಫ್ ಎಜ್ಯುಕೇಶನ್ – ಡಿ.ಎಡ್., ಎಸ್.ಡಿ.ಎಮ್. ಕಾಲೇಜ್ ಟೆಕ್ನಿಕಲ್ ಇನ್ಸಿಟ್ಯೂಟ್ (ಪಾಲಿಟೆಕ್ನಿಕ್) ಉಜಿರೆ ಡಿಪ್ಲೋಮಾ ಇನ್ ಇಂಜಿನಿಯರಿಂಗ್ ಸಿ.ಎಸ್.ಇ., ಇ&ಸಿ, ಐ.ಎಸ್.ಇ., ಎಸ್.ಡಿ.ಎಮ್. ಸ್ಕೂಲ್ ಆಫ್ ನರ್ಸಿಂಗ್, ಧಾರವಾಡ – ಜಿ.ಎನ್.ಎಮ್.



## ಬಡವರು ಶೋಷಿತರು ದುರ್ಬಲ ವರ್ಗದವರ ಶಿಕ್ಷಣಕ್ಕೆ ಜನಾರ್ದನ ಪೂಜಾರಿಯವರ ಕೊಡುಗೆ

# ಶ್ರೀ ಗೋಕರ್ಣನಾಥೇಶ್ವರ ಶಿಕ್ಷಣ ಸಂಸ್ಥೆಗಳು

### ಅತ್ಯಂತ ಕಡಿಮೆ ಶುಲ್ಕದಲ್ಲಿ ಪಿಯುಸಿ, ಪದವಿ ಶಿಕ್ಷಣ ಒಂದೇ ಕಡೆ ಲಭ್ಯ. ಎಂ.ಕಾಂ, ಬಿ.ಎಡ್, ಬಿ.ಕಾಂ. ಬಿ.ಎ, ಪಿಯುಸಿ(ವಿಜ್ಞಾನ, ವಾಣಿಜ್ಯ, ಕಲಾ ವಿಭಾಗ) ಶಿಕ್ಷಣದ ಅವಕಾಶ



ಉನ್ನತ ಶಿಕ್ಷಣದ ಅವಕಾಶ ವಂಚಿತರ ಕನಸು ಇಲ್ಲಿ ನನಸು. ಜನಾರ್ದನ ಪೂಜಾರಿಯವರ ಆದೇಶದಂತೆ ಅತ್ಯಂತ ಕಡಿಮೆ ಶುಲ್ಕ ಹಾಗೂ ಆರ್ಥಿಕವಾಗಿ ತೀರಾ ಸಂಕಸ್ಟದಲ್ಲಿರುವವರ ಪರಿಸ್ಥಿತಿಗಳನ್ನು ಖುದ್ದಾಗಿ ಪರಿಶೀಲಿಸಿಉಚಿತವಾಗಿ ಶಿಕ್ಷಣ. ಪಿ.ಯು.ಸಿ. (ಕಲಾವಿಭಾಗ, ವಾಣಿಜ್ಯ ವಿಭಾಗ, ವಿಜ್ಞಾನ ವಿಭಾಗ) ಬಿ.ಎ., ಬಿ.ಕಾಂ., ಬಿ.ಎಡ್., ಎ.ಕಾಂ.

ಮಂಗಳೂರು : ಸನ್ಮಾನ್ಯ ಶ್ರೀ ಜನಾರ್ದನ ಪೂಜಾರಿಯವರ ಸಹಾಯ, ಸಹಕಾರ, ಮಾರ್ಗದರ್ಶನದಲ್ಲಿ ಪ್ರಾರಂಭಿಸಲಾದ ಶ್ರೀ ಗೋಕರ್ಣನಾಥೇಶ್ವರ ಶಿಕ್ಷಣ ಸಂಸ್ಥೆಯಲ್ಲಿ, ಬ್ರಹ್ಮಶ್ರೀ ನಾರಾಯಣ ಗುರುವರ್ಯರ "ವಿದ್ಯಾವಂತರಾಗಿ–ಸ್ವತಂತ್ರರಾಗಿ– ಸ್ವಾಭಿಮಾನಿಗಳಾಗಿರಿ" ಎಂಬ ಸಂದೇಶದಂತೆ ಕಡು ಬಡವರಿಗೂ ಉನ್ನತ ಶಿಕ್ಷಣದ ಸೌಲಭ್ಯವನ್ನು ದೊರಕಿಸಬೇಕೆಂಬ ಸನ್ಮಾನ್ಯ ಶ್ರೀ ಜನಾರ್ದನ ಪೂಜಾರಿಯವರ ಆದೇಶದಂತೆ ಜಾತಿ–ಮತ–ಧರ್ಮ ಭೇದವಿಲ್ಲದೆ ಅತ್ಯಂತ ಕನಿಷ್ಠ ಶುಲ್ಕದಲ್ಲಿ ಹಾಗೂ ಆರ್ಥಿಕವಾಗಿ ತೀರಾ ಸಂಕಷ್ಟದಲ್ಲಿರುವ ಬಡ ಕುಟುಂಬದ ವಿದ್ಯಾರ್ಥಿಗಳಿಗೆ ಅವರು ಪಡೆದ ಅಂಕಗಳನ್ನು ಪರಿಗಣಿಸಿ ವಿಶೇಷ ರಿಯಾಯಿತಿ ಕೊಟ್ಟು ಎಂ.ಕಾಂ, ಬಿ.ಎಡ್, ಬಿ.ಕಾಂ. ಬಿ.ಎ, ಪಿಯುಸಿ ಶಿಕ್ಷಣದ ಅವಕಾಶ ಮಾಡಿ ಕೊಡಲಾಗುವುದು. 2019–20 ರ ಶೈಕ್ಷಣಿಕ ವರ್ಷದಲ್ಲಿ ಇದರ ಪ್ರಯೋಜನವನ್ನು ಪಡೆದುಕೊಳ್ಳಲು ಅಂತಹ ಅರ್ಹತೆಯುಳ್ಳ ವಿದ್ಯಾರ್ಥಿಗಳು ಕೂಡಲೇ ಈ ಶಿಕ್ಷಣ ಸಂಸ್ಥೆಯನ್ನು ಸಂಪರ್ಕಿಸಬಹುದು.

ಬಡ ಕುಟುಂಬದ ಮಕ್ಕಳಿಗೆ ವಿವಿಧ ರೀತಿಯ ವಿದ್ಯಾರ್ಥಿವೇತನ, ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳಿಗೆ ವಿಶೇಷ ತರಬೇತಿ, ಶ್ರೀ ಗೋಕರ್ಣನಾಥ ಕ್ಷೇತ್ರದ ವತಿಯಿಂದ ಮಧ್ಯಾಹ್ನದ ಊಟ ಸೇರಿದಂತೆ ಅನೇಕ ಸೌಲಭ್ಯ ಈ ಶಿಕ್ಷಣ ಸಂಸ್ಥೆಯ ವೈಶಿಷ್ಟ್ಯ.

ಶ್ರೀ ಗೋಕರ್ಣನಾಥೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ಯಾವುದೇ ಪ್ರತಿಷ್ಠಿತ ಕಾಲೇಜುಗಳಿಗೆ ಕಡಿಮೆಯಿಲ್ಲದಂತೆ ಉತ್ಕೃಷ್ಟ ಮಟ್ಟದ ಶಿಕ್ಷಣವನ್ನು ನೀಡಲಾಗುತ್ತಿದೆ. ಈ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಣ ಪಡೆದ ಸಾವಿರಾರು ವಿದ್ಯಾರ್ಥಿಗಳು ಇಂದು ರಾಜಕೀಯ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರದಲ್ಲಿ ಉನ್ನತ ವ್ಯಕ್ತಿಗಳಾಗಿ, ಪ್ರತಿಷ್ಠಿತ ವ್ಯಕ್ತಿಗಳಾಗಿ ಸಮಾಜದಲ್ಲಿ ಗುರುತಿಸಿಕೊಂಡಿದ್ದಾರೆ. ಎಲ್ಲೂ ಅವಕಾಶ ಇಲ್ಲದೆ ಶ್ರೀ ಗೋಕರ್ಣನಾಥೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ಅವರು ಪಡೆದ ಅವಕಾಶವನ್ನು ಇಂದಿಗೂ ನೆನಪಿಟ್ಟುಕೊಂಡಿದ್ದಾರೆ.

ಅತ್ಯಂತ ಕಡಿಮೆ ಖರ್ಚಿನಲ್ಲಿ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಕಲಿತವರು ಡಾಕ್ಟರ್, ಇಂಜಿನೀಯರ್ ಆಗಿ, ವಾಣಿಜ್ಯ ವಿಭಾಗದಲ್ಲಿ ಕಲಿತವರು ಚಾರ್ಟರ್ಡ್ ಅಕೌಂಟೆಂಟ್‌ಗಳಾಗಿ ಇತರ ಪ್ರತಿಷ್ಠಿತ ವೃತ್ತಿದಾರರಾಗಿ ಯಶಸ್ಸು ಗಳಿಸಿದ್ದಾರೆ. ಇಲ್ಲಿ ಪದವಿ ಪಡೆದವರು ವಿವಿಧ ಹುದ್ದೆಗಳಲ್ಲಿ ಹಾಗೂ ಉದ್ಯಮದಲ್ಲಿ ತೊಡಗಿಕೊಂಡಿದ್ದಾರೆ.

### ಆರ್ಥಿಕವಾಗಿ ತೀರಾ ಸಂಕಸ್ಟದಲ್ಲಿರುವವರ ಪರಿಸ್ಥಿತಿಗಳನ್ನು ಖುದ್ದಾಗಿ ಪರಿಶೀಲಿಸಿ ಉಚಿತವಾಗಿ ಶಿಕ್ಷಣ

ವಿಶೇಷ ಸೂಚನೆ: ಅನೇಕ ಮಂದಿ ಪ್ರತಿಭಾವಂತ ವಿದ್ಯಾರ್ಥಿಗಳು ತಮಗೆ ಯಾವುದೇ ಹಣಕಾಸು ನೆರವು ಇಲ್ಲದೆ, ಇತರರ ಸಹಾಯವಿಲ್ಲದೇ ಈ ಶಿಕ್ಷಣ ಪಡೆಯಲು ಸಾಧ್ಯವೇ ಇಲ್ಲ ಎಂದು ಅಸಹಾಯಕರಾಗಿರುವವರನ್ನು ಖುದ್ದಾಗಿ ಅವರ ಕಷ್ಟದ ಪರಿಸ್ಥಿತಿಗಳನ್ನು ಪರಿಶೀಲಿಸಿ ಅವರಿಗೆ ಸಂಪೂರ್ಣ ಉಚಿತವಾಗಿ ಶಿಕ್ಷಣ ದೊರಕಿಸಬೇಕೆಂದು ಸನ್ಮಾನ್ಯ ಶ್ರೀ ಜನಾರ್ದನ ಪೂಜಾರಿಯವರು ಆದೇಶಿಸಿದ್ದು ಅದರಂತೆ ಕ್ರಮ ಕೈಗೊಳ್ಳಲಾಗುವುದು. ಆಸಕ್ತರು ಕೂಡಲೇ ಸಂಪರ್ಕಿಸಬೇಕೆಂದು ಶಿಕ್ಷಣ ಸಂಸ್ಥೆಯ ಸಂಚಾಲಕರಾದ ಎಸ್. ಜಯವಿಕ್ರಂರವರು ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

### ರ್‍ಯಾಂಕ್ ಪಡೆದವರಿಗೆ ನಗದು ಪುರಸ್ಕಾರ

ಸನ್ಮಾನ್ಯ ಶ್ರೀ ಜನಾರ್ದನ ಪೂಜಾರಿಯವರ ಆದೇಶದಂತೆ ಪ್ರಥಮ ರ್‍ಯಾಂಕ್ ಪಡೆದವರಿಗೆ ರೂ 1 ಲಕ್ಷ, ದ್ವಿತೀಯ ರ್‍ಯಾಂಕ್ ರೂ 75000/–, ತೃತೀಯ ರ್‍ಯಾಂಕ್ ರೂ 50000/– ಹಾಗೂ 4 ರಿಂದ 10 ರವರೆಗೆ ರ್‍ಯಾಂಕ್ ವಿಜೇತರಿಗೆ ರೂ 10000.00 ದಂತೆ ನಗದು ಪುರಸ್ಕಾರ ನೀಡಿ ಶಿಕ್ಷಣ ಸಂಸ್ಥೆಯ ವಾರ್ಷಿಕೋತ್ಸವದಂದು ಸನ್ಮಾನಿಸಲಾಗುವುದು.

### ರ್‍ಯಾಂಕ್‌ನೊಂದಿಗೆ 100% ಫಲಿತಾಂಶ

ಅತ್ಯಂತ ಕನಿಷ್ಠ ಅಂಕ ಪಡೆದವರೂ ಇಲ್ಲಿ ಅವಕಾಶ ಪಡೆದು, ಇಲ್ಲಿನ ಪರಿಣಾಮಕಾರಿ ಉತ್ಕೃಷ್ಟ ಶಿಕ್ಷಣದಿಂದ ಪಿಯುಸಿ, ಬಿ.ಕಾಂ., ಬಿ.ಎ.ಯಲ್ಲಿ ಅತ್ಯುತ್ತಮ ಫಲಿತಾಂಶ ದಾಖಲಾಗುತ್ತಿದೆ. ಎಂ.ಕಾಂ, ಪಿ.ಯು.ಸಿಯಲ್ಲಿ 100% ಫಲಿತಾಂಶ ಹಾಗೂ ಬಿ.ಎಡ್. ನಲ್ಲಿ 100% ಫಲಿತಾಂಶದೊಂದಿಗೆ ರ್‍ಯಾಂಕ್ ಗಳಿಕೆಯ ಹೆಗ್ಗಳಿಕೆ ಶ್ರೀ ಗೋಕರ್ಣನಾಥೇಶ್ವರ ಶಿಕ್ಷಣ ಸಂಸ್ಥೆಯದು.

**ಕೂಡಲೇ ಸಂಪರ್ಕಿಸಿ**

ಶ್ರೀ ಗೋಕರ್ಣನಾಥೇಶ್ವರ ಶಿಕ್ಷಣ ಸಂಸ್ಥೆ, ಗಾಂಧಿನಗರ, ಮಂಗಳೂರು – 575003

ದೂರವಾಣಿ– 0824–2457226, ಸಂಚಾಲಕರು 9900919369

# ಶಿಕ್ಷಣದಲ್ಲಿ ಕ್ರಾಂತಿ ಮಾಡಿದ ಶ್ರೀ ದೇವಿ ಶಿಕ್ಷಣ ಸಂಸ್ಥೆಗಳು

ಉದ್ಯಮ ಕ್ಷೇತ್ರದಿಂದ ಶಿಕ್ಷಣ ಕ್ಷೇತ್ರಕ್ಕೆ ಹೆಜ್ಜೆ ಇರಿಸಿ ಅದನ್ನೊಂದು ಸಾಮಾಜಿಕ ಸೇವೆ ಎಂದು ಬಗೆದವರು ನಮ್ಮ ನಡುವೆ ಕೆಲವೇ ಬೆರಳೆಣಿಕೆಯಷ್ಟು ಮಂದಿ ಕಾಣಸಿಗಬಹುದು. ಅಂತಹ ಮೇರುವಿನಲ್ಲಿ ಮೊದಲ ಸಾಲಲ್ಲಿ ವಿರಾಜಮಾನರಾಗಿರುವವರು ಉದ್ಯಮಿ, ಕ್ರೀಡಾ ಪ್ರೋತ್ಸಾಹಕ, ಶಿಕ್ಷಣ ಪ್ರೇಮಿ, ಸಮಾಜಸೇವಕ, ಶ್ರೀ ಎ.ಸದಾನಂದ ಶೆಟ್ಟಿ ಇವರು. ಬರಡು ನೆಲದಲ್ಲಿ ಬೋಳು ಗುಡ್ಡದಲ್ಲಿ ತನ್ನ ಸಾಹಸ, ಅದಮ್ಯ ಉತ್ಸಾಹ, ಸಾಧನೆ, ಛಲಗಳಿಂದ ಶಿಕ್ಷಣ ಕ್ರಾಂತಿಯನ್ನು ನಡೆಸಿದ ಶ್ರೀ ಎ. ಸದಾನಂದ ಶೆಟ್ಟಿ ಇವರು ಈ ದಾರಿಯಾಗಿ ನಡೆಯುವವರಿಗೆ ಆದರ್ಶಪ್ರಾಯರು.




ಶ್ರೀ ದೇವಿ ಶಿಕ್ಷಣ ಪ್ರತಿಷ್ಠಾನ (ರಿ)ದ ವತಿಯಿಂದ ಸ್ಥಾಪಿತಗೊಂಡಿರುವ ಶಿಕ್ಷಣ ಸಂಸ್ಥೆಗಳು ಮತ್ತು ಕೋರ್ಸುಗಳು.

ಶ್ರೀ ದೇವಿ ಕಾಲೇಜ್ ಆಫ್ ಬಿ.ಬಿ.ಎ. & ಬಿ.ಎ. (ಎಚ್.ಡಿ.ಆರ್.ಡಿ), ಶ್ರೀ ದೇವಿ ಕಾಲೇಜ್ ಆಫ್ ಫಿಸಿಯೋಥೆರಪಿ (ಬಿ.ಪಿ.ಟಿ. & ಎಂ.ಪಿ.ಟಿ.), ಶ್ರೀ ದೇವಿ ಕಾಲೇಜ್ ಆಫ್ ನರ್ಸಿಂಗ್ (ಬಿ.ಎಸ್ಸಿ ನರ್ಸಿಂಗ್ & ಎಂ.ಎಸ್ಸಿ ನರ್ಸಿಂಗ್), ಶ್ರೀ ದೇವಿ ಕಾಲೇಜ್ ಆಫ್ ಫಾರ್ಮಸಿ (ಬಿ.ಫಾರ್ಮ & ಎಂ. ಫಾರ್ಮ), ಶ್ರೀ ದೇವಿ ಕಾಲೇಜ್ ಆಫ್ ಫ್ಯಾಶನ್ ಡಿಸೈನ್ (ಬಿ.ಎಸ್ಸಿ. & ಎಫ್.ಡಿ.), ಶ್ರೀ ದೇವಿ ಕಾಲೇಜ್ ಆಫ್ ಇಂಜಿನಿಯರ್ ಡಿಸೈನ್ (ಬಿ.ಎಸ್ಸಿ. ಎಫ್.ಡಿ.), ಶ್ರೀ ದೇವಿ ಕಾಲೇಜ್ ಆಫ್ ಇನ್ಫರ್ಮೇಷನ್ ಸೈನ್ಸ್ (ಬಿ.ಸಿ.ಎ.), ಶ್ರೀ ದೇವಿ ಇನ್ಸಿಟ್ಯೂಟ್ ಆಫ್ ಸೋಶಿಯಲ್ ವರ್ಕ್ಸ್ (ಎಂ.ಎಸ್.ಡಬ್ಲ್ಯು), ಶ್ರೀ ದೇವಿ ಕಾಲೇಜ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್ (ಬಿ.ಎಚ್.ಎಂ. & ಬಿ.ಎಚ್.ಎಸ್.), ಶ್ರೀ ದೇವಿ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ (ಬಿ.ಇ., ಎಂ.ಬಿ.ಎ, ಎಂ.ಸಿ.ಎ.).

ಆರೋಗ್ಯ ಮಾಹಿತಿ

# ಬಾಯಿಯ ಕ್ಯಾನ್ಸರ್ ವಿರುದ್ಧ ಎಚ್ಚರ ವಹಿಸಿ

ಹಲ್ಲಿನ ಆರೋಗ್ಯದ ಬಗ್ಗೆ ಗಮನ ಹರಿಸದಿದ್ದರೆ ಅದು ಬಾಯಿಯ ಕ್ಯಾನ್ಸರ್‌ಗೆ ಕಾರಣವಾಗಬಹುದು.



ಇತ್ತೀಚಿನ ಅಧ್ಯಯನಗಳ ಪ್ರಕಾರ, ಶೇ.80 ರಷ್ಟು ಬಾಯಿಯ ಕ್ಯಾನ್ಸರ್, ರೋಗಿಗಳು ತಮ್ಮ ಹಲ್ಲುಗಳ ಮತ್ತು ಬಾಯಿಯ ಶುಚಿತ್ವದ ಕಡೆಗೆ ಗಮನ ನೀಡುವುದಿಲ್ಲ. ಭಾರತೀಯ ಡೆಂಟಲ್ ಅಸೋಸಿಯೇಷನ್‌ನ ರಾಷ್ಟ್ರೀಯ ಓರಲ್ ಹೆಲ್ತ್ ಸಮೀಕ್ಷೆಯಲ್ಲಿ ಭಾರತದಲ್ಲಿ ಶೇ.95 ರಷ್ಟು ಜನ ಒಸಡು ರೋಗದಿಂದ ಬಳಲುತ್ತಿದ್ದಾರೆ. ಶೇ.50 ರಷ್ಟು ಮಂದಿ ಮಾತ್ರವೇ ಟೂತ್‌ಬ್ರಷ್ ಬಳಕೆ ಮಾಡುತ್ತಾರೆ. ಶೇ.2 ರಷ್ಟು ಜನಸಂಖ್ಯೆಯಷ್ಟೇ ಡೆಂಟಿಸ್ಟ್‌ಗಳನ್ನು ಭೇಟಿ ಮಾಡುತ್ತಾರೆ. ಬಾಯಿಯ ಶುಚಿತ್ವ ಕಾಪಾಡದೇ ಇರುವುದು, ಟೂತ್‌ಬ್ರಷ್ ಬಳಸಿ ಹಲ್ಲುಗಳನ್ನು ಸ್ವಚ್ಛಗೊಳಿಸದೇ ಇರುವುದು ಶೇ.60 ರಷ್ಟು ಬಾಯಿಯ ಕ್ಯಾನ್ಸರ್ ಎದುರಾಗಲು ಮುಖ್ಯ ಕಾರಣ ಎಂಬುದು ತಿಳಿದುಬಂದಿದೆ.

ತಂಬಾಕು ಜಗಿಯುವುದು, ಧೂಮಪಾನ ಮತ್ತು ಮದ್ಯ ಸೇವನೆಯೂ ಅತ್ಯಂತ ಪ್ರಮುಖ ಕಾರಣವಾದರೂ ಇದ್ಯಾವುದೇ ಚಟ ಇಲ್ಲದವರು ಕೂಡ ಬಾಯಿಯ ಕ್ಯಾನ್ಸರ್‌ಗೆ ತುತ್ತಾಗುತ್ತಾರೆ.

ಚೂಪಾದ ಹಲ್ಲುಗಳು ಕೂಡ ಬಾಯಿಯ ಕ್ಯಾನ್ಸರ್ ಎದುರಾಗುವಂತೆ ಮಾಡುತ್ತದೆ. ಚೂಪಾದ ಹಲ್ಲಿನಿಂದ ಆಗುವಂತಹ ಇರುಸುಮುರುಸಿನಿಂದ ಬಾಯಿಯಲ್ಲಿ ಗುಣವಾಗದೇ ಉಳಿಯುವ ಅಲ್ಸರ್ ಗಾಯಗಳಾಗಿರುತ್ತವೆ. ಇದಕ್ಕೆ ಚಿಕಿತ್ಸೆ ಪಡೆಯದೇ ಇದ್ದಲ್ಲಿ 18 ತಿಂಗಳ ಒಳಗಾಗಿ ಕ್ಯಾನ್ಸರ್ ಆಗಿ ಪರಿವರ್ತನೆಗೊಳ್ಳುತ್ತದೆ. ಮುರಿದ ಹಲ್ಲು, ಕೊಳೆತಿರುವ ಹಲ್ಲು, ಫೀಲ್ಡ್ ಟೀತ್ ಮತ್ತು ಅನ್ ಫೀಲ್ಡ್ ಟೀತ್ ಮೂಲಕವೂ ದವಡೆ, ನಾಲಿಗೆ ಹಾಗೂ ಬಾಯಿಯ ಒಳಪದರಗಳಲ್ಲಿ ದೀರ್ಘಕಾಲದ ಗಾಯಗಳಾಗಿ ಕ್ಯಾನ್ಸರ್ ಎದುರಾಗುವ ಸಾಧ್ಯತೆಗಳನ್ನು ಹೆಚ್ಚಾಗಿಸುತ್ತದೆ. ಬಾಯಿಯ ಕ್ಯಾನ್ಸರ್ ಪ್ರಕರಣವನ್ನು ಆರಂಭಿಕ ಹಂತದಲ್ಲೇ ಗುರುತಿಸಿದರೆ ಚಿಕಿತ್ಸೆ ನೀಡಬಹುದು.

# ಪಾದೆಗುತ್ತು ಲಿಂಗಪ್ಪ ಮಾಸ್ಟರ್ ಮೆಮೋರಿಯಲ್ ಎಜುಕೇಷನ್ ಟ್ರಸ್ಟ್ (ರಿ)
## ಎಲ್‌ಸಿಆರ್ ಇಂಡಿಯನ್ ಸ್ಕೂಲ್, ಕಕ್ಯಪದವು, ಉಳಿ ಗ್ರಾಮ, ಬಂಟ್ವಾಳ ತಾಲೂಕು





**ರೋ. ರೋಹಿನಾಥ್**
**ಎಲ್‌ಸಿಆರ್ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ**

ಬಂಟ್ವಾಳ ತಾಲೂಕಿನ ಉಳಿ ಗ್ರಾಮದ ಕಕ್ಯಪದವಿನಲ್ಲಿ ಪಾದೆಗುತ್ತು ಲಿಂಗಪ್ಪ ಮಾಸ್ಟರ್ ಮೆಮೋರಿಯಲ್ ಎಜುಕೇಷನ್ ಟ್ರಸ್ಟ್ ವತಿಯಿಂದ ನಡೆಸಲ್ಪಡುವ ಎಲ್‌ಸಿಆರ್ ಇಂಡಿಯನ್ ಸ್ಕೂಲ್ ಎಂಬ ನೂತನ ಶಿಕ್ಷಣ ಸಂಸ್ಥೆ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಅತ್ಯುತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತಿದೆ.

ಅಂತಾರಾಷ್ಟ್ರೀಯ ಸೇವಾ ಸಂಸ್ಥೆ ರೋಟರಿ ಕ್ಲಬ್‌ನ ಮೂಲಕ ಸಾಮಾಜಿಕ ಸೇವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಕಕ್ಯಪದವಿನ ರೋಟರಿಯನ್ ರೋಹಿನಾಥ್ ಕೆ. ಅವರು ತಮ್ಮ ಹೆತ್ತವರ ಸ್ಮರಣಾರ್ಥ ಟ್ರಸ್ಟ್ ಮೂಲಕ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಶಿಕ್ಷಣ ಸೇವೆಗೆ ಮುಂದಾಗಿದ್ದಾರೆ. ತೀರಾ ಕುಗ್ರಾಮವಾಗಿದ್ದ ಉಳಿ ಗ್ರಾಮದಲ್ಲಿ ಶಿಕ್ಷಣವೆನ್ನುವುದು ಮರೀಚಿಕೆಯಾಗಿತ್ತು. ಸ್ವತಃ ಶಿಕ್ಷಕರಾಗಿದ್ದ ಲಿಂಗಪ್ಪ ಮಾಸ್ಟರ್ ಅವರು ತನ್ನೂರಿನ ಮಕ್ಕಳಿಗೆ ವಿದ್ಯಾಭ್ಯಾಸದ ಕನಸು ಕಂಡವರು. ಅವರ ಪುತ್ರ ಆ ಕನಸನ್ನು ನನಸಾಗಿಸಿದರು. ಉಳಿ ಗ್ರಾಮ ಇಂದು ಅಭಿವೃದ್ಧಿ ಹೊಂದುತ್ತಿದ್ದು ಪ್ರಾಥಮಿಕ, ಪ್ರೌಢ ಶಿಕ್ಷಣಕ್ಕೆ ಇಲ್ಲಿ ಅವಕಾಶವಿದ್ದರೂ ಆಂಗ್ಲ ಮಾಧ್ಯಮ ಶಿಕ್ಷಣದ ಕೊರತೆ ಇತ್ತು. ಜೊತೆಗೆ ಪದವಿ ಪೂರ್ವ ಮತ್ತು ಪ್ರಥಮ ದರ್ಜೆ ಕಾಲೇಜ್‌ಗಳಿಗೆ ದೂರದೂರಿಗೆ ತೆರಳಬೇಕಾಗಿತ್ತು. ಇದೀಗ ಎಲ್‌ಸಿಆರ್ ಇಂಡಿಯನ್ ಸ್ಕೂಲ್ ಆ ಕೊರತೆಯನ್ನು ನೀಗಿಸಿ ಇಲ್ಲಿನ ಜನತೆಯ ಶಿಕ್ಷಣದ ಆಶಯವನ್ನು ಪೂರೈಸಿದೆ.

ಕಕ್ಯಪದವು ಪೇಟೆಯಿಂದ ಸ್ವಲ್ಪ ಮುಂದಕ್ಕೆ ಪ್ರಕೃತಿಯ ಹಸಿರು ಮಡಿಲ ಪ್ರಶಾಂತ ವಾತಾವರಣದಲ್ಲಿ ಸುಸಜ್ಜಿತ ಕಟ್ಟಡದಲ್ಲಿ ನೂತನ ಶಿಕ್ಷಣ ಸಂಸ್ಥೆ ಕಾರ್ಯಾಚರಿಸುತ್ತಿದೆ. ಇಲ್ಲಿ ಪ್ರಿ–ಪ್ರೈಮರಿ ಸ್ಕೂಲ್‌ನಲ್ಲಿ ಪ್ರಿ ನರ್ಸರಿ, ಎಲ್.ಕೆ.ಜಿ, ಯು.ಕೆ.ಜಿ ತರಗತಿಗಳು ಮತ್ತು ಪ್ರೈಮರಿ ಸ್ಕೂಲ್‌ನಲ್ಲಿ 1ನೇ ಯಿಂದ 5ನೇ ತರಗತಿವರೆಗೆ, ಪದವಿ ಪೂರ್ವ ಕಾಲೇಜ್‌ನಲ್ಲಿ ಕಲೆ ಮತ್ತು ವಾಣಿಜ್ಯ ವಿಭಾಗವನ್ನೊಳಗೊಂಡ ಪಿ.ಯು. ತರಗತಿ ಹಾಗೂ ಆದರ್ಶ ಪ್ರಥಮ ದರ್ಜೆ ಕಾಲೇಜ್‌ನಲ್ಲಿ ಬಿ.ಕಾಂ ವಿಭಾಗವಿದೆ.

**ವೈಶಿಷ್ಟ್ಯಗಳು:** ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಹೊಂದಿರುವಂತಹ ಸುಸಜ್ಜಿತವಾದ ಶಾಲಾ ಕಟ್ಟಡ, ಅರ್ಹ, ಕ್ರಿಯಾಶೀಲ ಮತ್ತು ಅನುಭವಿ ಬೋಧನಾ ವರ್ಗ, ವೈಯಕ್ತಿಕ ಕಾಳಜಿ, ಗಮನ, ಪ್ರೋತ್ಸಾಹ, ಆಪ್ತ ಸಮಾಲೋಚನೆ ಮತ್ತು ಮಾರ್ಗದರ್ಶನ, ವಿಶೇಷ ತರಬೇತಿ ಮತ್ತು ಇತರ ಪರಿಹಾರ ಬೋಧನೆ, ಒಳ್ಳೆಯ ವಿಸ್ತೀರ್ಣವುಳ್ಳ ತರಗತಿ, ವಿವಿಧ ಸ್ತರದ ಪುಸ್ತಕಗಳನ್ನು ಒಳಗೊಂಡ ಗ್ರಂಥಾಲಯ, ಕಂಪ್ಯೂಟರ್ ಶಿಕ್ಷಣ, ದೈಹಿಕ ಶಿಕ್ಷಣ ಮೊದಲಾದ ಪಠ್ಯೇತರ ಚಟುವಟಿಕೆಗಳಿವೆ. ಹಾಗೂ ಶಿಸ್ತಿನೊಂದಿಗೆ ಮೌಲ್ಯಾಧಾರಿತ ಶಿಕ್ಷಣ ನೀಡುತ್ತಿದ್ದಾರೆ.

1. **ಎಲ್‌ಸಿಆರ್ ಇಂಡಿಯನ್ ಸ್ಕೂಲ್ ಕಕ್ಯಪದವು, ಉಳಿ ಅಂಚೆ, ಬಂಟ್ವಾಳ ತಾ. ದ.ಕ**
2. **ಎಲ್‌ಸಿಆರ್ ಇಂಡಿಯನ್ ಪ್ರಿ–ಪ್ರೈಮರಿ ಸ್ಕೂಲ್ (ಪ್ರಿ ನರ್ಸರಿ/ಎಲ್.ಕೆಜಿ/ಯು.ಕೆಜಿ)**
3. **ಎಲ್‌ಸಿಆರ್ ಇಂಡಿಯನ್ ಪ್ರಿ ಯುನಿವರ್ಸಿಟಿ ಕಾಲೇಜ್ (ವಾಣಿಜ್ಯ ಮತ್ತು ಕಲಾ ವಿಭಾಗ–ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ)**
4. **ಆದರ್ಶ ಡಿಗ್ರಿ ಕಾಲೇಜ್ (ಬಿ.ಕಾಂ)**

**ಹೆಚ್ಚಿನಮಾಹಿತಿಗಾಗಿ ಸಂಪರ್ಕಿಸಿ:**
**ಪಾದೆಗುತ್ತು ಲಿಂಗಪ್ಪ ಮಾಸ್ಟರ್**
**ಮೆಮೋರಿಯಲ್ ಎಜುಕೇಶನ್ ಟ್ರಸ್ಟ್ (ರಿ.)**
**Shop No. 6 M.C.C Commercial Complex**
**1st Floor, Lalbhag,**
**Mangalore - 575 003**

**Principal**
**LCR Indian Institutions**
**Kakyapadavu, Uli Post,**
**Bantwal - 574 236,**
**Phone No.: 08255 - 289975/9686990775**
**Email: lcrindianinstitution@gmail.com**

# ಮೌಲ್ಯಾಧಾರಿತ ಮತ್ತು ಗುಣಮಟ್ಟದ ಶಿಕ್ಷಣ ನೀಡುತ್ತಿರುವ, ಬಜ್ಪೆ ಸುಂಕದಕಟ್ಟೆಯ ಶ್ರೀ ನಿರಂಜನ ಸ್ವಾಮಿ ಶಿಕ್ಷಣ ಸಂಸ್ಥೆಗಳು

✍ ವಿಶ್ವನಾಥ ಪೂಜಾರಿ ರೆಂಜಾಳ



ನಾಲ್ಕು ದಶಕಗಳ ಪೂರ್ವದಲ್ಲಿ ಬರಡು ಭೂಮಿಯಾಗಿದ್ದ ನೆಲ ಪವಾಡ ಸದೃಶ್ಯವೆನ್ನುವಂತೆ ಪರಮ ಪೂಜ್ಯ ಶ್ರೀ ಶ್ರೀ ನಿರಂಜನ ಸ್ವಾಮೀಜಿಯವರ ಮೌನ ಕ್ರಾಂತಿಯಲ್ಲಿ ಇಂದು ನಂದನವನವಾಗಿ ಕಂಗೊಳಿಸಿದೆ. ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ಶ್ರೀಮಂತಿಕೆ ಇಲ್ಲಿ ಮೈದಳೆದು ನಿಂತಿದೆ. ಮೃಣ್ಮಯ ಬದುಕಿನ ಚಿನ್ಮಯ ಸಾಧಕರಾದ ತನ್ನ ಕ್ಷಣ ಕ್ಷಣದ ಬೆವರನ್ನು ಇಲ್ಲಿನ ಕಣಕಣದಲ್ಲಿ ಹರಿಸಿ ಶ್ರೀ ಕ್ಷೇತ್ರವನ್ನು ಕನಕಾಂಬರವನ್ನಾಗಿಸಿದ ಬದುಕನ್ನೆಂದೂ ಪ್ರದರ್ಶನವಾಗಿಸದೆ. ಸದಾ ನಿದರ್ಶನವಾಗಿಸಿದ ಮಹಾಯೋಗಿ ತಪಸ್ವಿ ಪರಮ ಪೂಜ್ಯ ಶ್ರೀ ಶ್ರೀ ನಿರಂಜನ ಸ್ವಾಮೀಜಿಯವರು, ಶ್ರೀ ಕ್ಷೇತ್ರದಲ್ಲಿ ದೈವೀ ಸಂಕಲ್ಪದಂತೆ ದೈವೀ ಸಾನ್ನಿಧ್ಯದ ಕಾರಣದಿಂದಾಗಿ ದೇವಸ್ಥಾನ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡು ಮಾತೆ ಶ್ರೀ ಅಂಬಿಕಾ ಅನ್ನಪೂರ್ಣೇಶ್ವರಿಯ ದೇವಸ್ಥಾನವನ್ನು ನಿರ್ಮಿಸಿ ಜನರನ್ನು ಭಕ್ತಿ, ಧರ್ಮಪಥದಲ್ಲಿ ಮುನ್ನಡೆಯುವಲ್ಲಿ ಪ್ರೇರೇಪಿಸುವ ಕಾಯಕದಲ್ಲಿ ತನ್ನನ್ನು ಅರ್ಪಿಸಿಕೊಂಡರು. ಎಳವೆಯಲ್ಲಿ ಬಡತನ ಹಾಗೂ ಶಾಲೆಯ ಲಭ್ಯತೆಯ ಕೊರತೆಯ ಕಾರಣದಿಂದ ತಾನೇನನ್ನು ಪಡೆಯಲಾಗಲಿಲ್ಲವೋ ಅದನ್ನು ಈ ಸುತ್ತ ಮುತ್ತಲ ಪ್ರದೇಶದ ಮಂದಿ ಆ ನೋವನ್ನು ಅನುಭವಿಸಬಾರದೆಂಬ ಮಹಾದಾಸೆ ಯೊಂದಿಗೆ 1981ರಲ್ಲಿ ಪ್ರಾಥಮಿಕ ಶಾಲೆಯನ್ನು 1982ರಲ್ಲಿ ಪ್ರೌಢಶಾಲೆಯನ್ನು 1984ರಲ್ಲಿ ಕಿರಿಯ ತಾಂತ್ರಿಕ ವಿದ್ಯಾಲಯವನ್ನು (Polytechnic) 1990ರಲ್ಲಿ ಪದವಿಪೂರ್ವ ಕಾಲೇಜು, 1992ರಲ್ಲಿ ಪ್ರಥಮ ದರ್ಜೆ ಕಾಲೇಜನ್ನು ಆರಂಭಿಸಿ ಜಿಜ್ಞಾಸುಗಳ ಜ್ಞಾನದಾಹವನ್ನು ಇಂಗಿಸುವ ಕೆಲಸವನ್ನು ಭಕ್ತಿಯಿಂದ ನೆರವೇರಿಸಿದ್ದಾರೆ.

ಒಂದು ಸಾವಿರಕ್ಕೂ ಮಿಗಿಲಾಗಿ ಇಲ್ಲಿ ವಿದ್ಯಾರ್ಥಿಗಳು ವಿದ್ಯಾರ್ಜನೆಯನ್ನು ಮಾಡುತ್ತಿದ್ದಾರೆ. ದೂರದೂರಿನ ಮತ್ತು ಬಡ ವಿದ್ಯಾರ್ಥಿಗಳಿಗೆ ಇಂದಿಗೂ ಅನ್ನದಾನದ ವ್ಯವಸ್ಥೆಯನ್ನು ಕಲ್ಪಿಸಿದ್ದಾರೆ. ಇಲ್ಲಿನ ಪದವಿ ಪೂರ್ವ ಕಾಲೇಜಿನಲ್ಲಿ ಕಲಾ ಮತ್ತು ವಾಣಿಜ್ಯ ವಿಭಾಗಗಳಿವೆ. ಕಿರಿಯ ತಾಂತ್ರಿಕ ವಿದ್ಯಾಲಯದಲ್ಲಿ ಮೆಕ್ಯಾನಿಕಲ್, ಅಟೋಮೊಬೈಲ್, ಸಿವಿಲ್, ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್ ಈ ಎಲ್ಲಾ ಕೋರ್ಸುಗಳು ಇಲ್ಲಿ ಲಭ್ಯವಿದೆ. ಉತ್ತಮ ಫಲಿತಾಂಶ ಹಾಗೂ ಅನುಭವಿ ಶಿಕ್ಷಕರಿದ್ದಾರೆ.

1992ರಲ್ಲಿ ಸ್ಥಾಪನೆಯಾದ ಶ್ರೀ ನಿರಂಜನ ಸ್ವಾಮಿ ಪ್ರಥಮ ದರ್ಜೆ ಕಾಲೇಜು ಕಲಾ ಮತ್ತು ವಾಣಿಜ್ಯ (ಬಿ.ಎ., ಬಿ.ಕಾಂ) ವಿಭಾಗಗಳನ್ನು ಹೊಂದಿದೆ. ಪ್ರತಿ ವರುಷ ಅತ್ಯುತ್ತಮ ಫಲಿತಾಂಶ ಇಲ್ಲಿ ದಾಖಲಾಗುತ್ತಿದೆ. ತೀರಾ ಕಡಿಮೆ ಅಂಕಗಳಿಸಿ ಇಲ್ಲಿ ಸೇರ್ಪಡೆಗೊಂಡವರು ಉತ್ಕೃಷ್ಟ ಫಲಿತಾಂಶಕ್ಕೆ ಕಾರಣರಾಗುತ್ತಿದ್ದಾರೆ. ಇದರ ಹಿಂದಿನ ಪ್ರಯತ್ನದಲ್ಲಿ ಪ್ರಾಂಶುಪಾಲರು ಮತ್ತು ಉಪನ್ಯಾಸಕ ವೃಂದದ ಶ್ರಮವನ್ನು ಗಮನಿಸಬಹುದಾಗಿದೆ. ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗೆ ಈ ಕಾಲೇಜಿನ ವಿದ್ಯಾರ್ಥಿ ಪಾತ್ರರಾಗಿರುವುದು ಎಂದಿಗೂ ದಾಖಲಾರ್ಹ ಅಂಶವಾಗಿದೆ. ರಾ.ಸೇ.ಯೋಜನೆಯಲ್ಲಿ ಅತ್ಯುತ್ತಮ ಘಟಕ ಮತ್ತು ಯೋಜನಾಧಿಕಾರಿ ಪ್ರಶಸ್ತಿ ಮಂಗಳೂರು ವಿಶ್ವವಿದ್ಯಾನಿಯಲದಿಂದ ಈ ಕಾಲೇಜಿಗೆ ಲಭಿಸಿರುವುದು ಉಲ್ಲೇಖವಾಹಕವೆನಿಸಿದೆ. ಕ್ರೀಡೆಯಲ್ಲಿ ವಿಶ್ವ ವಿದ್ಯಾನಿಲಯವನ್ನು ಪ್ರತಿನಿಧಿಸಿದಂತಹ ಕ್ರೀಡಾಪಟುಗಳ ರೂಪಣೆ ಇಲ್ಲಿ ನಡೆದಿದೆ. ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ವಿವಿಧ ಕಾಲೇಜುಗಳು ನಡೆಸುವ ಸ್ಪರ್ಧೆಗಳಲ್ಲಿ ಇಲ್ಲಿನ ಕಾಲೇಜು ತಂಡ ಅಪ್ರತಿಮ, ಅದ್ವಿತೀಯ ಸಾಧನೆಗೆ ಪಾತ್ರವಾಗಿರುವುದು ಹೆಮ್ಮೆಯ ಸಂಗತಿ. ಇದಕ್ಕೆಲ್ಲಾ ಸಾಕ್ಷಿಯಾಗಿ ಪ್ರಶಸ್ತಿ ಬಹುಮಾನಗಳ ಫಲಕಗಳು ಇಲ್ಲಿ ಶೋಭಾಯಮಾನವಾಗಿರುವುದನ್ನು ಕಾಣಬಹುದು. ನ್ಯಾಕ್ ಮಾನ್ಯತೆಯಿಂದ ಸಂಪನ್ನಗೊಂಡಿರುವ ಈ ಸಂಸ್ಥೆ ಇಂದಿಗೂ ಅನುದಾನ ರಹಿತ ನೆಲೆಯಲ್ಲಿ ಶ್ರೀ ಸ್ವಾಮೀಜಿಯವರ ಆಶೀರ್ವಾದದೊಂದಿಗೆ ಮುನ್ನಡೆಯಲ್ಪಡುತ್ತಿರುವುದು ಅವರ ಶಿಕ್ಷಣ ಪ್ರೇಮಕ್ಕೆ ಸಾಕ್ಷಿಯಾಗಿದೆ.

ಕಾಲೇಜಿನಲ್ಲಿ ಪಠ್ಯದೊಂದಿಗೆ 10 ಆ್ಯಡ್ ಆನ್ ಸರ್ಟಿಫಿಕೇಟ್ ಕೋರ್ಸುಗಳು ನಡೆಯುತ್ತಿವೆ. ಅವುಗಳೆಂದರೆ ಕಂಪ್ಯೂಟರ್, ಟೈಲರಿಂಗ್ ಬ್ಯೂಟಿಶಿಯನ್, ಎಂಬ್ರಾಯ್ಡರಿ, ಸ್ಪೋಕನ್ ಇಂಗ್ಲಿಷ್, ಯಕ್ಷಗಾನ, ಜಾನಪದ ಕಲೆ, ಕರಾಟೆ, ವ್ಯಕ್ತಿತ್ವ ವಿಕಸನ ಮತ್ತು ಯೋಗ. ಅಂತೆಯೇ ವಿದ್ಯಾರ್ಥಿಗಳು ರಚನಾತ್ಮಕ ಚಟುವಟಿಕೆಗಳಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ 15 ವಿವಿಧ ಸಂಘಗಳು ಇಲ್ಲಿ ಚಟುವಟಿಕೆಗಳಿಂದ ಕ್ರಿಯಾಶೀಲವಾಗಿದೆ. ಇನ್ನೂ ಹತ್ತು ಹಲವಾರು ವೈಶಿಷ್ಟ್ಯತೆಗಳಿಂದ ಶ್ರೀಮಂತಗೊಂಡಿರುವ ಈ ಸಂಸ್ಥೆ ಅತ್ಯುತ್ತಮ ಕಂಪ್ಯೂಟರ್ ಸೆಂಟರ್, ವಿದ್ಯಾರ್ಥಿ ಸ್ನೇಹಿ ಗ್ರಂಥಾಲಯ, ವಿಶಾಲ ಆಟದ ಮೈದಾನ ಹೀಗೆ ವಿವಿಧ ರೀತಿಯಲ್ಲಿ ಸರ್ವಾಂಗ ಸೌಂದರ್ಯವನ್ನು ಗಳಿಸಿಕೊಂಡಿದೆ. ಸಂಸ್ಥೆಯ ಔನ್ನತ್ಯದಲ್ಲಿ ಆಡಳಿತ ಮಂಡಳಿ ಪಾತ್ರ ಹಿರಿದಾದುದಾಗಿದೆ. ಇಲ್ಲಿನ ಶಿಕ್ಷಕ-ರಕ್ಷಕ ಸಂಘ, ಹಳೆ ವಿದ್ಯಾರ್ಥಿ ಸಂಘ, ಕಾಲೇಜು ಅಭಿವೃದ್ಧಿ ಸಮಿತಿಗಳು ಮತ್ತು ಶಿಕ್ಷಣ ಪ್ರೇಮಿಗಳ ಸಹಕಾರ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಉತ್ತೇಜನಕಾರಿ ವಾತಾವರಣವನ್ನು ಸೃಷ್ಟಿಸಿದೆ.

**ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನವನ್ನು ಇಲ್ಲಿ ಶ್ರೀಮಂತಗೊಳಿಸುವರೇ, ಸಂಪರ್ಕಿಸಬೇಕಾದ ವಿಳಾಸ :**

**ಶ್ರೀ ನಿರಂಜನಸ್ವಾಮಿ, ಶಿಕ್ಷಣ, ಸಂಸ್ಥೆಗಳು,** ಸುಂಕದಕಟ್ಟೆ, ಬಜ್ಪೆ, ಕೊಳಂಬೆ ಅಂಚೆ, ಮಂಗಳೂರು, ದೂ : 0824 – 2252971

# ಸನ್ಮತಿ ಚಾರಿಟೆಬಲ್ ಟ್ರಸ್ಟ್ (ರಿ) ಇದರ ಅಂಗ ಸಂಸ್ಥೆಯಾದ ಸನ್ಮತಿ ಹಗಲು ಯೋಗ ಕ್ಷೇಮ ಕೇಂದ್ರ ಇದರ ಉದ್ಘಾಟನಾ ಸಮಾರಂಭ

ಮಂಗಳೂರು : ಸನ್ಮತಿ ಚಾರಿಟೆಬಲ್ ಟ್ರಸ್ಟ್ (ರಿ) ಇದರ ಅಂಗ ಸಂಸ್ಥೆಯಾದ ಸನ್ಮತಿ ಹಗಲು ಯೋಗ ಕ್ಷೇಮ ಕೇಂದ್ರದ ಉದ್ಘಾಟನೆಯು ಇತ್ತೀಚೆಗೆ ಮಂಗಳೂರಿನ ಚಿಲಿಂಬಿಯ ಹಿಲ್‌ಗ್ರೂವ್ ರಸ್ತೆಯ ಕೇಂದ್ರದಲ್ಲಿ ಕುಮಾರಿ ಅನುಶ್ರೀಯವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಪ್ರೊಫೆಸರ್ ಈಶ್ವರ್ ಪೂಜಾರಿಯವರು ಅತಿಥಿಗಳನ್ನು ಗಣ್ಯರನ್ನು ಮತ್ತು ಎಲ್ಲಾ ಆಹ್ವಾನಿತರನ್ನು ಸ್ವಾಗತಿಸಿದರು. ಕೇಂದ್ರದ ಉದ್ಘಾಟನೆಯನ್ನು ಮಂಗಳೂರಿನ ಹಿರಿಯ ಮಾನಸಿಕ ತಜ್ಞರಾದ ಡಾ। ಅರುಣ್ ರಾವ್ ನೆರವೇರಿಸಿದರು. ಸನ್ಮತಿ ಚಾರಿಟೆಬಲ್ ಟ್ರಸ್ಟ್ ಇದರ ಚೇರ್‌ಮೇನ್ ಶ್ರೀಮತಿ ಕುಶಲ ಈಶ್ವರ್ ಅವರು ಪ್ರೇರಣೆ, ಸ್ಥಾಪನೆ, ಉದ್ದೇಶ ಮತ್ತು ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಿಸಿದರು. ಸಮಾಜ ಸೇವೆಯೇ ಮುಖ್ಯ ಉದ್ದೇಶ ಎಂಬುದಾಗಿ ಸ್ಪಷ್ಟ ಪಡಿಸಿದರು. ಡಾ॥ ಅರುಣ್ ರಾವ್ ತಮ್ಮ ಉದ್ಘಾಟನಾ ಭಾಷಣದಲ್ಲಿ ಮಾನಸಿಕ ತಜ್ಞರು, ಸಮಾಜ ಸೇವಕರು ಮತ್ತು ಮಾನಸಿಕ ಆರೋಗ್ಯ ಕ್ಷೇತ್ರದ ವೃತ್ತಿಯಲ್ಲಿರುವರೆಲ್ಲರೂ ಒಂದಾಗಿ ಇಂತಹ ಕೇಂದ್ರಗಳನ್ನು ಶಕ್ತಿ ಪಡಿಸಿ ಮಾನಸಿಕ ಅಸ್ವಸ್ಥರಾದವರನ್ನು ಸಮಾಜದ ಮುಖ್ಯ ವಾಹಿನಿಗೆ ತರಬೇಕೆಂದು ನುಡಿದು ಈ ಕ್ಷೇತ್ರದಲ್ಲಿನ ಅವರ ಅನುಭವಗಳನ್ನು ಹಂಚಿಕೊಂಡರು.

ಮುಖ್ಯ ಅತಿಥಿಗಳಾಗಿ ಡಾ॥ ದೇವರಾಜ್.ಕೆ, ನಿವೃತ್ತ ಪ್ರಾಂಶುಪಾಲರು ಎಸ್.ಡಿ.ಎಂ.ಕಾಲೇಜ್ ಆಫ್ ಬಿಸಿನೆಸ್ ಮೇನೆಜ್‌ಮೆಂಟ್ ಮಂಗಳೂರು ಇವರು ಮಾನಸಿಕ ಅಸ್ವಸ್ಥರಿಗಾಗಿ ನಡೆಸಲು ಉದ್ದೇಶಿಸಿರುವ ಸ್ಥಾಪಕರ ಈ ಕಾರ್ಯ ಶ್ಲಾಘನೀಯ ಹಾಗೂ ಇವರೊಂದಿಗೆ ನಾವೆಲ್ಲರೂ ಕೈ ಜೋಡಿಸೋಣ ಎಂದು ಕರೆಯಿತ್ತರು. ಮಂಗಳೂರಿನ ದೇರಳಕಟ್ಟೆಯ ಕ್ಷೇಮದ ಮಾನಸಿಕ ಆರೋಗ್ಯ ವಿಭಾಗದ ಮುಖ್ಯಸ್ಥರಾದ ಡಾ॥ ಸತೀಶ್ ರಾವ್ ಅವರು ಇಂತಹ ಹಗಲು ಯೋಗ ಕ್ಷೇಮ ಕೇಂದ್ರವು ಮಾನಸಿಕ ಅಸ್ವಸ್ಥತೆಯಿಂದ ಗುಣಮುಖರಾಗುವವರಿಗೆ ಆಶಾಕಿರಣವಾಗಲಿ ಎಂದು ಶುಭ ಹಾರೈಸಿದರು.

ಉರ್ವ ಪೋಲೀಸ್ ಠಾಣೆಯ ಅಪರಾಧ ವಿಭಾಗದ ಸಬ್‌ಇನ್ಸ್‌ಪೆಕ್ಟರ್ ಶ್ರೀಮತಿ ವನಜಾಕ್ಷಿಯವರು ತಮ್ಮ ಮುಖ್ಯ ಅತಿಥಿಗಳ ಭಾಷಣದಲ್ಲಿ ಈ ಕೇಂದ್ರವು ತಮ್ಮ ವೃತ್ತಿ ಕ್ಷೇತ್ರದಲ್ಲಿ ಕಂಡು ಬರುವಂತಹ ಮಾನಸಿಕ ಸಮಸ್ಯೆಯಿಂದ ಬಳಲುವವರಿಗೂ ಭರವಸೆಯ ನೆಲೆಯಾಗಲಿ ಎಂದು ಶುಭ ಹಾರೈಸಿದರು. ಕಾರ್ಯಕ್ರಮದ ಅಧ್ಯಕ್ಷೀಯ ಭಾಷಣ ಮಾಡಿದ ಮಂಗಳೂರಿನ ಮೆಂಟಲ್ ಹೆಲ್ತ್ ಪ್ರೊಫೆಷನಲ್ ಮನಶಾಂತಿ ಕೌನ್ಸಲಿಂಗ್ ರಿಸರ್ಚ್ ಎಂಡ್ ಟ್ರೆನಿಂಗ್ ಸೆಂಟರ್ ಇಲ್ಲಿನ ಮುಖ್ಯಸ್ಥೆಯಾದ ಡಾ॥ ರಮೀಳ ಶೇಖರ್ ರವರು ಮಾನಸಿಕ ಅಸ್ವಸ್ಥತೆಯಿಂದ ಬಳಲುವವರು ಆತ್ಮವಿಶ್ವಾಸದ ಕೊರತೆಯಿಂದಾಗಿ ಸಮಾಜದಲ್ಲಿ ಬೆರೆಯಲು ಹಿಂಜರಿಯುತ್ತಾರೆ. ಹಾಗೂ ಧನಾತ್ಮಕವಾದಂತಹ ಸಂಬಂಧಗಳನ್ನು ಬೆಸೆಯುವುದಕ್ಕೆ ಕಷ್ಟ ಪಡುತ್ತಾರೆ. ಈ ನಿಟ್ಟಿನಲ್ಲಿ ಹಗಲು ಯೋಗ ಕ್ಷೇಮ ಕೇಂದ್ರಗಳಲ್ಲಿ ವಿವಿಧ ರೀತಿಯ ಚಟುವಟಿಕೆಗಳನ್ನು ನೀಡುವುದರ ಮೂಲಕ ಅವರಲ್ಲಿರುವ ಜೀವಿತ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸಲು ಹಾಗೂ ಸ್ವಾವಲಂಬಿ ಬದುಕನ್ನು ಸಾಗಿಸಲು ಬಹಳ ಮಹತ್ತರವಾದ ಪಾತ್ರವಹಿಸಲಿದೆ ಎಂದು ನುಡಿದು, ತಮ್ಮ ವಿದ್ಯಾಭ್ಯಾಸದಲ್ಲಿ ಕಲಿತುದನ್ನು ಪ್ರಾಯೋಗಿಕವಾಗಿ ಕಾರ್ಯರೂಪಕ್ಕೆ ತಂದಾಗ ಒಬ್ಬ ಗುರುವಿಗೆ ನೀಡುವ ಗುರುದಕ್ಷಿಣೆಯಾಗುತ್ತದೆ ಎಂದು ಶ್ಲಾಘಿಸಿದರು.

ಸನ್ಮತಿ ಚಾರಿಟೇಬಲ್ ಟ್ರಸ್ಟ್ ಇದರ ಸಲಹಾ ಮಂಡಳಿಯ ಸದಸ್ಯರಾದ ಮತ್ತು ದೂರದರ್ಶನ ಮಾಧ್ಯಮಗಳಲ್ಲಿ ನಿರೂಪಕಿಯಾಗಿದ್ದ ಹಾಗೂ ಮಾನವ ಹಕ್ಕುಗಳ



ತರಬೇತುದಾರರಾದ ಶ್ರೀಮತಿ ಶೈಲಜಾ ಸಂತೋಷ್ ತಮ್ಮ ಆಶಯ ಭಾಷಣದಲ್ಲಿ "ಮಾನಸಿಕ ಅಸ್ವಸ್ಥರಿಗೆ ಕೂಡ ಉತ್ತಮ ರೀತಿಯಲ್ಲಿ ಬದುಕುವ ಹಕ್ಕಿದೆ. ಆ ಹಕ್ಕು ಮತ್ತು ಅವಕಾಶಗಳನ್ನು ಅವರಿಗೆ ನೀಡಬೇಕಾದುದು ಸಮಾಜದ ಕರ್ತವ್ಯ". ಈ ನಿಟ್ಟಿನಲ್ಲಿ ಶ್ರಮಿಸಲು ಹೆಜ್ಜೆಯಿಟ್ಟಿರುವ ಸನ್ಮತಿ ಹಗಲು ಯೋಗ ಕ್ಷೇಮ ಕೇಂದ್ರದ ಉದ್ದೇಶಕ್ಕೆ ವಿವಿಧ ಕ್ಷೇತ್ರಗಳಲ್ಲಿ ದುಡಿಯುವ ಪರಿಣತರು ಹಾಗೂ ಸಮಾಜದ ಎಲ್ಲಾ ವರ್ಗದವರು ತನು-ಮನ-ಧನಗಳಿಂದ ಪ್ರೋತ್ಸಾಹಿಸಬೇಕಾಗಿ ಕರೆಯಿತ್ತರು.

ಶೀಮತಿ ಜ್ಯೋತಿಯವರು ವಂದನಾರ್ಪಣೆಗೈದರು. ಟ್ರಸ್ಟ್‌ನ ಕಾರ್ಯದರ್ಶಿ ಕೌಶಲ್ ಈಶ್ವರ್, ಖಜಾಂಚಿ ಶ್ರೀ. ಸದಾನಂದ ಸುವರ್ಣ ಮತ್ತು ಸಲಹಾ ಸಮಿತಿಯ ಎಲ್ಲಾ ಸದಸ್ಯರುಗಳು ಉಪಸ್ಥಿತರಿದ್ದರು.

ಈ ಕಾರ್ಯಕ್ರಮವನ್ನು ಆಪ್ತ ಸಮಾಲೋಚಕರಾದ ಕುಮಾರಿ ರಮ್ಯಾ ರವರು ನಿರೂಪಿಸಿದರು.

With Best Compliments from
**Rtn. Phf. Devu M. Karkera,**
M.A., L.L.B., C.A.I.I.B.
**Rtd. Gen. Manager, Bank of Baroda**
Sri. Vishnumurthy Temple Road,
Near Shree Narayana Guru Mandira,
Kulai, Mangalore.



Dr. Rahul Thonse
M.D.S



THONSE RAHUL'S
DENTAL CLINIC
C-15, AI-RAHABA PLAZA,
Nellikai Road,
Near SBI, Mangalore - 575001
Ph: 0824-4261412
Mob: 9886661412
E-mail: rahuldentalclinic@yahoo.in

# ಕರ್ನಾಟಕ ತುಳು ಸಾಹಿತ್ಯ ಅಕೆಡೆಮಿ ಪ್ರಕಟಿಸಿರುವ
# ಮುದ್ದು ಮೂಡುಬೆಳ್ಳೆಯವರ "ತುಳು ನಾಟಕ ಪರಂಪರೆ"

✍ ರಘು ಇಡ್ಕಿದು

ಪ್ರಾಚೀನವಾದ ತುಳು ಭಾಷೆ, ಸಂಸ್ಕೃತಿಯ ವಿಕಾಸದಲ್ಲಿ ನಾಟಕ ರಂಗಭೂಮಿ ತನ್ನದೇ ಆದ ಪ್ರಭಾವಗಳನ್ನು ಬೀರುತ್ತ, ಜನರನ್ನು ಜಾಗೃತಗೊಳಿಸುತ್ತ, ಮನರಂಜನೆ ನೀಡುತ್ತ, ಮನೋವಿಕಾಸ ಮಾಡುತ್ತ ಬೆಳೆದು ನಿಂತಿದೆ. ಇಂತಹ ತುಳು ನಾಟಕ, ರಂಗಭೂಮಿ ಪರಂಪರೆಯ ಶತಮಾನದ ಇತಿಹಾಸವನ್ನು ಸಮಗ್ರವಾಗಿ ಪರಿಚಯಿಸಿಕೊಡುವ ಬಹುದೊಡ್ಡ ಕಾರ್ಯವನ್ನು ತನ್ನ ಸುಮಾರು 35 ವರ್ಷಗಳ ಶೋಧನೆಯ ಮೂಲಕ ಮುದ್ದು ಮೂಡುಬೆಳ್ಳೆಯವರು ಮಾಡಿದ್ದಾರೆ. ಈ ಗ್ರಂಥವೇ "ತುಳು ನಾಟಕ ಪರಂಪರೆ". ಈ ಕೃತಿಯಲ್ಲಿ ಲೇಖಕರ ಅಧ್ಯಯನಶೀಲತೆ ಮತ್ತು ಸಂಶೋಧನಾತ್ಮಕ ನೆಲೆಗಳು ಎದ್ದು ತೋರುವುದರಿಂದ ತುಳುವಿಗೆ ಇದೊಂದು ಮೌಲಿಕ ಕೃತಿಯಾಗಿದೆ. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಈಚೆಗೆ ಇದನ್ನು ಪ್ರಕಟಿಸಿದೆ.

ತುಳು ನಾಟಕ, ರಂಗಭೂಮಿ ಪರಂಪರೆಯು ಕಳೇ ಶತಮಾನದ ಆರಂಭದಲ್ಲಿಯೇ ಮಂಗಳೂರಿನ ಶಿಕ್ಷಕ ತರಭೇತಿ ಸಂಸ್ಥೆಯಲ್ಲಿ ಆರಂಭಗೊಂಡು ಬಳಿಕ ಮಾಧವ ತಿಂಗಳಾಯರ "ಜನಮರ್ಲ್" (1933) ಬಳಿಕ ಪಡುಬಿದ್ರೆ ಶಿವಣ್ಣ ಹೆಗ್ಗಡೆ, ಕೆಮ್ತೂರರ ಮೂಲಕ ವಿಕಾಸಗೊಂಡು, ಜನಪ್ರಿಯ ಮಾದರಿಗಳಲ್ಲಿ ಬೆಳೆಯುತ್ತ, ಕಾಲಕಾಲಕ್ಕೆ ವಿವಿಧ ಹಂತಗಳಲ್ಲಿ ಬೆಳೆದು ಇಂದು ವೃತ್ತಿಪರರೊಂದಿಗೆ ಆಧುನಿಕ ನೆಲೆಯನ್ನು ಕೂಡಾ ಕಂಡುಕೊಳ್ಳುವಷ್ಟರ ಹಂತಕ್ಕೆ ಬೆಳೆದು ಬಿಟ್ಟದೆ. ಕಳೆದ ನೂರು ವರ್ಷಗಳಿಂದ ಬೆಳೆಯುತ್ತ ಬಂದ ತುಳು ರಂಗಭೂಮಿಯಲ್ಲಿ ಕೆ.ಬಿ. ಭಂಡಾರಿ, ರಾಮ ಕಿರೋಡಿಯನ್, ಕೆ.ಎನ್.ಟೇಲರ್, ದಂಡೆಕೇರಿ, ಅಮೃತ ಸೋಮೇಶ್ವರ, ಸದಾನಂದ ಸುವರ್ಣ, ಮನು ಇಡ್ಯಾ, ಡಿ.ಕೆ.ಚೌಟ ಮೊದಲಾದವರು ಕಾಲ ಕಾಲಕ್ಕೆ ಹೊಸ ಹೊಸ ಸಾಧ್ಯತೆಗಳನ್ನು ಸೃಷ್ಟಿಸಿ ತುಳು ರಂಗಭೂಮಿಯನ್ನು ಕ್ರಿಯಾಶೀಲಗೊಳಿಸಿದ್ದಾರೆ.

ಮುದ್ದು ಮೂಡು ಬೆಳ್ಳೆಯವರ "ತುಳು ನಾಟಕ ಪರಂಪರೆ" ಎಂಬ ಈ ಕೃತಿ 308 ಪುಟಗಳ ವ್ಯಾಪ್ತಿಯುಳ್ಳದ್ದಾಗಿದ್ದು ತುಳು ನಾಟಕ ಪರಂಪರೆ ಮತ್ತು ಪ್ರಯೋಗಗಳ ಅಧ್ಯಯನದ ಕೃತಿಯಾಗಿದೆ. ಇಡೀ ತುಳು ನಾಟಕ ಪರಂಪರೆಯನ್ನು ಇಲ್ಲಿ ಸಮಗ್ರವಾಗಿ ಪರಿಚಯಿಸಿದ್ದಾರೆ. ಸ್ವಾತಂತ್ರ್ಯ ಪೂರ್ವದ ತುಳು ನಾಟಕಗಳು, ಸ್ವಾತಂತ್ರ್ಯೋತ್ತರ ನಾಟಕಗಳು, ಕೆಮ್ತೂರು ದೊಡ್ಡಣ್ಣ ಶೆಟ್ಟರ ಪ್ರಯೋಗಗಳು, ವೃತ್ತಿ ನಾಟಕ ತಂಡಗಳು, ಹಿರಿಯ ತಲೆಮಾರಿನ ನಾಟಕಗಳು, ತುಳು ರಂಗಭೂಮಿಯಲ್ಲಿ ಮಹಿಳೆಯರು, ಹಾಸ್ಯ ನಾಟಕಗಳು ಜನಪ್ರಿಯಗೊಂಡ ಬಗೆ,

ಮುಂಬಯಿಯ ತುಳು ರಂಗಭೂಮಿ, ವಿದೇಶದಲ್ಲಿ ತುಳು ನಾಟಕ ಪ್ರಯೋಗಗಳು, ಆಕಾಶವಾಣಿಯಲ್ಲಿ ಪ್ರಸಾರ ಮಾಡಿದ ತುಳು ನಾಟಕಗಳು, ಬೇರೆ ಭಾಷೆಯನ್ನಾಡುವವರು ತುಳು ರಂಗಭೂಮಿಗೆ ನೀಡಿದ ಕೊಡುಗೆ, ಆಧುನಿಕ ತುಳು ರಂಗಭೂಮಿ ಬೆಳೆದ ಬಗೆ, ತುಳುವಿನಲ್ಲಿ ಪ್ರಯೋಗವಾದ ಅನುವಾದಿತ ನಾಟಕಗಳು, ನಿರ್ದೇಶಕರಾಗಿ ದುಡಿದವರು, ನಟರಾಗಿ ಮಿಂಚಿದವರು, ಧ್ವನಿ ಬೆಳಕು ನೀಡಿದವರು, ಮೇಕಪ್ ಮಾಡಿದವರು, ಸ್ಟೇಜ್ ಸೆಟ್ಟಿಂಗ್ ಮಾಡಿದವರು, ನಾಟಕಗಳಿಗೆ ಸಂಗೀತ ನೀಡಿದವರು, ಹಿನ್ನೆಲೆಯಲ್ಲಿ ಹಾಡುಗಳನ್ನು ಹಾಡಿದವರು ಹೀಗೆ.... ಈ ಎಲ್ಲಾ ವಿವರಗಳನ್ನು ಬಹಳ ವಿಸ್ತಾರವಾಗಿ ನೀಡುತ್ತ, ನಾಟಕದ ಪ್ರತಿಯೊಂದು ಆಯಾಮಗಳನ್ನು ದಾಖಲಿಸಿದ್ದಾರೆ. ನಾಟಕದ ಬೇರೆ ಬೇರೆ ವಿಭಾಗಗಳಲ್ಲಿ ದುಡಿದವರ ವಿವರಗಳನ್ನು ನೀಡಿರುವುದು ಬೆಳ್ಳೆಯವರ ಕಾರ್ಯಕ್ಷಮತೆ ಮತ್ತು ಸೂಕ್ಷ್ಮ ದೃಷ್ಟಿಕೋನವನ್ನು ಬಿಂಬಿಸುತ್ತದೆ.

ಇಷ್ಟೇ ಅಲ್ಲದೆ, ನೂರಾರು ನಾಟಕ ತಂಡಗಳು, ನಾಟಕಕಾರರು, ಸಮಕಾಲೀನ ನಾಟಕ ತಂಡಗಳು, ವಸ್ತು-ಭಾಷೆ-ತಂತ್ರದ ದೃಷ್ಟಿಯಿಂದ ತುಳು ನಾಟಕಗಳು ಹೇಗಿವೆ? ತುಳು ರಂಗಭೂಮಿಯ ಇಂದಿನ ಸವಾಲುಗಳೇನು? ಚರ್ಚೆ-ವಿಶ್ಲೇಷಣೆ-ವಿವರಗಳನ್ನು ನೀಡುವ ಮೂಲಕ ಗಮನ ಸೆಳೆದಿದ್ದಾರೆ. ಕೃತಿಯ ಕೊನೆಯಲ್ಲಿ ಪ್ರಕಟಿತ ನಾಟಕಗಳ ಸ್ಥೂಲವಾದ ಯಾದಿಯೊಂದನ್ನು ನೀಡಿರುವುದು ಮತ್ತು ನಟರ, ನಿರ್ದೇಶಕರ, ನಾಟಕಕಾರರ, ನಾಟಕದ ದೃಶ್ಯಗಳ ಚಿತ್ರಗಳನ್ನು ಅಲ್ಲಲ್ಲಿ ಕೃತಿಯಲ್ಲಿ ಬಳಸಿರುವುದು ಗಮನಾರ್ಹ.

ಒಟ್ಟಿನಲ್ಲಿ ತುಳು ರಂಗ ಭೂಮಿಯ ಸುದೀರ್ಘ ಚರಿತ್ರೆಯನ್ನು ಕನ್ನಡದಲ್ಲಿ ದಾಖಲು ಮಾಡಿ ತುಳುವೇತರಿಗೂ ತುಳು ರಂಗಭೂಮಿಯ ಮಜಲುಗಳನ್ನು ಪರಿಚಯಿಸಿ ಕೊಡುವ ಮಹತ್ವದ ಕೃತಿ ಇದಾಗಿದ್ದು, ಇಂತಹ ಅಧ್ಯಯನ ಶೀಲ ಕೆಲಸಗಳನ್ನು ತುಳುವಿಗಾಗಿ ಮಾಡಿದ ಮುದ್ದು ಮೂಡು ಬೆಳ್ಳೆಯವರು ಮತ್ತು ಒಳ್ಳೆಯ ಕೃತಿಯೊಂದನ್ನು ಪ್ರಕಟಿಸಿರುವ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಕಾರ್ಯ ಅಭಿನಂದನೀಯರು.

ಮೊಬೈಲ್ : 9980887884

ಗಂಗಾಧರ ಶಾಂತಿ

ಅರ್ಚಕರು ಗರಡಿ ಕ್ಷೇತ್ರ



ಓಂ ಸಾಯಿ ಜ್ಯೋತಿಷ್ಯಾಲಯ

ಗರಡಿ ಕಂಪೌಂಡ್, ಕಂಕನಾಡಿ, ಮಂಗಳೂರು - 575 002

ಸುದ್ದಿಗೊಂಚಲು

# ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ

## ಉಚಿತ ವೈದ್ಯಕೀಯ ಮತ್ತು ಕಣ್ಣಿನ ತಪಾಸಣೆ ಶಿಬಿರ

ಮಂಗಳೂರು: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ (ನಿ.) ಉಳ್ಳಾಲ ಶಾಖೆ, ಬಹ್ಮಶ್ರೀನಾರಾಯಣಗುರು ಬಿಲ್ಲವ ಸೇವಾ ಸಂಘ (ರಿ.) ಮತ್ತು ಮಹಿಳಾ ಘಟಕ, ಬಂಡಿಕೊಟ್ಯ, ಉಳ್ಳಾಲ, ವಿದ್ಯಾರಣ್ಯ ಯುವಕ ವೃಂದ (ರಿ) ಮತ್ತು ವಿದ್ಯಾರಣ್ಯ ಕಲಾವೃಂದ, ಉಳ್ಳಾಲ ಇವರ ಜಂಟಿ ಸಹಯೋಗದೊಂದಿಗೆ ಮಾತಾ ಅಮೃತಾನಂದಮಯಿ ಮಠ, ಬೋಳೂರು ಮತ್ತು ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ, ಉಜ್ಜೋಡಿ ಮಂಗಳೂರು ಇಲ್ಲಿಯ ನುರಿತ ವೈದ್ಯರ ತಂಡದವರಿಂದ ಉಚಿತ ವೈದ್ಯಕೀಯ ತಪಾಸಣಾ ಶಿಬಿರ ಮತ್ತು ಕಣ್ಣಿನ ತಪಾಸಣೆ ಶಿಬಿರವು ಇತ್ತೀಚೆಗೆ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಚಿತ್ತರಂಜನ್ ಬೋಳಾರ್ ಇವರ ಅಧ್ಯಕ್ಷತೆಯಲ್ಲಿ ಸಮುದಾಯ ಭವನ ಉಳ್ಳಾಲ ನಗರಸಭೆ ಇಲ್ಲಿ ನಡೆಯಿತು.

ಮಾತಾ ಅಮೃತಾನಂದಮಯಿ ಮಠ ಬೋಳೂರು ಇಲ್ಲಿಯ ವೈದ್ಯಕೀಯ ತಂಡದ ಮುಖ್ಯಸ್ಥರಾದ ಡಾ॥ ದೇವ್‌ದಾಸ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷಯನ್ನು ಶ್ರೀ ಚಿತ್ತರಂಜನ್ ಬೋಳಾರ್ ಇವರು ವಹಿಸಿದ್ದರು. ಈ ಸಂಧರ್ಭದಲ್ಲಿ ಕನ್ನಡಕ ವಿತರಣೆಗೆ ಸಹಾಯ ಹಸ್ತ ನೀಡಿದ ಅವಿನಾಶ್ ಗ್ಯಾಸ್ ಏಜೆನ್ಸಿಯ ಮಾಲಕರಾದ ಶ್ರೀ ಬಿ.ಡಿ.ಗೋಪಾಲ್ ಇವರಿಗೆ ಕೃತಜ್ಞತೆ ಸಲ್ಲಿಸಲಾಯಿತು.

ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ನಿರ್ದೇಶಕರಾದ ಶ್ರೀ ವಾಮನ್ ಕೆ., ನಾರಾಯಣಗುರು ಬಿಲ್ಲವ ಸೇವಾ ಸಂಘ (ರಿ.) ಅಧ್ಯಕ್ಷರಾದ ಶ್ರೀ ಗೋಪಾಲ್ ಯು.ಕೆ, ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಹರಿಣಾಕ್ಷಿ ಎಮ್., ವಿದ್ಯಾರಣ್ಯ ಯುವಕ ವೃಂದ (ರಿ.) ಮತ್ತು ವಿದ್ಯಾರಣ್ಯ ಕಲಾವೃಂದ ಅಧ್ಯಕ್ಷರಾದ ಶ್ರೀ ಚೂಡಪ್ಪ ಉಳ್ಳಾಲ್, ಮಾತಾ ಅಮೃತಾನಂದಮಯಿ ಮಠ ಬೋಳೂರು ಇಲ್ಲಿಯ ವೈದ್ಯರಾದ



ಡಾ॥ ಅಶೋಕ್ ಶೆಣೈ, ಪ್ರಸಾದ್ ನೇತ್ರಾಲಯದ ವೈದ್ಯರಾದ ಡಾ॥ ಪ್ರಿಯಾ ಹಾಗೂ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಶ್ರೀಮತಿ ಸೌಮ್ಯ ವಿಜಯ್ ಅತಿಥಿಗಳಾಗಿ ಭಾಗವಹಿಸಿದರು.

ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ನಿರ್ದೇಶಕರುಗಳಾದ ಶ್ರೀಆನಂದ ಎಸ್ ಕೊಂಡಾಣ, ಶ್ರೀ ಜಿ. ಪರಮೇಶ್ವರ ಪೂಜಾರಿ, ಶ್ರೀ ಸೀತಾರಾಮ್ ಎನ್., ಶ್ರೀ ಚಂದ್ರಹಾಸ್ ಮರೋಳಿ, ಶ್ರೀಮತಿ ಸುಜಯ ಹೇಮಚಂದ್ರ, ಸಿಬ್ಬಂದಿ ವರ್ಗ ಹಾಗೂ ಎಲ್ಲಾ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು. ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಉಪಾಧ್ಯಕ್ಷರಾದ ನೇಮಿರಾಜ್ ಪಿ. ಸ್ವಾಗತಿಸಿದರು. ಬ್ರಹ್ಮಶ್ರೀ ನಾರಾಯಣಗುರು ಸಮಾಜ ಸೇವಾ ಸಂಘದ ಮೇಲ್ವಿಚಾರಕರಾದ ಶ್ರೀ ಉದಯ್ ಆರ್.ಕೆ ವಂದಿಸಿದರು. ಸಂಘದ ಶಾಖಾಧಿಕಾರಿ ಶ್ರೀಮತಿ ಹರಿಣಾಕ್ಷಿ ಪ್ರಶಾಂತ್ ಕಾರ್ಯಕ್ರಮ ನಿರೂಪಿಸಿದರು.

# ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ

## ಮಾಡೂರು ಶಾಖೆಯ ವಾರ್ಷಿಕೋತ್ಸವ ಹಾಗೂ ಗ್ರಾಹಕರ ಸಭೆ



ಮಂಗಳೂರು: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ಮಾಡೂರು ಶಾಖೆಯ 7ನೇ ವಾರ್ಷಿಕೋತ್ಸವ ಹಾಗೂ ಗ್ರಾಹಕರ ಸಭೆಯು ಸಂಘದ ಅಧ್ಯಕ್ಷರಾದ ಶ್ರೀಯುತ ಚಿತ್ತರಂಜನ್ ಬೋಳಾರ್ ಅವರ ಅಧ್ಯಕ್ಷತೆಯಲ್ಲಿ ಮಾಡೂರು ಶಾಖೆಯಲ್ಲಿ ಜರಗಿತು. ಈ ಕಾರ್ಯಕ್ರಮವನ್ನು ಸಂಘದ ಸದಸ್ಯರುಗಳಾದ ಶ್ರಿಯುತ ಗೋಪಾಲಕೃಷ್ಣ ಎಂ ಭಟ್, ಶ್ರೀಮತಿ ಪ್ರಶಾಂತಿ, ಶ್ರೀಮತಿ ಕಲಾವತಿ, ಹಾಗೂ ಶ್ರೀಮತಿ ಯೋಗಿನಿ ದೀಪ ಪ್ರಜ್ವಲನೆ ಮಾಡುವುದರ ಮೂಲಕ ಉದ್ಘಾಟಿಸಿದರು.

ಸಂಘದ ಸದಸ್ಯರಾದ ಶ್ರೀಯುತ ಗಣೇಶ್ ಭಂಡಾರಿ ಅವರು ಸಂಘವು ನೀಡುತ್ತಿರುವ ಸೇವೆಗೆ ಮೆಚ್ಚುಗೆ ವ್ಯಕ್ತ ಪಡಿಸಿದರು. ಸಂಘದ ಮತ್ತೋರ್ವ ಸದಸ್ಯರಾದ ಶ್ರೀಮತಿ ಕಲಾವತಿಯವರು ಮಾತನಾಡಿ ಸಂಘವು ನೀಡುತ್ತಿರುವ ಹಣಕಾಸು ವರ್ಗಾವಣೆ ಸೇವೆಯನ್ನು ಸಂಜೆ 6 ಗಂಟೆಯವರೆಗೆ ವಿಸ್ತರಿಸುವಂತೆ ವಿನಂತಿಸಿದರು.

ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರಾದ ಆನಂದ ಎಸ್. ಕೊಂಡಾಣ, ಚಂದ್ರಹಾಸ್ ಮರೋಳಿ ಮತ್ತು ಸಲಹಾ ಸಮಿತಿ ಸದಸ್ಯರಾದ ಯಶವಂತ್ ಮಾಡೂರು ಉಪಸ್ಥಿತರಿದ್ದರು. ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಶಾಖಾಧಿಕಾರಿಯಾದ ಶ್ರೀಮತಿ ಸೌಮ್ಯಲತಾ ಸ್ವಾಗತಿಸಿದರು. ಉಪಾಧ್ಯಕ್ಷರಾದ ನೇಮಿರಾಜ್ ಪಿ. ವಂದಿಸಿದರು.

# ವಿವೇಕ ರೈಯವರಿಗೆ ಪ್ರಶಸ್ತಿ



ಶಿವಮೊಗ್ಗ: ಶಿವಮೊಗ್ಗ ಕರ್ನಾಟಕ ಸಂಘ ಕೊಡಮಾಡುವ ವಾರ್ಷಿಕ ಜೀವಮಾನ ಸಾಧನೆ ಪ್ರಶಸ್ತಿಗಳಾದ ಡಾ. ಶಂಬಾ ಜೋಷಿ ಮತ್ತು ಡಾ. ಶಿವರಾಮ ಕಾರಂತ ಪ್ರಶಸ್ತಿಗಳನ್ನು 2019ನೇ ಸಾಲಿಗೆ ಕ್ರಮವಾಗಿ ಸಂಶೋಧಕ ಡಾ. ಬಿ.ಎ. ವಿವೇಕ ರೈ, ವಿಜ್ಞಾನ ಸಾಹಿತಿ ನಾಗೇಶ್ ಹೆಗಡೆ ಅವರಿಗೆ ಘೋಷಿಸಲಾಗಿದೆ. ಇತ್ತೀಚೆಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಪ್ರಶಸ್ತಿಯು 25 ಸಾವಿರ ರೂ. ನಗದು ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ. ಸಂಘದ ಗೌರವ ಸದಸ್ಯರಾದ ಡಾ. ಶಂಬಾ ಜೋಷಿ ಅವರ ಹೆಸರಿನಲ್ಲಿ ಸಂಶೋಧನಾ ಕ್ಷೇತ್ರದಲ್ಲಿ ಸಲ್ಲಿಸಿದ ಅನನ್ಯ ಸೇವೆಗಾಗಿ ಹಾಗೂ ಡಾ. ಶಿವರಾಮ ಕಾರಂತ ಹೆಸರಲ್ಲಿ ವಿಜ್ಞಾನ ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗೆ ಪ್ರಶಸ್ತಿ ನೀಡಲಾಗುತ್ತದೆ.

*With Best Compliments From*



**Karunakar Shetty**

**Seaway Marine Services**

**Kuloor, Mangaluru**

# ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ
## ಉಚಿತ ಕನ್ನಡಕ ವಿತರಣೆ

ಮಂಗಳೂರು: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ (ನಿ.) ಉಳ್ಳಾಲ ಶಾಖೆ, ಬಹ್ಮಶ್ರೀನಾರಾಯಣಗುರು ಬಿಲ್ಲವ ಸೇವಾ ಸಂಘ (ರಿ.) ಮತ್ತು ಮಹಿಳಾ ಘಟಕ, ಬಂಡಿಕೊಟ್ಯ, ಉಳ್ಳಾಲ ಹಾಗೂ ವಿದ್ಯಾರಣ್ಯ ಯುವಕ ವೃಂದ (ರಿ) ಮತ್ತು ವಿದ್ಯಾರಣ್ಯ ಕಲಾವೃಂದ, ಉಳ್ಳಾಲ ಇವರ ಜಂಟಿ ಸಹಯೋಗದೊಂದಿಗೆ ಮಾತಾ ಅಮೃತಾನಂದಮಯಿ ಮಠ, ಬೋಳೂರು ಹಾಗೂ ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ, ಉಜ್ಜೋಡಿ ಮಂಗಳೂರು ಇಲ್ಲಿಯ ನುರಿತ ವೈದ್ಯರ ತಂಡದವರಿಂದ ನಡೆಸಲ್ಪಟ್ಟ ಉಚಿತ ವೈದ್ಯಕೀಯ ತಪಾಸಣಾ ಶಿಬಿರವು ಸಮುದಾಯ ಭವನ, ನಗರ ಸಭೆ, ಉಳ್ಳಾಲದಲ್ಲಿ ನಡೆಯಿತು. ಈ ಕಾರ್ಯಕ್ರಮದ ಶಿಬಿರಾರ್ಥಿಗಳಿಗೆ ಉಚಿತ ಕನ್ನಡಕ ವಿತರಣೆ ಮಾಡುವ ಕಾರ್ಯಕ್ರಮವು ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ (ನಿ.)ದ ಅಧ್ಯಕ್ಷರಾದ ಶ್ರೀ ಚಿತ್ತರಂಜನ್ ಬೋಳಾರ್ ಇವರ ಅಧ್ಯಕ್ಷತೆಯಲ್ಲಿ ಉಳ್ಳಾಲ ಶಾಖೆಯಲ್ಲಿ ನಡೆಯಿತು. 215 ಕ್ಕೂ ಹೆಚ್ಚಿನ ಶಿಬಿರಾರ್ಥಿಗಳು ಇದರ ಪ್ರಯೋಜನವನ್ನು ಪಡೆದರು. ಉಚಿತ ಕಣ್ಣಿನ ತಪಾಸಣೆಯಲ್ಲಿ ಪಾಲ್ಗೊಂಡ ಶಿಬಿರಾರ್ಥಿಗಳು ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸೆಯ ಪ್ರಯೋಜನವನ್ನು ಪಡೆದರು. ಹಾಗೂ 118 ಶಿಬಿರಾರ್ಥಿಗಳಿಗೆ ಈ ಸಂದರ್ಭದಲ್ಲಿ ಉಚಿತ ಕನ್ನಡಕವನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ (ನಿ.)ದ ನಿರ್ದೇಶಕರಾದ ಶ್ರೀ ಆನಂದ ಎಸ್ ಕೊಂಡಾಣ, ಸಲಹಾ ಸಮಿತಿ



ಸದಸ್ಯರಾದ ಶ್ರೀ ಆರ್.ಕೆ ಉದಯ್, ಶ್ರೀಮತಿ ದೇವಕಿ ಆರ್ ಉಳ್ಳಾಲ್, ಶ್ರೀ ಪುರುಷೋತ್ತಮ್ ಕೆ. ಶಿಬಿರಾರ್ಥಿಗಳಿಗೆ ಕನ್ನಡಕ ವಿತರಿಸಿದರು.

ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ (ನಿ.)ದ ಉಪಾಧ್ಯಕ್ಷರಾದ ಶ್ರೀ ನೇಮಿರಾಜ್ ಪಿ. ಸ್ವಾಗತಿಸಿ, ನಿರ್ದೇಶಕರಾದ ಶ್ರೀ ವಾಮನ್ ಕೆ. ವಂದಿಸಿದರು. ಸಂಘದ ಉಳ್ಳಾಲ ಶಾಖೆಯ ಶಾಖಾಧಿಕಾರಿಯಾದ ಶ್ರೀಮತಿ ಹರಿಣಾಕ್ಷಿ ಪ್ರಶಾಂತ್ ಕಾರ್ಯಕ್ರಮ ನಿರೂಪಿಸಿದರು.

# ಆತ್ಮಶಕ್ತಿ ವಿವಿದೋದ್ದೇಶ ಸಹಕಾರಿ ಸಂಘ
## ಸಿಬ್ಬಂದಿಗಳ 2 ದಿನಗಳ ಅಧ್ಯಯನ ಪ್ರವಾಸ



ಮಂಗಳೂರು : ಆತ್ಮಶಕ್ತಿ ವಿವಿದೋದ್ದೇಶ ಸಹಕಾರಿ ಸಂಘ ಮಂಗಳೂರು ಇದರ ಎಲ್ಲಾ ಸಿಬ್ಬಂದಿಗಳು 2 ದಿನಗಳ ಅಧ್ಯಯನ ಪ್ರವಾಸವನ್ನು ಅಧ್ಯಕ್ಷರಾದ ಶ್ರೀ ಚಿತ್ತರಂಜನ್ ಬೋಳಾರ್ ಇವರ ನೇತೃತ್ವದಲ್ಲಿ ಕೈಗೊಂಡಿದ್ದರು. ಮೈಸೂರಿನ ವಿವಿಧ ಸಹಕಾರಿ ಸಂಘಗಳಿಗೆ ಹಾಗೂ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿದ ಅವರು ಮೈಸೂರಿನ ಪ್ರಮುಖವಾದ ಭೋಗಾದಿಯ ರೂಪ ನಗರದಲ್ಲಿರುವ ದೀಪ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ. ಗೆ ಭೇಟಿ ನೀಡಿ ಅಲ್ಲಿಯ ಸಹಕಾರಿ ಸಂಘದ ಸಿಬ್ಬಂದಿಗಳ ಹಾಗೂ ಆಡಳಿತ ಮಂಡಳಿ ನಿರ್ದೇಶಕರ ಜೊತೆ ವಿವಿಧ ವಿಷಯಗಳ ಬಗ್ಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ನಿವೃತ್ತ ಉಪ ನಿಬಂಧಕರಾದ ಶ್ರೀ ಚಂದ್ರಶೇಖರ ಸುವರ್ಣರವರು ಸಹಕಾರಿ ಸಂಘದ ಪ್ರಗತಿಯಲ್ಲಿ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದ ಪಾತ್ರದ ಬಗ್ಗೆ ಮಹತ್ವದ ಮಾಹಿತಿ ನೀಡಿದರು. ದೀಪ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾದ ಶ್ರೀ ಜೆ.ಬಿ ಪೂಜಾರಿಯವರು ಸಂಘವು ಬೆಳೆದು ಬಂದ ಹಾದಿಯ ಬಗ್ಗೆ ಸವಿವರವಾಗಿ ತಿಳಿಸಿದರು. ಕಾರ್ಯದರ್ಶಿ ಶ್ರೀ ಕೆ ಬಾಲಕೃಷ್ಣರವರು ಸಿಬ್ಬಂದಿ ವರ್ಗದವರಿಗೆ ಕಾನೂನು ನಿಯಮಗಳ ಬಗ್ಗೆ ಮಾಹಿತಿ ನೀಡಿದರು ಮತ್ತು ದೈನಂದಿನ ವ್ಯವಹಾರದಲ್ಲಿ ನಾವು ಕೈಗೊಳ್ಳಬೇಕಾದ ಸೇವೆಯ ಮಾಹಿತಿ ನೀಡಿದರು. ದೀಪ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಯ ಕಾರ್ಯದರ್ಶಿ ಶ್ರೀ ಸದಾಶಿವ ಪೂಜಾರಿ ಮಾತನಾಡಿ ಗ್ರಾಹಕರಿಗೆ ಅನುಕೂಲವಾಗುವಂತೆ ಆದಿತ್ಯವಾರವೂ ಸಂಘವು ದೈನಂದಿನ ಬ್ಯಾಂಕಿಂಗ್ ಸೇವೆಯನ್ನು ನೀಡುತ್ತಿರುವುದು ಸಂಘದ ಬೆಳವಣಿಗೆಗೆ ಪೂರಕವಾಗಿದೆ ಎಂದರು.

ವಿಶೇಷವಾಗಿ ಮೈಸೂರಿನ ಜಿಲ್ಲೆಯಲ್ಲಿ ಹೆಚ್ಚಿನ ಸಹಕಾರಿ ಸಂಘಗಳು ತನ್ನ ಸದಸ್ಯರಿಗೆ ರಜಾದಿನಗಳಲ್ಲಿಯೂ ಸೇವೆ ನೀಡುತ್ತಿರುವುದನ್ನು ಮನಗಂಡು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಇಂತಹ ಸೇವೆಯನ್ನು ಪ್ರಾರಂಭಿಸುವ ಬಗ್ಗೆ ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರುಗಳಾದ ಶ್ರೀ ಪರಮೇಶ್ವರ ಪೂಜಾರಿ, ಶ್ರೀ ರಮಾನಾಥ್ ಸನಿಲ್, ಶ್ರೀಮತಿ ಸುಜಯ ಹೇಮಚಂದ್ರ, ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀಮತಿ ಸೌಮ್ಯ ವಿಜಯ್ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# "ಹೊಸ ಅಂಗಣ" ತಿಂಗಳ ಬೆಳಕು ಕಾರ್ಯಕ್ರಮ



ಮೂಲ್ಕಿ: ಗ್ರಾಮೀಣವಾಗಿ ಎಲೆಮರೆಯ ಕಾಯಿಗಳಂತಿರುವ ಸಮಾಜ ಸೇವಕರನ್ನು ಗುರುತಿಸುವ ಮೂಲಕ ಅವರನ್ನು ಪ್ರಾದೇಶಿಕ ಉನ್ನತಿಯ ಹರಿಕಾರರಾಗಿ ಬೆಳೆಸುವ ತಿಂಗಳ ಬೆಳಕು ಕಾರ್ಯಕ್ರಮ ಅಭಿನಂದನೀಯ ಎಂದು ಮುಂಬೈ ಸಾಹಿತಿ ಶೇಖರ ಚಿತ್ರಾಪು ಹೇಳಿದರು. ಮೂಲ್ಕಿ ಸ್ವಾಗತ್ ಸಂಕೀರ್ಣದಲ್ಲಿ ಶನಿವಾರ ಜರುಗಿದ ಹೊಸಅಂಗಣದ 45ನೇ ತಿಂಗಳಬೆಳಕು ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಪುನರೂರು ಪ್ರತಿಷ್ಠಾನದ ಅಧ್ಯಕ್ಷ ದೇವಪ್ರಸಾದ್ ಪುನರೂರು ವಹಿಸಿದ್ದರು. ಈ ಸಂದರ್ಭ ಪಡುಬೈಲು ಶ್ರೀ ಕೋಡ್ದಬ್ಬು ದೈವಸ್ಥಾನದ ನಿತ್ಯ ಅರ್ಚಕ ದೇವಪ್ಪ ಕಾರ್ನಾಡು ರವರನ್ನು ಸಭೆಗೆ ಪರಿಚಯಿಸಿ ಸನ್ಮಾನಿಸಲಾಯಿತು.

ಹೊಸ ಅಂಗಣದ ಡಾ। ಹರಿಶ್ಚಂದ್ರ ಪಿ.ಸಾಲ್ಯಾನ್, ರವೀಂದ್ರ ಶೆಟ್ಟಿ, ಸುರೇಶ್ ಬಂಗೇರಾ ರವಿಚಂದ್ರ, ವಾಮನ ಕೋಟ್ಯಾನ್ ನಡಿಕುದ್ರು ಆನಂದ ದೇವಾಡಿಗಾ ಉಪಸ್ಥಿತರಿದ್ದರು. ಡಾ। ಹರಿಶ್ಚಂದ್ರ. ಪಿ. ಸಾಲ್ಯಾನ್ ಸ್ವಾಗತಿಸಿದರು. ವಾಮನ ಕೋಟ್ಯಾನ್ ನಡಿಕುದ್ರು ಸನ್ಮಾನಿತರನ್ನು ಪರಿಚಯಿಸಿದರು. ಆನಂದ ದೇವಾಡಿಗ ಪ್ರಾರ್ಥಿಸಿದರು. ರವಿಚಂದ್ರ ನಿರೂಪಿಸಿದರು.

# ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ
## ಉಚಿತ ವೈದ್ಯಕೀಯ ತಪಾಸಣಾ ಶಿಬಿರ ಮತ್ತು ಕಣ್ಣಿನ ತಪಾಸಣೆ



ಮಂಗಳೂರು : ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ (ನಿ.) ಮುಡಿಪು ಶಾಖೆ, ಮಾತಾ ಅಮೃತಾನಂದಮಯಿ ಮಠ, ಬೋಳೂರು ಮತ್ತು ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ, ಉಜ್ಜೋಡಿ ಮಂಗಳೂರು ಇಲ್ಲಿಯ ನುರಿತ ವೈದ್ಯರ ತಂಡದವರಿಂದ ಉಚಿತ ವೈದ್ಯಕೀಯ ತಪಾಸಣಾ ಶಿಬಿರ ಮತ್ತು ಕಣ್ಣಿನ ತಪಾಸಣೆ ಶಿಬಿರವು ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಚಿತ್ತರಂಜನ್ ಬೋಳಾರ್ ಇವರ ಅಧ್ಯಕ್ಷತೆಯಲ್ಲಿ ಎ.ಬಿ ಕಾಂಪ್ಲೆಕ್ಸ್, ಪಂಚಾಯತ್ ಆಫೀಸ್‌ನ ಎದುರುಗಡೆ, ಮುಡಿಪು ಇಲ್ಲಿ ನಡೆಯಿತು.

ಮಾತಾ ಅಮೃತಾನಂದಮಯಿ ಮಠ ಬೋಳೂರು ಇಲ್ಲಿಯ ವೈದ್ಯಕೀಯ ತಂಡದ ಮುಖ್ಯಸ್ಥರಾದ ಡಾ॥ ದೇವ್‌ದಾಸ್ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಚಿತ್ತರಂಜನ್ ಬೋಳಾರ್ ಸಂದರ್ಭೋಚಿತವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ನಿರ್ದೇಶಕರಾದ ಶ್ರೀಆನಂದ ಎಸ್. ಕೊಂಡಾಣ, ಮಾತಾ ಅಮೃತಾನಂದಮಯಿ ಮಠ ಬೋಳೂರು ಇಲ್ಲಿಯ ವೈದ್ಯರಾದ ಡಾ॥ ಅಶೋಕ್ ಶೆಣೈ, ಡಾ॥ ಸುಚಿತ್ರಾ, ಪ್ರಸಾದ್ ನೇತ್ರಾಲಯದ ವೈದ್ಯರಾದ ಡಾ॥ ಜೆಫ್ರಿ, ಪಜೀರು ಪಂಚಾಯತ್ ನ ಸದಸ್ಯರಾದ ಶ್ರೀ ಮೊಹಮ್ಮದ್, ಹಾಗೂ ಕೈರಂಗಳ ವ್ಯವಸಾಯ ಸೇವಾ ಸಹಕಾರಿ ಸಂಘದ ನಿರ್ದೇಶಕರಾದ ಶ್ರೀ ಪದ್ಮನಾಭ ನರಿಂಗಾನ ಉಪಸ್ಥಿತರಿದ್ದರು.

ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಸಿಬ್ಬಂದಿಯಾದ ಶ್ರೀ ಸಚಿನ್ ಸ್ವಾಗತಿಸಿದರು. ಸಂಘದ ಶಾಖಾಧಿಕಾರಿ ಕು. ಪ್ರೀತಿ ವಂದಿಸಿದರು. ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಸೌಮ್ಯ ವಿಜಯ್ ಕಾರ್ಯಕ್ರಮ ನಿರೂಪಿಸಿದರು.

ಮಾಹಿತಿ

# ಪ್ಲಾಸ್ಟಿಕ್ ತಂದರೆ ದೇವರ ದರ್ಶನ ಇಲ್ಲ

ದೇವಾಲಯಗಳಿಗೆ ಪ್ಲಾಸ್ಟಿಕ್ ಚೀಲಗಳಲ್ಲಿ ಪೂಜಾ ಸಾಮಗ್ರಿ ಕೊಂಡೊಯ್ಯುವ ಭಕ್ತರಿಗೆ ಇನ್ನುಮುಂದೆ ದೇವರ ದರ್ಶನ ಭಾಗ್ಯ ಇಲ್ಲ! ಪ್ಲಾಸ್ಟಿಕ್ ತ್ಯಾಜ್ಯಕ್ಕೆ ಮುಕ್ತಿ ಹಾಡಲು ಮುಂದಾಗಿರುವ ಮುಜರಾಯಿ ಇಲಾಖೆ ದೇಗುಲದ ಆವರಣದಲ್ಲಿ ಪ್ಲಾಸ್ಟಿಕ್ ಚೀಲ ನಿಷೇಧಿಸಲು ಕಟ್ಟುನಿಟ್ಟಿನ ಕ್ರಮಕೈಗೊಂಡಿದೆ. ಭಕ್ತರು ಹೂವು, ಹಣ್ಣು-ಕಾಯಿ, ಕಡ್ಡಿ, ಕರ್ಪೂರಗಳನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತಂದು ನಂತರ ಎಲ್ಲೆಂದರಲ್ಲಿ ಬಿಸಾಡಿ ಹೋಗುತ್ತಾರೆ. ಇದರಿಂದ ದೇವಾಲಯಗಳ ಆವರಣ ಪ್ಲಾಸ್ಟಿಕ್ ತ್ಯಾಜ್ಯದಿಂದ ಮಲಿನಗೊಳ್ಳುತ್ತಿವೆ. ಆದ್ದರಿಂದ ಮುಜರಾಯಿ ಇಲಾಖೆಗೆ ಸೇರಿದ ಎಲ್ಲಾ ದೇವಾಲಯಗಳಲ್ಲೂ ಪ್ಲಾಸ್ಟಿಕ್ ಚೀಲಗಳ ಸಂಪೂರ್ಣ ನಿಷೇಧಕ್ಕೆ ಸಿದ್ಧತೆ ನಡೆದಿದೆ.

ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ಸೂಚನೆ : ಪರಿಸರ ಸಂರಕ್ಷಣೆ ಹಾಗೂ ತ್ಯಾಜ್ಯ ನಿರ್ವಹಣೆಗೆ ನಿವೃತ್ತ ನ್ಯಾ. ಸುಭಾಷ್ ಬಿ. ಅಡಿ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ 'ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ರಾಜ್ಯ ಸಮಿತಿ'ಯು ಇತ್ತೀಚೆಗೆ ಕರೆದಿದ್ದ ಸಭೆಯಲ್ಲಿ ದೇವಾಲಯಗಳಲ್ಲಿ ಪ್ಲಾಸ್ಟಿಕ್ ಸಂಪೂರ್ಣ ನಿಷೇಧ ಹಾಗೂ ಸ್ವಯಂ ತ್ಯಾಜ್ಯ ಸಂಸ್ಕರಣೆಗೆ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದೆ. ರಾಜ್ಯದ ಮುಜರಾಯಿ ದೇಗುಲಗಳಲ್ಲಿ ಪರಿಶೀಲನೆ ನಡೆಸಿದ್ದ ಸಮಿತಿಯು ಐತಿಹಾಸಿಕ ಹಾಗು ಧಾರ್ಮಿಕ ಕ್ಷೇತ್ರವಾದ ಬೆಳಗಾವಿಯ ಸವದತ್ತಿ ಯಲ್ಲಮ್ಮ ಗುಡ್ಡದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಬಿದ್ದಿದ್ದು, ದೇವಾಲಯದ ಪರಿಸರಕ್ಕೆ ಮಾರಕವಾಗಿರುವುದನ್ನು ಗಮನಿಸಿತ್ತು. ಯಲ್ಲಮ್ಮ ಗುಡ್ಡದಲ್ಲಿ ನಡೆಯುವ ಜಾತ್ರೆ ಹಾಗೂ ಮಹೋತ್ಸವಗಳಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪ್ಲಾಸ್ಟಿಕ್ ಬಳಕೆ ಮಾಡುತ್ತಿರುವುದು ಕಂಡುಬಂದಿತ್ತು. ಅಲ್ಲಿನ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕೆ ಸೂಚನೆ ನೀಡಿದ್ದ ಸಮಿತಿಯು, ಈಗ ರಾಜ್ಯಮಟ್ಟದ ಸಭೆಯಲ್ಲಿ ರಾಜ್ಯಾದಂತ ಇರುವ ಮುಜರಾಯಿ ಇಲಾಖೆಗೆ ಸೇರಿದ ಎಲ್ಲಾ ದೇವಾಲಯಗಳಲ್ಲಿ ಪ್ಲಾಸ್ಟಿಕ್ ನಿಷೇಧಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದೆ.

ಮರು ಆದೇಶ: ಸರಕಾರ ಪ್ಲಾಸ್ಟಿಕ್ ನಿಷೇಧ ಮಾಡಿದ್ದ ಸಂದರ್ಭದಲ್ಲೆ ಮುಜರಾಯಿ ಇಲಾಖೆ ದೇವಾಲಯಗಳಲ್ಲಿ ಪ್ಲಾಸ್ಟಿಕ್ ಚೀಲಗಳ ಬಳಕೆಗೆ ನಿಷೇಧ ಹೇರಿತ್ತು. ಈ ಸಂಬಂಧ ದೇವಾಲಯದ ಆವರಣದಲ್ಲಿ ಪ್ಲಾಸ್ಟಿಕ್ ಚೀಲ ಬಳಕೆ ಮಾಡುವವರಿಗೆ ದಂಡ ವಿಧಿಸುವುದಾಗಿ ಗೋಡೆಗಳ ಮೇಲೆ ಫಲಕಗಳನ್ನೂ ಹಾಕಲಾಗಿದೆ. ಎರಡೆರಡು ಬಾರಿ ದೇವಾಲಯಗಳಿಗೆ ಪ್ಲಾಸ್ಟಿಕ್ ನಿಷೇಧಿಸುವಂತೆ ಸುತ್ತೋಲೆ ಕಳುಹಿಸಲಾಗಿದೆ. ಆದಾಗ್ಗಿಯೂ ಪ್ಲಾಸ್ಟಿಕ್ ಸಂಪೂರ್ಣ ನಿಷೇಧ ಸಾಧ್ಯವಾಗಿಲ್ಲ. ಹೀಗಾಗಿ ಕೆಲ ಕಟ್ಟುನಿಟ್ಟಿನ ನಿಯಮಗಳೊಂದಿಗೆ ಇಲಾಖೆ ಎಲ್ಲಾ ದೇವಾಲಯಗಳಿಗೂ ಮರು ಅಧೇಶ ರವಾನಿಸಲಿದೆ ಎನ್ನುತ್ತಾರೆ ಮುಜರಾಯಿ ಇಲಾಖೆ ಅಧಿಕಾರಿಗಳು.

ನಿಧನ

## ಬಿ. ಕಮಲಾಕ್ಷಿ



ಮಂಗಳೂರು: ನಿವೃತ ಸಿವಿಲ್ ನ್ಯಾಯಾಧೀಶ ದಿ। ಎಸ್. ಗೋಪಾಲಕೃಷ್ಣ ಸೊರಕೆ ಅವರ ಪತ್ನಿ, ಬಿ.ಕಮಲಾಕ್ಷಿ (91) ಇತ್ತೀಚೆಗೆ ನಿಧನ ಹೊಂದಿದರು.

ಬಿ.ಕಮಲಾಕ್ಷಿ ಅವರು ಪತಿಯಂತೆ ಸದಾ ಅದರ್ಶ ವ್ಯಕ್ತಿಯಾಗಿ ಕುಟುಂಬದ ಮಮತೆಯ ಮಾತೆಯಾಗಿ, ಬಂಧು ಬಳಗದ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಅವರು ಜಯವಂತ ಕುಮಾರ್, ಜ್ಞಾನೇಶ್ ಕುಮಾರ್, ಜಗಜೀವನ್ ದಾಸ್, ಜಗದೀಶ್ ಕುಮಾರ್, ವಿಜಯಕುಮಾರ್ ಸೊರಕೆ ಸೇರಿದಂತೆ ಪುತ್ರರು ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ನಿಧನ

## ದಾಸಪ್ಪ ಸುವರ್ಣ



ಚಿತ್ರಾಪುರ: ಶ್ರೀಯುತ ಚಿತ್ರಾಪುರ ದಾಸಪ್ಪ ಸುವರ್ಣರು ಇತ್ತೀಚೆಗೆ ನಿಧನ ಹೊಂದಿದ್ದಾರೆ. ಚಿತ್ರಾಪುರ ಮಹಾಂಕಾಳಿ ದೈವಸ್ಥಾನದ ಮೊಕ್ತೇಸರರಾಗಿ ಸದಾ ಸಮಾಜಿಕ ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡು ಎಲ್ಲರೊಂದಿಗೆ ಬೆರೆತು ಸಕ್ರೀಯರಾಗಿದ್ದ ಶ್ರೀಯುತರು ಪತ್ನಿ ಹಾಗೂ ಆತ್ಮಶಕ್ತಿ ವಿವಿದೊದ್ದೇಶ ಸಹಕಾರಿ ಸಂಘದ ಸಿಬ್ಬಂದಿಯಾದ ಪಾವನಾ ಸೇರಿ 6 ಮಕ್ಕಳನ್ನು ಹಾಗೂ ಅಪಾರ ಬಂದು ಬಾಂಧವರನ್ನು ಅಗಲಿದ್ದಾರೆ. ಶ್ರೀಯುತರಿಗೆ ಆತ್ಮಶಕ್ತಿ ಬಳಗದ ಶ್ರದ್ಧಾಂಜಲಿ

# ಯುವವಾಹಿನಿ ಮಂಗಳೂರು ಮಹಿಳಾ ಘಟಕದ ಮನದ ಮಾತು

## ಹದಿಹರೆಯದ ಮಕ್ಕಳ ಮನೋವಿಕಾಸದ ಬಗ್ಗೆ ಕಾಳಜಿ ವಹಿಸಬೇಕು : ಡಾ.ಅರುಣಾ ಯಡಿಯಾಳ್

ಮಂಗಳೂರು : ವಿಶ್ವ ಮಹಿಳಾ ದಿನಾಚರಣೆಯ ಪ್ರಯುಕ್ತ ಯುವವಾಹಿನಿ (ರಿ) ಮಂಗಳೂರು ಮಹಿಳಾ ಘಟಕದ ಆಶ್ರಯದಲ್ಲಿ ಮಂಗಳೂರಿನ ಇಂದಿರಾ ಪ್ರಿಯದರ್ಶಿನಿ ಉದ್ಯಾನವನದಲ್ಲಿ ಇತ್ತೀಚೆಗೆ ನಡೆದ ಮನೆ, ಮನಸ್ಸು, ಜೀವನ ಕನಸುಗಳ ಜೊತೆ ಮಾತುಕತೆ ಮನದ ಮಾತು ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಡಾ। ಅರುಣಾ ಯಡಿಯಾಲ್ ಭಾಗವಹಿಸಿದರು. ಶ್ಯಾಮಲ ವಿಕ್ರಮ್ ಕಾರ್ಯಾಗಾರವನ್ನು ಉದ್ಘಾಟಿಸಿದರು. ಯುವವಾಹಿನಿ(ರಿ) ಮಂಗಳೂರು ಮಹಿಳಾ ಘಟಕದ ಅಧ್ಯಕ್ಷರಾದ ರಶ್ಮಿ. ಸಿ ಕರ್ಕೇರಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಯುವವಾಹಿನಿ ಮಂಗಳೂರು ಮಹಿಳಾ ಘಟಕದ ಸಲಹೆಗಾರರಾದ ಜಿತೇಂದ್ರ ಜೆ. ಸುವರ್ಣ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ವಿವಿಧ ಸಂಘಟನೆಗಳ ಪದಾಧಿಕಾರಿಗಳು ಭಾಗವಹಿಸಿದ್ದ ಈ ಕಾರ್ಯಾಗಾರದಲ್ಲಿ ಸಾರ್ವಜನಿಕರ ಪ್ರಶ್ನೆಗಳಿಗೆ ಉತ್ತರಿಸಲಾಯಿತು. ಉತ್ತಮ ಪ್ರಶ್ನೆಗಾಗಿ ಶಿಕ್ಷಕಿ ಅಮಿತಾಂಜಲಿ ಕಿರಣ್ ಉಡುಪಿ ಇವರು ಬಹುಮಾನ ಪಡಕೊಂಡರು. ಈ ಸಂದರ್ಭದಲ್ಲಿ ಮಿಸೆಸ್ ಮಂಗಳೂರು 2018 ಪ್ರಶಸ್ತಿಯನ್ನು ಪಡಕೊಂಡ ಸುಧೀಕ್ಷಾ ಕಿರಣ್ ಸುವರ್ಣ ಇವರನ್ನು ಸನ್ಮಾನಿಸಲಾಯಿತು. ಮಹಿಳಾ ಘಟಕದ ಸೇವಾ ಕಾರ್ಯಕ್ರಮದ ಅಂಗವಾಗಿ ಎರಡು ಕಸದ ತೊಟ್ಟಿಯನ್ನು ಇಂದಿರಾ ಪ್ರಿಯದರ್ಶಿನಿ ಉದ್ಯಾನವನಕ್ಕೆ



ಹಸ್ತಾಂತರಿಸಲಾಯಿತು. ಕಾರ್ಯ ಕ್ರಮದ ಬಳಿಕ ಮಹಿಳಾ ಘಟಕದ ಸದಸ್ಯರಿಗೆ ವಿವಿಧ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮದ ಸಂಚಾಲಕರಾದ ಸರಸ್ವತಿ, ಸಹ ಸಂಚಾಲಕರಾದ ಲೋಲಾಕ್ಷಿ ದೇವೇಂದ್ರ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಯುವವಾಹಿನಿ (ರಿ) ಮಹಿಳಾ ಘಟಕದ ಘಟಕದ ಉಪಾಧ್ಯಕ್ಷರಾದ ಉಮಾ ಶ್ರೀಕಾಂತ್ ಸ್ವಾಗತಿಸಿದರು. ಕಾರ್ಯಕ್ರಮದ ಸಂಚಾಲಕರಾದ ಸರಸ್ವತಿ ವಂದಿಸಿದರು. ಶುಭ ರಾಜೇಂದ್ರ ಕಾರ್ಯಕ್ರಮ ನಿರೂಪಿಸಿದರು.

# ಬೆಂಗಳೂರಿನ ಗುರುರಾಘವೇಂದ್ರ ಸಾಂಸ್ಕೃತಿಕ ಅಕಾಡೆಮಿ (ರಿ.)

## ಡಾ। ಹರಿಶ್ಚಂದ್ರ ಪಿ.ಸಾಲಿಯಾನ್‌ರವರಿಗೆ "ಸಾಧಕರತ್ನ" ಪ್ರಶಸ್ತಿ

ಮೂಲ್ಕಿ: ಡಾ। ಹರಿಶ್ಚಂದ್ರ ಪಿ.ಸಾಲಿಯಾನ್‌ರವರು ಸಾಹಿತ್ಯ ಮತ್ತು ಸಮಾಜ ಸೇವೆಯಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಕ್ಕೆ ಶ್ರೀ ಗುರುರಾಘವೇಂದ್ರ ಸಾಂಸ್ಕೃತಿಕ ಅಕಾಡೆಮಿ(ರಿ.) ಬೆಂಗಳೂರು, ಶ್ರೀ ಗುರು ರಾಘವೇಂದ್ರ ಸುಗಮ ಸಂಗೀತ ಶಾಲೆ ಇವರು ಇತ್ತೀಚೆಗೆ ಕನ್ನಡ ಸಾಹಿತ್ಯ ಪರಿಷತ್ ಚಾಮರಾಜಪೇಟೆ ಬೆಂಗಳೂರು ಇಲ್ಲಿ 'ಸಾಧಕರತ್ನ ಪ್ರಶಸ್ತಿ' ಪ್ರಧಾನ ಮಾಡಿದರು.

ಕಾರ್ಯಕ್ರಮವನ್ನು ಎಲ್.ಶಾಮಣ್ಣ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ನೀಲಕಂಠ, ಶ್ರೀ.ಬಿ.ಜೆ.ಸತ್ಯ, ಶಿವಕುಮಾರ್, ಶ್ರೀ ಬಂದ್ರಳ್ಳಿ ವಿಜಯಕುಮಾರ್, ಶ್ರೀಮತಿ ಸುವರ್ಣ ರಘುನಾಥ್ ಮತ್ತು ಕಾರ್ಯಕ್ರಮದ ಸಂಯೋಜಕಿ ಆಶಾ ಬದ್ರಿನಾಥ್ ಇವರು ಉಪಸ್ಥಿತರಿದ್ದರು.



# ಶ್ರೀ ಗುರುದೇವ ದತ್ತ ಸಂಸ್ಥಾನಮ್ ಒಡಿಯೂರು ವಸಂತ ಶಿಬಿರ 2019



ಮಂಗಳೂರು: 2019 ನೇ ವಸಂತ ಶಿಬಿರವು ಇತ್ತೀಚೆಗೆ ಶ್ರೀ ಗುರುದೇವ ದತ್ತ ಸಂಸ್ಥಾನಮ್ ಒಡಿಯೂರು ಮತ್ತು ಗ್ರಾಮ ವಿಕಾಸ ಯೋಜನೆ ವತಿಯಿಂದ ಇಲ್ಲಿನ ಜ್ಞಾನ ಮಂದಿರದಲ್ಲಿ ನಡೆಯಿತು. ಶಿಬಿರದ ಉದ್ಘಾಟನೆಯನ್ನು ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿಯವರು ದೀಪ ಪ್ರಜ್ವಲನೆಯ ಮೂಲಕ ಉದ್ಘಾಟಿಸಿದರು. ಪೂಜ್ಯ ಮಾತಾನಂದಮಯಿ, ಗ್ರಾಮವಿಕಾಸ ಯೋಜನೆಯ ಯೋಜನಾ ನಿರ್ದೇಶಕರಾದ ಶ್ರೀ ಯು. ಕಿರಣ್ ಹಾಗೂ ಸಂಪನ್ಮೂಲ ವ್ಯಕ್ತಿ ಶ್ರೀಯುತ ಲೋಹಿತ್ ಭಂಡಾರಿ ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಮೊದಲಿಗೆ ಭಗವದ್ಗೀತೆಯ ಧ್ಯಾನ ಶ್ಲೋಕಗಳ ಪಠಣ, ಪ್ರಾಣಾಯಾಮ, ಧ್ಯಾನ ಮತ್ತು ದೇವರ ನಾಮ ಸಂಕೀರ್ತನೆಯನ್ನು ಶಿಬಿರಾರ್ಥಿಗಳು ಶ್ರೀಮತಿ ಸಂಧ್ಯಾ ಮಾತಾಜಿಯವರ ಮಾರ್ಗದರ್ಶನದಲ್ಲಿ ನಡೆಸಿಕೊಟ್ಟರು.

ತದನಂತರ ಶಿಬಿರಾರ್ಥಿಗಳಿಗೆ ರಾಮಾಯಣ ರಸಪ್ರಶ್ನೆ, ಭಕ್ತಿಗೀತೆ ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು. ಹಾಗೂ ಮನರಂಜನೆಗಾಗಿ ಆಟಗಳನ್ನು ಆಡಿಸಲಾಯಿತು. ಶ್ರೀಯುತ ಲೋಹಿತ್ ಭಂಡಾರಿಯವರು ಆಸಕ್ತ ಶಿಬಿರಾರ್ಥಿಗಳಿಗೆ ರಂಗತರಬೇತಿ ನಡೆಸಿಕೊಟ್ಟರು. ಶ್ರೀ ಗುರುದೇವ ವಿದ್ಯಾಪೀಠದ ಹಾಗೂ ಬಾಲವಿಕಾಸ ಕೇಂದ್ರದ ವಿದ್ಯಾರ್ಥಿಗಳು ಸೇರಿ ಒಟ್ಟು 201 ಮಕ್ಕಳು ಸಕ್ರಿಯವಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಶಿಬಿರವನ್ನು ಯಶಸ್ವಿ ಗೊಳಿಸಿದರು. ಈ ಶಿಬಿರದಿಂದ ಎಲ್ಲರೊಂದಿಗೆ ಬೆರೆಯುವುದು ಹಾಗೂ ಅವರ ಪ್ರತಿಭೆಗಳಿಗೆ ಉತ್ತಮ ವೇದಿಕೆ ನಿರ್ಮಾಣವಾಗಿ, ನೈತಿಕ ಮತ್ತು ಧಾರ್ಮಿಕ ಮೌಲ್ಯಗಳನ್ನು ತುಂಬುವ ಪ್ರಯತ್ನವಾಯಿತು.

# ಬೆಂಗಳೂರು ಜಿ.ಡಿ.ಮರಜಂಕ್ಷನ್‌ಗೆ "ಬ್ರಹ್ಮಶ್ರೀ ನಾರಾಯಣಗುರು ಜಂಕ್ಷನ್" ಎಂದು ನಾಮಕರಣ




ಬೆಂಗಳೂರು : ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಬನ್ನೇರು ಘಟ್ಟ ರಸ್ತೆಯಲ್ಲಿರುವ ಜಿ.ಡಿ.ಮರಜಂಕ್ಷನ್‌ಗೆ "ಬ್ರಹ್ಮಶ್ರೀ ನಾರಾಯಣ ಗುರುಜಂಕ್ಷನ್" ಎಂದು ನಾಮಕರಣ ಮಾಡುವ ಹಾಗೂ ನಾಮಫಲಕವನ್ನು ಅನಾವರಣ ಮಾಡುವ ಕಾರ್ಯಕ್ರಮವು ಇತ್ತೀಚೆಗೆ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರಾದ ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನ್‌ರವರು" ಬ್ರಹ್ಮಶ್ರೀ ನಾರಾಯಣಗುರು ಜಂಕ್ಷನ್" ನಾಮಫಲಕ ಅನಾವರಣಗೊಳಿಸಿ ದೀಪ ಬೆಳಗುವುದರೊಂದಿಗೆ ನೆರವೇರಿಸಿದರು. ಬ್ರಹ್ಮಶ್ರೀ ನಾರಾಯಣ ಗುರುಜಂಕ್ಷನ್ ಎಂಬ ನಾಮಕರಣದ ಹಿಂದೆ ಬಹುದಿನಗಳಿಂದ ನಿರಂತರ ಪ್ರಯತ್ನ ನಡೆಸಿಕೊಂಡು ಬಂದಿರುವ ಬಿಲ್ಲವ ಅಸೋಸಿಯೇಶನ್ ಬೆಂಗಳೂರು (ರಿ.) ಇದರ ಅಧ್ಯಕ್ಷರಾದ ಶ್ರೀ ಎಂ.ವೇದಕುಮಾರ್‌ರವರು ಎಲ್ಲರನ್ನು ಸ್ವಾಗತಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಶಾಸಕರಾದ ಶ್ರೀಮತಿ ಸೌಮ್ಯರೆಡ್ಡಿ, ಪಾಲಿಕೆಯ ಸದಸ್ಯರಾದ ಶ್ರೀಮತಿ ಲಕ್ಷ್ಮಿ ನಟರಾಜ್ ಹಾಗೂ ಶ್ರೀಮತಿ ಭಾಗ್ಯಲಕ್ಷ್ಮೀ ಮುರಳಿ ಇವರುಗಳು ಸಭೆಯನ್ನುದ್ದೇಶಿಸಿ ಮಾತನಾಡಿದರು. ವೇದಿಕೆಯಲ್ಲಿ ಬಿ.ಬಿ.ಎಂ.ಪಿಯ ಜಂಟಿ ಆಯುಕ್ತರಾದ ಡಾ|| ಸೌಜನ್ಯ, ಬಿ.ಬಿ.ಎಂ.ಪಿಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀ ಅಶೋಕ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀ ನೀಲಕಂಠ, ಸಂಘದ ಹಿರಿಯ ಉಪಾಧ್ಯಕ್ಷರಾದ ಎಂ. ರಮೇಶ್ ಬಂಗೇರ, ಉಪಾಧ್ಯಕ್ಷರಾದ ಕೇಶವ ಪೂಜಾರಿ, ಮಹಿಳಾ ಘಟಕದ ಅಧ್ಯಕ್ಷೆ ರತ್ನಾ ಜಯರಾಮ್ ಉಪಸ್ಥಿತರಿದ್ದರು. ಶ್ರೀ ಹರೀಶ್‌ರವರ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡ ಕಾರ್ಯಕ್ರಮವು ಕೃಷ್ಣಪ್ಪನವರ ನಿರೂಪಣೆ ಹಾಗೂ ವಂದನಾರ್ಪಣೆಯೊಂದಿಗೆ ಮುಕ್ತಾಯಗೊಂಡಿತು.

# ಬಿಲ್ಲವ ಅಸೋಸಿಯೇಶನ್ ಬೆಂಗಳೂರು ಉಚಿತ ವೈದ್ಯಕೀಯ ತಪಾಸಣೆ ಹಾಗೂ ರಕ್ತದಾನ ಶಿಬಿರ



ಬೆಂಗಳೂರು : ಬಿಲ್ಲವ ಅಸೋಸಿಯೇಶನ್ ಬೆಂಗಳೂರು (ರಿ) ವತಿಯಿಂದ ಇತ್ತೀಚೆಗೆ ಬನ್ನೇರುಘಟ್ಟ ರಸ್ತೆಯಲ್ಲಿರುವ ಬಿಲ್ಲವ ಭವನದಲ್ಲಿ ಉಚಿತ ವೈದ್ಯಕೀಯ ತಪಾಸಣೆ ಹಾಗೂ ರಕ್ತದಾನ ಶಿಬಿರವನ್ನು ಏರ್ಪಡಿಸಲಾಯಿತು. ಅಸೋಸಿಯೇಶನ್‌ನ ಆರೋಗ್ಯ ಸಮಿತಿಯ ಅಧ್ಯಕ್ಷರು ಹಾಗೂ ಅಂಬೇಡ್ಕರ್ ಮೆಡಿಕಲ್ ಕಾಲೇಜ್‌ನ ಪ್ರೊಫೆಸರ್ ಡಾ|| ಪುರುಷೋತ್ತಮ್, M.S.(ORTHO) ಇವರು ದೀಪ ಬೆಳಗಿಸುವುದರೊಂದಿಗೆ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಎಂ.ವೇದಕುಮಾರ್‌ರವರು ಗಣ್ಯರನ್ನು ಸ್ವಾಗತಿಸುತ್ತಾ ಸತತ 14 ವರ್ಷಗಳಿಂದ ಈ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದು ಸಂಘದ ನಿವೇಶನದ ಸುತ್ತಮುತ್ತಲಿನ ಬಡಜನರ ಆರೋಗ್ಯ ಸುಧಾರಣೆಗೆ ಸಹಕಾರಿಯಾಗುತ್ತಿದ್ದೇವೆ ಮತ್ತು ಈ ಪ್ರದೇಶದ ಜನರು ಇನ್ನೂ ಹೆಚ್ಚಿನ ರೀತಿಯಲ್ಲಿ ಇದರ ಪ್ರಯೋಜನ ಪಡೆಯಬೇಕೆಂದು ಹೇಳಿದರು. ಮುಂದಿನ ದಿನಗಳಲ್ಲಿ ಈ ಕಾರ್ಯಕ್ರಮವನ್ನು ಒಂದೊಂದು ಹಳ್ಳಿಗಳಲ್ಲಿ ದೊಡ್ಡ ಮಟ್ಟದಲ್ಲಿ ನಡೆಸಿ ಅಲ್ಲಿಯ ಬಡಜನರಿಗೆ ಇನ್ನೂ ಹೆಚ್ಚಿನ ಸಹಾಯವಾಗುವಂತೆ ಮಾಡುವುದಾಗಿ ಹೇಳಿದರು.

14 ವರ್ಷಗಳಿಂದ ಸತತವಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿಕೊಂಡು ಬರುತ್ತಿರುವ ಡಾ|| ಹರಿಮೂರ್ತಿಯವರು ಮಾತನಾಡಿ ಸಂಘದಲ್ಲಿ ನಡೆಸಿಕೊಂಡು ಬರುತ್ತಿರುವ ಈ ಕಾರ್ಯಕ್ರಮದ ಬಗ್ಗೆ ಅತೀವ ಮೆಚ್ಚುಗೆ ವ್ಯಕ್ತಪಡಿಸಿದರು.

ಶಿಬಿರದಲ್ಲಿ ನಾರಾಯಣ ನೇತ್ರಾಲಯ ಮತ್ತುಅಂಬೇಡ್ಕರ್ ವೈದ್ಯಕೀಯ ಕಾಲೇಜ್‌ನ ನುರಿತ ವೈದ್ಯರು ಪಾಲ್ಗೊಂಡಿದ್ದರು. ಬೆಂಗಳೂರು ಬ್ಲಡ್ ಬ್ಯಾಂಕಿನ ನುರಿತ ವೈದ್ಯರು ರಕ್ತದಾನ ಶಿಬಿರದ ನೇತೃತ್ವ ವಹಿಸಿದ್ದರು. ಭಾಗವಹಿಸಿದ್ದ ವೈದ್ಯರು ಹಾಗೂ ಸಿಬ್ಬಂದಿಗಳಿಗೆ ನೆನಪಿನ ಕಾಣಿಕೆ ನೀಡಲಾಯಿತು. ಸುಮಾರು 250ಕ್ಕೂ ಹೆಚ್ಚು ಜನ ತಮ್ಮ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಉಚಿತ ಔಷಧಿಯನ್ನು ಪಡೆದುಕೊಂಡರು. 50ಕ್ಕೂ ಹೆಚ್ಚು ಜನರಕ್ತದಾನ ಶಿಬಿರದಲ್ಲಿ ಭಾಗವಹಿಸಿ, ರಕ್ತದಾನ ಮಾಡಿದರು.

ವೇದಿಕೆಯಲ್ಲಿ ಗಣ್ಯರೊಂದಿಗೆ ಸಂಘದ ಹಿರಿಯ ಉಪಾಧ್ಯಕ್ಷರಾದ ಎಂ.ರಮೇಶ್ ಬಂಗೇರ, ಉಪಾಧ್ಯಕ್ಷರಾದ ಕೇಶವ ಪೂಜಾರಿ, ಜಂಟಿ ಕಾರ್ಯದರ್ಶಿ ರಾಜೇಶ್‌ಕುಮಾರ್, ಸಂಘಟನಾ ಕಾರ್ಯದರ್ಶಿ ಬಿ.ಎಂ.ಉದಯಕುಮಾರ್, ಮಹಿಳಾ ಘಟಕದ ಅಧ್ಯಕ್ಷೆ ರತ್ನಾಜಯರಾವ್ ಉಪಸ್ಥಿತರಿದ್ದರು. ಕೃಷ್ಣಪ್ಪನವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಶರ್ಮಿಳಾ ಹರೀಶ್ ಹಾಗೂ ಲಾವಣ್ಯ ಅಶೋಕ್‌ರವರ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡ ಕಾರ್ಯಕ್ರಮವು ಪ್ರಧಾನ ಕಾರ್ಯದರ್ಶಿ ಭಾಸ್ಕರ ಪೂಜಾರಿಯವರ ವಂದನಾರ್ಪಣೆಯೊಂದಿಗೆ ಮುಕ್ತಾಯಗೊಂಡಿತು.

## ಹಾರ್ದಿಕ ಅಭಿನಂದನೆಗಳು



ವಿಟ್ಲ: ಮೈಸೂರು ವಿಶ್ವವಿದ್ಯಾಲಯ ಡಿಸೆಂಬರ್ 2018 ರಂದು ನಡೆಸಿದ್ದ ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕ ಅರ್ಹತಾ ಪರೀಕ್ಷೆ (ಕೆ-ಸೆಟ್)ಯಲ್ಲಿ ವಿಟ್ಲದ ಮಂಗಲ ಪದವು ಸಮೀಪದ ನಾರಾಯಣ ಪೂಜಾರಿ ಮತ್ತು ಜಾನಕಿಯವರ ಪುತ್ರನಾದ ರಾಕೇಶ್ ಕೆ. ಎನ್ ಅವರು ರಸಾಯನಿಕ ವಿಜ್ಞಾನದಲ್ಲಿ ಉತ್ತಮ ಅಂಕಗಳೊಂದಿಗೆ ತೇರ್ಗಡೆ ಹೊಂದಿದ್ದಾರೆ. ಇವರು 2015-17 ಸಾಲಿನಲ್ಲಿ ಶ್ರೀ ಗೋಕರ್ಣನಾಥೇಶ್ವರ ಶಿಕ್ಷಕ ಮಹಾವಿದ್ಯಾಲಯ, ಮಂಗಳೂರುನಲ್ಲಿ ಬಿ.ಎಡ್ ಪದವಿಯನ್ನು ಮಾಡಿರುತ್ತಾರೆ. ಇವರು ಪ್ರಸ್ತುತ ರಸಾಯನಶಾಸ್ತ್ರ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ಗೋಕರ್ಣನಾಥೇಶ್ವರ ಕಾಲೇಜಿಗೆ ನ್ಯಾಕ್ ಕಮಿಟಿ ಭೇಟಿ, ಬಿ+ಗ್ರೇಡ್ ಮಾನ್ಯತೆ ಪ್ರದಾನ




ಮಹಾನಗರ : ಉರ್ವ ಗಾಂಧಿನಗರ ಶ್ರೀ ಗೋಕರ್ಣನಾಥೇಶ್ವರ ಕಾಲೇಜಿಗೆ ಮೂರನೇ ಹಂತದ ನ್ಯಾಶನಲ್ ಅಸೆಸ್‌ಮೆಂಟ್ ಆ್ಯಂಡ್ ಎಕ್ರಿಡಿಟೇಶನ್ ಕಮಿಟಿಯು ಇತ್ತೀಚೆಗೆ ಭೇಟಿ ನೀಡಿ ವಿವಿಧ ವಿಭಾಗಗಳ ಶೈಕ್ಷಣಿಕ-ಶೈಕ್ಷಣಿಕೇತರ ಚಟುವಟಿಕೆಗಳ ಮೌಲ್ಯಮಾಪನ ನಡೆಸಿ ಮುಂದಿನ 5 ವರ್ಷಗಳ ಅವಧಿಗೆ ಕಾಲೇಜಿಗೆ ಬಿ+ ಸಿಜಿಪಿಎ 2.73 ಗ್ರೇಡ್ ಮಾನ್ಯತೆ ನೀಡಿದೆ.

ಕಮಿಟಿಯಲ್ಲಿ ಚೇರ್‌ಮೆನ್ ಡಾ| ವಿ.ಗೋಪಾಲ ರೆಡ್ಡಿ ವನಂಗಲ (ಕುಲಪತಿ, ಕಾಕತೀಯ ವಿಶ್ವವಿದ್ಯಾನಿಲಯ, ತೆಲಂಗಾಣ, ಆಂಧ್ರಪ್ರದೇಶ), ಮೆಂಬರ್ ಕಾರ್ಡಿನೇಟರ್) ಡಾ| ದೆಬಸಿನ್ ಸುರ್ (ಪ್ರೊಫೆಸರ್ ಆಫ್ ಕಾಮರ್ಸ್, ಬುರದ್ವಾನ್ ವಿ.ವಿ., ಪಶ್ಚಿಮ ಬಂಗಾಳ), ಸಮಿತಿಯ ಇನ್ನೋರ್ವ ಸದಸ್ಯೆ ಡಾ| ಸುಹಾಸಿನಿ ಆರ್ಯ (ಪ್ರಾಂಶುಪಾಲರು, ಕೆ.ಜಿ. ಮಿತ್ತಲ್ ಕಾಲೇಜು, ಮಹಾರಾಷ್ಟ್ರ) ಅವರು ಉಪಸ್ಥಿತರಿದ್ದರು.

ಚೆಯರ್‌ಮೆನ್ ಡಾ| ವಿ.ಗೋಪಾಲ ರೆಡ್ಡಿ ಕಾಲೇಜಿನ ಉನ್ನತಿ, ನ್ಯೂನತೆಗಳ ಬಗ್ಗೆ ಪರಾಮರ್ಶೆ ನಡೆಸಿ ಪ್ರಗತಿಯ ಬಗ್ಗೆ ಮಾರ್ಗದರ್ಶನ ನೀಡಿದರು.

2 ದಿನಗಳ ಭೇಟಿಯ ಸಂಪೂರ್ಣ ವಿವರಗಳನ್ನು ಒಳಗೊಂಡ ಸಮಿತಿಯ ವರದಿಯನ್ನು ಪ್ರಾಂಶುಪಾಲೆ ಡಾ| ರೇಣುಕಾ ಕೆ ಅವರಿಗೆ ಹಸ್ತಾಂತರಿಸಿದರು. ನ್ಯಾಕ್‌ನ ಮೌಲ್ಯ ಮಾಪನದ ಫಲಿತಾಂಶವನ್ನು ಮುಂದಿನ 5 ವರ್ಷಗಳ ಅವಧಿಗೆ ಕಾಲೇಜಿಗೆ ಬಿ+ ಸಿಜಿಪಿಎ 2.73 ಗ್ರೇಡ್‌ನ ಮಾನ್ಯತೆ ದೊರೆಯಿತು. ಸಂಚಾಲಕ ಎಸ್. ಜಯವಿಕ್ರಂ ಶ್ರೀ ವೆಂಕಟೇಶ ಶಿವಭಕ್ತಿ ಯೋಗ ಸಂಘದ ಉಪಾಧ್ಯಕ್ಷ ಶೇಖರ ಪೂಜಾರಿ, ಆಡಳಿತ ಮಂಡಳಿ ಸದಸ್ಯರಾದ ರಮೀಳಾ ಶೇಖರ್ ಉಪಸ್ಥಿತರಿದ್ದರು. ಪ್ರಾಂಶುಪಾಲೆ ಡಾ| ರೇಣುಕಾ ಕೆ. ಸ್ವಾಗತಿಸಿ, ನ್ಯಾಕ್ ಕೋ-ಆರ್ಡಿನೇಟರ್ ಡಾ| ಸುಜಯ ಸುವರ್ಣ ವಂದಿಸಿದರು. ಪ್ರೊ ಕೆ.ಪಿ. ನಾಗರಾಜ್ ನಿರೂಪಿಸಿದರು.

## ತುಳುನಾಡ ತುಳುವೆರ್ ಶ್ರೀ ರಾಮನವಮಿ ಉತ್ಸವ

ಕಲ್ಯಾಣ್ : ತುಳುನಾಡ ತುಳುವೆರ್ ಕಲ್ಯಾಣ್ ಇದರ ವತಿಯಿಂದ ಶ್ರೀ ರಾಮನವಮಿ ಉತ್ಸವವು ಇತ್ತೀಚೆಗೆ ಕಲ್ಯಾಣ್ ಪೂರ್ವದ ನ್ಯೂ ಅಜಯ್ ಕೋ ಅಪರೇಟಿವ್ ಹೌಸಿಂಗ್ ಸೊಸೈಟಿಯಲ್ಲಿರುವ ಸಂಘದ ಸಭಾಗೃಹದಲ್ಲಿ ನಡೆಯಿತು. ಭಜನಾ ಕಾರ್ಯಕ್ರಮವು ಸಂಸ್ಥಾಪಕ ಅಶೋಕ್ ಎಲ್.ಪೂಜಾರಿ ಅವರ ಉಪಸ್ಥಿತಿಯಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಉಮಾ ಶೆಟ್ಟಿ ರೇಖಾ ಶೆಟ್ಟಿ ಅಂಜನಾ ಪೂಜಾರಿ, ಸುಮಿತ್ರಾ ಪೂಜಾರಿ, ದಯಾವತಿ ಸುವರ್ಣ, ಭವಾನಿ ಪೂಜಾರಿ ಅವರು ಪಾಲ್ಗೊಂಡು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು. ಕೊನೆಯಲ್ಲಿ ಮಹಾ ಮಂಗಳಾರತಿ, ಪ್ರಸಾದ ವಿತರಣೆ ಹಾಗೂ ಲಘು ಉಪಾಹಾರದ ವ್ಯವಸ್ಥೆಯನ್ನು ಆಯೋಜಿಸಲಾಗಿತ್ತು. ಸಂಸ್ಥೆಯ ಪದಾಧಿಕಾರಿಗಳು, ಮಹಿಳಾ ವಿಭಾಗದ ಸದಸ್ಯೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

## ಪುತ್ತೂರು ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಗುರುಗಳ ಪ್ರತಿಷ್ಠಾ ವರ್ಧಂತಿ



ಪುತ್ತೂರು: ಇಲ್ಲಿನ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಮಂದಿರದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳ 13ನೇ ಪ್ರತಿಷ್ಠಾ ವರ್ಧಂತಿ ಉತ್ಸವ ಮತ್ತು ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆ ಇತ್ತೀಚೆಗೆ ನಡೆಯಿತು.

ಮುಂಜಾನೆ ಸ್ವಸ್ತಿ ಪುಣ್ಯಾಹ, ಗಣಪತಿ ಹೋಮ, ನವಕ ಕಲಶಾಭಿಷೇಕ, ಬ್ರಹ್ಮಶ್ರೀ ನಾರಾಯಣ ಗುರುಗಳ ಸಹಸ್ರ ನಾಮಾವಳಿ, ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ನಡೆದು ಮಧ್ಯಾಹ್ನ ಮಹಾಪೂಜೆ ನಡೆಯಿತು. ಬ್ರಹ್ಮಶ್ರೀ ನಾರಾಯಣ ಗುರು ಮಂದಿರದ ಕಾರ್ಯ ನಿರ್ವಹಣಾ ಅಧಿಕಾರಿ ಆರ್.ಸಿ. ನಾರಾಯಣ್ ರೆಂಜ ಅವರ ನೇತೃತ್ವದಲ್ಲಿ ವಿವಿಧ ಧಾರ್ಮಿಕ ವಿಧಿ ವಿಧಾನಗಳು ನಡೆದವು.

ತಾಲ್ಲೂಕು ಬಿಲ್ಲವ ಸಂಘದ ಅಧ್ಯಕ್ಷ ಜಯಂತ ನಡುಬೈಲ್, ತಾಲ್ಲೂಕಿನ ಬಿಲ್ಲವ ಗ್ರಾಮ ಸಮಿತಿಗಳ ಪದಾಧಿಕಾರಿಗಳು, ತಾಲ್ಲೂಕು ಬಿಲ್ಲವ ಸಂಘ, ಬಿಲ್ಲವ ಮಹಿಳಾ ವೇದಿಕೆ, ಯುವವಾಹಿನಿ ಘಟಕಗಳ ಪದಾಧಿಕಾರಿಗಳು, ಸದಸ್ಯರು ಇದರಲ್ಲಿ ಭಾಗವಹಿಸಿದರು.

## ಶ್ರೀ ಯೋಗೀಶ್ ಕಡ್ತಿಲ ಇವರ ನೂತನ ಗೃಹ ಪ್ರವೇಶ



ಬೆಳ್ತಂಗಡಿ : ಶ್ರೀ ಯೋಗೀಶ್ ಪೂಜಾರಿ ಮತ್ತು ಶ್ರೀಯುತ ಸಂಧ್ಯಾಲಕ್ಷಿಯವರ ನೂತನ ಗೃಹಪ್ರವೇಶ "ಕಡ್ತಿಲ ಫಾರ್ಮ್ ಹೌಸ್" ಮಡಂತ್ಯಾರಿನ ಪಾರೆಂಕಿ ಗ್ರಾಮದ ಶ್ರೀ ದೇವಿ ಎಸ್ಟೇಟಿನಲ್ಲಿ ಇತ್ತೀಚೆಗೆ ನೆರವೇರಿತು.

ಸಮಾಂಭಕ್ಕೆ ಅತಿಥಿಗಳಾಗಿ ಆಗಮಿಸಿದ ಧರ್ಮಸ್ಥಳ ಧರ್ಮಾಧಿಕಾರಿ ಡಾ. ವಿರೇಂದ್ರ ಹೆಗ್ಗಡೆ ಹಾಗೂ ಅವರ ಸಹೋದರ ಹರ್ಷೇಂದ್ರ ಹೆಗ್ಗಡೆಯವರು ದೀಪ ಬೆಳಗಿಸಿ ಶುಭಾರಂಭ ಮಾಡಿದರು. ಶ್ರೀ ಸತ್ಯನಾರಾಯಣ ವೃತ, ವಾಸ್ತುಪೂಜೆ ಮುಂತಾದ ಪೂಜೆಗಳಿಂದ ಸಂಭ್ರಮದಿಂದ ಜರುಗಿದ ಈ ನೂತನ ಗೃಹ ಪ್ರವೇಶ ಸಮಾರಂಭಕ್ಕೆ ಗಣ್ಯಾತಿ ಗಣ್ಯರು ಬಂದು ಶುಭ ಹಾರೈಸಿದರು.

# ಕರಾಟೆ ಶಿಕ್ಷಕ ನಿತ್ಯಾನಂದ ಕೆಮ್ಮಣ್ಣು ಇವರಿಗೆ ಸನ್ಮಾನ



ಬೆಳ್ಮಣ್ : ಬುಡೋಕಾನ್ ಕರಾಟೆ & ಮಾರ್ಷಲ್ ಆರ್ಟ್ಸ್ ಬೆಳ್ಮಣ್ ಇದರ ವತಿಯಿಂದ ಜರುಗಿದ ಕರಾಟೆ ವಿದ್ಯಾರ್ಥಿಗಳ ಕಲರ್ ಬೆಲ್ಟ್ ಪರೀಕ್ಷೆಯ ಸಂದರ್ಭ ಬೆಳ್ಮಣ್ ಬ್ರಹ್ಮಶ್ರೀ ನಾರಾಯಣಾ ಗುರು ಸಭಾ ಭವನದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ವರ್ಲ್ಡ್ ಕರಾಟೆ ಫೆಂಡರೇಶನ್‌ನಿಂದ ದುಬೈಯಲ್ಲಿ ಕರಾಟೆ ಕೋಚ್ ಟ್ರೈನಿಂಗ್ ಪಡೆದ ರಾಜ್ಯ ಕರಾಟೆ ಶಿಕ್ಷಕರ ಸಂಘದ ಅಧ್ಯಕ್ಷ ನಿತ್ಯಾನಂದ ಕೆಮ್ಮಣ್ಣು ಇವರನ್ನು ಸನ್ಮಾನಿಸಲಾಯಿತು. ಈ ಸಮಾರಂಭದ ವೇದಿಕೆಯಲ್ಲಿ ಬುಡೋಕಾನ್ ಕರಾಟೆ ಮಾರ್ಷಲ್ ಆರ್ಟ್ಸ್ ಬೆಳ್ಮಣ್ ಇದರ ಮುಖ್ಯ ಶಿಕ್ಷಕ ಹಾಗೂ ಕಾರ್ಯಕ್ರಮದ ಸಂಘಟಕರಾದ ಶಿಕ್ಷಕ ಸತೀಶ್ ಬೆಳ್ಮಣ್, ಶಿಕ್ಷಕ ಕೇಶವ ಕಡಂದಲೆ ಶಿಕ್ಷಕ ರಂಜಿತ್ ಎಸ್, ಹಿರಿಯ ಶಿಕ್ಷಕರಾದ ಪ್ರವೀಣ್ ಭಟ್ಕಳ್, ಉದ್ಯಮಿ ಅವಿನಾಶ್ ಮಲ್ಲಿ, ಕಾರ್ಕಳ ಜೇಸಿ ಆಂಗ್ಲ ಮಾಧ್ಯಮ ಶಾಲೆಯ ಶಿಕ್ಷಕಿ ಶ್ರೀಮತಿ ವಂದನಾ ರೈ, ಪ್ರಶಾಂತ್ ಆಚಾರ್ಯ ಮುಂಡ್ಕೂರು, ಪವನ್ ಕುಮಾರ್ ದುರ್ಗಾಪ್ರಸಾದ್ ಹೊಸಮಾರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಕುತ್ಯಾರು ಸೂರ್ಯ ಚೈತನ್ಯ ಆಂಗ್ಲ ಮಾಧ್ಯಮ ಶಾಲೆಗೆ ರಾಷ್ಟ್ರಮಟ್ಟದ ಕರಾಟೆ ಪ್ರಶಸ್ತಿಗಳು



ಮಂಗಳೂರು : ಮಂಗಳೂರಿನ ಗಂಜಿಮಠದ ವಂಡೇಲಾ ಸಭಾ ಭವನದಲ್ಲಿ ಜರುಗಿದ ರಾಷ್ಟ್ರ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಭಾಗವಹಿಸಿ 2 ಚಿನ್ನ, 2 ಬೆಳ್ಳಿ, 6 ಕಂಚಿನ ಪದಕ ಗಳಿಸಿದ ಕುತ್ಯಾರು ಸೂರ್ಯ ಚೈತನ್ಯ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳಾದ ಪ್ರಥ್ವೀನ್, ಅಧೀಶ್, ಹೇಮಂತ್, ನಿಧೀಶ್, ಶ್ರೇಯಸ್, ಚರಣ್, ಸುರೇಶ್, ಶಂಭುದಾಸ್ ಗುರೂಜಿ, ಎಲ್.ಎಸ್.ಭಟ್, ಶಮಿತ್, ಶಿಕ್ಷಕಿ ರೇಖಾ, ಶಿಕ್ಷಕಿ ಅನಿತಾ ಕರಾಟೆ ಶಿಕ್ಷಕ ಸತೀಶ್ ಬೆಳ್ಮಣ್.

# W.K.F ಕೋಚ್ ತರಬೇತಿ ಪಡೆದ ಉಡುಪಿಯ ಹಿರಿಯ ಕರಾಟೆ ಶಿಕ್ಷಕರು



ದುಬೈ : ದುಬೈಯ ಅಲಾಸ್ ಸ್ಪೋರ್ಟ್ಸ್ ಅಡಿಟೋರಿಯಮ್‌ನಲ್ಲಿ ವರ್ಲ್ಡ್ ಕರಾಟೆ ಫೆಡರೇಶನ್ ವತಿಯಿಂದ (ಫ.ಏ.ಈ) ವರ್ಲ್ಡ್ ಕರಾಟೆ ಕೋಚ್ ತರಬೇತಿ ಪಡೆದ ಉಡುಪಿಯ ಹಿರಿಯ ಕರಾಟೆ ಶಿಕ್ಷಕರು ಹಾಗೂ ರಾಜ್ಯ ಕರಾಟೆ ಶಿಕ್ಷಕರ ಸಂಘದ ಗೌರವಾಧ್ಯಕ್ಷರಾದ ಶ್ರೀ ಲಕ್ಷ್ಮೀನಾರಾಯಣ ಆಚಾರ್ಯ ಉಡುಪಿ, ಕರ್ನಾಟಕ ಕರಾಟೆ ಡೊ ಸ್ಪೋರ್ಟ್ಸ್ ಅಸೋಸಿಯೇಶನ್ ಅಧ್ಯಕ್ಷರಾದ ಶ್ರೀ ನಿತ್ಯಾನಂದ ಕೆಮ್ಮಣ್ಣು, ಉಪಾಧ್ಯಕ್ಷರಾದ ಸತೀಶ್ ಪೂಜಾರಿ ಬೆಳ್ಮಣ್. ಕರ್ನಾಟಕ ಕರಾಟೆ ಡೊ ಸ್ಪೋರ್ಟ್ಸ್ ಅಸೋಸಿಯೇಶನ್ ಪ್ರಧಾನ ಕಾರ್ಯದರ್ಶಿ ಕೀರ್ತಿ ಜಿ ಕೆ ಬೆಂಗಳೂರು, ಕೋಶಾಧಿಕಾರಿ ನದೀಂ ಹಾಗೂ ಮಹಾಂತೇಶ್ ಉಪಸ್ಥಿತರಿದ್ದರು.

# ಎಲ್ಲೂರು ಯುವಕ ಮಂಡಲ ಕರಾಟೆ ತರಗತಿಗೆ ರಾಜ್ಯ ಮತ್ತು ರಾಷ್ಟ್ರೀಯ ಕರಾಟೆ ಪ್ರಶಸ್ತಿಗಳು



ಎಲ್ಲೂರು : ಎಲ್ಲೂರು ಮಹತೋಭಾರ ಶ್ರೀ ವಿಶ್ವೇಶ್ವರ ದೇವಸ್ಥಾನದಲ್ಲಿನ ಎಲ್ಲೂರು ಯುವಕ ಮಂಡಲದ ಕರಾಟೆಯ ತರಗತಿಯ ವಿದ್ಯಾರ್ಥಿಗಳು ತುಮಕೂರು, ಕಟಪಾಡಿ, ಶಿವಮೊಗ್ಗ, ಮಂಗಳೂರಿನಲ್ಲಿ ನಡೆದ ರಾಜ್ಯ ಮತ್ತು ರಾಷ್ಟ್ರೀಯ ಕರಾಟೆ ಸ್ಪರ್ಧೆ 2019 ರಲ್ಲಿ ಭಾಗವಹಿಸಿ 8 ಚಿನ್ನ, 6 ಬೆಳ್ಳಿ, 8 ಕಂಚಿನ ಪದಕ ಗಳಿಸಿದ ವಿದ್ಯಾರ್ಥಿಗಳಾದ ಶರತ್, ರೋನಿತ್, ಸೃಜನ್, ಪ್ರಥಮ್, ಶ್ರಾವಂತ್, ಪ್ರಸ್ಮಿತ್, ದನೀಶ್, ಜ್ಞಾನ್ ಆಚಾರ್ಯ, ಅನುಷ್ ಶೆಟ್ಟಿ, ಯುವಕ ಮಂಡಲದ ಪ್ರಧಾನ ಕಾರ್ಯದರ್ಶಿ ನಾಗೇಶ್ ಕೊಡಂಗೆ, ಸದಸ್ಯರಾದ ಧೀರಾಜ್ ದೇವಾಡಿಗ, ತರಗತಿಯ ಶಿಕ್ಷಕರಾದ ಸತೀಶ್ ಪೂಜಾರಿ ಬೆಳ್ಮಣ್, ರಕ್ಷಿತ್ ವೈ. ಶೆಟ್ಟಿ, ವಿನಿತ್ ಕುಲಾಲ್, ಗಗನ್ ಅಚಾರ್ಯ, ಕು। ಐಶ್ವರ್ಯ, ಕು। ಸಹನ, ಶ್ರೀನಿಧಿ, ಶ್ರೇಷ್ಠ ಶೆಟ್ಟಿ, ಪ್ರಣವ್ ನಾಯ್ಕ್, ಆಯುಶ್, ಖುಷ್ ಅಚಾರ್ಯ.

# ಬುಡೋಕಾನ್ ಕರಾಟೆ & ಸೆಲ್ಫ್ ಡಿಫೆನ್ಸ್ ಅಸೋಸಿಯೇಶನ್ ಆಫ್ ಇಂಡಿಯಾ

ಮಥುರಾ : ಇತ್ತೀಚೆಗೆ ಬುಡೋಕಾನ್ ಕರಾಟೆ & ಸೆಲ್ಫ್ ಡಿಫೆನ್ಸ್ ಅಸೋಸಿಯೇಶನ್ ಆಫ್ ಇಂಡಿಯಾ ಇದರ ವತಿಯಿಂದ 2019–20 ನೇ ಸಾಲಿನ ಕಪ್ಪು ಪಟ್ಟಿ ಪರೀಕ್ಷೆ ಮಥುರಾ ಕಂಫರ್ಟ್ ಹಾಲ್ ನಲ್ಲಿ ಕರಾಟೆ ಬುಡೋಕಾನ್ ಇಂಟರ್‌ನ್ಯಾಷನಲ್ ಆಸ್ಟ್ರೇಲಿಯಾ ಇದರ ಏಷ್ಯಾದ ಮುಖ್ಯ ಶಿಕ್ಷಕರಾದ ಬಿ ಪರಮೇಶ್ ಇವರು ನೆರವೇರಿಸಿದರು. ಈ ಕಪ್ಪು ಪಟ್ಟಿ ಪರೀಕ್ಷೆಯ ಸಂದರ್ಭದಲ್ಲಿ ಮಥುರಾ ಕಂಫರ್ಟ್‌ನ ಮಾಲಕರಾದ ಶ್ರೀ ಕೃಷ್ಣಮೂರ್ತಿ ಆಚಾರ್ಯ, ಸಂಸ್ಥೆಯ ಮುಖ್ಯ ಶಿಕ್ಷಕರಾದ ಕ್ಯೂಶಿ ನಿತ್ಯಾನಂದ ಕೆಮ್ಮಣ್ಣು, ಕ್ಯೂಶಿ ಲಕ್ಷ್ಮೀನಾರಾಯಣ ಬಿ ಆಚಾರ್ಯ, ಶಿಹಾನ್ ಸತೀಶ್ ಪೂಜಾರಿ ಬೆಳ್ಮಣ್, ಶಿಹಾನ್ ಪ್ರವೀಣ್ ಬಟ್ಕಳ, ಸಹ ಮುಖ್ಯ ಶಿಕ್ಷಕರಾದ ಶಿಹಾನ್ ರೋಹಿತಾಕ್ಷ, ಹಿರಿಯ ಶಿಕ್ಷಕರಾದ ಶರೊಲ್ ಕ್ವಾಡ್ರಸ್, ಕ್ಯಾರೊಲ್ ಕ್ವಾಡ್ರಸ್, ಶಿಕ್ಷಕರಾದ ಗಣೇಶ್ ಎರ್ಮಾಳ್, ಪ್ರಣವ್ ಆಚಾರ್ಯ, ರಂಜಿತ್ ಎಸ್., ಪ್ರತಿಭಾ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



# With Best Compliments From



## ಡಾ. ಸದಾನಂದ ಪೂಜಾರಿ

ಎಂ.ಬಿ.ಬಿ.ಎಸ್., ಎಂ.ಎಸ್., ಎಂ.ಸಿ.ಎಚ್ (ಯುರೋಲಜಿ), ಎಫ್.ಎಮ್.ಎ.ಎಸ್.

ಕಿಡ್ನಿ ಕಲ್ಲು, ಪ್ರಾಸ್ಟೇಟ್ ಮತ್ತು ಮೂತ್ರರೋಗದ ತಜ್ಞರು

ಸೋಹನ್ ಸ್ಟೋನ್ ಕ್ಲಿನಿಕ್, ಜ್ಯೋತಿ ಡಾಯಾಗ್ನಾಸ್ಟಿಕ್
ಹೊಟೇಲ್ ರೂಪ ಎದುರುಗಡೆ, ಮಂಗಳೂರು

ಕ್ಲಿನಿಕ್ : (0824) 2425677/2420378 ಮೊಬೈಲ್ : 9845193071

### ಸೋಹಾನ್ ಸ್ಟೋನ್ ಕ್ಲಿನಿಕ್

**ಚಿಕಿತ್ಸಾ ಸೌಲಭ್ಯಗಳು**

* ಕಿಡ್ನಿ ಮತ್ತು ಮೂತ್ರಕೋಶದಲ್ಲಿ ಕಲ್ಲು
* ಶುಕ್ಲ ಗ್ರಂಥಿಯ (ಪ್ರಾಸ್ಟೇಟ್) ಬೆಳವಣಿಗೆ
* ಪುರುಷರಲ್ಲಿ ಮೂತ್ರ ವಿಸರ್ಜನೆ ಅಡಚಣೆ
* ಕಿಡ್ನಿ ಮತ್ತು ಮೂತ್ರಕೋಶದಲ್ಲಿ ಕ್ಯಾನ್ಸರ್
* ಕಿಡ್ನಿ ವೈಫಲ್ಯತೆಗೆ ಕಿಡ್ನಿ ಕಸಿ ಮಾಡುವುದು
* ಸ್ತ್ರೀಯರಲ್ಲಿ ಮತ್ತು ಮಕ್ಕಳಲ್ಲಿ ಮೂತ್ರ ವಿಸರ್ಜನೆಯ ತೊಂದರೆ
* ಪುರುಷರ ಬಂಜೆತನ ಮತ್ತು ಲೈಂಗಿಕ ಸಮಸ್ಯೆಗಳು

ಕಿಡ್ನಿ ಕಲ್ಲು ಮತ್ತು ಮೂತ್ರಕೋಶದ ರೋಗಿಗಳಿಗೆ ಎಪಿಎಲ್ ಅಥವಾ ಬಿಪಿಎಲ್ ಕಾರ್ಡ್ ಇದ್ದಲ್ಲಿ ಉಚಿತ ಶಸ್ತ್ರಚಿಕಿತ್ಸೆಯ ಸೌಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ವೈದ್ಯರನ್ನು ಸಂಪರ್ಕಿಸಿರಿ.



ಸೋಹನ್ ಸ್ಟೋನ್ ಕ್ಲಿನಿಕ್, ಜ್ಯೋತಿ ಡಾಯಾಗ್ನಾಸ್ಟಿಕ್, ಸಿಟಿ ಸೆಂಟರ್
(ಮೊದಲನೆಯ ಮಹಡಿ) ಹೊಟೇಲ್ ರೂಪ ಎದುರುಗಡೆ, ಮಂಗಳೂರು



## ಹೆರಾಜೆ ರಾಜೇಶ್ ಅಂಚನ್

ಶ್ರೀಮತಿ ನಿಶ್ಚಿತ ಆರ್. ಅಂಚನ್
ಕು. ಮಾನ್ವಿ, ಕು. ನೀಹ

ಕದ್ರಿ, ಕೈಬಟ್ಟಲ್, ಮಂಗಳೂರು

*With Best Compliments from*

## Keshava K

Ph: 0824-2275531
Mob: 98450 83459
72049 03459
94492 83459



# Durga Caterers

## Veg & Nonveg

Shri Durga, Perla,
Veera Nagar, Padil,
Mangalore - 575 007

## After Degree What Next?

# IAS-KAS




## Govt. Jobs

JOIN OUR TEAM

### FEATURES

* Coaching for all stages (Prelims, Mains & Interview)
* Conducting weekly (Prelims) & Monthly (Mains) Mock test
* Basic Study materials/ PPT Class/ Library facilities
* Coaching Suitable for all type of competitive Exams (IAS, IPS, KAS, Banking, FDA, Police, Postal etc.)
* Free Summer Coaching Classes for Students (April / May / June)
* Online Coaching also available

**SARVAJNA IAS ACADEMY**
*Academy For Human Excellence*

**Head Office :** #2, 2nd Floor, Satyam Arcade, Opp : Mathura Hotel, Pumpwell, **Mangalore** - 575 002

**Classroom:** 4th Floor, Oberle Tower, Balmatta Road, Jyothi Circle, **Mangalore** - 575 002

94810 33331 94810 33332
✆: 0824 2433331

**TOPPERS**



Dr Yathish Ullal, M.Sc. Ph.D, Asst. Commissioner (KAS)
Karthik M., M.Tech, Asst. Engineer (WRD)
Naseeba K, B.Sc. Agri, FDA (Labour Dept.)
Rashmi Mayola Peres, B.Com., SDA (District Court)
Manjushree, M.F.Sc. Asst. Director (Dept. of Fisheries)

**Batches** Daily : Mon to Fri - 9 am to 4 pm
Saturday : 2.30 pm to 4 pm
Sunday : 9 am to 2.30 pm

**Branches :**
PUTTUR | BELTHANGADY | B.C.ROAD | KARKALA

e-mail:sarvajnaiasacademy@gmail.com | www.sarvajnaonline.in

*Best Wishes*

*Together Since 27th March 1964*



During married days...



Now...

**Smt. & Sri N.M. Sanil**

**Ex Director Bharath Bank, Mumbai**
**Retd. Bank Officer**
**6/10, Mathurdas Colony**
**Kalina, Santacruz (East) Mumbai - 98**

*Best compliments from*

**B. Subbaya Maarla**
Mob: 9740763999
9844045819





# MAARLA'S

**MARKETING SERVICES**
Authorised Dealers for GYPBOARD
We undertake Work Execution

*** False Ceiling * Partitions**
*** Ceiling Tiles * Interior Decorator**

**WE ARE COMITTED TO**
*** Quality * Time Bond * Cost Effective**

## *Industrial Pest Control*

*Specialists in*
* Termite Control (Pre and Post Construction. Anti-Termite Treatme
* Wood Preservative Treatment
* General & House hold Distinfestation
* Mosquito Control * Rodent Control
* Domestic & Industrials Pest Control



**Vijaya Bank Bldg, Bejai Church Road, Mangalore - 575004**
**Phone : 2224599, 2211819 (O), www.maarlasmarketing.com**




**SHAKTHI DURGA**™
BUILDERS & DEVELOPERS
ISO 9001:2015 Certified Company
*Where dreams meet reality*

"Cozy Cote", First Floor, Calvery Hills, Nanthoor, Mangalore - 02
Email: shakthidurgabuilders@gmail.com
Website: www.shakthidurgabuilders.com
Follow us @ http://www.facebook.com/shakthidurgabuilders

**For Bookings Call: 0824-2214587, 98458 89966**

ONGOING PROJECTS



**Shakthi Arcade** Bajilakeri - Bunder, M'lore | **Shakthi Saanvi Plaza** Padavinangady, Mlr | **Shakthi City Square** Thokkotu, M'lore

COMPLETED PROJECTS



**Mamatha Residency** Bejai, Mangaluru | **Shakthi Heights** Chilimbi, Mangaluru | **Shakthi Shrine View** Carstreet, Mangaluru

COMPLETED PROJECTS



**Shakthi Enclave** Urwastore, Mangaluru | **Shakthi Residency** Mukka, Mangaluru | **Shakthi Excellency** Kadri, Mangaluru | **Shakthi Elegance** Kottara, Mangaluru | **Shakthi Eminence** Shakthinagar, Mangaluru | **Shakthi Sun City** Kottara, Mangaluru

ATHMASHAKTHI Kannada Quarterly,
Vol. 15 Issue No. 2, April - June - 2019

R.N.I. Regd. No. KAR KAN/2004/14899

ಸವಿರುಚಿಯ ಪರಂಪರೆ

# ಸವಿರುಚಿಯ ಸಂಭ್ರಮ
# ಆಶಾ ಗ್ರೈಂಡರ್‌ನೊಂದಿಗೆ



ಸವಿರುಚಿಯ ಸಂಭ್ರಮ ಇದೀಗ ಇನ್ನಷ್ಟು ಸುಲಭ. ಇಂದೇ ಆಶಾ ಗ್ರೈಂಡರ್ ಮನೆಗೆ ತನ್ನಿ, ಕಡಿಮೆ ಸಮಯದಲ್ಲಿ ರುಚಿಕರ ಹಾಗೂ ಸ್ವಾದಿಷ್ಟ ಅಡುಗೆ ತಯಾರಿಸಿ ಪರಿವಾರದೊಂದಿಗೆ ಸಂಭ್ರಮಿಸಿ.

ನಿಮ್ಮ ಹತ್ತಿರದ 'ಆಶಾ ಗ್ರೈಂಡರ್' ಡೀಲರ್‌ರನ್ನು ಸಂಪರ್ಕಿಸಿ.

5 YEAR WARRANTY

*ON MOTOR

asha GRINDER

ವಿತರಕರು: ಪ್ರಕಾಶ್ ಇಂಜಿನಿಯರಿಂಗ್ ಕಂಪೆನಿ,
ಅಂಬಲಪಾಡಿ, ಉಡುಪಿ - 576 103

Printed, Published & Edited by: K. Vaman on behalf of Brahmashree Narayanaguruswami Prakashana & Charitable Trust ®, Published from Mangalore, Shri Arcade, Bendoorwell, Mangalore - 575 002 and Printed at Digantha Mudrana Press, Yeyyadi, Mangalore - 8.